ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮುಂಬೈ ಇಂಡಿಯನ್ಸ್‌ಗೆ 4 ವಿಕೆಟ್‌ಗಳ ಗೆಲುವು

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಮುಂಬೈ ಇಂಡಿಯನ್ಸ್ 4 ವಿಕೆಟ್‌ಗಳ ಗೆಲುವು ದಾಖಲಿಸಿತು. ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ರೈಸರ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 162 ಪೇರಿಸಿತು. ಈ ಗುರಿ ಬೆನ್ನತ್ತಿದ ಮುಂಬೈ 6 ವಿಕೆಟ್ ಕಳೆದುಕೊಂಡು ಗೆಲುವಿನ ದಡ ಸೇರಿತು. ಈ ಮೂಲಕ 4 ವಿಕೆಟ್‌ಗಳ ಜಯ ದಾಖಲಿಸಿತು.

ಸೊಂಪಾದ ಪುಟಗಳು

ದೊಡ್ಡಣ್ಣ ಟ್ರಂಪನ ಸುಂಕಸಂಧಾನ; ಮಾರುಕಟ್ಟೆ ಕಂಪನ

ಶಿಶಿರಕಾಲ
ಶಿಶಿರ್ ಹೆಗಡೆ 6

ಇವರು ಅತ್ಯುನ್ನತ ಹುದ್ದೆಯನ್ನು ಬೇಡವೆಂದರು!

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ಜೀವನದಲ್ಲಿ ಎಲ್ಲವೂ ಅನಿಶ್ಚಿತ. ಎಲ್ಲ ಸಂದರ್ಭಗಳಲ್ಲೂ ನಾವು ಅಂದುಕೊಂಡಂತೆ ಆಗುವುದಿಲ್ಲ. ಆದರೆ ಪ್ರತಿದಿನ ಸೂರ್ಯಾಸ್ತವಾದ ನಂತರ ಸೂರ್ಯೋದಯವಾಗುತ್ತದೆ. ಎಲ್ಲ ಗೊಂದಲಗಳ ನಂತರವೂ ಆಶಾದಾಯಕ ಪರಿಸ್ಥಿತಿ ಬಂದೇ ಬರುತ್ತದೆ.

ವಕ್ರತುಂಡೋಕ್ತಿ



ಕೆಲವರಿಗೆ ಬಂದಿದ್ದೂ ಗೊತ್ತಾಗುವುದಿಲ್ಲ, ಹೋಗಿದ್ದೂ ಗೊತ್ತಾಗುವುದಿಲ್ಲ. ಅದಕ್ಕೆ ಕೆಲವರು ಬುದ್ಧಿ' ಅಂತ ಕರೆಯುತ್ತಾರೆ.



ಒಕ್ಕಲಿಗ, ಲಿಂಗಾಯತರ ವಿರೋಧದ ನಡುವೆ ಸಭೆ ಮುಂದಕ್ಕೆ
ಮುಂದಿನ ಸಂಪುಟ ಸಭೆಯಲ್ಲಿ ಮರು ಚರ್ಚಿಸಲು ತೀರ್ಮಾನ

ಜಾತಿಗಣತಿ: ನಿರ್ಧಾರ ಮುಂದಕ್ಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತೀವ್ರ ವಿವಾದ ಹಾಗೂ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿರುವ ಜಾತಿ ಗಣತಿ ಅನುಷ್ಠಾನ, ಇಲ್ಲವೇ ಒಪ್ಪಿಗೆಗೆ ಸಚಿವ ಸಂಪುಟದಲ್ಲಿಯೇ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಯಾವುದೇ ಸ್ಪಷ್ಟ ತೀರ್ಮಾನ ಕೈಗೊಳ್ಳಲು ಸಾಧ್ಯವಾಗದೇ ವಿಶೇಷ ಸಚಿವ ಸಂಪುಟ ಸಭೆಯಲ್ಲಿ 'ಪ್ರಾಥಮಿಕ' ಚರ್ಚೆಗೆ ಸೀಮಿತಗೊಳಿಸಿ ಮುಂದೂಡಲಾಗಿದೆ.

ಹಿಂದುಳಿದ ಆಯೋಗ ಮಂಡಿಸಿರುವ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯ ವರದಿ ಅನುಷ್ಠಾನ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸುಮಾರು ಎರಡು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಸಭೆಯಲ್ಲಿ ಕೆಲವು ಸಚಿವರಿಂದ ಪರ-ವಿರೋಧ ನಿಲುವು ವ್ಯಕ್ತವಾಗಿದೆ. ಚರ್ಚೆಯ ಹಂತದಲ್ಲಿ ಕೆಲ ಸಚಿವರು ಏರುಧ್ವನಿಯಲ್ಲೇ ಮಾತನಾಡಿದ್ದಲ್ಲದೆ, ಮತ್ತೆ ಹಲವು ಸಚಿವರು ಅಂಕಿ-ಅಂಶ ಹಾಗೂ ವರದಿಯಲ್ಲಿನ ಹಲವು ವಿಚಾರಗಳಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕೆಲವರು ಸಮರ್ಥನೆ ಮಾಡಲು ಮುಂದಾದರೂ ಯಾವುದೇ ಒಮ್ಮತಕ್ಕೆ ಬರಲಿಕ್ಕಾಗದೆ ಸಂಪುಟ ಸಭೆ ಮುಕ್ತಾಯವಾಗಿದೆ.

ಸಭೆಯಲ್ಲಿ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯವನ್ನು ಪ್ರತಿನಿಧಿಸುವ ಸಚಿವರು ವರದಿ ಅನುಷ್ಠಾನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ ವರದಿ ಬಹಿರಂಗೊಳಿಸುವಂತೆ ಪರಿಶಿಷ್ಟ ಜಾತಿ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಚಿವರು ಪಟ್ಟು ಹಿಡಿದಿದ್ದಾರೆ. ಈ ವೇಳೆ ಮಾತು ಏರುಧ್ವನಿಯಲ್ಲಿ ಸಾಗುತ್ತಿದ್ದಾಗ ಸಿಎಂ ಮಧ್ಯೆ ಪ್ರವೇಶಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದರೊಂದಿಗೆ ಲಿಖಿತ ರೂಪದಲ್ಲಿಯೇ ತಮ್ಮ ಅಭಿಪ್ರಾಯ ಸೂಚಿಸಿ ಎಂದು ಸಚಿವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಸಭೆ ಅಪೂರ್ಣ: ಸಂಪುಟ ಸಭೆಯ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್, ಇಂದಿನ ಸಭೆ ಅಪೂರ್ಣವಾಗಿದೆ. ಮುಂದಿನ ತಿಂಗಳ 2ರಂದು ನಡೆಯುವ ಸಭೆಯಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು. ಆರ್ಥಿಕ ಸಮೀಕ್ಷೆ ಮಾಡುವಾಗ ಮೂಲ ಏನೆಂಬುದರ ಬಗ್ಗೆ ಚರ್ಚಿಸಲಾಗಿದೆ. ಇದರಲ್ಲಿ ಕೆಲ ಪ್ಯಾರಾಮೀಟರ್ (ಅಂಕಿಅಂಶಗಳು) ಬಗ್ಗೆಯೂ ಸುದೀರ್ಘವಾಗಿ ಚರ್ಚಿಸಲಾಗಿದೆ. ಕೆಲ ಸಚಿವರು ಸಭೆಯಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಸಚಿವ ಶಿವರಾಜ ತಂಗಡಗಿ ಹಾಗೂ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಮಾಹಿತಿ ನೀಡುತ್ತಾರೆ. ಇನ್ನೂ ಹೆಚ್ಚಿನ ಮಾಹಿತಿ ಹಾಗೂ ತಾಂತ್ರಿಕ ವಿವರಗಳು ಚರ್ಚೆಗೆ ಅಗತ್ಯವಿದೆ. ಆ ಮಾಹಿತಿ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಭೆ ಸೌಹಾರ್ದಯುತವಾಗಿ ನಡೆದು ಚರ್ಚಿಸಲಾಗಿದೆ ಎಂದರು.

→ 4

ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ ವರದಿ ಬಗ್ಗೆ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಯಾವುದೇ ಸಚಿವರು ಅಸಮಾಧಾನ ವ್ಯಕ್ತಪಡಿಸಿಲ್ಲ. ದತ್ತಾಂಶಗಳ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘವಾದ ಚರ್ಚೆ ಮಾಡಿದ್ದೇವೆ. ಇನ್ನು ತಾಂತ್ರಿಕ ಅಂಶಗಳು ಅವಶ್ಯ ಎಂದು ಭಾವಿಸಿ, ಹಿರಿಯ ಅಧಿಕಾರಿಗಳಿಗೆ ತಾಂತ್ರಿಕ ದತ್ತಾಂಶ ಒದಗಿಸುವಂತೆ ಸೂಚಿಸಿದ್ದೇವೆ. ಚರ್ಚೆ ಅಪೂರ್ಣವಾಗಿದ್ದು, ಕೆಲವು ಸಚಿವರು ತಾಂತ್ರಿಕ ಮಾಹಿತಿಯನ್ನು ಕೇಳಿದ್ದಾರೆ. ಆ ಮಾಹಿತಿಯನ್ನು ಒದಗಿಸಲಾಗುವುದು. ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಯಾರು ಕೂಡ ಏರು ಧ್ವನಿಯಲ್ಲಿ ಮಾತನಾಡಿಲ್ಲ.

– **ಶಿವರಾಜ್ ತಂಗಡಗಿ** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

- ಹಲವು ಸಮುದಾಯಗಳಿಂದ ಪ್ರತ್ಯೇಕ ಸಮೀಕ್ಷೆಗೆ ಸಿದ್ಧತೆ
- ತಮ್ಮ ತಮ್ಮ ಸಮುದಾಯಗಳ ಸಮೀಕ್ಷೆ ನಡೆಸಿ, ಸರಕಾರಕ್ಕೆ ವರದಿ ಸಲ್ಲಿಸಲು ಚಿಂತನೆ
- ಕೊನೆ ಕ್ಷಣದಲ್ಲಿ ಲಿಂಗಾಯತ ಮಹಸಭಾ ಸಭೆ ರದ್ದು, ಇನ್ನೆರಡು ದಿನದಲ್ಲಿ ಮತ್ತೆ ಸಭೆ ಸಾಧ್ಯತೆ
- ಮುಂದಿನ ಸಂಪುಟದ ವೇಳೆ ಬರಹ ರೂಪದಲ್ಲಿ ಅಭಿಪ್ರಾಯ ನೀಡಲು ಸಚಿವರಿಗೆ ಸಿಎಂ ಸೂಚನೆ

ಸಿಎಂ ಪ್ರತ್ಯೇಕ ಸಭೆ

ಸಚಿವ ಸಂಪುಟ ಸಭೆಗೂ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲಿಂಗಾಯತ, ಒಕ್ಕಲಿಗ ಸಮುದಾಯದ ಸಚಿವರೊಂದಿಗೆ ಪ್ರತ್ಯೇಕ ಸಭೆ ನಡೆಸಿದರು. ಇದಾದ ಬಳಿಕ ದಲಿತ ಸಮುದಾಯದ ಸಚಿವರೂ ಪ್ರತ್ಯೇಕವಾಗಿ ಚರ್ಚೆ ನಡೆಸಿದರು. ಲಿಂಗಾಯತ, ಒಕ್ಕಲಿಗ ಸಚಿವರು ಜಾತಿ ಗಣತಿಯನ್ನು ಯಾವುದೇ ಕಾರಣಕ್ಕೂ ಅನುಮೋದಿಸ ಬಾರದು ಎಂದು ಪಟ್ಟು ಹಿಡಿದಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ಜಾತಿ ಗಣತಿಯನ್ನು ಪರಿಶೀಲಿಸಿ ಲೋಪಗಳಿದ್ದರೆ ಸರಿಪಡಿಸೋಣ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಇದಕ್ಕೂ ಒಪ್ಪಿಲ್ಲ ಎನ್ನುವ ಮಾತುಗಳು ಕೇಳಿಬಂದಿದೆ.

ಒಕ್ಕಲಿಗ-ಲಿಂಗಾಯತ ಸಚಿವರ ವಾದವೇನು?

ಈಗಿರುವ ಅಂಕಿ ಅಂಶಗಳನ್ನು ಒಪ್ಪಲು ಸಾಧ್ಯವಿಲ್ಲ. ನಮ್ಮ ಸಮುದಾಯದ ಸಂಖ್ಯೆ ಶೇ.11 ಎಂದು ವರದಿ ಹೇಳುತ್ತಿದೆ. 1990ರ ಚಿನ್ನಪ್ಪರೆಡ್ಡಿ ಆಯೋಗವೇ ನಮ್ಮ ಸಮುದಾಯ ಶೇ.17ರಷ್ಟಿದೆ ಎಂದು ವರದಿ ಕೊಟ್ಟಿದೆ. ಅಂದಾಜಿನ ಪ್ರಕಾರ ನಮ್ಮ ಎಲ್ಲ ಉಪಜಾತಿಗಳು ಸೇರಿ ರಾಜ್ಯದಲ್ಲಿ ಶೇ.22ರಷ್ಟಿದ್ದು, ಈ ವರದಿಯಲ್ಲಿನ ಅಂಶಗಳು ಅಸಮರ್ಪಕವಾಗಿದೆ ಎಂದು ಲಿಂಗಾಯತ ಸಚಿವರು ಅಸಮಾಧಾನ ವ್ಯಕ್ತಪಡಿಸಿದ್ದಲ್ಲದೆ, ಯಾವುದೇ ಕಾರಣಕ್ಕೂ ವರದಿ ಒಪ್ಪಲಾಗದು ಎಂದು ಬಿಸಿಬಿಸಿ ಚರ್ಚೆ ನಡೆಸಿದ್ದಾರೆ. ಇದೇ ವೇಳೆ ಒಕ್ಕಲಿಗ ಸಮುದಾಯದ ಸಚಿವರು, ಈಗಿರುವ ಅಂಕಿ-ಅಂಶ ಒಪ್ಪಲು ಸಾಧ್ಯವಿಲ್ಲ. ನಮ್ಮ ಸಮುದಾಯವನ್ನು ಬೇರೆ ಬೇರೆ ಪ್ರವರ್ಗಗಳಲ್ಲಿ ಗುರುತಿಸಲಾಗಿದೆ. ಎಲ್ಲ ಉಪಜಾತಿ ಒಟ್ಟಿಗೆ ಸೇರಿಸಿ ಘೋಷಣೆ ಮಾಡಿದರೆ ಮಾಡಿ. ಇಲ್ಲದಿದ್ದರೆ ಮರು ಸಮೀಕ್ಷೆ ಅನಿವಾರ್ಯ ಎಂದು ಪಟ್ಟು ಹಿಡಿದಿದ್ದಾರೆ. ಹೀಗಾಗಿ ನಿಖರವಾದ ಒಮ್ಮತಕ್ಕೆ ಬರಲು ಸಾಧ್ಯವಾಗದೆ ಸಭೆ ಅಪೂರ್ಣವಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಂದಿನ ವಿಚಾರಣೆಯವರೆಗೆ ವಕ್ಫ್ ಮಂಡಳಿ ನೇಮಕಾತಿಗೆ ಸುಪ್ರೀಂ ತಡೆ

ವಕ್ಫ್: ಯಥಾ ಸ್ಥಿತಿಗೆ ಆದೇಶ

ದೆಹಲಿ: ಮುಂದಿನ ವಿಚಾರಣೆಯವರೆಗೆ ವಕ್ಫ್ ಮಂಡಳಿಗೆ ಮುಸ್ಲಿಮೇತರರನ್ನು ನೇಮಕ ಮಾಡುವಂತಿಲ್ಲ ಮತ್ತು ವಕ್ಫ್ ಕಾಯ್ದೆ ವಿಚಾರದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಸುಪ್ರೀಂಕೋರ್ಟ್ ಗುರುವಾರ ಆದೇಶ ನೀಡಿದೆ.

- ಸಲ್ಲಿಕೆಯಾದ ಅರ್ಜಿಗಳ ಪೈಕಿ ಐದು ಅರ್ಜಿಗಳನ್ನು ಮಾತ್ರ ಆಲಿಸಲಾಗುವುದು
- ಅರ್ಜಿಗಳಿಗೆ ಪ್ರತಿಕ್ರಿಯಿಸಲು ಕೇಂದ್ರ ಸರಕಾರಕ್ಕೆ 7 ದಿನ ಅವಕಾಶ

ವಕ್ಫ್ (ತಿದ್ದುಪಡಿ) ಕಾಯ್ದೆ 2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಗುರುವಾರವೂ ನಡೆಸಿದ, ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಕೆ.ವಿ.ವಿಶ್ವನಾಥನ್ ಅವರನ್ನೊಳಗೊಂಡ ತ್ರಿಸದಸ್ಯ ಪೀಠ, ಸಿಂಧುತ್ವ ಪ್ರಶ್ನಿಸಿದ ಅರ್ಜಿಗಳಿಗೆ ಪ್ರತಿಕ್ರಿಯಿಸಲು ಕೇಂದ್ರ ಸರಕಾರಕ್ಕೆ 7 ದಿನಗಳ ಕಾಲಾವಕಾಶ ನೀಡಿದೆ.

ಇಷ್ಟು ಅರ್ಜಿಗಳನ್ನು ನಿಭಾಯಿಸುವುದು ಅಸಾಧ್ಯ. ಕೇವಲ 5 ಅರ್ಜಿಗಳನ್ನು ಮಾತ್ರ ಆಲಿಸಲಾಗುವುದು. ಯಾವ ಐದು ಅರ್ಜಿಗಳನ್ನು ವಿಚಾರಣೆ ನಡೆಸಬೇಕು ಎಂಬುದನ್ನು ನೀವೇ ಆಯ್ಕೆ ಎಂದು ಸುಪ್ರೀಂಕೋರ್ಟ್ ಹೇಳಿದೆ. → 4

ಕೇಂದ್ರ ಸಂಪುಟ ವಿಸ್ತರಣೆ?

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ಬಂದ ನಂತರ ಕೇಂದ್ರ ಸಚಿವ ಸಂಪುಟ ಪುನಾರಚನೆ ಅಥವಾ ವಿಸ್ತರಣೆ ಆಗಲಿದೆಯೇ ಎಂಬ ಉಹಾಪೋಹಗಳು ಕೇಳಿಬರುತ್ತಿದೆ.

ಕೆಲವು ಹಾಲಿ ಸಚಿವರನ್ನು ಅವರ ವಯಸ್ಸು ಅಥವಾ ಕಾರ್ಯಕ್ಷಮತೆಯಿಂದಾಗಿ ಅಥವಾ ಸಂಘಟನಾ ಕೆಲಸದಲ್ಲಿ ಅವರ ಅನುಭವವನ್ನು ಬಳಸಿಕೊಳ್ಳಲು ಸಚಿವ ಸ್ಥಾನದಿಂದ ಕೈಬಿಟ್ಟು, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಹೊಸ ಮುಖಗಳಿಗೆ ಸಚಿವ ಸ್ಥಾನದ ಜವಾಬ್ದಾರಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಇನ್ನೊಂದು ವಾರದೊಳಗೆ ಏನಾದರೂ ಮಹತ್ವದ ಬೆಳವಣಿಗೆ ನಡೆಯಬಹುದು ಎಂದು ಹಿರಿಯ ಕಾರ್ಯಕರ್ತರೊಬ್ಬರು ತಿಳಿಸಿದ್ದಾರೆ.

ಲಾರಿ ಮುಷ್ಕರ ವಾಪಸ್

ಬೆಂಗಳೂರು: ಡೀಸೆಲ್ ದರ ಇಳಿಕೆ ಸೇರಿದಂತೆ ಲಾರಿ ಮಾಲೀಕರ ವಿವಿಧ ಬೇಡಿಕಗಳ ಈಡೇರಿಕೆಗೆ ಲಾರಿ ಮಾಲೀಕರ ಸಂಘವು ಕಳೆದ ಮೂರು ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆಯನ್ನು ಹಿಂಪಡೆದು ಕೊಂಡಿದೆ. ಲಾರಿ ಮಾಲೀಕರ ಸಂಘದ ಪ್ರತಿನಿಧಿಗಳು ಮಂಗಳವಾರ ಸಿಎಂ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೊಂದಿಗೆ ನಡೆಸಿದ ಮಾತುಕತೆ ವಿಫಲವಾಗಿತ್ತು. ಬಳಿಕ ಲಾರಿ ಮಾಲೀಕರ ವಿವಿಧ ಬೇಡಿಕೆ ಈಡೇರಿಸುವುದಕ್ಕಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಗುರುವಾರ ಸಭೆ ನಡಸಲಾಗಿದ್ದು, ಈ ವೇಳೆ ಬಹುತೇಕ ಬೇಡಿಕೆಗಳನ್ನು ಈಡೇರಿಸುವುದಾಗಿ ಸಚಿವ ರಾಮಲಿಂಗಾರೆಡ್ಡಿ ಅವರು ಭರವಸೆ ನೀಡಿದ ಹಿನ್ನೆಲೆ ಮುಷ್ಕರವನ್ನು ಹಿಂಪಡೆದುಕೊಳ್ಳಲಾಗಿದೆ.

ಹಾಲಿನ ಸಬ್ಸಿಡಿ ಹೆಚ್ಚಳ: ಸಿಎಂ

ಬೆಂಗಳೂರು: ಸತತ ಬೆಲೆ ಏರಿಕೆಯ ನಡುವೆಯೂ ರಾಜ್ಯ ಸರಕಾರದ ಮುಂದೆ ಹಾಲಿನ ಸಬ್ಸಿಡಿ ದರವನ್ನು ಏರಿಸುವ ಪ್ರಸ್ತಾಪವಿದೆ ಎಂದು ಸಿಎಂ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ರಾಜ್ಯ ಸರಕಾರ ಈಗಾಗಲೇ ಪ್ರತಿ ಲೀಟರ್ ಹಾಲಿಗೆ ರೈತರಿಗೆ 5 ರು. ಸಹಾಯಧನ ನೀಡುತ್ತಿದೆ. ಮುಂದಿನ ದಿನಗಳನ್ನು ಇದನ್ನು 7 ರು.ಗೆ ಏರಿಸಲಾಗುವುದು. ದೇಶದ ಯಾವುದೇ ರಾಜ್ಯದಲ್ಲಿ ರೈತರಿಗೆ ಸಬ್ಸಿಡಿ ನೀಡುತ್ತಿಲ್ಲ. ಆದರೆ ರಾಜ್ಯ ಸರಕಾರ ನೀಡುವ ಮೂಲಕ ರಾಜ್ಯ ರೈತರ ಹಿತ ಕಾಯುತ್ತಿದೆ. ಹಾಲಿನ ದರ ಏರಿಕೆಯನ್ನು ಮುಂದಿಟ್ಟು ಕೊಂಡು ಬಿಜೆಪಿ-ಜೆಡಿಎಸ್ ನಾಯ ಕರು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ಪ್ರತಿ ಲೀಟರ್ ಕೆಎಂಎಫ್ 4 ರು. ಏರಿಸಿದ್ದು, ಹೆಚ್ಚಳವಾಗಿರುವ ಈ ಮೊತ್ತವನ್ನು ನೇರವಾಗಿ ರೈತರಿಗೆ ನೀಡಲಾಗುತ್ತಿದೆ ಎಂದರು.

ಕಾಂಗ್ರೆಸ್‌ನಿಂದ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರಕಾರದ ಬೆಲೆ ಏರಿಕೆ ಖಂಡಿಸಿ ಬಿಜೆಪಿಯ ಜನಾಕ್ರೋಶ ಪ್ರತಿಭಟನೆಗೆ ಪ್ರತಿಯಾಗಿ, ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಕಾಂಗ್ರೆಸ್‌ನಿಂದ ಕೇಂದ್ರ ಸರಕಾರವು ಅಗತ್ಯ ವಸ್ತುಗಳ ಬೆಲೆ ನಿರಂತರ ಏರಿಕೆ ಖಂಡಿಸಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಎಲ್‌ಪಿಜಿ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಸೇರಿದಂತೆ ಕೇಂದ್ರದಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ನಾಯಕರು ಆಕ್ರೋಶ ಹೊರಹಾಕಿದರು. ಕೇಂದ್ರ ಸರಕಾರ ಮತ್ತು ಪ್ರಧಾನಿ ಮೋದಿ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ರಾಜ್ಯದ ಸಚಿವರು, ಕೆಪಿಸಿಸಿ ಕಾರ್ಯಾಧ್ಯಕ್ಷರು, ಸಂಸದರು, ಶಾಸಕರು, ಕೆಪಿಸಿಸಿ ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

ಕೆಎಎಸ್ ವೇಳಾಪಟ್ಟಿ ಪ್ರಕಟ

ಬೆಂಗಳೂರು: 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳ ನೇಮಕಾತಿಗೆ ಮೇ 3, 5, 7 ಮತ್ತು 9ರಂದು ಮುಖ್ಯ ಪರೀಕ್ಷೆ ನಡೆಯಲಿದೆ. ಅರ್ಹತಾ ಪರೀಕ್ಷೆ ಕನ್ನಡ ಮೇ 3ರಂದು ಬೆಳಗ್ಗೆ 10ರಿಂದ 12 ಗಂಟೆಯವರೆಗೆ, ಇಂಗ್ಲಿಷ್ ಪರೀಕ್ಷೆ ಅದೇ ದಿನ ಮಧ್ಯಾಹ್ನ 2 ಗಂಟೆ ಯಿಂದ 4 ರವರೆಗೆ ನಡೆಯಲಿದೆ. ಪತ್ರಿಕೆ-1 (ಪ್ರಬಂಧ) ಮೇ 5ರಂದು ಬೆಳಗ್ಗೆ 10ರಿಂದ 1, ಪತ್ರಿಕೆ 2 (ಸಾಮಾನ್ಯ ಅಧ್ಯಯನ- 1) ಮೇ 7ರಂದು ಬೆಳಗ್ಗೆ 9ರಿಂದ 12, ಪತ್ರಿಕೆ 3 (ಸಾಮಾನ್ಯ ಅಧ್ಯಯನ-2) ಮೇ 7ರಂದು ಮಧ್ಯಾಹ್ನ 2ರಿಂದ 5, ಪತ್ರಿಕೆ 4 (ಸಾಮಾನ್ಯ ಅಧ್ಯಯನ-3) ಮೇ 9ರಂದು ಬೆಳಗ್ಗೆ 9ರಿಂದ 12, ಪತ್ರಿಕೆ 5 (ಸಾಮಾನ್ಯ ಅಧ್ಯಯನ-4) 9ರಂದು ಮಧ್ಯಾಹ್ನ 2 ಗಂಟೆಯಿಂದ 5 ರವರೆಗೆ ನಡೆಯಲಿದೆ.

ಮೇ ಅಂತ್ಯ, ಜೂನ್ ಮೊದಲ ವಾರದಲ್ಲಿ ರಾಜ್ಯಕ್ಕೆ ಮುಂಗಾರು
ಪೂರ್ವ ಮುಂಗಾರಿನ ಮಳೆ ಪ್ರಮಾಣದಲ್ಲಿಯೂ ಭಾರಿ ಏರಿಕೆ

ವಾಡಿಕೆಗಿಂತ ಮುಂಗಾರು ಜೋರು

ಅಪರ್ಣಾ ಎ.ಎಸ್ ಬೆಂಗಳೂರು

ಬಿಸಿಲ ಬೇಗೆಯಿಂದ ಬೆಂದಿದ್ದ ರಾಜ್ಯದ ಜನರಿಗೆ ಪೂರ್ವ ಮುಂಗಾರು ತಂಪೆರೆಯುವ ಮೂಲಕ ಖುಷಿ ನೀಡಿದೆ. ಇದೀಗ ಮುಂಗಾರು ಮಳೆಯೂ ವಾಡಿಕೆಗಿಂತ ಅಧಿಕವಾಗಲಿದೆ ಎನ್ನುವ ಮತ್ತೊಂದು ಸಿಹಿ ಸುದ್ದಿ ಸಿಕ್ಕಿದೆ.

- ಒಂದೂವರೆ ತಿಂಗಳಲ್ಲಿ ಶೇ.98ರಷ್ಟು ಹೆಚ್ಚು ಮಳೆ; ಉಷ್ಣ ಅಲೆ, ಸೆಖೆ ಕಡಿಮೆ
- ಈ ಬಾರಿ ವಾಡಿಕೆಗಿಂತ ಸುಮಾರು ಶೇ.105ರಷ್ಟು ಹೆಚ್ಚಿನ ಮಳೆಯಾಗಲಿದೆ
- ಕರಾವಳಿ, ದಕ್ಷಿಣ ಕರ್ನಾಟಕ ಭಾಗದಲ್ಲಿ ವಾಡಿಕೆಗಿಂತ ಮಳೆ ಹೆಚ್ಚಾಗಲಿದೆ

ಎರಡು ವರ್ಷಗಳ ಹಿಂದೆ ತೀವ್ರ ಬರಗಾಲಕ್ಕೆ ತುತ್ತಾಗಿದ್ದ ಕರ್ನಾಟಕದಲ್ಲಿ ಕಳೆದ ವರ್ಷ ಮುಂಗಾರು ಮಳೆ ಕೈಹಿಡಿದಿತ್ತು. ಹಲವು ಜಿಲ್ಲೆಗಳಲ್ಲಿ ಮುಂಗಾರು ಮಳೆಯ ಅತಿವೃಷ್ಟಿಯಿಂದ ಪ್ರವಾಹ ಪರಿಸ್ಥಿತಿಯೂ ನಿರ್ಮಾಣವಾಗಿತ್ತು. ಇದೀಗ ಪ್ರಸಕ್ತ ವರ್ಷವೂ ಕಳೆದ ವರ್ಷದಂತೆ ವಾಡಿಕೆಗಿಂತ ತುಸು ಹೆಚ್ಚೇ ಮಳೆಯಾಗಲಿದೆ ಎಂದು ಹವಮಾನ ಇಲಾಖೆ ತಜ್ಞರು ಹೇಳಿದ್ದಾರೆ.

ಈ ಬಾರಿ ಪೂರ್ವ ಮುಂಗಾರು ಮಳೆಯು ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಲಿದೆ. ಮೂಲಗಳ ಪ್ರಕಾರ ಮೇ ತಿಂಗಳ ಕೊನೆಯ ವಾರದಲ್ಲಿ ಅಥವಾ ಜೂನ್‌ನಲ್ಲಿ ಮುಂಗಾರು ಮಳೆ ಆರಂಭವಾಗುತ್ತದೆ ಎನ್ನಲಾಗಿದೆ. ವಾಡಿಕೆಗಿಂತ ಕೊಂಚ ಮಳೆ ಹೆಚ್ಚಾಗಲಿದೆ ಎಂದು ಹೇಳಲಾಗಿದ್ದು, ಸುಮಾರು ಶೇ.105ರಷ್ಟು ಮಳೆಯಾಗಲಿದೆ. ಈ ಬಾರಿಯ ಮುಂಗಾರು ಮಾರುತಗಳು, ಮೇ ಕೊನೆಯ ವಾರದಲ್ಲಿ ದಕ್ಷಿಣದ ಕೇರಳ ಪ್ರವೇಶಿಸಿ, ಸೆಪ್ಟೆಂಬರ್‌ವರೆಗೂ ಮಳೆಯಾಗಲಿದೆ ಎನ್ನಲಾಗುತ್ತಿದೆ. ಪ್ರಮುಖವಾಗಿ ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ ಭಾಗದಲ್ಲಿ ವಾಡಿಕೆಗಿಂತ ಮಳೆ ಹೆಚ್ಚಾಗಲಿದೆ ಎಂದು ಹೇಳಲಾಗುತ್ತಿದೆ. → 4

ಅನಾಹುತ ನಿಭಾಯಿಸಲು ಕ್ರಮ

ಕರ್ನಾಟಕದಲ್ಲಿ ಕಳೆದ ಐವತ್ತು ವರ್ಷದಲ್ಲಿ ಸರಾಸರಿ ಮಳೆಯ ಪ್ರಮಾಣ 87 ಸೆ.ಮೀ ಆಗಿದ್ದು, ಈ ಬಾರಿ ಶೇ.105ರಷ್ಟು ಮಳೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಆದ್ದರಿಂದ ಕಂದಾಯ ಇಲಾಖೆ ಈಗಾಗಲೇ ಮುಂಗಾರು ಮಳೆಗೆ ಸಂಬಂಧಿಸಿದಂತೆ ಸರಣಿ ಸಭೆಗಳನ್ನು ನಡೆಸಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇದರೊಂದಿಗೆ, ಅತಿವೃಷ್ಟಿಯಿಂದಾಗುವ ಅನಾಹುತವನ್ನು ನಿಭಾಯಿಸಲು ಜಿಲ್ಲಾಧಿಕಾರಿಗಳ ಖಾತೆಗೆ ಅಗತ್ಯ ಅನುದಾನ ಮೀಸಲಿಡುವುದಕ್ಕೆ ಕ್ರಮವಹಿಸಲಾಗಿದೆ.

ADMISSIONS OPEN
FOR THE YEAR 2025-26
APPLY NOW @
www.jssuni.edu.in

MEDICINE
- MBBS **
- MD/ MS/ Dip - 24 Specializations **
- MCH/ DM - 5 Specializations **
- Diploma in Psychosexual Health

Fellowship
- Psychosexual Medicine/ Pain Medicine/ Neonatology/ Critical Care Medicine

B.Sc (Allied Health Sciences)
- Medical Laboratory Technology
- Medical Imaging Technology
- Anaesthesia & Operation Theatre Technology
- Renal Dialysis Technology
- Respiratory Therapy
- Cardiac Care Technology
- Perfusion Technology
- Emergency Medicine Technology
- Physician Assistant
- Optometry
- Forensic Sciences
- Medical Genetics & Counseling (Hon's)
- Bachelor of Occupational Therapy

MPH/ M.Phil/ M.Sc (Medical/ Biomedical)
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Clinical Psychology
- Clinical Embryology
- Medical Genetics and Counseling
- Echocardiography
- Forensic Odontology
- Health Technologies and Data Sciences
- Respiratory Therapy
- Masters in Public Health (MPH)
- Masters in Occupational Therapy in Paediatrics
- Masters in Occupational Therapy in Neurology
- M.Phil Rehabilitation Psychology
- M.Phil Clinical Psychology

DENTISTRY
- BDS **
- MDS - 9 Specializations **

Diploma
- Diploma in Dental Mechatronics
- Dental Operating Room Assistant (DORA)

PHARMACY (MYSURU & OOTY CAMPUS)
Diploma/UG/PG Programmes
- D Pharm
- B Pharm
- B Pharm (Lateral Entry)
- Pharm D
- Pharm D (PB)

M.Pharm
- Pharmaceutics
- Pharmaceutical Quality Assurance
- Regulatory Affairs
- Industrial Pharmacy
- Pharmacy Practice
- Pharmacology
- Pharmaceutical Chemistry
- Pharmaceutical Analysis
- Pharmacognosy
- Pharmaceutical Biotechnology

Clinical Pharmacy Residency Programs
- Infectious Diseases/ Oncology/ Nephrology

Diploma / Certificate Programs
Pharma Diploma - 17 Programs

Certificate
- Medicine Information/ Herbal Drug Standardization/ Clinical Research/ Pharmaceutical Quality Assurance/ Telepharmacy/ GxP

HEALTH SYSTEM MANAGEMENT STUDIES
- BBA Hospital & Health System Management (Hon's)
- MBA Hospital Administration
- MBA Pharmacy Administration
- MBA Information Technology

YOGA
- B.Sc. Yoga
- M.Sc. Yoga
- Yoga Teachers Course (YTC) (3 months)

LIFE SCIENCES (MYSURU & OOTY CAMPUS)
B.Sc Courses (General - 3 Years/ Honours - 4 Years)
- Biotechnology
- Microbiology
- Environmental Sciences
- Food, Nutrition & Dietetics
- Psychology
- Biochemistry
- Statistics & Data Analytics
- Computational Biology & Bioinformatics

M.Sc Courses
- Cognitive Neuroscience
- Environmental Sciences
- Geoinformatics
- Nanoscience & Technology
- Nutrition & Dietetics
- Molecular Biology
- Biochemistry
- Microbiology
- Medical Statistics
- Bioinformatics
- Cosmetic Science
- Sports, Nutrition & Management
- Biotechnology
- Medical Physics
- Master of Library and Information Science (M.Lib & Info. Sc.)

Diploma
- Tissue Culture
- Nutraceutical Technology
- Environment, Health & Safety Management
- Industrial Safety

DISTANCE / ONLINE LEARNING PROGRAMS
Distance Learning
- Diploma in Environment Health & Safety Management
- Diploma in Tissue Culture
- Certificate Program in Statistical Methods & Research Methodology

Online Learning
- MBA Hospital Administration
- MBA Pharmacy Administration
- BBA Hospital and Health System Management
- B.Sc Psychology
- Certificate Programme in Dental Ethics & Jurisprudence
- Certificate Programme in Yoga Instructor
- Certificate program in Immunoinformatics and Vaccine Design

Diploma in
- Pharmacovigilance/ Quality Control/ Bioinformatics/ Regulatory Affairs/ Medical Devices

Ph.D
- Medicine / Dentistry / Pharmacy / Management Studies / Yoga / Life Sciences/ Biomedical Sciences

**Note: The guidance for counselling/ admissions will be given to UG/ PG Medical/ Dental Program. Candidates may apply to NEET entrance test and for online counselling/ seat allotment by Medical Counselling Committee (MCC) website @ www.mcc.nic.in. For more guidance, Please visit JSS AHER Campus or E-mail at - admissions@jssuni.edu.in.

JSS ACADEMY OF HIGHER EDUCATION & RESEARCH
Sri Shivarathreeshwara Nagara, Bannimantap, Mysuru- 570 015, Karnataka, India. | T:0821-2548416/ 400/ 014/ +91 99808 41859 E: admissions@jssuni.edu.in | W: www.jssuni.edu.in | FB: www.fb.com/jssuniversity

ಸಮಾಚಾರ ಸಣ್ಣದಲ್ಲ

ಶೃಂಗೇರಿ ಪೀಠದೊಂದಿಗೆ ಮೈಸೂರು ವಿವಿ ಒಡಂಬಡಿಕೆ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಯಾದ ಪ್ರಾಚ್ಯವಿದ್ಯಾ ಸಂಶೋಧನಾಲಯವು ಶೃಂಗೇರಿಯ ಜಗದ್ಗುರು ಶ್ರೀಶಂಕರಾಚಾರ್ಯ ಮಹಾ ಸಂಸ್ಥಾನ ದಕ್ಷಿಣಾಮ್ನಾಯ ಶ್ರೀಶಾರದಾ ಪೀಠ ಸಂಸ್ಥೆಯೊಂದಿಗೆ ಅಪ್ರಕಟಿತ ಹಸ್ತಪ್ರತಿಗಳಲ್ಲಿರುವ ಕೃತಿಗಳ ಕುರಿತಾದ ಒಡಂಬಡಿಕೆಗೆ ಸಹಿ ಮಾಡಲಾಯಿತು.

ಇದರ ಅಡಿಯಲ್ಲಿ ವಿದ್ವಾಂಸರ ಮೂಲಕ ಅಪ್ರಕಟಿತದವಾದ ಅಂದಾಜು 13000 ಹಸ್ತಪ್ರತಿಗಳಲ್ಲಿರುವ ಕೃತಿಗಳ ವರ್ಣನಾತ್ಮಕ ಸೂಚಿಯನ್ನು ಮಾಡಲು, ಆಯ್ದ ಕೃತಿಗಳನ್ನು ಪುಸ್ತಕರೂಪದಲ್ಲಿ ಮುದ್ರಿಸಲು ಮತ್ತು ಡಿಜಿಟಲೀಕರಣ ಮಾಡಿ ಕ್ಯಾಟಲಾಗ್ ಮಾದರಿ ರೂಪಿಸಲು ನಿಶ್ಚಯ ಮಾಡಲಾಗಿದೆ. ಈ ಒಡಂಬಡಿಕೆಯು 92,40,000 ರು.ಗಳ ಅಂದಾಜು ಯೋಜನೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ. ಸವಿತಾ ಅವರು ಹಾಗೂ ಶ್ರೀಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿ ಪಿ.ಎ.ಮುರಳಿ ಅವರು ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದರು. ಈ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ. ಡಿ.ಪಿ. ಮಧುಸೂಧನಾಚಾರ್ಯ, ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ. ನಾಗರಾಜ್ ಹಾಗೂ ಉಭಯ ಸಂಸ್ಥೆಗಳ ವಿದ್ವಾಂಸರು ಉಪಸ್ಥಿತರಿದ್ದರು.

ಅಗಲಿದ ಜೀವ

ಯಜಮಾನ್ ಪುಟ್ಟಯ್ಯ

ತಿ .ನರಸೀಪುರ: ಗ್ರಾಮದ ಅರುಂಧತಿ ನಗರದ ನಿವಾಸಿ ಯಜಮಾನ್ ಪುಟ್ಟಯ್ಯ (85)ವರ್ಷವಾಗಿದ್ದು ಇವರು ನಿಧನರಾಗಿದ್ದಾರೆ. ಇವರಿಗೆ ಬಿ.ಸೀಹಳ್ಳಿ ಗ್ರಾ.ಪಂ ಕಾರ್ಯದರ್ಶಿ ಕೆಂಪರಾಜು, ಪತ್ರಕರ್ತ ಟಿ.ಪಿ. ಮಹದೇವ್ ಹಾಗೂ ಒಬ್ಬ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಇವರ ಅಂತ್ಯ ಕ್ರಿಯೆಯನ್ನು ತಲಕಾಡು ಗ್ರಾಮದ ರುದ್ರ ಭೂಮಿಯಲ್ಲಿ ನೆರವೇರಲಿ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ದೇಗುಲ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ | ಡಾ.ನಿರ್ಮಲಾನಂದನಾಥ ಸ್ವಾಮೀಜಿ

ದೇವಸ್ಥಾನಗಳ ಅಭಿವೃದ್ಧಿಗೆ ಶ್ರಮಿಸುವುದು ಪುಣ್ಯದ ಕೆಲಸ

ಚನ್ನಪಟ್ಟಣ: ದೇವಸ್ಥಾನಗಳು ನೆಮ್ಮದಿಯ ತಾಣವಾಗಿದ್ದು, ದೇವಸ್ಥಾನಗಳ ಅಭಿವೃದ್ಧಿಗೆ ಶ್ರಮಿಸುವುದು ಪುಣ್ಯದ ಕೆಲಸ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿಗಳು ಅಭಿಪ್ರಾಯಿಸಿದರು.

ತಾಲೂಕಿನ ಬೇವೂರು ಗ್ರಾಮದ ಗ್ರಾಮ ದೇವತೆಯಾದ ಆದಿ ಉಡಸಲಮ್ಮ ದೇವಿಗೆ ಪೂಜೆ ನೆರವೇರಿಸಿ ಬಳಿಕ ದೇವಿಯ ನೂತನ ದೇವಾಲಯದ ನಿರ್ಮಾಣದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಆಶೀರ್ವದಿಸಿ ಅವರು ಮಾತನಾಡಿ, ಮನುಷ್ಯನಿಗೆ ಎಷ್ಟೇ ಒತ್ತಡಗಳಿದ್ದರೂ ಸಹ ಕೆಲ ಸಮಯ ದೇವಾಲಯದಲ್ಲಿ ಕೂತು ಪ್ರಾರ್ಥನೆ ಮಾಡಿದರೆ, ನೆಮ್ಮದಿ ಮತ್ತು ಮನಸ್ಸಿಗೆ ಪ್ರಶಾಂತತೆ ಸಿಗುತ್ತದೆ. ಇಂತಹ ದೇವಾಲಯಗಳನ್ನು ನಿರ್ಮಾಣ ಮಾಡುವುದು, ಜೀರ್ಣೋದ್ಧಾರ ಮಾಡುವುದು ಶ್ಲಾಘನೀಯ ಮತ್ತು ಪುಣ್ಯದ ಕೆಲಸವಾಗಿದೆ ಎಂದು ಹೇಳಿದರು. ಬೇವೂರು ಮಠದ ಶ್ರೀಮೃತ್ಯುಂಜಯ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಗ್ರಾಮ ದೇವರಾದ ಆದಿ ಉಡಸಲಮ್ಮ ದೇವರಿಗೆ ಪುರಾತನ ಇತಿಹಾಸ ಇದೆ. ದೇಶದ ಎಲ್ಲಾ ದೇವಾಲಯಗಳಿಗೂ ಬಾಗಿಲು ಇದೆ. ಆದರೆ ಈ ದೇವಾಲಯಕ್ಕೆ ಬಾಗಿಲೆ ಇಲ್ಲವಾಗಿದ್ದು, ಎರಡು ಬಾರಿ ಬಾಗಿಲು ಹಾಕಿದರೂ ಸಹ ದೇವಿಯೇ ಬಾಗಿಲನ್ನು ಒದ್ದು ನೂರಡಿ ದೂರಕ್ಕೆ ಬಿದಿರುವ ಇತಿಹಾಸ ಇದೆ. ರಾತ್ರಿ ವೇಳೆ ದೇವಿ ಗ್ರಾಮದ ಪ್ರದಕ್ಷಣೆ ಮಾಡಿ ಜನ ಜಾನುವಾರುಗಳ ರಕ್ಷಣೆ ಮಾಡುತ್ತಾಳೆ ಎಂಬುದು ನಂಬಿಕೆ. ಅಲ್ಲದೆ ಗ್ರಾಮದಲ್ಲಿ ಯಾವುದೇ ಶುಭ ಸಮಾರಂಭ ನಡೆದರೂ ಈ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿಯೇ ಆರಂಭ ಮಾಡುತ್ತಾರೆ. ಜೊತೆಗೆ ಹೊಸದಾಗಿ ಮದುವೆ ಆಗಿ ಬಂದ ಹೆಣ್ಣುಮಕ್ಕಳು ಹಾಗೂ ಗ್ರಾಮದಿಂದ ಬೇರೆಡೆಗೆ ಮದುವೆಯಾದ ಹೆಣ್ಣುಮಕ್ಕಳು ಈ ದೇವಿಗೆ ಪೂಜೆ ಸಲ್ಲಿಸಿದ ಬಳಿಕವೇ ಅವರು ಗಂಡನ ಮನೆಗೆ ತೆರಳಿ ಮುಂದಿನ ಜೀವನ ಆರಂಭ ಮಾಡುತ್ತಾರೆ, ಈ ನಿಟ್ಟಿನಲ್ಲಿ ಎಲ್ಲದಕ್ಕೂ ಆರಂಭ ನೀಡುವ ಆದಿ ಉಡಸಲಮ್ಮ ದೇವಿಯ ದೇವಾಲಯದ ಜೀರ್ಣೋದ್ಧಾರಕ್ಕೆ ಗ್ರಾಮಸ್ಥರು ಮುಂದಾಗಿದ್ದು ಎಲ್ಲರಿಗೂ ಶುಭ ಆಗಲಿ ಎಂದು ಆಶೀರ್ವಚನ ನೀಡಿದರು.

ಗೌಡಗೆರೆ ಶ್ರೀ ಕ್ಷೇತ್ರದ ಧರ್ಮದರ್ಶಿಗಳಾದ ಡಾ. ಮಲ್ಲೇಶ್ ಗುರೂಜಿ ಮಾತನಾಡಿ, ಬೇವೂರು ಗ್ರಾಮದ ಗ್ರಾಮ ದೇವತೆಯಾಗದ ಆದಿಉಡಸಲಮ್ಮ ದೇವಿಯ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುತ್ತಿರುವುದು ಸಂತಸ ತಂದಿದ್ದು, ನಾವು ನಮ್ಮ ಕುಟುಂಬ ಎಂದು ಜೀವನ ಮಾಡುವ ಈ ಕಾಲದಲ್ಲಿ ಗ್ರಾಮಸ್ಥರೆಲ್ಲಾ ಸೇರಿ ಟ್ರಸ್ಟ್ ಮಾಡಿಕೊಂಡು ಗ್ರಾಮ ದೇವತೆಗೆ ನೂತನ ದೇವಾಲಯ ನಿರ್ಮಾಣ ಮಾಡಲು ಮುಂದಾಗಿರುವುದು ಶ್ಲಾಘನೀಯವಾಗಿದೆ ಎಂದರು.

ದೇವಾಲಯದ ಶಂಕುಸ್ಥಾಪನೆಗೂ ಮುನ್ನ ಶ್ರೀಗಳನ್ನು ಪೂರ್ಣಕುಂಭ ಸ್ವಾಗತದೊಂದಿಗೆ ಬೆಳ್ಳಿರಥದಲ್ಲಿ ಕೂರಿಸಿ ಪೂಜಾಕುಣಿತ, ಡೊಳ್ಳು ಕುಣಿತದ ಮೂಲಕ ಗ್ರಾಮಸ್ಥದಲ್ಲಿ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ಶ್ರೀಗಳಿಂದ ದೇವಸ್ಥಾನದ ಬಸಪ್ಪನಿಗೆ ಬಾಳೆಹಣ್ಣು ನೀಡಿ ದೇವಸ್ಥಾನದ ಬಸಪ್ಪ ಎಂದು ಮುದ್ರೆ ಒತ್ತಿದರು. ವೇದಿಕೆಯಲ್ಲಿ ವಿರಕ್ತ ಮಠದ ಶ್ರೀಶಿವರುದ್ರ ಸ್ವಾಮಿಗಳು, ರಾಜ್ಯ ಒಕ್ಕಲಿಗರ ಸಂಘದ ಭೂ ಖರೀದಿ ಅಧ್ಯಕ್ಷ ಉಮಾಪತಿ, ಟ್ರಸ್ಟ್‌ನ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಆದಿ ಉಡಸಲಮ್ಮ ನೂತನ ದೇವಾಲಯದ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ ಆದಿಚುಂಚನಗಿರಿ ಶ್ರೀಗಳನ್ನು ಗೌರವಿಸಲಾಯಿತು.

> ಬೇವೂರು ಗ್ರಾಮದಲ್ಲಿ ಇತಿಹಾಸ ಪ್ರಸಿದ್ದ ದೇವಸ್ಥಾನಗಳು, ಹಾಗೂ ಪ್ರವಾಸಿ ತಾಣಗಳು ಇವೆ. ಆದರೆ ಈ ದೇವಸ್ಥಾನ ಮಾತ್ರ ಗ್ರಾಮದಲ್ಲಿ ಮೊದಲಿದ್ದು ತುಂಬಾ ಹಳೆಯದಾಗಿತ್ತು. ಇದೀಗ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮುಂದಾಗಿ ನೂತನ ದೇವಾಲಯ ನಿರ್ಮಾಣ ಮಾಡಲು ಮುಂದಾಗಿರುವ ಟ್ರಸ್ಟ್ ಮತ್ತು ಗ್ರಾಮಸ್ಥರ ಕಾರ್ಯಕ್ಕೆ ನನ್ನ ಸಹಕಾರ ಇರುತ್ತದೆ. ಸರಕಾರದಿಂದ ಸಿಗಬಹುದಾದ ಅನುದಾನ ಕೊಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ.
>
> -ಸಿ.ಪಿ.ಯೋಗೇಶ್ವರ್, ಶಾಸಕ

ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ 24ಕ್ಕೆ

ಪ್ರಾದೇಶಿಕ ಆಯುಕ್ತರಿಂದ ಸಿದ್ಧತಾ ಕಾರ್ಯ ಪರಿಶೀಲನೆ

ಚಾಮರಾಜನಗರ: ಜಿಲ್ಲೆಯ ಮಲೆ ಮಹದೇಶ್ವರಬೆಟ್ಟದಲ್ಲಿ ಏ.24ರಂದು ನಡೆಯಲಿರುವ ಸಚಿವ ಸಂಪುಟ ಸಭೆಗೆ ಸಂಬಂಧಿಸಿದಂತೆ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್ ಅವರು ಪೂರ್ವ ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಚಿವ ಸಂಪುಟ ಸಭೆಗೆ ಸಂಬಂಧಿಸಿದಂತೆ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ನೇಮಕ ಮಾಡಲಾಗಿರುವ ಅಧಿಕಾರಿಗಳನ್ನೊಳಗೊಂಡ ವಿವಿಧ ಸಮಿತಿಗಳ ಜತೆ ಪೂರ್ವಭಾವಿ ಸಭೆ ನಡೆಸಿದರು.

ಸಚಿವ ಸಂಪುಟ ಸಂಬಂಧ ಕಾರ್ಯ ನಿರ್ವಹಣೆಗಾಗಿ ರಚಿಸಲಾಗಿರುವ ಅಧಿಕಾರಿಗಳನ್ನು ಒಳಗೊಂಡ ವಿವಿಧ ಸಮಿತಿಗಳ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳಿಂದ ಕೈಗೊಳ್ಳಲಾಗಿರುವ ಸಿದ್ಧತೆಗಳ ಕುರಿತು ಪ್ರಾದೇಶಿಕ ಆಯುಕ್ತರು ವಿವರ ಪಡೆದರು.

ಸಚಿವ ಸಂಪುಟ ನಡೆಯುವ ಮಲೆ ಮಹದೇಶ್ವರ ಬೆಟ್ಟದ ದೀಪದಗಿರಿ ವಡ್ಡುವಿನಲ್ಲಿ ಎಲ್ಲ ಸಿದ್ಧತಾ ಕಾರ್ಯಗಳನ್ನು ಖುದ್ದು ಪರಿಶೀಲಿಸಿ, ಕೆಲಸಗಳು ತ್ವರಿತವಾಗಿ ಪೂರ್ಣಗೊಳಿಸಬೇಕು. ಆಯಾ ಸಮಿತಿಗಳು ನಿರ್ವಹಿಸಬೇಕಿರುವ ಕೆಲಸಗಳು ಹಾಗೂ ಪೂರ್ವ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಕೈಗೊಳ್ಳಬೇಕು. ಶಿಷ್ಟಾಚಾರ, ಸ್ವಾಗತ, ವಸತಿ, ಸಾರಿಗೆ ಸಂಪರ್ಕ, ಇನ್ನಿತರ ಎಲ್ಲ ಕಾರ್ಯಗಳನ್ನು ಯಾವುದೇ ಲೋಪವಿಲ್ಲದಂತೆ ನಿರ್ವಹಿಸಬೇಕು. ಸ್ವಚ್ಛತೆಗೆ ವಿಶೇಷ ಗಮನ ನೀಡಬೇಕು. ಸಚಿವ ಸಂಪುಟ ಸಭೆ ನಡೆಯಲು ಜಿಲ್ಲೆಗೆ ಅವಕಾಶ ದೊರೆತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಶ್ರದ್ಧೆ ಮುತುವರ್ಜಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

> ಈಗಾಗಲೇ ಸಮಿತಿಯ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿ ಅಗತ್ಯ ಮಾರ್ಗದರ್ಶನ ಮಾಡಲಾಗಿದೆ. ಕಾರ್ಯನಿರ್ವಹಣೆ ಸಂಬಂಧ ವಿವರ ಪಡೆಯಲಾಗುತ್ತಿದೆ. ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಲಾಗುತ್ತಿದೆ.
>
> - ಶಿಲ್ಪಾ ನಾಗ್, ಜಿಲ್ಲಾಧಿಕಾರಿ

ಚಾಮರಾಜನಗರ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಗೆ ಸಂಬಂಧಿಸಿದಂತೆ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ನೇಮಕ ಮಾಡಿರುವ ಅಧಿಕಾರಿಗಳನ್ನೊಳಗೊಂಡ ವಿವಿಧ ಸಮಿತಿಗಳ ಜತೆ ಪೂರ್ವಭಾವಿ ಸಭೆ ನಡೆಯಿತು.

ಅಂಡರ್ ಪಾಸ್ ನಿರ್ಮಾಣಕ್ಕೆ ಆಗ್ರಹ

ಮೈಸೂರು: ಕುಶಾಲನಗರ ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯಿಂದ ಓಡಾಡಲು ರಸ್ತೆಗಾಗಿ ಆಗ್ರಹಿಸಿ ರೈತರು ಮತ್ತು ಗ್ರಾಮಸ್ಥರು ಇಲವಾಲ ಬಳಿ ಪ್ರತಿಭಟನೆ ನಡೆಸಿದರು.

ಎನ್‌ಎಚ್ 275 ರಸ್ತೆ ಈ ಮೂಲಕ ಹಾದು ಹೋಗುತ್ತಿರುವುದರಿಂದ ಸುತ್ತ ಮುತ್ತ ರೈತರಿಗೆ ಸಮಸ್ಯೆ ಉಂಟಾಗಿದೆ. ಹೀಗಾಗಿ ಇಲವಾಲ ಹೋಬಳಿ ಅವರಹಳ್ಳಿಯಲ್ಲಿ ಅಂಡರ್ ಪಾಸ್ ಅಥವಾ ಫ್ಲೈಓವರ್ ಬಿಡ್ಜ್ ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿದರು.

ಇಲವಾಲ ಹೋಬಳಿ ಅವರಹಳ್ಳಿಯಲ್ಲಿ ಎನ್‌ಎಚ್ 275 ಕುಶಾಲನಗರ – ಬೆಂಗಳೂರು ರಸ್ತೆ ಹಾದು ಹೋಗುತ್ತಿರುವುದರಿಂದ ಸುತ್ತ ಮುತ್ತ ರೈತರಿಗೆ ಸಮಸ್ಯೆ ಉಂಟಾಗಿದೆ.

ಈ ಸಮಸ್ಯೆಯನ್ನು ಅಧಿಕಾರಿಗಳಿಗೆ , ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗುತ್ತಿಲ್ಲ ಎಂದು ಆರೋಪಿಸಿದರು. ಆವರಹಳ್ಳಿ, ಬೀಚನಕುಪ್ಪೆ, ಸಂಕಳ್ಳಿ, ಬಸ್ತಿಪುರ, ಹುಲಿಕೆರೆ, ಉಂಡವಾಡಿ ಗ್ರಾಮಗಳಿಗೆ ಓಡಾಡುವ ದಾರಿಯನ್ನು ಮುಚ್ಚಿ ಎಕ್ಸ್‌ಪ್ರೆಸ್ ಹೈವೇ ಮಾಡುತ್ತಿರುವು ದರಿಂದ ಗ್ರಾಮಸ್ಥರಿಗೆ ಓಡಾಡಲು ರಸ್ತೆಯೇ ಇಲ್ಲದಂತಾಗುತ್ತದೆ.

ಆದ್ದರಿಂದ ಇಲ್ಲಿ ಒಂದು ಅಂಡರ್ ಪಾಸ್ ಮಾಡಬೇಕು. ಇಲ್ಲ ಫ್ಲೈಓವರ್ ಬ್ರಿಡ್ಜ್ ಮಾಡಬೇಕು ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಮುದ್ದಂಡ ಹಾಕಿ ಉತ್ಸವಕ್ಕೆ ಮೆರುಗು ನೀಡಿದ ಶ್ವಾನ ಪ್ರದರ್ಶನ

ಮಡಿಕೇರಿ: ಮಡಿಕೇರಿಯಲ್ಲಿ ನಡೆಯುತ್ತಿರುವ ಮುದ್ದಂಡ ಕಪ್ ಹಾಕಿ ಉತ್ಸವಕ್ಕೆ ಇಂದು ಶ್ವಾನ ಪ್ರದರ್ಶನ ಮೆರುಗು ನೀಡಿತು.

ವಿವಿಧ ತಳಿಯ ಶ್ವಾನಗಳು ಹಾಕಿ ಮೈದಾನದಲ್ಲಿ ಆಕರ್ಷಣೆ ಮತ್ತು ಚಾಕಚಕ್ಯತೆಯಿಂದ ನೋಡುಗರ ಗಮನ ಸೆಳೆದವು.

ಪಶುವೈದ್ಯಕೀಯ ಇಲಾಖೆಯ ಸಹಯೋಗದಲ್ಲಿ ನಡೆದ ಶ್ವಾನ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಅವರು ಮಾನವನ ವಿಶ್ವಾಸ, ನಂಬಿಕೆಗೆ ಅರ್ಹವಾದ ನಿಷ್ಠಾವಂತ ಸಾಕು ಪ್ರಾಣಿಗಳಲ್ಲಿ ಶ್ವಾನ ಅಗ್ರ ಸ್ಥಾನ ಪಡೆದಿದೆ. ಮನೆಯಲ್ಲಿ ಪ್ರಾಣಿಗಳನ್ನು ಸಾಕುವುದರಿಂದ ನಿಷ್ಕಲ್ಮಶವಾದ ಪ್ರೀತಿ ಬೆಳೆಯುತ್ತದೆ. ಪ್ರತಿಯೊಬ್ಬರು ಪ್ರಾಣಿಗಳನ್ನು ಉತ್ತಮ ರೀತಿಯಲ್ಲಿ ಪೋಷಣೆ ಮಾಡಬೇಕು ಎಂದರು.

ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿಯ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ, ಪಾಲಿಕ್ಲಿನಿಕ್ ಜಿಲ್ಲಾ ಉಪನಿರ್ದೇಶಕ ಕ್ಯಾಪ್ಟನ್ ಡಾ.ಸಿ.ಪಿ. ತಿಮ್ಮಯ್ಯ ಮಾತನಾಡಿದರು.

ಪಶುಸಂಗೋಪನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಪ್ರಸನ್ನ, ನಿವೃತ್ತ ಉಪನಿರ್ದೇಶಕ ಡಾ. ಕೆ.ಪಿ.ಅಯ್ಯಪ್ಪ, ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿಯ ಕಾರ್ಯದರ್ಶಿ ಮುದ್ದಂಡ ಆದ್ಯ ಪೂವಣ್ಣ, ಉಪಾಧ್ಯಕ್ಷ ಡೀನ್ ಬೋಪಣ್ಣ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ವಿವಿಧ ತಳಿಯ ಶ್ವಾನಗಳ ಆಕರ್ಷಣೆ: ಶ್ವಾನ ಪ್ರದರ್ಶನದಲ್ಲಿ ರಾಟ್ ವಿಲ್ಲರ್, ಗ್ರೇಟ್‌ಡೇನ್, ಮ್ಯಾಸ್ಟಿಫ್, ಸೈಬೀರಿಯನ್ ಹಸ್ಕಿ, ಪಗ್, ಬುಲ್‌ಡಾಗ್, ಗೋಲ್ಡನ್ ರೆಟ್ರೀವರ್, ಬೀಗಲ್, ಲ್ಯಾಬ್ರಡರ್, ಜರ್ಮನ್ ಶೆಫರ್ಡ್, ಮುಧೋಳ್ ಹೌಂಡ್ ಸೇರಿದಂತೆ 17 ವಿವಿಧ ತಳಿಯ ಅಧಿಕ ಸಂಖ್ಯೆಯ ಶ್ವಾನಗಳು ಆಕರ್ಷಿಸಿದವು.

ವಿಜೇತ ಶ್ವಾನಗಳು: ಶ್ವಾನ ಪ್ರದರ್ಶನದಲ್ಲಿ ಕೇಚೇಟಿರ ಮದನ್ ಅವರ ಗ್ರೇಟ್ ಡೇನ್ ತಳಿ ಪ್ರಥಮ, ಕುಶಾಲನಗರದ ಶರಣ್ ಕುಮಾರ್ ಅವರ ರಾಟ್ ವಿಲ್ಲರ್ ದ್ವಿತೀಯ, ಅರೆಕಾಡು ಎ.ಕೆ.ಸೋಮಣ್ಣ ಅವರ ಮಿನಿ ಪಿಚ್ಚರ್ ತೃತೀಯ, ಮಡಿಕೇರಿಯ ಎಂ.ಐ.ರಾಹುಲ್ ಅವರ ಜರ್ಮನ್ ಶೆಫರ್ಡ್ ನಾಲ್ಕನೇ ಸ್ಥಾನ ಹಾಗೂ ತಾನ್ಯ ತಂಗಮ್ಮ ಅವರ ಸೈಬೀರಿಯನ್ ಹಸ್ಕಿ 5ನೇ ಸ್ಥಾನ ಪಡೆದುಕೊಂಡಿತು. ವಿಜೇತರ ಶ್ವಾನಗಳಿಗೆ ಆಕರ್ಷಕ ಟ್ರೋಫಿ ಹಾಗೂ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಅಲ್ಲದೇ ಭಾಗವಹಿಸಿದ್ದ ಎಲ್ಲಾ ಶ್ವಾನಗಳಿಗೆ ಪ್ರಮಾಣ ಪತ್ರ ನೀಡಲಾಯಿತು. ಎಲ್ಲಾ ಶ್ವಾನಗಳಿಗೆ ಜಿಲ್ಲಾ ಪಶುವೈದ್ಯಕೀಯ ಇಲಾಖೆಯಿಂದ ಉಚಿತ ರೇಬಿಸ್ ಲಸಿಕೆ ಹಾಗೂ ಔಷಧಿ, ಪಾಲಿಕ್ಲಿನಿಕ್ ನಿಂದ ಜಂತು ನಾಶಕ ಲಸಿಕೆ ಹಾಕಲಾಯಿತು.

ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಶ್ವಾನಗಳ ಪ್ರದರ್ಶನವು ಮೆರುಗು ನೀಡಿತು.

> ಪ್ರಾಣಿಗಳನ್ನು ರೇಬಿಸ್ ಕಾಯಿಲೆಯಿಂದ ರಕ್ಷಿಸಲು ಲಸಿಕೆ ಏಕೈಕ ಮಾರ್ಗವಾಗಿದ್ದು, ಜಿಲ್ಲೆಯ ಎಲ್ಲಾ ಪಶು ವೈದ್ಯಕೀಯ ಆಸ್ಪತ್ರೆಯಲ್ಲಿ ಉಚಿತ ಲಸಿಕೆ ನೀಡಲಾಗುತ್ತಿದೆ. ಸಾರ್ವಜನಿಕರು ತಮ್ಮ ಪ್ರಾಣಿಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸುವ ಮೂಲಕ ಮಾರಣಾಂತಿಕ ಕಾಯಿಲೆಯಿಂದ ರಕ್ಷಿಸಬೇಕು.
>
> -ಡಾ.ಲಿಂಗರಾಜು ಹಾ.ದೊಡ್ಡಮನಿ, ಪಶುವೈದ್ಯಕೀಯ ಸೇವಾ ಇಲಾಖೆಯ ಜಿಲ್ಲಾ ಉಪನಿರ್ದೇಶಕ

ಸುಳ್ಳು ಕೊಲೆ ಪ್ರಕರಣ: ಕೋರ್ಟ್‌ಗೆ ಎಸ್ಪಿ ವರದಿ ಸಲ್ಲಿಕೆ

ಮೈಸೂರು: ಪೊಲೀಸರ ಬೇಜವಾಬ್ದಾರಿಯಿಂದ ದಾಖಲಾದ ಕೊಲೆ ಪ್ರಕರಣವೊಂದರಲ್ಲಿ ನಿರಪರಾಧಿ ಒಬ್ಬ 2 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ ಪ್ರಕರಣ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ನ್ಯಾಯಾಲಯಕ್ಕೆ ಸಮಗ್ರ ವರದಿ ಸಲ್ಲಿಸಿದರು.



ಈ ಕುರಿತಂತೆ ವಿಚಾರಣೆ ನಡೆಸಿದ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಪ್ರಕರಣದ ತೀರ್ಪನ್ನು ಏ.23ಕ್ಕೆ ಕಾಯ್ದಿರಿಸಿ ಆದೇಶಿಸಿದರು.

ಪ್ರಕರಣದ ಹಿನ್ನಲೆ: ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾದ ಶವ ನಾಪತ್ತೆಯಾದ ಮಹಿಳೆ ಮಲ್ಲಿಗೆ ಅವರದ್ದು ಎಂಬ ಅನುಮಾನದ ಮೇರೆಗೆ ಆಕೆಯ ಪತಿ ಸುರೇಶ್ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿತ್ತು.

ಈ ಪ್ರಕರಣದಲ್ಲಿ ಸುರೇಶ್, ಎರಡು ವರ್ಷ ಜೈಲು ಶಿಕ್ಷೆಯನ್ನೂ ಅನುಭವಿಸಿ, ಜಾಮೀನಿನ ಹೊರಬಂದಿದ್ದಾರೆ. ಜೈಲಿನಿಂದ ಹೊರಬಂದ ಬಳಿಕ ಪತ್ನಿ ಬದುಕಿರುವುದು ಸುರೇಶ್‌ಗೆ ಗೊತ್ತಾಗಿ, ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದರು. ಈ ಸಂಬಂಧ ವರದಿ ಸಲ್ಲಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ನ್ಯಾಯಾಲಯ ಸೂಚಿಸಿತ್ತು. ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಪ್ರಕರಣದ ಸಾಕ್ಷಿಗಳು ಹಾಗೂ ತನಿಖಾಧಿಕಾರಿಗಳನ್ನು ವಿಚಾರಣೆ ಮಾಡಿರುವ ವರದಿಯನ್ನು ಇಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಬಗ್ಗೆ ಕೋರ್ಟ್ ಏ.23ರಂದು ತೀರ್ಪು ಪ್ರಕಟಿಸಲಿದೆ ಎಂದು ಸುರೇಶ್ ಪರ ವಕೀಲ ಪಾಂಡು ಪೂಜಾರಿ ಮಾಧ್ಯಮಗಳಿಗೆ ತಿಳಿಸಿದರು.

ನಿರಪರಾಧಿ ಮೇಲೆ ಸುಳ್ಳು ಚಾರ್ಜ್‌ಶೀಟ್ ಹಾಕಿದ ಸಂಬಂಧ ಐಪಿಸಿ ಸೆಕ್ಷನ್ 211ರ ಅಡಿ ತನಿಖಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳುವಂತೆ ಮನವಿ ಮಾಡಿರುವೆ. ಈ ಮನವಿಯನ್ನು ಕೋರ್ಟ್ ಸ್ವೀಕರಿಸಿ, ಏ.23ರಂದು ತೀರ್ಪು ನೀಡಲಿದೆ ಎಂದು ತಿಳಿಸಿದ್ದಾರೆ.

ಸುರೇಶ್ ನಿರಪರಾಧಿ. ಈ ಪ್ರಕರಣದಲ್ಲಿ ಬಲಿಪಶುವಾಗಿದ್ದಾನೆ. ಆತನನ್ನು ಗೌರವಯುತವಾಗಿ ಬಿಡುಗಡೆ ಮಾಡಬೇಕು, ಜೊತೆಗೆ ಪರಿಹಾರ ನೀಡಬೇಕೆಂದು ಸರಕಾರ ಅಭಿಯೋಜಕರೇ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ ಎಂದು ವಕೀಲ ಪಾಂಡು ಪೂಜಾರಿ ಹೇಳಿದರು.

ಪತ್ನಿಯಿಂದ ಬೆದರಿಕೆ: ನನಗೆ ನ್ಯಾಯ ಸಿಗುತ್ತದೆ ಎಂದುಕೊಂಡಿರಲಿಲ್ಲ. ಈ ಆರೋಪದಿಂದಾಗಿ ನನ್ನನ್ನು ಕೊಲೆಗಾರ ಮತ್ತು ನನ್ನ ಮಕ್ಕಳಿಗೆ ನಿಮ್ಮ ತಂದೆ ಕೊಲೆಗಾರ ಅಂತ ಜನ ಹೇಳುತ್ತಿದ್ದರು. ಯಾವ ಕುಟುಂಬಕ್ಕೂ ಈ ರೀತಿ ಆಗಬಾರದು. ಪತ್ನಿಯೇ ನನಗೆ ಮತ್ತು ನನ್ನ ಕುಟುಂಬಕ್ಕೆ ಬೆದರಿಕೆ ಹಾಕಿದ್ದಾರೆ. ಈ ರೀತಿ ಮಾಡುವವರನ್ನು ನಾವೇಕೆ ಹತ್ತಿರ ಸೇರಿಸಿಕೊಳ್ಳಬೇಕು?, ಆಕೆ ನಮಗೆ ಬೇಡ ಎಂದು ಸುರೇಶ್ ತಿಳಿಸಿದ್ದಾರೆ.

ಬಡಗೂಡಮ್ಮ ದೇವಿಯ ರಥೋತ್ಸವ

ನಾಗಮಂಗಲ: ಪಟ್ಟಣದಲ್ಲಿ ಬಡಗೂಡಮ್ಮ ದೇವಿಯ ಕೊಂಡೋತ್ಸವ ಮತ್ತು ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಏ.11 ಶುಕ್ರವಾರ ರಾತ್ರಿ ಪಟ್ಟಣದ ಹಂಪೆರಸನ ಕೊಳದಲ್ಲಿನ ಗಂಗಾಪೂಜೆಯೊಂದಿಗೆ ಪೂಜಾರಿಕೆಯ ಹಕ್ಕುಳ್ಳ ಗಂಗಾ ಮತಸ್ಥ ಸಮುದಾಯದ ಆಯ್ದ ಕುಟುಂಬದಿಂದ ಅಡಿಕೆ ಹೊಂಬಾಳೆಯೊಂದಿಗೆ ಅತ್ತಿ ಕೊನೆಯ ಕಂಭ ಹಾಕುವುದು ವಾಡಿಕೆ. ರಥೋತ್ಸವಕ್ಕೆ ನಾಲ್ಕು ದಿನಗಳ ಮುಂಚಿತವಾಗಿ ಏ.16ಬುಧವಾರ ರಾತ್ರಿ ನಡೆಯುವ ವಿಶೇಷ ಹೂವಿನ ಚಪ್ಪರ ಹಾಗೂ ತಾಯಿಯ ಉತ್ಸವ ಮೂರ್ತಿಯ ಪಟ್ಟಣದ ಒಳಸುತ್ತಿನ ಮೆರವಣಿಗೆ ಜಾತ್ರಾ ಮಹೋತ್ಸವಕ್ಕೆ ಮುನ್ನುಡಿಯಾಗಲಿದೆ.

ಏ.17 ರ ಗುರುವಾರ ಇಡೀ ರಾತ್ರಿ, ಉಪ್ಪಾರಹಳ್ಳಿ, ಜೋಡಿನೆರಲಕೆರೆ, ಹುಲ್ಲೇಕೆರೆ, ಬೀರೇಶ್ವರಪುರ, ಕಲ್ಲಿನಾಥಪುರ ಮತ್ತು ಕೆ.ಮಲ್ಲೇನಹಳ್ಳಿ ಗ್ರಾಮಸ್ಥರು ಮುಂಗೋಳಿ ತುಂಬಿದ ರಂಗದ ಕುಣಿತದಲ್ಲಿ ಭಾಗಹಿಸುತ್ತಾರೆ.

ಏ.18 ರ ಶುಕ್ರವಾರ ದೇವಾಲಯದ ಆವರಣದಲ್ಲಿ ಹೋಮಹವನಾದಿಗಳು ಸೇರಿದಂತೆ ಧಾರ್ಮಿಕ ಕೈಂಕರ್ಯಗಳು ಜರುಗಲಿವೆ. ಸಂಜೆ ಶುಭ ಗೋದೂಳಿ ಲಗ್ನದಲ್ಲಿನ ಪೂಜಾ ಕಾರ್ಯಕ್ರಮಗಳೊಂದಿಗೆ ಕೊಂಡೋತ್ಸವಕ್ಕೆ ಅಗ್ನಿಸ್ಪರ್ಷ ಮಾಡುವ ಮೂಲಕ ಚಾಲನೆ ನಿಡಲಾಗುವುದು.

ಏ.19ರ ಶನಿವಾರ ಶ್ರೀಬಡಗೂಡಮ್ಮ ದೇವಿಯ ಉತ್ಸವ ಮತ್ತು ಉಪ್ಪಾರಹಳ್ಳಿ ಹನುಮಂತ ದೇವರ ಸರ್ವಾಲಂಕೃತ ಉತ್ಸವ ಮೂರ್ತಿಗಳ ಮೆರವಣಿಗೆಯ ಜೊತೆಗೆ ಶನಿವಾರ ಬೆಳಗಿನ ಜಾವ ಕೊಂಡೋತ್ಸವ ಮತ್ತು ಸಂಜೆ ಗೋಧೂಳಿ ಶುಭ ಲಗ್ನದಲ್ಲಿ ಅಮ್ಮನವರ ಮಹಾ ರಥೋತ್ಸವ ಜರುಗಲಿದೆ.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.
ಸೀಮಿಸ್ ಸಂಖ್ಯೆ–136 12025

ಅರ್ಜಿದಾರರು : 1. ಸವಿತ ಬಿನ್ ಲೇಟ್ ತಿಮ್ಮಯ್ಯ, 45 ವರ್ಷ 2. ಸಾಕಮ್ಮ ಕೋಂ ಲೇಟ್ ಗೋವಿಂದಪ್ಪ, 61 ವರ್ಷ 3. ದೇವರಾಜು ಬಿನ್ ಲೇಟ್ ಗೋವಿಂದಪ್ಪ, 43 ವರ್ಷ 4. ಲಕ್ಷ್ಮೀ ಬಿನ್ ಲೇಟ್ ಗೋವಿಂದಪ್ಪ, 41 ವರ್ಷ 5. ದಾಸಪ್ಪ ಬಿನ್ ಲೇಟ್ ಗೋವಿಂದಪ್ಪ, 36 ವರ್ಷ 6. ಕವಿತ ಬಿನ್ ಲೇಟ್ ಗೋವಿಂದಪ್ಪ, 34 ವರ್ಷ 7. ಡಿ.ವೆಂಕಟಸ್ವಾಮಿ ಬಿನ್ ಲೇಟ್ ದಾಸಪ್ಪ, 63 ವರ್ಷ 8. ತನುಜ ಬಿನ್ ಡಿ.ವೆಂಕಟಸ್ವಾಮಿ, 36 ವರ್ಷ 9 ಅನಿತ ಬಿನ್ ಡಿ.ವೆಂಕಟಸ್ವಾಮಿ, 33 ವರ್ಷ ಎಲ್ಲರ ವಾಸ: ಹನುಮಂತಪುರ ಗ್ರಾಮ, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

ವಿರುದ್ಧ

ಎದುರುದಾರರು : ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ಮಿಡಿಗೇಶಿ ಹೋಬಳಿ ಮಧುಗಿರಿ ತಾಲೂಕು

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ 2ನೇ ಅರ್ಜಿದಾರರ ಮಾವ, ಅರ್ಜಿದಾರ 1. 3 ರಿಂದ 5, 7, 8 & 9 ರವರ ತಾತ ಮತ್ತು 7ನೇ ಎದುರುದಾರರ ತಂದೆಯಾದ ದಾಸಪ್ಪ ಬಿನ್ ಲೇಟ್ ತಿಮ್ಮಯ್ಯ ರವರು ದಿನಾಂಕ: 15–07–1977 ರಂದು ಮಧುಗಿರಿ ತಾಲ್ಲೂಕು, ಮಿಡಿಗೇಶಿ ಹೋಬಳಿ, ಹನುಮಂತಪುರ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: –31/5/25 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ,

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ
ಅರ್ಜಿದಾರರ ಪರ ವಕೀಲರು.
ನೀಲಕಂಠಯ್ಯ ವಕೀಲರು.
ನಂ.27. ಸೋಮೇಶ್ವರ ಕಾಂಪ್ಲೆಸ್, 2ನೇ ಮಹಡಿ, ತುಳಸಿ ತೋಟ, ಬೆಂಗಳೂರು – 53

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ
ಸೀಮಿಸ್ ಸಂಖ್ಯೆ–131/2025

ಅರ್ಜಿದಾರರು: 1. ಚಿನ್ನಪ್ಪ ಬಿನ್ ಲೇಟ್ ನಲ್ಲಪ್ಪ,–65 ವರ್ಷ, 2. ನಾಗರಾಜು.ಪಿ.ಸಿ. ಬಿನ್ ಚಿನ್ನಪ್ಪ –37 ವರ್ಷ, 3. ಲೋಕೇಶ್ ಬಿನ್ ಚಿನ್ನಪ್ಪ,– 35 ವರ್ಷ, ಎಲ್ಲರ ವಾಸ: ಪೋಲೇನಹಳ್ಳಿ ಗ್ರಾಮ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಎದುರುದಾರರು: ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ಕೊಡಿಗೇನಹಳ್ಳಿ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ 1 ನೇ ಅರ್ಜಿದಾರರ ಹೆಂಡತಿಯಾದ ಹಾಗೂ 2 ಮತ್ತು 3ನೇ ಅರ್ಜಿದಾರರ ತಾಯಿಯಾದ ಲಕ್ಷ್ಮಮ್ಮ ಕೋಂ:ಚಿನ್ನಪ್ಪ ರವರು ದಿನಾಂಕ: 04–05–2023 ರಂದು ಮಧುಗಿರಿ ತಾಲ್ಲೂಕು, ಕೊಡಿಗೇನಹಳ್ಳಿ ಹೋಬಳಿ, ಪೋಲೇನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 31/05/2025 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ 2025 ನೇ ವರ್ಷದ ಏಪ್ರಿಲ್ ತಿಂಗಳ 17 ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ,
ಶಿರಸ್ತೇದಾರರು
ಅಧಿಕ ಸಿವಿಲ್ ಜಡ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ವಿ.ರಘುನಾಥರೆಡ್ಡಿ, ಬಿ.ಎ. ಬಿ.ಇಡಿ.ಎಲ್.ಎಲ್.ಬಿ. ವಕೀಲರು, ಮಧುಗಿರಿ.

IN THE COURT OF THE CIVIL JUDGE AND J.M.F.C. AT KORATAGERE
C.MIS.No.103/2025

Petitioners: 1)Yallamma w/o Late. Venkatamma, Aged 78 years, r/o Basavanahalli Village, Holavanahalli. Hobli, Koratagere Taluk.

V/S

Respondent: The Deputy Tahasildar, The Registar of Birth Koratagere

PUBLIC NOTIFICATION

Whereas the petitioner husband have filed the above petition to obtain the death certificate of the by Name Venkatqppa s/o Peddaganna died on 08/05/2020, at Koratagere tauk, Holavanhalli, hobli, Basavanhalli village, at the said address. It is hereby notify that whoever has interest or objection to obtain the death certificate of the may appear in person or through your advocate on: 05/07/2025 in the above case. Failing which the matter will be heard written mined in your absence.

By the Order of Court
Shirestedar
Civil Judge and JMFC Court, Koratagere
Advocate for petitioners:
Anantharaju K.V, Koratagere.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ,
ಸೀ ಮಿಸ್ ಸಂಖ್ಯೆ 132/2025

ಅರ್ಜಿದಾರರು: ಅರುಣಕುಮಾರ. ಎಲ್ ಬಿನ್ ಲೇಟ್ ಲಿಂಗಣ್ಣ, 52 ವರ್ಷ ವಾಸ: ಹೌಸಿಂಗ್ ಬೋರ್ಡ್ ಕಾಲೋನಿ. ಮಧುಗಿರಿ ಟೌನ್.

ವಿರುದ್ಧ

ಎದುರುದಾರರು : ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ ಟೌನ್

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ ಅರ್ಜಿದಾರರ ತಾಯಿಯಾದ ಸುಶೀಲಮ್ಮ ಕೋಂ ಲೇಟ್ ಲಿಂಗಣ್ಣ ರವರು ದಿನಾಂಕ: 17–04–2009 ರಂದು ಮಧುಗಿರಿ ಟೌನ್ ಇಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 31/5/2025 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರುಸಲ್ಲಿಸಬಹುದು.ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.ನ್ಯಾಯಾಲಯದ ಮೊಹರಿನೊಂದಿಗೆ, 2025ನೇ ವರ್ಷದ ಏಪ್ರಿಲ್ 17 ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ,
ಶಿರಸ್ತೇದಾರರು
ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಜಿ.ಶ್ರೀನಿವಾಸ ರೆಡ್ಡಿ ವಕೀಲರು, ಮಧುಗಿರಿ.

IN THE COURT OF THE CIVIL JUDGE AND JMFC AT KORATAGERE
C.MIS.No. 99 /2025

Petitioner: 1. Sri Srinivas prasad, Aged About 25 Years. R/o Goobalagutte Villege Kalkere Majare, Kasaba Hobli, Koratagere Taluk.

V/S

Respondent: The Tahasildar, Registar of Birth & Death, Koratagere Taluk.

PUBLIC NOTIFICATION

Whereas the petitioner has filed the above petition to obtain the death certificate of the first petitioner Grand Mother by name Thimmakka W/o Late Lingappa was died on 23-03-2020 at Goobalagutte Villege Kalkere Majare Kasaba Hobli Koratagere Taluk, Tumkur Dist. It is hereby notify that whoever has interest or objection to obtain the death certificate of the petitioner Father may be appear in person or through your advocate on 30-06-2025 in the above case. Failing which the matter will be heard written mined in your absence.

By the Order of Court
Shirestedar
Civil Judge and JMFC Court, Koratagere
Advocates for petitioner:
Sanjeevaraju S.
Koratagere.

IN THE COURT OF THE CIVIL JUDGE AND J.M.F.C. AT KORATAGERE
C.Mis No.108/2025

PETITIONER : Siddagangaiah G. S/o Late Govindappa, Aged about 40 years, R/o Kyamenahalli Village. Holavanahalli Hobli, Koratagere Taluk, Tumakuru Dist.

V/s

RESPONDENT: Tahasildar, Registrar of Birth and Death, Koratagere Taluk, Tumakuru Dist.

PUBLIC NOTIFICATION

Whereas the petitioner have filed the above petition to obtain the death certificate of the petitioner Grand-Father by name Chikkathimmaiah S/o Thimmaiah died on 01-08-1970 and Grand-mother by name Muthamma W/o Chikkathimmaiah was died on 06-08-1972 at Kyamenahalli Village, Holavana halli Hobli, Koratagere Taluk, Tumakuru Dist. If anybody has any objection or right with respect to the above said fact and petition may filed objection in the above said case by personally or by counsel. The case is posted on 05/07/2025 at 11-00 a.m. Otherwise the said matter will be disposed accordance with law.

Given under my hand and the seal of the court on this 28th day of March 2025 at Koratagere.

By the Order of Court
Shirestedar
Civil Judge and JMFC Court, Koratagere
Advocate for petitioner:
B.H. Nagendrappa, Koratagere.

IN THE COURT OF THE CIVIL JUDGE AND JMFC AT KORATAGERE
C.MIS. No. 90/2025

Petitioners: 1.Ramakka W/o Late Bheemaiah, a/a 75 years, 2.Bhagyamma D/o Late Bheemaiah, a/a 50 years, 3.Ranganatha S/o Late Bheemaiah, a/a 47 years, 4.Umesha S/o Late Bheemaiah, a/a 45 years, All are r/o Baraka Village, C.N.Durga Hobli, Koratagere taluk.

V/S

Respondent: The Deputy-Tahasildar, The Registar of Birth and Death, Thovinakere, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 1st petitioner's Grand-father by name Hanumanthaiah S/o Late Kamaiah died on 10-05-1970 and Grand-mother by name Puttahanumakka W/o Late Hanumanthaiah died on 05-02-1973 at Koratagere taluk, C.N.Durga Hobli, Baraka. It is hereby notify that whoever has interest or objection to obtain the death certificate of the ast petitioner Grand-father & Grand-Mother may appear in person or through your advocate on: 26/06/2025 in the above case. Failing which the matter will be heard written mined in your absence.

By the order of Court
Shirastedar
Civil Judge and JMFC Court, Koratagere
Advocate for petitioner:
M.C.Mallikarjunaiah,
Koratagere.

IN THE COURT OF THE CIVIL JUDGE AND JMFC AT GOWRIBIDANURU
C.MIS.No. 26/2025

Petitioner: Jwalendrakumar B.T. S/o Late B.S. Thimmappa, 68 years, R/o N.G.E.F. Lay out, Nagarabhavi, Bangalore-72

V/s

1. The Tahasildar, The Registar of Birth & death, Madhugiri, Madhugiri Taluk.
2. B.T. Prakashakumar S/o B.S. Thimmappa, A/a 62 years, 3. B.T. Sudharshan S/o B.S. Thimmappa, a/a 60 years, 4. Manjula W/o Suresh a/a 58 years. 2 to 5 are R/o C/o Prakashkumar No/.61, 2nd Main, 11th Cross, W.O.C. Mahalakshmi Puram, Bangalore.

PUBLIC NOTIFICATION

Whereas the petitioner has filed the above petition to obtain the death certificate of the petitioner's Senior Mother by name Nagarathnamma W/o Late B.S. Pashrwanath died on 02-08-1980 at Chikkaballapura Dist, Gowribidanuru Taluk, Gowribidanuru town, Gowraiah Street. It is hereby notify that whoever has interest or objection to obtain the death certificate of the petitioner Senior Mother may appear in person or through your advocate on 20-05-2025 in the above case. Failing which the matter will be herd written mined in your absence.

By the order of Court
Sherastedar,
Civil Judge & JMFC Court at Gowribidanur
Advocate for petitioner:
Sanjeevaraju, Advocate
Koratagere

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ
ಸಿ.ಮಿಸ್.ಸಂಖ್ಯೆ: 137/2025

ಅರ್ಜಿದಾರರು: 1. ರಂಗಯ್ಯ ಬಿನ್ ಲೇಟ್ ಲಕ್ಕಪ್ಪ– 62 ವರ್ಷ, 2. ಶಿವರಾಮಯ್ಯ ಬಿನ್ ಲೇಟ್ ಲಕ್ಕಪ್ಪ– 58 ವರ್ಷ, 3. ರಂಗಸ್ವಾಮಿ ಬಿನ್ ಲೇಟ್ ಲಕ್ಕಪ್ಪ– 54 ವರ್ಷ,ಛ ಎಲ್ಲರ ವಾಸ: ಗೊದ್ದನಪಾಳ್ಯ ಗ್ರಾಮ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಎದುರುದಾರರು; ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ದೊಡ್ಡೇರಿ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ 1 ರಿಂದ 3ನೇ ಅರ್ಜಿದಾರರ ತಾಯಿ ಕಾಮಕ್ಕ ಕೋಂ:ಲೇಟ್ ಲಕ್ಕಪ್ಪ ರವರು ದಿನಾಂಕ: 27–02–2021 ರಂದು ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ, ಗೊದ್ದನಪಾಳ್ಯ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ– 21/06/25 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ 2025 ನೇ ವರ್ಷದ ಏಪ್ರಿಲ್ ತಿಂಗಳ 17 ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ,
ಶಿರಸ್ತೆದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಲಿಂಗರಾಜು.ಎಸ್.ಸಿ. ಬಿ.ಎ.ಎಲ್. ಎಲ್.ಎಲ್.ಬಿ. ವಕೀಲರು, ಮಧುಗಿರಿ.

ಗೌರವಾನ್ವಿತ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ,
ಸೀಮಿಸ್ ಸಂಖ್ಯೆ –133/2025

ಅರ್ಜಿದಾರರು:1 ಚಿಕ್ಕತಿಮ್ಮಕ್ಕ ಕೋಂ ಲೇಟ್ ಪಾಪಣ್ಣ–73 ವರ್ಷ, 2. ಹನುಮಂತಯ್ಯ ಬಿನ್ ಲೇಟ್ ಪಾಪಣ್ಣ– 52 ವರ್ಷ 3. ಅನಿತಕುಮಾರಿ ಬಿನ್ ಲೇಟ್ ಪಾಪಣ್ಣ ಕೋಂ ವೆಂಕಟೇಶಬಾಬು– 50 ವರ್ಷ ಎಲ್ಲರ ವಾಸ: ಕುವೆಂಪು ಶಾಲೆ ಹತ್ತಿರ, ಮಿಡಿಗೇಶಿ ಗ್ರಾಮ, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಎದುರುದಾರರು : ಉಪ–ತಹಸೀಲ್ದಾರ್ ಮಿಡಿಗೇಶಿ, ಮಧುಗಿರಿ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ 1ನೇ ಅರ್ಜಿದಾರರ ಗಂಡ, ಅರ್ಜಿದಾರರ 2 & 3 ರವರ ತಂದೆಯಾದ ಪಾಪಣ್ಣ ಬಿನ್ ಲೇಟ್ ಗುಜ್ಜಾರಪ್ಪ ರವರು ದಿನಾಂಕ: 20–10–2018 ರಂದು ಮಧುಗಿರಿ ತಾಲ್ಲೂಕು, ಮಿಡಿಗೇಶಿ ಹೋಬಳಿ, ಮಿಡಿಗೇಶಿ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 31/5/25 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ. 2025 ನೇ ವರ್ಷದ 17ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ಗೌರವಾನ್ವಿತ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ,
ಅರ್ಜಿದಾರರ ಪರ ವಕೀಲರು.
ಶ್ರೀನಿವಾಸ ವಕೀಲರು, ಮಧುಗಿರಿ.

ಸಮಾಚಾರ ಸಣ್ಣದಲ್ಲ

ಸಾರ್ವಜನಿಕರಿಂದ ಅಹವಾಲು ಸ್ವೀಕಾರ

ಚಿಕ್ಕಬಳ್ಳಾಪುರ: ಡಾ. ಡಿ.ಎಂ. ನಂಜುಂಡಪ್ಪ ವರದಿ ಬಂದು 22 ವರ್ಷಗಳು ಕಳೆದಿದೆ. ಕರ್ನಾಟಕದಲ್ಲಿ ಹಿಂದೆ ಇದ್ದ 175 ತಾಲೂಕುಗಳ ಬದಲು ಪ್ರಸ್ತುತ 240 ತಾಲೂಕುಗಳಾಗಿವೆ. 2023ರ ಬೆಳಗಾವಿ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಘೋಷಿಸಿದಂತೆ, ಡಾ. ಡಿ.ಎಂ. ನಂಜುಂಡಪ್ಪ ವರದಿಯ ಅನುಷ್ಠಾನದಿಂದ ತಾಲೂಕುಗಳು ಅಭಿವೃದ್ಧಿ ಹೊಂದಿರುವ ಬಗ್ಗೆ ಹಾಗೂ ಅಭಿವೃದ್ಧಿ ಹೊಂದದೆ ಇರುವ ತಾಲೂಕುಗಳನ್ನು ಗುರುತಿಸಿ ಹೊಸದಾಗಿ ಸೂಚ್ಯಾಂಕವನ್ನು ಕಂಡುಹಿಡಿದು ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡುವ ಸಂಬಂಧ ರಾಜ್ಯ ಸರಕಾರವು ಪ್ರೊ. ಎಂ.ಗೋವಿಂದರಾವ್, ಆರ್ಥಿಕ ತಜ್ಞರು ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯನ್ನು ರಚಿಸಿದೆ. ಸದರಿ ಸಮಿತಿಯು ಜಿಲ್ಲಾ ಮಟ್ಟದ ಸಂವಾದ ಸಭೆಗಳನ್ನು ಏರ್ಪಡಿಸಲು ನಿರ್ಧರಿಸಿದೆ. ಇಂದಿನಿಂದ ಪೂರ್ವಾಹ್ನ 11 ಗಂಟೆಗೆ ಜಿಲ್ಲಾಡಳಿತ ಭವನದ ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸಂವಾದ ಸಭೆಯನ್ನು ಆಯೋಜಿಸಲಾಗಿದೆ. ಸದರಿ ಸಭೆ ಮುಕ್ತಾಯಗೊಂಡ ನಂತರ ಜಿಲ್ಲೆಯ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಮನವಿಗಳನ್ನು ಸ್ವೀಕಾರ ಮಾಡಲು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸಾರ್ವಜನಿಕರು ಈ ಸಂಬಂಧ ಸದುಪಯೋಗ ಪಡಿಸಿಕೊಳ್ಳಲು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಅವರು ತಿಳಿಸಿದರು.

ವಿವಾಹಿತ ಮಹಿಳೆಯ ಶವ ಪತ್ತೆ

ಚಿಕ್ಕಬಳ್ಳಾಪುರ: ನಗರದಲ್ಲಿನ ನೂತನ ಕನ್ನಡ ಭವನ ಸಮೀಪವಿರುವ ಕಲ್ಯಾಣಿಯಲ್ಲಿ ರಾತ್ರಿ ನಗರದ ಕಾರ್ಖಾನೆ ಪೇಟೆ ವಿವಾಹಿತ ಮಹಿಳೆ 35 ವರ್ಷದ ವನಿತಾ ಮುಳುಗಿ ಸಾವನ್ನಪ್ಪಿರುವ ಘಟನೆ ಚಿಕ್ಕಬಳ್ಳಾಪುರದಲ್ಲಿ ನಡೆದಿದೆ. ಪೊಲೀಸ್ ಮೂಲಗಳ ಪ್ರಕಾರ ಈಕೆಯ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿತ್ತು. ಊರಿಗೆ ಹೋಗಿ ಬರುತ್ತೇನೆಂದು ಹೇಳಿ ಹೋಗಿದ್ದವರು, ಬುಧವಾರ ಬೆಳಗ್ಗೆ ಶವವಾಗಿ ಪತ್ತೆಯಾಗಿದ್ದಾರೆ ಎನ್ನಲಾಗಿದೆ. ಇನ್ನು ಈಕೆಯ ತಾನಾಗಿಯೇ ನೀರಿಗೆ ಬಿದ್ದು ಮೃತಪಟ್ಟಿದ್ದಾರೋ ಇಲ್ಲವೇ ಬೇರೆ ರೀತಿಯಲ್ಲಿ ಏನಾದರೂ ಆಗಿದೆಯೋ ಎಂಬುದು ಪೊಲೀಸರ ತನಿಖೆಯಿಂದ ಸತ್ಯ ಸಂಗತಿ ಹೊರಬರಲಿದೆ. ಈ ಬಗ್ಗೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ತುಮಕೂರು: ರುಡ್‌ಸೆಟ್ ಸಂಸ್ಥೆಯ ವತಿಯಿಂದ ಎಂಬ್ರಾಯ್ಡರಿ, ಆರಿ ವರ್ಕ್ ಮತ್ತು ಫ್ಯಾಬ್ರಿಕ್ ಪೇಂಟಿಂಗ್ ಕುರಿತ 30 ದಿನಗಳ ಉಚಿತ ತರಬೇತಿ ನೀಡಲು ಗ್ರಾಮೀಣ ನಿರುದ್ಯೋಗಿ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ತರಬೇತಿ ಮೇ 5ರಿಂದ ಪ್ರಾರಂಭವಾಗಲಿದ್ದು, ಅರ್ಜಿ ಸಲ್ಲಿಸುವವರು 18 ರಿಂದ 45 ವರ್ಷ ವಯೋಮಾನದವರಾಗಿರಬೇಕು. ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಬಿಪಿಎಲ್ ಕಾರ್ಡ್ ಹಾಗೂ ಆಧಾರ್ ಕಾರ್ಡನ್ನು ಹೊಂದಿರುವ ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ತರಬೇತಿ ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರ ವಿತರಿಸಲಾಗುವುದು. ಆಸಕ್ತರು ಏ. 25ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬಹುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380220884, 9380162042,ನ್ನು ಸಂಪರ್ಕಿಸಿ ಎಂದು ನಿರ್ದೇಶಕ ತಿಳಿಸಿದರು.

10-16 ವರ್ಷದ ಮಕ್ಕಳಿಗೆ ಬೇಸಿಗೆ ಶಿಬಿರ

ತುಮಕೂರು: ನಗರದ ಜಿಲ್ಲಾ ಬಾಲಭವನ ಸಮಿತಿ ವತಿಯಿಂದ 2025-26ನೇ ಸಾಲಿಗೆ ಸಂಬಂಧಿಸಿದಂತೆ 10 ರಿಂದ 16 ವರ್ಷದ ವಯೋಮಾನದ ಮಕ್ಕಳಿಗಾಗಿ ಮೇ 6 ರಿಂದ ಮೇ 20ರ ವರೆಗೆ 15 ದಿನಗಳ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರವು ಪ್ರತಿ ದಿನ ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ಶಿಬಿರದಲ್ಲಿ ಕೇವಲ 60 ಮಕ್ಕಳಿಗೆ ಮಾತ್ರ ಅವಕಾಶವಿರುವುದರಿಂದ, ಆಸಕ್ತ ಪಾಲಕರು ತಮ್ಮ ಮಕ್ಕಳನ್ನು ಮೇ 03 ಸಂಜೆ 5:30 ಗಂಟೆಯೊಳಗೆ ಜಿಲ್ಲೆಯ ಬಾಲಭವನ ಕಚೇರಿ, ಎಂ.ಜಿ ರಸ್ತೆ, ಇಲ್ಲಿ ಕಚೇರಿ ವೇಳೆಯಲ್ಲಿ ನೊಂದಾಯಿಸಿಕೊಳ್ಳಬಹುದು. ಮೊದಲಿಗೆ ನೋಂದಾಯಿಸಿಕೊಂಡವರಿಗೆ ಆದ್ಯತೆ ನೀಡಲಾಗುತ್ತದೆ. ಸರಕಾರಿ ಶಾಲಾ ಮಕ್ಕಳು, ಗ್ರಾಮೀಣ/ಹೋಬಳಿ ಮಟ್ಟದ ಮತ್ತು ಸೌಲಭ್ಯ ವಂಚಿತ ಮಕ್ಕಳು, ಸರಕಾರಿ ಸುಧಾರಣಾ ಸಂಸ್ಥೆಗಳ ಬಾಲಕ/ಬಾಲಕಿಯರ ಬಾಲ ಮಂದಿರದ ಮಕ್ಕಳು ಹಾಗೂ ವಿಶೇಷಚೇತನ ಮಕ್ಕಳಿಗೆ ಈ ಶಿಬಿರದಲ್ಲಿ ವಿಶೇಷ ಆದ್ಯತೆ ನೀಡಲಾಗುವುದು.

{ ಬಿ.ವೈ. ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ತೈಲ ಕಂಪನಿ ಮೇಲೆ ದರ ಏರಿಕೆ ಜವಾಬ್ದಾರಿ ಬಿಟ್ಟಿರುವುದು ನಿಮಗೆಲ್ಲ ಗೊತ್ತಿದೆ. ಬೆಲೆ ಏರಿಕೆ ಮಾಡಿದ ರಾಜ್ಯ ಆಡಳಿತ ಪಕ್ಷ ಆತಂಕದಲ್ಲಿದೆ. ಬೆಂಗಳೂರು ಬಿಟ್ಟು ಹಳ್ಳಿಗೆ ಬರುತ್ತಿಲ್ಲ. ಜನರ ಕಷ್ಟವನ್ನ ಅರ್ಥ ಮಾಡಿಕೊಳುತ್ತಿಲ್ಲ. ಬೆಲೆ ಏರಿಕೆಯಿಂದ ಜನರು ಜೀವನ ಸಾಗಿಸಲು ಆಗುತ್ತಿಲ್ಲ ಎಂದು ಕಾಂಗ್ರೆಸ್ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರಕಾರಕ್ಕೆ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯ ವರದಿ ಸಲ್ಲಿಕೆ: ಗೋವಿಂದ ರಾವ್

ತಾಲೂಕು ಅಭಿವೃದ್ಧಿಗೆ 31000 ಕೋಟಿ ಅನುದಾನ

ಚಿಕ್ಕಬಳ್ಳಾಪುರ: ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯು ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ಪ್ರವಾಸ ಮಾಡಿದ್ದು ಪ್ರಾದೇಶಿಕ ಅಸಮತೋಲನಾ ಸಂಬಂಧ ಮಾಹಿತಿ ಸಂಗ್ರಹಿಸಲಾಗಿದೆ. ಇದನ್ನು ಮುಂದಿನ ಸೆಪ್ಟೆಂಬರ್ ವೇಳೆಗೆ ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯ ಅಧ್ಯಕ್ಷರು ಹಾಗೂ ಆರ್ಥಿಕ ತಜ್ಞರಾದ ಪ್ರೊ ಎಂ ಗೋವಿಂದ ರಾವ್ ಅವರು ತಿಳಿಸಿದರು.

ಜಿಲ್ಲಾಡಳಿತ ಭವನದ ಸರ್.ಎಂ.ವಿ ಸಭಾಂಗಣದಲ್ಲಿ ಗುರುವಾರ ನಡೆದ ಬೆಂಗಳೂರು ವಿಭಾಗ ಮಟ್ಟದ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸಂವಾದ ಸಭೆ ಹಾಗೂ ಸಾರ್ವಜನಿಕ ಶಿಫಾರಸ್ಸುಗಳ ಸ್ವೀಕಾರದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ 2002ರಲ್ಲಿ ಡಾ.ಡಿ.ಎಂ. ನಂಜುಂಡಪ್ಪ ಅವರು 35 ಸೂಚ್ಯಂಕಗಳನ್ನು ಪರಿಶೀಲಿಸಿ 1,200 ಪುಟಗಳ ವರದಿಯನ್ನು ಅಂದಿನ ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದರು. ಈ ವರದಿಯಲ್ಲಿ ರಾಜ್ಯದ ಭೂ ಭಾಗವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿತ್ತು. ಈ ವಿಭಾಗಗಳ ಪೈಕಿ 39 ಅತ್ಯಂತ ಹಿಂದುಳಿದ ತಾಲೂಕುಗಳು, 40 ಅತಿ ಹಿಂದುಳಿದ ತಾಲೂಕುಗಳು ಹಾಗೂ 35 ಹಿಂದುಳಿದ ತಾಲೂಕು ಎಂದು ಗುರುತಿಸಿ ಒಟ್ಟು 114 ತಾಲೂಕುಗಳ ಅಭಿವೃದ್ಧಿಗೆ 31 ಸಾವಿರ ಕೋಟಿ ವಿಶೇಷ ಅನುದಾನವನ್ನು ವಿನಿಯೋಗಿಸಲು ಸಲಹೆ ನೀಡಲಾಗಿತ್ತು. ಈ ವಿಶೇಷ ಅನುದಾನದ ಪೈಕಿ ಕಲಬುರಗಿ ವಿಭಾಗಕ್ಕೆ ಶೇ.40ರಷ್ಟು, ಬೆಂಗಳೂರು ವಿಭಾಗಕ್ಕೆ ಶೇ.25 ರಷ್ಟು, ಬೆಳಗಾಂ ವಿಭಾಗಕ್ಕೆ ಶೇ.20 ರಷ್ಟು ಹಾಗೂ ಮೈಸೂರು ವಿಭಾಗಕ್ಕೆ ಶೇ 15 ರಷ್ಟು ವೆಚ್ಚ ಮಾಡಿ ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡುವ ಸಂಬಂಧ ವಿಸ್ತೃತ ವರದಿಯನ್ನು ಸರಕಾರಕ್ಕೆ ನೀಡಿತ್ತು ಎಂದರು.

ಸರಕಾರಕ್ಕೆ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯ ವರದಿ ಸಲ್ಲಿಕೆ ಮಾಡಲಾಗುವುದು ಎಂದು ಆರ್ಥಿಕ ತಜ್ಞ ಪ್ರೊ. ಎಂ ಗೋವಿಂದ ರಾವ್ ತಿಳಿಸಿದರು.

ಆದರೆ 2007-08 ನೇ ಸಾಲಿನಿಂದ ರಾಜ್ಯ ಸರಕಾರ 45 ಸಾವಿರ ಕೋಟಿ ಅನುದಾನವನ್ನು ಈ ಉದ್ದೇಶಕ್ಕೆ ನಿಗದಿ ಪಡಿಸಿ 37 ಸಾವಿರ ಕೋಟಿ ಅನುದಾನವನ್ನು ಬಿಡುಗಡೆ ಮಾಡಿತ್ತು. ಈ ಪೈಕಿ ಈವರೆಗೆ 35 ಸಾವಿರ ಕೋಟಿ ಅನುದಾನವನ್ನು ವೆಚ್ಚ ಮಾಡಲಾಗಿದೆ. ಹೀಗೆ ವೆಚ್ಚ ಮಾಡಲಾಗಿರುವ ಅನುದಾನದಿಂದ ಹಾಗೂ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳಿಂದ ರಾಜ್ಯದಲ್ಲಿ ಹಿಂದುಳಿದ ತಾಲೂಕುಗಳು ಅಭಿವೃದ್ಧಿ ಆಗಿವೆಯೇ, ಇಲ್ಲವೆ ಎಂಬುದನ್ನು ಅಧ್ಯಯನ ಮಾಡಬೇಕು ಹಾಗೂ ನಂಜುಂಡಪ್ಪ ವರದಿ ಅನುಷ್ಠಾನವಾಗಿ 22 ವರ್ಷಗಳು ಕಳೆದಿದ್ದು, ಅಂದು ಪರಿಣಿಸಿದ್ದ ಕೆಲವು ಸೂಚ್ಯಂಕಗಳು ಇಂದು ಮೌಲ್ಯವನ್ನು ಕಳೆದುಕೊಂಡಿವೆ. ಜತೆಗೆ 176 ತಾಲೂಕುಗಳ ಬದಲಾಗಿ ಪ್ರಸ್ತುತ ರಾಜ್ಯದಲ್ಲಿ 240 ತಾಲೂಕುಗಳಾಗಿವೆ. ಇಂತಹ ಎಲ್ಲಾ ವಿಚಾರಗಳನ್ನು ಅವಲೋಕನ ಮಾಡಿ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಏನೆಲ್ಲ ಯುಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಕುರಿತ ಶಿಫಾರಸ್ಸುಗಳ ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಉದ್ದೇಶದಿಂದ ಈ ಸಮಿತಿಯನ್ನು ರಾಜ್ಯ ಸರಕಾರ ರಚಿಸಿದೆ ಎಂದು ಸ್ಪಷ್ಟಪಡಿಸಿದರು.

ಇಂದಿನ ಸಭೆಯಲ್ಲಿ ಬೆಂಗಳೂರು ಕಂದಾಯ ವಿಭಾಗದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಹಾಗೂ ರಾಮನಗರ ಜಿಲ್ಲೆಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕ 'ರಿಂದ ಮನವಿ ಹಾಗೂ ಮಾಹಿತಿಯನ್ನು ಪಡೆಯಲಾಗಿದೆ ಜತೆಗೆ ಲಿಖಿತವಾಗಿಯೂ ಏನಾದರೂ ಅಹವಾಲುಗಳು, ಸಲಹೆಗಳು ಮನವಿಗಳು ಇದ್ದರೆ ನೇರವಾಗಿ ಬೆಂಗಳೂರಿನಲ್ಲಿರುವ ಸಮಿತಿಯ ಕಚೇರಿಗೆ ಕಳುಹಿಸಿಕೊಡಲು ಖುದ್ದಾಗಿ ಸಲ್ಲಿಸಲು ಸಹ ತಿಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸರಕಾರದ ಕಾರ್ಯ ದರ್ಶಿಗಳು, ಆರ್ಥಿಕ ಮತ್ತು ಯೋಜನಾ ಇಲಾಖೆ ಹಾಗೂ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣ ಸಮಿತಿಯ ಸದಸ್ಯ ಕಾರ್ಯದರ್ಶಿ ಡಾ. ಆರ್. ವಿಶಾಲ್, ಸದಸ್ಯ ಡಾ. ಸಿದ್ದಪ್ಪ ಟಿ ಬಾಗಲಕೋಟೆ, ಕೆ.ಎನ್ ಸಂಗೀತಾ ಕಟ್ಟಿಮನಿ, ಡಾ ಎಂ.ಎಚ್ ಸೂರ್ಯನಾರಾಯಣ್, ಯೋಜನಾ ಇಲಾಖೆಯ ನಿರ್ದೇಶಕ ಚಂದ್ರಶೇಖರಯ್ಯ, ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಜಿ.ಟಿ. ನಿಟ್ಟಾಲಿ, ಅಪರ ಜಿಲ್ಲಾಧಿಕಾರಿ ಡಾ. ಎನ್ ಭಾಸ್ಕರ್, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಅಪರ ಜಿಲ್ಲಾಧಿಕಾರಿಗಳು, ಕೃಷಿ ಇಲಾಖೆಯ ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ, ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಹಕಾರ ಸಂಘಗಳ ಉಪನಿಬಂಧಕರು, ಸರಕಾರರೇತರ ಸಂಸ್ಥೆಗಳ ಸದ್ಯಸ್ಯರು ಹಾಗೂ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಸುಸ್ಥಿರ ಅಭಿವೃದ್ಧಿಗೆ ಪೂರಕ ಸೂಚ್ಯಂಕ

ನಾವು ಮುಖ್ಯವಾಗಿ ತಲಾದಾಯ, ಆರೋಗ್ಯ ಮತ್ತು ಶಿಕ್ಷಣಕ್ಕೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿರುವ ಸೂಚ್ಯಂಕಗಳನ್ನು ಪರಿಗಣಿಸಿ ಮಾಹಿತಿಯನ್ನು ಸಂಗ್ರಹಿಸುತ್ತಿದ್ದೇವೆ. ಚಿಕ್ಕಬಳ್ಳಾಪುರ ಭಾಗದಲ್ಲಿ ನೀರಾವರಿ ಸಮಸ್ಯೆಗೆ, ಕೃಷಿ, ರೇಷ್ಮೆ ಹಾಗೂ ತೋಟಗಾರಿಕಾ ಬೆಳೆಗಳ ಆಧಾರಿತ ಉತ್ಪನ್ನಗಳನ್ನು ತಯಾರಿಸುವ ಉತ್ಪಾದನಾ ಘಟಕಗಳ ಸ್ಥಾಪನೆಗೆ, ಶೀತಲ ಘಟಕಗಳ ಸ್ಥಾಪನೆಗೆ, ಮಳೆ ಕೊಯ್ಲು, ಹಾಲಿನ ಪ್ರೋತ್ಸಹಧನ ಹೆಚ್ಚಳಕ್ಕೆ, ಪಶು ಆಹಾರ ದರ ಕಡಿತಕ್ಕೆ, ಪ್ರವಾಸಿ ತಾಣಗಳ ಅಭಿವೃದ್ಧಿಗೆ, ಕೈಗಾರಿಕೆಗಳು ನಿರೀಕ್ಷಿಸುವ ಮಾನವ ಸಂಪನ್ಮೂಲ ಹಾಗೂ ಕೌಶಲ್ಯಾಭಿವೃದ್ಧಿ ಪೂರೈಕೆಗೆ ಪೂರಕವಾಗಿ ಹಾಗೂ ಬಾಲ್ಯವಿವಾಹ ನಿಯಂತ್ರಣ ವಿಚಾರವಾಗಿ ಹಲವು ಸಲಹೆ ಹಾಗೂ ಶಿಫಾರಸ್ಸುಗಳನ್ನು ಸ್ವೀಕರಿಸಲಾಗಿದೆ. ಜತೆಗೆ ಈ ಭಾಗಕ್ಕೆ ಎನ್ನೆಲ್ಲ ಕೆಲಸಗಳು ಆಗಬೇಕಿದೆ ಎನ್ನುವ ಕುರಿತು ಮಾಹಿತಿಯನ್ನು ಪಡೆಯಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿ ಸೂಕ್ತವಾದ ಶಿಫಾರಸ್ಸುಗಳನ್ನು ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಪ್ರಾದೇಶಿಕ ಅಸಮತೋಲಕ್ಕೆ ಕಾರಣವೇನು ಎಂದು ಸುದ್ದಿಗಾರರ ಪ್ರಶ್ನೆಗೆಪ್ರತಿಕ್ರಿಯಿಸಿದ ಅಧ್ಯಕ್ಷರು 1956ರಲ್ಲಿ ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆಯಾದಾಗ ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಹಾಗೂ ಬಾಂಬೆ ಕರ್ನಾಟಕದ ಕೆಲವು ಭಾಗಗಳನ್ನು ಮೈಸೂರು ರಾಜ್ಯಕ್ಕೆ ಸೇರ್ಪಡೆ ಮಾಡಲಾಯಿತು. ಅಂದಿನ ಮೈಸೂರು ಪ್ರಾಂತ್ಯದ ಜಿಲ್ಲೆಗಳು ಅಂದಿನ ಕಾಲಕ್ಕೆ ಸಾಕಷ್ಟು ಅಭಿವೃದ್ಧಿಯನ್ನು ಆಗಲೇಕಂಡಿದ್ದವು. ಹೈದರಬಾದ್ ಕರ್ನಾಟಕದ ಭಾಗವು ನಿಜಾಮರ ಆಳ್ವಿಕೆಗೆ ಬಳಪಟ್ಟಿತ್ತು. ನಿಜಾಮರು ಹೈದರಬಾದ್ ಹಾಗೂ ಸುತ್ತ ಮುತ್ತಲ ಭಾಗಗಳ ಅಭಿವೃದ್ಧಿಗೆ ಆದ್ಯತೆ ನೀಡಿ ಇಂದಿನ ಕಲ್ಯಾಣ ಕರ್ನಾಟಕದ ಭಾಗಗಳ ಅಭಿವೃದ್ಧಿಯನ್ನು ಕಡೆಗಣಿಸಿದ್ದರು ಇದನ್ನು ಮನಗಂಡ ಅಂದಿನ ಸರಕಾರ ಡಾ. ನಂಜುಂಡಪ್ಪ ರವರನ್ನು ಪ್ರಾದೇಶಿಕ ಅಸಮತೋಲನ ನಿವಾರಣೆಯ ಬಗ್ಗೆ ಅಧ್ಯಯನ ಮಾಡಲು ನೇಮಕ ಮಾಡಿತ್ತು.

- ಪ್ರೊ. ಎಂ ಗೋವಿಂದ ರಾವ್, ಆರ್ಥಿಕ ತಜ್ಞ

ವೈದ್ಯಕೀಯ ಕಾಲೇಜಿನಲ್ಲಿ ಸಾಂಸ್ಕೃತಿಕ ಸಮಾವೇಶ

ತುಮಕೂರು: ಕುರುಬರ ಸಾಂಸ್ಕೃತಿಕ ಪರಿಷತ್ತು ಬೆಂಗಳೂರು, ಶ್ರೀದೇವಿ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಸಾಹಿತಿಗಳ ಸಾಂಸ್ಕೃತಿಕ ಸಮಾವೇಶ ಹಾಗೂ ಕುರುಬರ ಸಂಸ್ಕೃತಿ ದರ್ಶನ ಮಾಲೆಯ 31 ಗ್ರಂಥಗಳ ಅನಾವರಣ ಕಾರ್ಯಕ್ರಮವನ್ನು ನಗರದ ಶಿರಾ ರಸ್ತೆ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಏ.19 ಹಾಗೂ 20ರಂದು 2 ದಿನಗಳ ಕಾಲ ಏರ್ಪಡಿಸಲಾಗಿದೆ ಎಂದು ಶ್ರೀ ದೇವಿ ಶಿಕ್ಷಣ ಸಮೂಹದ ಅಧ್ಯಕ್ಷ, ವಿಧಾನಪರಿಷತ್ ಮಾಜಿ ಸದಸ್ಯ ಎಂ.ಆರ್. ಹುಲಿನಾಯ್ಕರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 31 ಸಂಗ್ರಹಯೋಗ್ಯ ಕೃತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಲಿವರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸಚಿವ ಡಾ.ಜಿ. ಪರಮೇಶ್ವರ್, ಬೈರತಿ ಸುರೇಶ್, ಕೆ.ಎನ್. ರಾಜಣ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಪಾಲ್ಗೊಳ್ಳುವರು ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಎಂ.ಆರ್. ಹುಲಿನಾಯ್ಕರ್ ಮಾತನಾಡಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಚನ್ನಪ್ಪ ಕಟ್ಟಿ ಕುರುಬರ ಸಾಂಸ್ಕೃತಿಕ ಪರಿಷತ್ತಿನ ಪ್ರಕಟಣೆಗಳ ಕುರಿತಾಗಿ, ಹಿರಿಯ ಸಾಹಿತಿ ಪ್ರೊ. ಕೃಷ್ಣಬಾಯಿ ಹಾಗಲವಾಡಿ ಸಮುದಾಯ ಮತ್ತು ಪರಂಪರೆ ಕುರಿತು, ಸಹಪ್ರಾಧ್ಯಾಪಕ ಡಾ.ಗವಿಸಿದ್ದಪ್ಪ ಪಾಟೀಲ್ ಸಮುದಾಯ ಮತ್ತು ಸಾಹಿತ್ಯ ಕುರಿತು, ರಂಗಕರ್ಮಿ ಕೆಎಸ್‌ಡಿಎಲ್ ಚಂದ್ರು ಸಮುದಾಯ ಮತ್ತು ರಂಗಭೂಮಿ ಕುರಿತು ವಿಷಯ ಮಂಡಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಪತ್ರಕೋದ್ಯಮಿ ಎಸ್. ನಾಗಣ್ಣ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಟಿ.ಆರ್. ಸುರೇಶ್, ರಾಜ್ಯ ಚೆಸ್ ಅಸೋಸಿಯೇಶನ್ ಅಧ್ಯಕ್ಷ ಟಿ.ಎನ್. ಮಧುಕರ್, ಕಾಳಿದಾಸ ವಿದ್ಯಾವರ್ದಕ ಸಂಘದ ಅಧ್ಯಕ್ಷ ಮೈಲಪ್ಪ, ಕವಿರತ್ನ ಕಾಳಿದಾಸ, ಸಹಕಾರ ಸಂಘದ ಅಧ್ಯಕ್ಷ ಧರ್ಮರಾಜ್, ಪಾಲಿಕೆ ಮಾಜಿ ಸದಸ್ಯ ಲಕ್ಷ್ಮೀ ನರಸಿಂಹರಾಜು, ಮಲ್ಲಿಕಾರ್ಜುನ್ ಹೆಬ್ಬಾಕ, ಪುಟ್ಟರಾಜ್, ಬಸವರಾಜ್, ಟಿ.ಇ. ರಘುರಾಮ್ ಇತರರಿದ್ದರು.

ಉಪಜಾತಿ ಇದ್ದರೂ ಮೂಲ ಜಾತಿ ಬರೆಸಿ

ಕೋಲಾರ: ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಏಕ ಸದಸ್ಯ ಸಮಿತಿ ತಂಡ ಒಳ ಮೀಸಲು ಜಾರಿಗಾಗಿ ಪರಿಶಿಷ್ಟ ಜಾತಿಗಳಲ್ಲಿನ ಉಪ ಜಾತಿಗಳ ಗಣತಿಗಾಗಿ ಮನೆಗಳಿಗೆ ಭೇಟಿ ನೀಡಿದಾಗ ಮೂಲ ಜಾತಿ ಮಾದಿಗ ಎಂದು ಬರೆಸುವ ಮೂಲಕ ಸರಿಯಾದ ಮಾಹಿತಿ ನೀಡಬೇಕೆಂದು ಚಿತ್ರದುರ್ಗದ ಬಸವಮೂರ್ತಿ ಮಠದ ಪೀಠಾಧ್ಯಕ್ಷ ಮಾದಾರ ಚೆನ್ನಯ್ಯ ಶ್ರೀಗಳು ಹೇಳಿದರು.

ನಗರದ ಹಾರೋಹಳ್ಳಿಯಲ್ಲಿ ನಡೆದ ಜನಜಾಗೃತಿ ಸಮಾವೇಶದಲ್ಲಿ ಮಾತನಾಡಿ, ಮಾದಿಗರು ಆದಿ ಕರ್ನಾಟಕ, ಆದಿದ್ರಾವೀಡ, ಆದಿಆಂಧ್ರ, ಎಕೆ,ಎಡಿ, ಎಎ ಎಂದು ಬರೆಸುವುದು ಸರಿಯಲ್ಲ. ಯಾವುದೇ ಉಪಜಾತಿ ಇದ್ದರೂ ಮೂಲ ಜಾತಿಯಾದ ಮಾದಿಗ ಎಂದೇ ಬರೆಸಬೇಕೆಂದರು. ರಾಜ್ಯದ 15 ಜಿಲ್ಲೆಗಳಲ್ಲಿ ಈ ರೀತಿಯ ಗೊಂದಲಗಳು ಇರುವುದರಿಂದಾಗಿ ಮುಂದಿನ ಎರಡು ತಿಂಗಳು ಸಂಬಂಧಿಸಿದ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡುವ ಮೂಲಕ ಮಾದಿಗ ಎಂದೇ ಬರೆಸಲು ಜನಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತದೆ. ಮಾದಿಗ ಕೇರಿ, ಹಟ್ಟಿಗಳಲ್ಲಿ ಯುವಕರು ಜವಾಬ್ದಾರಿ ಪಡೆದುಕೊಂಡು ಸಮೀಕ್ಷೆಗೆ ಸಿಬ್ಬಂದಿ ಬಂದಾಗ ಮಾದಿಗ ಎಂದು ನಮೂದಿಸಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಮುಂದಿನ ಪೀಳಿಗೆ ನೋವು ಅನುಭವಿಸದಂತೆ ಹಾಗೂ ಶಾಪ ಹಾಕದಂತೆ ಮಾಡಲು ನಾವೀಗ ಎಚ್ಚೆತ್ತುಕೊಂಡು ಮಾದಿಗ ಎಂದೇ ನಮೂದಿಸಬೇಕಿದ್ದು ಯಾವುದೇ ಕಾರಣಕ್ಕೂ ಉಪಜಾತಿಗಳನ್ನು ಬರೆಸಬಾರದು. ಮಕ್ಕಳನ್ನು ವಿದ್ಯಾವಂತರನ್ನಾಗಿಸಿ ಮೀಸಲು ಸೌಲಭ್ಯವನ್ನು ಕೊಡಿಸಿ ಉತ್ತಮ ಭವಿಷ್ಯ ಕಲ್ಪಿಸಬೇಕು ಎಂದು ಶ್ರೀಗಳು ತಿಳಿಸಿದರು.



ಮಾದಾರ ಚೆನ್ನಯ್ಯ ಶ್ರೀಗಳು ಕೋಲಾರದಲ್ಲಿ ನಡೆದ ಮಾದಿಗ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾದಿಗರು ಯಾರ ಹಕ್ಕನ್ನೂ ಕಸಿಯುವುದಿಲ್ಲ, ನಮ್ಮ ಹಕ್ಕನ್ನು ಬಿಡಲ್ಲ. ಜಾತಿಗಣತಿಯಿಂದಾಗಿ ಹೆಚ್ಚಿನ ಸಂಖ್ಯೆ ಬಂದವರು ವರದಿಯನ್ನು ಕೊಂಡಾಡುತ್ತಿದ್ದರೆ ಕಡಿಮೆ ಜನಸಂಖ್ಯೆ ಬಂದವರು ಅಸಮಾಧಾನದಿಂದ ಕುದಿಯುತ್ತಿದ್ದಾರೆ. ಇವೆರಡೂ ನಮಗೆ ಮುಖ್ಯ ಅಲ್ಲ. ಮುಖ್ಯಮಂತ್ರಿಗಳು ಎಲ್ಲ ಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಮುಂದಾಗಬೇಕು.

-ಮಾದಾರ ಚೆನ್ನಯ್ಯ ಶ್ರೀ, ಚಿತ್ರದುರ್ಗ

ಆಂಬ್ಯುಲೆನ್ಸ್ ಸೇವೆಗಳು ಕಾರ್ಯ ನಿರ್ವಹಿಸುತ್ತಿಲ್ಲ

ಗೌರಿಬಿದನೂರು: ತಾಲೂಕು ಪಂಚಾಯಿತಿ ಆವರಣದಲ್ಲಿ ಬುಧವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿದ್ದ ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ 36 ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ನಡೆಸಿದರು.

ಈ ವೇಳೆ ಆರೋಗ್ಯ ಇಲಾಖೆಯಲ್ಲಿ ಆಂಬುಲೆನ್ಸ್ ಸೇವೆಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ, ವೈದ್ಯರು ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಹಾಜರಾಗುತ್ತಿಲ್ಲ, ಎಂಬ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿ ಬರುತ್ತಿವೆ. ಈ ಬಗ್ಗೆ ಹೆಚ್ಚಿನ ಗಮನ ಹರಿಸಿ, ರೋಗಿಗಳಿಗೆ ತೊಂದರೆಯಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಹೊಸೂರು ಆಸ್ಪತ್ರೆಯಲ್ಲಿ ವೈದ್ಯರ ಕೊರತೆಯನ್ನು ನೀಗಿಸಲು ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಿಸಿಕೊಂಡು ರೋಗಿಗಳ ಆರೈಕೆಗೆ ಕ್ರಮ ಕೈಗೊಳ್ಳಬೇಕು, ಇಡಗೂರು ವಸತಿ ಗೃಹಗಳು ಇದ್ದರು ಇಲ್ಲಿಗೆ ಸಿಬ್ಬಂದಿ ನಿಯೋಜನೆ ಇನ್ನು ಮಾಡಿಲ್ಲ. ಈ ಬಗ್ಗೆ ಕ್ರಮವಹಿಸಿ ಎಂದು ತಾಲೂಕು ಆರೋಗ್ಯಾಧಿಕಾರಿಗಳಿಗೆ ಕಿವಿ ಹಿಂಡಿದರು.

ಕೃಷಿ ಇಲಾಖೆ ಮಳೆಗಾಲಕ್ಕೆ ಮೊದಲೇ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಮತ್ತು ಗೊಬ್ಬರ ದಾಸ್ತಾನು ಮಾಡಲು ಮುಂದಾಗಬೇಕು. ಯಾವುದೇ ಕಾರಣಕ್ಕೂ ರೈತರಿಗೆ ಕಳಪೆ ಗುಣಮಟ್ಟದ ಬೀಜ ರಸಗೊಬ್ಬರ ನೀಡುವುದನ್ನು ನಾನು ಸಹಿಸುವುದಿಲ್ಲ ಎಂದು ಕೃಷಿ ಇಲಾಖೆಗೆ ಸೂಚಿಸಿದರು.

ಜಿಲ್ಲೆಯಲ್ಲಿ ಬೇಸಿಗೆ ಧಗೆ ಉತ್ತುಂಗ ಮುಟ್ಟಿದ್ದು 13 ಹಳ್ಳಿಗಳಲ್ಲಿ ನೀರಿನ ಕೊರತೆ ಎದುರಾಗುವ ಸಂಭವದ ಬಗ್ಗೆ ಮಾಹಿತಿಯಿದೆ. ಸಣ್ಣ ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಮುಂಜಾಗ್ರತೆ ವಹಿಸಿ ನೀರಿನ ಅಭಾವ ಎದುರಾಗದಂತೆ ನೋಡಿಕೊಳ್ಳಬೇಕು. ತಾಲೂಕಿನಲ್ಲಿ 4 ರಿಂದ 5 ರೈತರ ಕೊಳವೆ ಬಾವಿಗಳಿಗೆ ಒಂದು ವಿದ್ಯುತ್ ಪರಿವರ್ತಕವನ್ನು ಅಳವಡಿಸಿ ಕ್ರಮಕೈಗೊಂಡು, ರೈತರಿಗೆ ಗುಣಮಟ್ಟದ ವಿದ್ಯುತ್ ನೀಡಲು ತಕ್ಷಣ ಕ್ರಮವಹಿಸಬೇಕು ಎಂದು ಶಾಸಕರು ಬೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಕೆ.ಎಚ್.ಪುಟ್ಟಸ್ವಾಮಿ ಗೌಡ 36 ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ನಡೆಸಿದರು.

ನರೇಗಾ ಯೋಜನೆ ಅಡಿಯಲ್ಲಿ, ಚರಂಡಿ, ಶಾಲಾ ಮೂಲಭೂತ ಸೌಕರ್ಯಗಳು, ಕೆರೆಗಳ ಹೂಳು ತೆಗೆಯುವುದು , ಚೆಕ್ ಡ್ಯಾಮ್ ನಿರ್ಮಾಣ, ನಾಲೆಗಳ ನಿರ್ಮಾಣ, ರೈತರ ಹೊಲಗಳಿಗೆ ರಸ್ತೆ ನಿರ್ಮಿಸುವುದು ಸೇರಿದಂತೆ, ಸಮುದಾಯ ಆಧಾರಿತ ಮತ್ತು ವೈಯುಕ್ತಿಕ ಕಾರ್ಯಕ್ರಮಗಳಡಿಯಲ್ಲಿ ರೈತರಿಗೆ ಕುರಿ ಶೆಡ್, ದನದ ಶೆಡ್, ತೋಟಗಾರಿಕೆ, ರೇಷ್ಮೆ ಬೆಳೆಗಳ ಸುಮಾರು 41 ಕೋಟಿ ರು. ಕಾಮಗಾರಿಗಳನ್ನು 2023-24 ನಿರ್ವಹಿಸ ಲಾಗಿದೆ. ಹಾಗೂ ಮುಂದಿನ ಆರ್ಥಿಕ ವರ್ಷದಲ್ಲಿ ಸುಮಾರು 17ಕೋಟಿ 50 ಲಕ್ಷ ರು. 348 ಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದು ಗ್ರಾಮ ನೈರ್ಮಲ್ಯಕ್ಕೆ ಮುನ್ನುಡಿಯಾಗಲಿದೆ. ವಸತಿ ರಹಿತರ ಸಮೀಕ್ಷೆ ನಡೆಸಲಾಗುತ್ತಿದೆ ಆದಷ್ಟು ಬೇಗ ಅರ್ಹರ ಪಟ್ಟಿ ತಯಾರಿಸಿ ತಮ್ಮ ಗಮನಕ್ಕೆ ತರಲಾಗುವುದು ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜಿ ಕೆ ಹೊನ್ನಯ್ಯ ತಿಳಿಸಿದರು.

ಈ ಸಂದರ್ಭದಲ್ಲಿ, ತಹಸೀಲ್ದಾರ್ ಮಹೇಶ್.ಎಸ್ .ಪತ್ರಿ, ನಗರಸಭೆ ಅಧ್ಯಕ್ಷ ಡಿ.ಎಂ.ಗೀತಾ, ವೃತ್ತ ನಿರೀಕ್ಷಕ ಕೆ.ಪಿ. ಸತ್ಯ ನಾರಾಯಣ್ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಸರಕಾರಿ ಶಾಲೆಗಳಲ್ಲಿ ಶೌಚಾಲಯಗಳ ಕಾಮಗಾರಿಗಳು ಆಮೆ ಗತಿಯಲ್ಲಿ ಸಾಗುತ್ತಿವೆ ಇವುಗಳನ್ನು ಆದಷ್ಟು ಬೇಗ ಮುಗಿಸಬೇಕು. ಮಾದನಹಳ್ಳಿ ಕೆರೆಯಲ್ಲಿ ನಿರ್ಮಿಸಿರುವ ಸಮುದಾಯ ಭವನಗಳಲ್ಲಿ ಶೌಚಾಲಯ ಮತ್ತು ನೀರಿನ ಕೊರತೆ ಇದೆ, ಆದಷ್ಟು ಬೇಗ ಇದನ್ನು ಸರಿಪಡಿಸಿ ಸಮುದಾಯದ ಕಾರ್ಯಕ್ರಮಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಎಚ್ಚರಿಕೆ ನೀಡಿದರು.

- ಕೆ.ಎಚ್.ಪುಟ್ಟಸ್ವಾಮಿ ಗೌಡ ಶಾಸಕ

ಮಾದಕ ವ್ಯಸನದಿಂದ ದೂರವಿರಿ



ತುಮಕೂರು: ಯುವಜನತೆ ಮಾದಕ ವಸ್ತುಗಳ ವ್ಯಸನದಿಂದ ದೂರವಿದ್ದು, ರಾಷ್ಟ್ರ ನಿರ್ಮಾಣಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿದಾಗ ಮಾತ್ರ ಭವ್ಯ ಭಾರತದ ಕನಸು ನನಸಾಗುತ್ತದೆ. ಯುವ ಜನತೆ ಎಲ್ಲಾ ರೀತಿಯ ಮಾದಕ ವಸ್ತುಗಳ ವ್ಯಸನದಿಂದ ಮುಕ್ತರಾಗಬೇಕು ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಗೋಪಾಲ್ ತಿಳಿಸಿದರು.

ಅವರು ಭಾರತ ಸರಕಾರದ ಕೇಂದ್ರ, ಯುವ ಕಾರ್ಯಕ್ರಮ ಹಾಗೂ ಕ್ರೀಡಾ ಸಚಿವಾಲಯದ ನೆಹರು ಯುವ ಕೇಂದ್ರ, ಚೇಳೂರು ಸಂಜೀವಿನಿ ಯುವಜನ ಸಂಘ, ಸುಫಿಯಾ ಕಾನೂನು ಮಹಾವಿದ್ಯಾಲಯ ಹಾಗೂ ಇನ್ನರ್ ವೀಲ್‌ಕ್ಲಬ್ ಆಫ್ ತುಮಕೂರು ಸೆಂಟ್ರಲ್ ಇವರ ಸಹಯೋಗದಲ್ಲಿ ಗುರುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಮಾದಕ ವ್ಯಸನ, ಮಾದಕ ವಸ್ತುಗಳ ದುಷ್ಪರಿಣಾಮ ಹಾಗೂ ಸೈಬರ್ ಅಪರಾಧಗಳ ಕುರಿತು ಜಾಗೃತಿ ಮತ್ತು ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹಿಂದುಳಿದ ರಾಷ್ಟ್ರಗಳ ಗ್ರಾಮೀಣ ಪ್ರದೇಶಗಳಲ್ಲಿ ಯುವಜನರು ಮಾದಕ ವ್ಯಸನಕ್ಕೆ ಬಲಿಯಾಗಿ ತಮ್ಮ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವುದು ದುರ್ದೈವದ ಸಂಗತಿ ಎಂದರು. ಸೈಬರ್ ಕ್ರೈಮ್ ಕುರಿತು ನಾಗರಿಕರು ಎಚ್ಚರಿಕೆಯಿಂದಿರಬೇಕು ಎಂದರು.

ಇನ್ನರ್ ವೀಲ್‌ಕ್ಲಬ್ ಆಫ್ ತುಮಕೂರು ಸೆಂಟ್ರಲ್ ಅಧ್ಯಕ್ಷೆ ಯಶೋಧ ರಾಜಣ್ಣ, ಕಾರ್ಯದರ್ಶಿ ಗಾಯತ್ರಿ ಪ್ರಸಾದ್, ಸೂಫಿಯಾ ಕಾನೂನು ಕಾಲೇಜಿನ ಪ್ರಾಧ್ಯಾಪಕ ಮಮತ, ಉಪಪ್ರಾಂಶು ಪಾಲ ಓಬಯ್ಯ ಹಾಗೂ ಕಾನೂನು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗ ಭಾಗವಹಿಸಿದ್ದರು. ನರಸಿಂಹಮೂರ್ತಿ ನಿರೂಪಿಸಿದರು. ಪ್ರೇಮ ಮತ್ತು ಸಂಗಡಿಗರು ಪ್ರಾರ್ಥಿಸಿದರು.

ಯುವಕರು ಸಾಮಾಜಿಕ ಸ್ಥಾನಮಾನ ಪಡೆದುಕೊಳ್ಳುವ ವೇಗದಲ್ಲಿ ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗಿ ಸಮಾಜದ ಸ್ವಾಸ್ಥ ಹಾಳು ಮಾಡುತ್ತಿರುವುದು ಸರಿಯಲ್ಲ. ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗಬೇಕು ಎಂದರು. ನಿವೃತ್ತ ಆರೋಗ್ಯ ನಿರೀಕ್ಷಕ ರುದ್ರಮೂರ್ತಿ ಮಾತನಾಡಿ ತಂಬಾಕಿನಿಂದಾಗುವ ದುಷ್ಪರಿಣಾಮಗಳು ಹಾಗೂ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

-ಎಸ್.ಶಫೀ ಅಹಮ್ಮದ್, ಮಾಜಿ ಶಾಸಕ

ಮೇ 10ಕ್ಕೆ ಗಂಗಮ್ಮ ದೇವಿ ಹೂವಿನ ಕರಗ

ಬಾಗೇಪಲ್ಲಿ: ಪಟ್ಟಣದ ಗ್ರಾಮದೇವತೆ ಗಂಗಮ್ಮ ದೇವಿಯ ಧರ್ಮರಾಯ ಕರಗ ಮಹೋತ್ಸವವು ಮೇ 8 ರಿಂದ 11 ರವರೆಗೆ ನಡೆಯಲಿದೆ ಎಂದು ತಾಲೂಕು ಕರಗ ಮಹೋತ್ಸವದ ಸಮಿತಿ ಪದಾಧಿಕಾರಿಗಳು ತಿಳಿಸಿದರು. ಪಟ್ಟಣದ 23ನೇ ವಾರ್ಡ್‌ನಲ್ಲಿ 8ರ ಗುರುವಾರ ರಾತ್ರಿ ಹಸಿಕರಗ ನಡೆಯಲಿದೆ. ಮೇ 9ರ ಶುಕ್ರವಾರ ಬೆಳಗ್ಗೆ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿನ ಮಹಿಳೆಯರಿಂದ ಗಂಗಮ್ಮ ದೇವಿಗೆ ತಂಬಿಟ್ಟಿನ ದೀಪೋತ್ಸವ, ಮಧ್ಯಾಹ್ನ 3 ಗಂಟೆಗೆ ಪಟ್ಟಣದ ಸಪ್ತಗಿರಿ ಮಿನರಲ್ ವಾಟರ್ ಹಿಂಭಾಗ ಜಾರುಟ್ಲು ಪರಿಷೆ ಹಮ್ಮಿಕೊಳ್ಳಲಾಗಿದೆ. ಮೇ 10ರ ಶನಿವಾರ ರಾತ್ರಿ 9 ಗಂಟೆಗೆ ಕರಗ ಮಹೋತ್ಸವದ ಅಂಗವಾಗಿ ಗಂಗಮ್ಮದೇವಿಗೆ ಹೂವಿನ ಅಲಂಕಾರ, ಹೂವಿನ ಕರಗ ಮಹೋತ್ಸವ ನಡೆಯಲಿದೆ. ಅಂದು ವಿವಿಧ ದಾನಿಗಳಿಂದ ಭಕ್ತರಿಗೆ ಅನ್ನದಾನ ಕಾರ್ಯಕ್ರಮ ಇರಲ್ಲಿದೆ. ಮೇ 11ರ ಭಾನುವಾರ ರಾತ್ರಿ 9 ಗಂಟೆಗೆ ಒನಕೆ ಕರಗ ನಡೆಯಲಿದೆ ಎಂದು ಬಾಗೇಪಲ್ಲಿ ತಾಲ್ಲೂಕು ಗಂಗಮ್ಮ ದೇವಿ ಕರಗ ಸಮಿತಿ ತಿಳಿಸಿದೆ.

ಮೇ 8 ರಿಂದ 11 ರವರೆಗೆ ಕರಗ ಮಹೋತ್ಸವದ ಸಮಿತಿ ಪದಾಧಿಕಾರಿಗಳು ತಿಳಿಸಿದರು.

ನೀರು ಪೂರೈಕೆಗೆ ಅಡಚಣೆಯಾಗದಂತೆ ಕ್ರಮವಹಿಸಿ

ತುಮಕೂರು: ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಅಡಚಣೆ ಉಂಟಾಗದಂತೆ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಿ. ಪ್ರಭು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೇಸಿಗೆಯಿಂದ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ತಲೆದೋರಿರುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಯೋಜನೆಗಳನ್ನು ರೂಪಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವ ಜಲ್ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರನ್ನು ಒದಗಿಸುವ ಪೈಪ್ ಲೈನ್ ಅಳವಡಿಕೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 3 ವಾಟರ್ ಟೆಸ್ಟಿಂಗ್ ಲ್ಯಾಬ್‌ಗಳಿಂದ ಈವರೆಗೆ ಯಾವುದೇ ನೀರು ಪರೀಕ್ಷಾ ವರದಿಗಳು ಸಲ್ಲಿಕೆಯಾಗಿಲ್ಲವೆಂದ ಅಸಮಾಧಾನ ವ್ಯಕ್ತಪಡಿಸಿದರು. ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವ ಹೊಣೆಗಾರಿಕೆ ನಮ್ಮದು. ಈ ನಿಟ್ಟಿನಲ್ಲಿ ನೀರಿನ ಜೈವಿಕ ಹಾಗೂ ರಾಸಾಯನಿಕ ಪರೀಕ್ಷೆ ನಡೆಸಿ ಪ್ರತಿ 15 ದಿನಗಳಿಗೊಮ್ಮೆ ವರದಿ ಸಲ್ಲಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಅವಶ್ಯಕತೆ ಇರುವ ಕಡೆ ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕೆ ಸ್ಥಳ ಗುರುತಿಸಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಜಿಲ್ಲಾ ಪಂಚಾಯತಿಯಿಂದಲೇ ಅನುಮೋದನೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಂಜೀವಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಚೇತನ್ ಕುಮಾರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು, ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಗ್ರಾಮಗಳಲ್ಲಿ ತಲೆದೋರಿರುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಯೋಜನೆಗಳನ್ನು ರೂಪಿಸಬೇಕೆಂದು ಅಧಿಕಾರಿಗಳಿಗೆ ಜಿ. ಪ್ರಭು ಸೂಚನೆ.

ಕಾಲುಬಾಯಿ ರೋಗ ಲಸಿಕಾ ಅಭಿಯಾನ

ತುಮಕೂರು: ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾದ್ಯಂತ ಏ. 26 ರಿಂದ ಜೂನ್ 4ರವರೆಗೆ ಜಾನುವಾರುಗಳಿಗಾಗಿ ಹಮ್ಮಿಕೊಳ್ಳಲಾಗುವ 7ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಅಭಿಯಾನದಲ್ಲಿ ನಿಗದಿತ ಗುರಿ ಸಾಧಿಸಬೇಕೆಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಮಾತನಾಡಿ, ಕಾಲುಬಾಯಿ ರೋಗದ ಲಸಿಕೆಯನ್ನು ಜಾನುವಾರುಗಳಿಗೆ ಕಡ್ಡಾಯವಾಗಿ ಹಾಕಿಸುವ ಹಾಗೂ ಲಸಿಕೆಯನ್ನು ಉಚಿತವಾಗಿ ನೀಡುವ ಬಗ್ಗೆ ಪಶುಪಾಲಕರಲ್ಲಿ ಅರಿವು ಮೂಡಿಸಬೇಕು ಎಂದರಲ್ಲದೆ, ನಿಗದಿತ ಗುರಿ ಸಾಧಿಸುವ ಮೂಲಕ ಲಸಿಕಾ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ನಿರ್ದೇಶನ ನೀಡಿದರು. ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಾಯಕ ನಿರ್ದೇಶಕ ನಾಗಮಣಿ ಮಾತನಾಡಿ, ಕಳೆದ ವರ್ಷ ಹಮ್ಮಿಕೊಂಡಿದ್ದ 6ನೇ ಸುತ್ತಿನ ಲಸಿಕಾ ಅಭಿಯಾನದಲ್ಲಿ 478624 ಜಾನುವಾರುಗಳಿಗೆ ಲಸಿಕೆ ನೀಡುವ ಮೂಲಕ ಶೇ. 96ರಷ್ಟು ಗುರಿ ಸಾಧಿಸಲಾಗಿತ್ತು. ಪ್ರಸಕ್ತ ವರ್ಷ ಜಿಲ್ಲೆಯಲ್ಲಿ 388209 ದನ ಹಾಗೂ 107969 ಎಮ್ಮೆ ಸೇರಿದಂತೆ ಒಟ್ಟು 496278 ಜಾನುವಾರುಗಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಜಿಲ್ಲೆಯ ಎಲ್ಲಾ ತಾಲೂಕು ಸೇರಿದಂತೆ ಒಟ್ಟು 566650 ಲಸಿಕೆ ಡೋಸ್ ದಾಸ್ತಾನು ಮಾಡಲಾಗಿದೆ. ಅಭಿಯಾನದಲ್ಲಿ ಲಸಿಕೆ ನೀಡಲು 271 ಇಲಾಖೆ ಲಸಿಕೆದಾರರು ಹಾಗೂ 226 ಇಲಾಖೇತರ ಲಸಿಕೆದಾರರು ಸೇರಿದಂತೆ ಒಟ್ಟು 497 ಲಸಿಕೆದಾರರನ್ನು ಬಳಸಿಕೊಳ್ಳಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಸಮಾಚಾರ ಸಣ್ಣದಲ್ಲ

ಎಂ.ಎ. ವೆಂಕಟೇಶ್ ಇನ್ನಿಲ್ಲ



ದಾವಣಗೆರೆ: ರಾಜ್ಯ ಲೆಕ್ಕಪತ್ರ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಂ. ಎ. ವೆಂಕಟೇಶ್ (60) ಬುಧವಾರ ರಾತ್ರಿ ನಿಧನರಾದರು. ಇತ್ತೀಚೆಗಷ್ಟೇ ನಿವೃತ್ತರಾಗಿದ್ದ ವೆಂಕಟೇಶ್ ಅವರು ಕೆಲ ತಿಂಗಳಿನಿಂದ ಅನಾರೋಗ್ಯಕ್ಕೆ ತುತ್ತಾಗಿದ್ದರು. ಕೆಲದಿನಗಳಿಂದ ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ರಾತ್ರಿ 10.20ಕ್ಕೆ ಕೊನೆಯುಸಿರು ಎಳೆದರು. ಗುರುವಾರ ಮಧ್ಯಾಹ್ನ ದಾವಣಗೆರೆಯ ಪಿಬಿ ರಸ್ತೆಯ ವೈಕುಂಠ ಧಾಮದಲ್ಲಿ ಅಂತ್ಯಸಂಸ್ಕಾರ ನೆರವೇರಿತು. ಮೃತರಿಗೆ ಪತ್ನಿ ಸುನೀತಾ ಟಿ.ಎಚ್. ಹಾಗೂ ಪುತ್ರ ಡಾ.ಎಂ.ವಿ.ತೇಜಸ್ವಿ ಇದ್ದಾರೆ. ದಾವಣಗೆರೆ ಜಿಲ್ಲಾ ಪಂಚಾಯಿತಿಯಲ್ಲಿ ಲೆಕ್ಕಪತ್ರ ವಿಭಾಗದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಇವರು ಕಳೆದ ಜನವರಿಯಲ್ಲಿ ಸೇವೆಯಿಂದ ನಿವೃತ್ತರಾಗಿದ್ದರು. ದಾವಣಗೆರೆಯ ಗಣ್ಯರು, ವಿವಿಧ ಇಲಾಖೆಯ ಅಧಿಕಾರಿಗಳು, ಬಂಧು ಬಳಗದವರು ಆಗಮಿಸಿ ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿ ಸಲ್ಲಿಸಿದರು.

27 ವರ್ಷದ ಬಳಿಕ ಆರೋಪಿ ಅರೆಸ್ಟ್

ಕೋಲಾರ: 1998ರಲ್ಲಿ ದಾಖಲಾಗಿದ್ದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 27 ವರ್ಷಗಳ ಬಳಿಕ ಕೋಲಾರದ ಗಲ್ ಪೇಟೆ ಪೊಲೀಸರು ಆರೋಪಿಯನ್ನ ಬಂಧಿಸಿದ್ದಾರೆ. ನಗರದ ಕೋಟೆ ಬಡಾವಣೆಯ ನಿವಾಸಿ ಪ್ಯಾರೇಜಾನ್ ಬಂಧಿತ ಆರೋಪಿ. ಈತ 1998ರಲ್ಲಿ ಜಗಳ ಮಾಡಿಕೊಂಡಿದ್ದ. ಈತನ ವಿರುದ್ಧ ಗಲ್ ಪೇಟೆ ಪೊಲೀಸರು ಹಲ್ಲೆ, ಪ್ರಾಣ ಬೆದರಿಕೆ, ನಷ್ಟ ಉಂಟು ಮಾಡಿದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ಇದೀಗ ಸೂಕ್ತ ಮಾಹಿತಿ ಆಧರಿಸಿ ಆರೋಪಿಯನ್ನ ಬಂಧಿಸಿರುವ ಪೊಲೀಸರು ಜೈಲಿಗಟ್ಟಿದ್ದಾರೆ. ಆರೋಪಿ ಪತ್ತೆ ಹಚ್ಚುವಲ್ಲಿ ಪ್ರಮುಖ ಪಾತ್ರ ವಹಿಸಿದ ಪೇದೆ ಮಂಜುನಾಥ್ ಅವರಿಗೆ ಪೊಲೀಸ್ ಇಲಾಖೆ ಅಭಿನಂದನೆ ಸಲ್ಲಿಸಿದೆ.

ಜನಾಕ್ರೋಶ ಯಾತ್ರೆಯಲ್ಲಿ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಮುಖಂಡರ ವಾಗ್ದಾಳಿ | ಬಿರು ಬಿಸಿಲು ಲೆಕ್ಕಿಸದೆ ಭಾಗಿಯಾದ ಕಾರ್ಯಕರ್ತರು

ಹಿಂದು ವಿರೋಧಿ ಕಾಂಗ್ರೆಸ್ ಸರಕಾರ

ಬಾಗಲಕೋಟೆ: ರಾಜ್ಯ ಸರಕಾರದ ಬೆಲೆ ಏರಿಕೆ, ಮುಸ್ಲಿಂ ಓಲೈಕೆ ಹಾಗೂ ಹಿಂದು ವಿರೋಧಿ ನಡೆ ಖಂಡಿಸಿ ಬಿಜೆಪಿಯಿಂದ ಹಮ್ಮಿಕೊಂಡಿರುವ ಜನಾಕ್ರೋಶ ಯಾತ್ರೆಯಲ್ಲಿ ಮಾತನಾಡಿದ ಪ್ರತಿಯೊಬ್ಬ ನಾಯಕರು ಸರಕಾರದ ವಿರುದ್ಧ ಮುಗಿಬಿದ್ದರು.

ನಗರದ ಡಾ. ಅಂಬೇಡ್ಕರ್ ವೃತ್ತದಿಂದ ಯಾತ್ರೆ ಮೂಲಕ ಬಸವೇಶ್ವರ ವೃತ್ತಕ್ಕೆ ಆಗಮಿಸಿದ ಜನಾಕ್ರೋಶ ಯಾತ್ರೆ ಸಭೆಯಾಗಿ ಮಾರ್ಪಟ್ಟಿತು. ವೇದಿಕೆಯಲ್ಲಿದ್ದ ನಾಯಕರುಗಳು ಬಾರುಕೋಲು ಪ್ರದರ್ಶಿಸಿದರು. ಜನಾಕ್ರೋಶ ಯಾತ್ರೆ, ಬಾರಕೋಲು ಯಾತ್ರೆಯಾಗಿ ಮಾರ್ಪಟ್ಟು ಕಾರ್ಯಕ್ರಮ ಪ್ರಾರಂಭವಾಯಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ರಾಜ್ಯದಲ್ಲಿ ಅಭಿವೃದ್ಧಿ ಮರಿಚಿಕೆಯಾಗಿದೆ. ಸರಕಾರ ಕೇವಲ ಮುಸ್ಲಿಮರ ತುಷ್ಟೀಕರಣ ನೀತಿ ಅನುಸರಿಸುವ ಜತೆಗೆ ಎಸ್ಸಿಎಸ್ಟಿಗಳ ಅಭಿವೃದ್ಧಿಯನ್ನು ಮರೆತಿದೆ. ದಪ್ಪ ಚರ್ಮದ ಸರಕಾರಕ್ಕೆ ರಾಜ್ಯದ ಜನರ ನೋವು ಅರ್ಥವಾಗದಂತಾಗಿದೆ. ಹಿಂದು ವಿರೋಧಿ ಸರಕಾರ ದಿನದಿಂದ ದಿನಕ್ಕೆ ದಿನನಿತ್ಯದ ವಸ್ತುಗಳ ಬೆಲೆಯನ್ನು ಏರಿಕೆ ಮಾಡುತ್ತ ಮಧ್ಯಮ ಹಾಗೂ ಬಡ ವರ್ಗದ ಜನರು ಜೀವನ ನಡೆಸುವುದನ್ನು ದುಸ್ಥರವಾಗಿಸಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಬೆಳಗಿನ ಹಾಲಿನಿಂದ ರಾತ್ರಿ ಅಲ್ಕೋಹಾಲ್ ವರೆಗೂ ಎಲ್ಲ ವಸ್ತುಗಳ ಬೆಲೆಯನ್ನು ರಾಜ್ಯ ಸರಕಾರ ಎಲ್ಲ ವಸ್ತುಗಳ ದರವನ್ನು ಹೆಚ್ಚಳ ಮಾಡಿದೆ. ಸರಕಾರದ ಬೆಲೆ ಏರಿಕೆಯಿಂದ ಬೇಸತ್ತಿರುವ ಜನರು ಯಾವಾಗ ಈ ಸರಕಾರ ಮನೆಗೆ ಹೋಗುತ್ತೆ ಎಂದು ಕಾಯುತ್ತಿದ್ದಾರೆ. ಹಿಂದಿನ ಬಿಜೆಪಿ ಸರಕಾರ ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಳ ಮಾಡಿತು. ಆದರೂ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ ಅನ್ಯಾಯ ಮಾಡಿದ್ದೀರಿ ಎಂದು ಬೇಸರ ವ್ಯಕ್ತ ಪಡಿಸಿದರು.

ಸಂಸದ ಗೋವಿಂದ ಕಾರಜೋಳ ಮಾತನಾಡಿ, ಕೂಡಲ ಸಂಗಮನಾಥನ ಮೇಲೆ ಆಣೆ ಮಾಡಿದ ಸಿಎಂ ಸಿದ್ದರಾಮಯ್ಯ ಏಕೆ ಯುಕೆಪಿಗೆ ಬಿಡುಗಾಸು ನೀಡಲಿಲ್ಲ? ಮುಸ್ಲಿಮರಲ್ಲಿ ಬಡವರು, ದಲಿತರು, ಶೋಷಿತರು ಇದ್ದಾರೆ. ಅವರ ಪರವಾಗಿ ಧ್ವನಿ ಎತ್ತಿದ್ದರೇ ಅಹಿಂದ ನಾಯಕ ಅಂತ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ, ಸಿಎಂ ಸಿದ್ದರಾಮಯ್ಯ ಬಹುಸಂಖ್ಯಾತ ಹಿಂದುಗಳನ್ನು ಒಡೆದು ಆಳುವ ಮೂಲಕ ತಾವೊಬ್ಬ ಬ್ರಿಟಿಷರ ಅಂತ ತೋರಿಸಿಕೊಟ್ಟಿದ್ದಾರೆ. ಸಿದ್ದರಾಮಯ್ಯ ಮಹಾನ್ ಮೋಸಗಾರ ಅಂತ ಕಿಡಿಕಾರಿದರು.

ಮುಖ್ಯ ಸಚೇತಕ ಎನ್.ರವಿಕುಮಾರ, ಶಾಸಕ ಹರೀಶ ಪೂಂಜಾ, ಪಕ್ಷದ ರಾಜ್ಯ ಕಾರ್ಯದರ್ಶಿ ಪಿ.ರಾಜೀವ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಪ ಸದಸ್ಯರಾದ ಪಿ.ಎಚ್.ಪೂಜಾರ, ಹನುಮಂತ ನಿರಾಣಿ ಹಾಗೂ ಎನ್.ರವಿಕುಮಾರ, ಶಾಸಕರಾದ ಜಗದೀಶ ಗುಡಗುಂಟಿ ಹಾಗೂ ಹರೀಶ ಪೂಂಜಾ, ಮಾಜಿ ಶಾಸಕರಾದ ಹರತಾಳು ಹಾಲಪ್ಪ, ಎ.ಎಸ್.ಪಾಟೀಲ ನಡಹಳ್ಳಿ, ವೀರಣ್ಣ ಚರಂತಿಮಠ, ದೊಡ್ಡನಗೌಡ ಪಾಟೀಲ, ಶ್ರೀಕಾಂತ ಕುಲಕರ್ಣಿ, ಪಿ.ರಾಜೀವ ಹಾಗೂ ಎಂ.ಕೆ.ಪಟ್ಟಣಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಸೇರಿ ಇತರರಿದ್ದರು.



ಬಾಗಲಕೋಟೆಯಲ್ಲಿ ಬಿಜೆಪಿಯಿಂದ ಹಮ್ಮಿಕೊಂಡಿದ್ದ ಜನಾಕ್ರೋಶ ಯಾತ್ರೆಯಲ್ಲಿ ಬಿಜೆಪಿ ನಾಯಕರು ಬಾರಕೋಲು ಪ್ರದರ್ಶಿಸಿದರು.

ರಾಜ್ಯ ಸರಕಾರಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ ಟೈಂ ಬಾಂಬ್ ಇಟ್ಟಿದ್ದಾರೆ. ಈ ಟೈಂ ಬಾಂಬ್ ನವೆಂಬರ್-ಡಿಸೆಂಬರ್ ಹೊತ್ತಿಗೆ ಸ್ಫೋಟಗೊಂಡು ಸರಕಾರ ಪತನವಾಗಲಿದೆ.

-ಜಗದೀಶ ಶೆಟ್ಟರ್, ಸಂಸದ

ದಪ್ಪ ಚರ್ಮದ ಕಾಂಗ್ರೆಸ್ ಸರಕಾರಕ್ಕೆ ಬಾರಕೋಲಿನಿಂದ ಬುದ್ಧಿ ಕಲಿಸಬೇಕಿದೆ. ಬೆಳಗ್ಗೆ ಮನಿ(ಹಣ), ರಾತ್ರಿಯಾದರೆ ಹನಿ(ಹನಿಟ್ರ್ಯಾಪ್) ಚಿಂತೆ. ಇದರ ನಡುವೆ ಜನರ ಬಗ್ಗೆ ಮರೆತಿದ್ದಾರೆ. ಎಲ್ಲ ಕಾಂಗ್ರೆಸ್ ಸರಕಾರದ ನಾಯಕರು ಎ-1 ಆರೋಪಿಗಳಾಗಿ ದಿನಾ ಕೋರ್ಟ್‌ಗೆ ಹೋಗುತ್ತಿದ್ದಾರೆ. ನಮ್ಮ ಸರಕಾರ ಬಂದ ತಕ್ಷಣ ಇವರನ್ನು ಜೈಲಿಗೆ ಕಳುಹಿಸುವುದು ನಿಶ್ಚಿತ.

ಶ್ರೀರಾಮುಲು, ಮಾಜಿ ಸಚಿವ

ಬಡವರ ಕಷ್ಟಗಳಿಗೆ ಸರಕಾರ ಸ್ಪಂದಿಸುತ್ತಿಲ್ಲ

ಈ ಹಿಂದೆ ವೀರಶೈವ ಲಿಂಗಾಯತ ಧರ್ಮ ಬೇರೆ ಬೇರೆ ಮಾಡಿ ಹುಳಿ ಹಿಂಡುವ ಕೆಲಸ ಕಾಂಗ್ರೆಸ್ ಮಾಡಿತ್ತು. ಈಗ ಮುಸ್ಲಿಮರಿಗೆ ಶೇ.4 ರಷ್ಟು ಗುತ್ತಿಗೆಯಲ್ಲಿ ಮೀಸಲಾತಿ ನೀಡುವ ಮೂಲಕ ಒಂದು ಧರ್ಮಕ್ಕೆ ಅನ್ಯಾಯ ಮಾಡುವ ಕೆಲಸ ಮಾಡುತ್ತಿದೆ. ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ಮದುವೆಗೆ ಹಣ ಕೊಡುವ ಸರಕಾರ ಹಿಂದು ಹೆಣ್ಣುಮಕ್ಕಳ ಬಗ್ಗೆ ಚಿಂತಿಸುತ್ತಿಲ್ಲ. ರೈತರು, ನೇಕಾರರ ಕಣ್ಣು ಇದ್ದಂತೆ. ಅವರ ಕಷ್ಟಗಳಿಗೆ ಸ್ಪಂದಿಸುತ್ತಿಲ್ಲ. ಡೀಸೆಲ್ 5.50 ರು., ಪೆಟ್ರೋಲ್ 3.50 ರು. ಹೆಚ್ಚಳ ಮಾಡುವ ಮೂಲಕ ಜನರ ನೆಮ್ಮದಿ ಹಾಳು ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಗುಡುಗಿದರು.

---

5 ಅರ್ಜಿ ಮಾತ್ರ ಆಲಿಸಲಾಗುವುದು: ಸುಪ್ರೀಂ ಕೋರ್ಟ್

← ಮೊದಲಪುಟದಿಂದ

ಅರ್ಜಿದಾರರು 5 ದಿನಗಳಲ್ಲಿ ಕೇಂದ್ರದ ಉತ್ತರಕ್ಕೆ ಮರು ಪ್ರತಿಕ್ರಿಯೆ ಸಲ್ಲಿಸಬಹುದು, ನಂತರ ಮಧ್ಯಂತರ ಆದೇಶಗಳಿಗಾಗಿ ವಿಷಯವನ್ನು ಪಟ್ಟಿ ಮಾಡಲಾಗು ವುದು ಎಂದು ಹೇಳಿ, ವಿಚಾರಣೆಯನ್ನು ಮೇ 5ಕ್ಕೆ ಮುಂದೂಡಿದೆ. 1995ರ ಕಾಯ್ದೆಯಡಿ ಈಗಾಗಲೇ ನೋಟಿಫೈ ಮಾಡಿದ ಅಥವಾ ನೋಂದಾಯಿಸಲಾದ ಹಾಗೂ ದೀರ್ಘ ಕಾಲದಿಂದ ಧಾರ್ಮಿಕ ಕಾರ್ಯಕ್ರಮಗಳಿಗೆ ಬಳಸುತ್ತಿರುವ (ವಕ್ಫ್ ಬೈ ಯೂಸರ್) ಆಸ್ತಿಗಳನ್ನು ಒಳಗೊಂಡಂತೆ ಯಾವುದೇ ವಕ್ಫ್ ಆಸ್ತಿಗಳನ್ನು ಡಿನೋಟಿಫೈ ಮಾಡು ವಂತಿಲ್ಲ. ಜಿಲ್ಲಾಧಿಕಾರಿಗಳು ಅವುಗಳ ಸ್ಥಿತಿಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಬಾರದು ಎಂದು ನ್ಯಾಯಾ ಲಯ ಸೂಚಿಸಿದೆ. ಮುಂದಿನ ವಿಚಾರಣೆಯವರೆಗೆ ವಕ್ಫ್ ಬೈ ಡೀಡ್ ಮತ್ತು ಬಳಕೆದಾರರಿಂದ ವಕ್ಫ್ ಅನ್ನು ಡಿನೋಟಿಫೈ ಮಾಡುವುದಿಲ್ಲ ಎಂದು ಕೇಂದ್ರ ಸರಕಾರ ಸುಪ್ರೀಂಕೋರ್ಟ್‌ಗೆ ಭರವಸೆ ನೀಡಿದೆ.

2024-25ನೇ ಸಾಲಿನ ವಾರ್ಷಿಕ ಆದಾಯ 155.95 ಕೋಟಿ

ಕುಕ್ಕೆ ಸುಬ್ರಹ್ಮಣ್ಯ ರಾಜ್ಯದಲ್ಲಿ ಶ್ರೀಮಂತ ದೇವಸ್ಥಾನ

ಸುಬ್ರಹ್ಮಣ್ಯ: ರಾಜ್ಯದ ಶ್ರೀಮಂತ ದೇವಸ್ಥಾನ ದಕ್ಷಿಣ ಕನ್ನಡ ಜಿಲ್ಲೆಯ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಮತ್ತೆ ತಾನೇ ರಾಜ್ಯಕ್ಕೆ ಶ್ರೀಮಂತ ದೇವಸ್ಥಾನ ಎಂಬುದನ್ನು ಸಾಬೀತುಪಡಿಸಿದೆ.

2024-25ನೇ ಸಾಲಿನ ವಾರ್ಷಿಕ ಆದಾಯ 155.95 ಕೋಟಿ (155,95,19,567) ರು. ಗಳಿಗೆ ಏರಿಕೆಯಾಗಿದ್ದು, ಕಳೆದ ವರ್ಷಕ್ಕಿಂತ 9.94 ಕೋಟಿ ರು. ಏರಿಕೆಯಾಗಿದೆ. ಕಳೆದ ವರ್ಷ 146.01 ಕೋಟಿ ಆಗಿತ್ತು. ಸರ್ಪ ಸಂಸ್ಕಾರ ಸೇರಿದಂತೆ ವಿವಿಧ ಸೇವೆ ಹಾಗೂ ಇತರ ಮೂಲಗಳಿಂದ ಒಟ್ಟು ಆದಾಯ 155.95 ಕೋಟಿ ರು. ಬಂದಿದ್ದು, ಖರ್ಚು 79.82 ಕೋಟಿ (79,82,73,197) ಆಗಿದೆ.

ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮದಾಯ ದತ್ತಿ ಇಲಾಖೆಯಡಿ ಈ ದೇವಸ್ಥಾನ ಬರಲಿದೆ. ನಾಗಾರಾಧನೆಯ ಪ್ರಮುಖ ಕ್ಷೇತ್ರವಾಗಿದ್ದು, ರಾಜ್ಯದವರಲ್ಲದೇ ಹೊರ ರಾಜ್ಯಗಳಿಂದಲೂ ಸಾವಿರಾರು ಭಕ್ತರು ಆಗಮಿಸುತ್ತಾರೆ. ಕುಕ್ಕೆ ಶ್ರೀ ಸುಬ್ರಹ್ಮಣ್ಯ ಆದಾಯ ಗಳಿಕೆಯಲ್ಲಿ ಕಳೆದ ವರ್ಷವೂ ಪ್ರಥಮ ಸ್ಥಾನದ ಲ್ಲಿತ್ತು. ಎರಡನೇ ಸ್ಥಾನಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ್ದಾಗಿತ್ತು. ಈ ವರ್ಷವೂ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನವೇ ಅತ್ಯಧಿಕ ಆದಾಯ ಸಂಗ್ರಹದ ದೇವಸ್ಥಾನವಾಗುವ ಸಾಧ್ಯತೆ ಇದೆ. ಇಲಾಖೆಯಿಂದ ಅಧಿಕೃತ ಪಟ್ಟಿ ಬಿಡುಗಡೆ ಬಳಿಕ ಮಾಹಿತಿ ಲಭ್ಯವಾಗಲಿದೆ.

ಕ್ಷೇತ್ರದ ವರ್ಷವಾರು ಆದಾಯ

ವರ್ಷದಿಂದ ವರ್ಷಕ್ಕೆ ದೇವಸ್ಥಾನದ ಆದಾಯ ಹೆಚ್ಚುತ್ತಿದ್ದು, 2020-21ರಲ್ಲಿ 68.94 ಕೋಟಿ ರು., 2021-22ರಲ್ಲಿ 72.73 ಕೋಟಿ ರು., 2022-23ರಲ್ಲಿ 123 ಕೋಟಿ ರು., 2023-24 ರಲ್ಲಿ 146.01 ಕೋಟಿ ರು. ಗಳ ಆದಾಯ ಬಂದಿತ್ತು. 2011-12 ರಲ್ಲಿ ದೇವಸ್ಥಾನದ ಆದಾಯ 56.24 ಕೋಟಿ ರು. ಗಳಾಗಿದ್ದವು.

ವಾಡಿಕೆಗಿಂತ ಈ ಸಲ ಮುಂಗಾರು ಜೋರು

← ಮೊದಲಪುಟದಿಂದ

ಕೈಹಿಡಿದ ಪೂರ್ವ ಮುಂಗಾರು: ಭಾರಿ ಬಿಸಿಲಿನಿಂದ ಬಳಲಿದ್ದ ರಾಜ್ಯದಲ್ಲಿ ಈಗಾಗಲೇ ಪೂರ್ವ ಮುಂಗಾರು ಚುರುಕುಗೊಂಡಿದ್ದು, ವಾಡಿಕೆಗಿಂತ ಎರಡು ಪಟ್ಟು ಹೆಚ್ಚು ಪೂರ್ವ ಮುಂಗಾರು ಮಳೆ ಸುರಿದಿದೆ. ರಾಜ್ಯದಲ್ಲಿ ಈ ವರ್ಷ ಪೂರ್ವ ಮುಂಗಾರು ಮಳೆ ವಾಡಿಕೆಗಿಂತ ದುಪ್ಪಟ್ಟು ಸುರಿದಿದ್ದು, 49 ಸೆಂ.ಮೀ ಮಳೆಯಾಗಿದೆ. ಇದು ನಿರೀಕ್ಷಿತ 25 ಸೆಂ.ಮೀಗಿಂತ ಶೇ.98ರಷ್ಟು ಹೆಚ್ಚಾಗಿದೆ ಎಂದು ಹೇಳಲಾಗುತ್ತಿದೆ. ಮಾರ್ಚ್‌ನಿಂದ ಆರಂಭಗೊಳ್ಳುವ ಪೂರ್ವ ಮುಂಗಾರು ಮಳೆ ಜೂನ್‌ವರೆಗೂ ಮುಂದುವರಿಯಲಿದ್ದು, ಈ ಮಳೆಯಿಂದ ಉಷ್ಣಾಂಶ, ಬಿಸಿಗಾಳಿ ಹಾಗೂ ಸೆಖೆಯ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಪೂರ್ವ ಮುಂಗಾರಿನ ಸಮಯದಲ್ಲಿ ಕರಾವಳಿಯ ಮೂರು ಜಿಲ್ಲೆಗಳಲ್ಲಿ ವಾಡಿಕೆಯಂತೆ ಈ ಅವಧಿಗೆ 22.7 ಸೆಂ.ಮೀ. ಮಳೆಯಾಗಬೇಕು. ಆದರೆ, 43.1 ಸೆಂ.ಮೀ. ಮಳೆಯಾಗಿದೆ. ಅಂದರೆ ಶೇ.90ರಷ್ಟು ಮಳೆ ಹೆಚ್ಚಾಗಿದೆ. ದಕ್ಷಿಣ ಒಳನಾಡಿನಲ್ಲಿ 30.5 ಸೆಂ.ಮೀ. ಮಳೆಯಾಗಬೇಕು. ಆದರೆ, 62.7 ಸೆಂ.ಮೀ. ನಷ್ಟು ಮಳೆ ಸುರಿಯುವ ಮೂಲಕ ಮಳೆ ಪ್ರಮಾಣ ಶೇ.106ರಷ್ಟು ಹೆಚ್ಚಾಗಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ 19.2 ಸೆಂ.ಮೀ. ಮಳೆಯಾಗಬೇಕು. ಆದರೆ, ಈ ಬಾರಿ 33.8 ಸೆಂ.ಮೀ. ಮಳೆಯಾಗಿದ್ದು, ವಾಡಿಕೆಗಿಂತ ಶೇ.76ರಷ್ಟು ಹೆಚ್ಚುವರಿ ಮಳೆ ಸುರಿದಿದೆ ಎಂದು ವರದಿಯಲ್ಲಿ ತಿಳಿಸಿದೆ.

ಜಾತಿಗಣತಿ: ನಿರ್ಧಾರ ಮುಂದಕ್ಕೆ

← ಮೊದಲಪುಟದಿಂದ

ಸಮೀಕ್ಷೆ ವೇಳೆ ಏನೇನು ಮಾನದಂಡ ಅನುಸರಿಸಲಾಗಿದೆ ಎಂಬುದರ ಮಾಹಿತಿ ಕುರಿತು ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಲಾಗಿದೆ. ಸಂಖ್ಯಾಬಲದ ಸಂಬಂಧ ತಪ್ಪು ಗ್ರಹಿಕೆಗಳಿವೆ. ಆದರೂ ಸಂಪೂರ್ಣವಾದ ವಿವರಗಳ ಬಗ್ಗೆ ಸಂಪುಟದಲ್ಲಿ ಮಂಡನೆಯಾಗಿದೆ ಎಂದರು.

ಬಲವಾಗಿ ವಿರೋಧಿಸಿದ ಡಿಕೆ-ಎಸ್ಎಸ್: ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿ ಹಾಗೂ ಎಸ್.ಎಸ್.ಮಲ್ಲಿಕಾರ್ಜುನ ಜಾತಿ ಜನಗಣತಿ ವರದಿಯನ್ನು ಏರುಧ್ವನಿಯಲ್ಲೇ ವಿರೋಧಿಸಿದ್ದಾರೆ ಎನ್ನಲಾಗಿದೆ. ಇನ್ನುಳಿದಂತೆ ಮುಸ್ಲಿಮರಲ್ಲಿ ಉಪಪಂಗಡಗಳಿದ್ದರೂ ಒಟ್ಟಿಗೆ ಸೇರಿಸಿರುವುದಕ್ಕೂ ಆಕ್ಷೇಪ ವ್ಯಕ್ತವಾಗಿದೆ. ಯಾವ ವರ್ಗಕ್ಕೆ ಅನ್ಯಾಯ ಆಗಿದೆಯೋ ಅದನ್ನೂ ಸೇರಿಸಲು ಅವಕಾಶವಿದೆ. ಇದನ್ನು ಸರಿಪಡಿಸಬೇಕು ಎಂದು ಸಚಿವರುಗಳಲ್ಲೇ ಭಿನ್ನ ಸ್ವರ ಕೇಳಿ ಬಂದಿದೆ. ಇದೇ ವೇಳೆ ಈ ವರದಿ ವೈಜ್ಞಾನಿಕವಾಗಿ ಇಲ್ಲ ಅಂದರೆ ಹೇಗೆ? ಯಾವ ಸಮಿತಿ ನೂರರಷ್ಟು ಸಮೀಕ್ಷೆ ಮಾಡಲಾರದು. ಹಾಗಾಗಿ ವರದಿ ಅನುಷ್ಠಾನ ಮಾಡಿ ಎಂದು ಎಚ್.ಸಿ.ಮಹದೇವಪ್ಪ ಹಾಗೂ ಕೆ.ಎಚ್.ಮುನಿಯಪ್ಪ ಸೇರಿ ಹಲವರು ಒತ್ತಾಯಿಸಿದಾಗ ಚರ್ಚೆಯಲ್ಲಿ ಬಿಸಿ ಕಾವು ಏರಿದೆ. ಸಚಿವರ ನಡುವೆ ಈ ಚರ್ಚೆ ಕೈಮೀರುವ ಸ್ಥಿತಿ ನಿರ್ಮಾಣವಾಗುವ ಹಂತ ತಲುಪುತ್ತಿದ್ದಂತೆ ಗರಂ ಆದ ಸಿಎಂ ಸಿದ್ದರಾಮಯ್ಯ, ಮಲೆಮಹದೇಶ್ವರ ಬೆಟ್ಟದಲ್ಲಿ ನಡೆಯುವ ಸಂಪುಟ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸೋಣ ಎಂದಿದ್ದಾರೆ. ಅಲ್ಲದೆ, ನಿಮ್ಮ ಆತಂಕ, ಗೊಂದಲಗಳು ಏನೇ ಇದ್ದರೂ ಲಿಖಿತ ರೂಪದಲ್ಲಿ ನೀಡಿ, ಪರವೋ ವಿರೋಧವೋ ನಿಮ್ಮ ಆಕ್ಷೇಪಣೆಗಳನ್ನು ಸಂಕ್ಷಿಪ್ತವಾಗಿ ಬರೆದು ಸಲ್ಲಿಸಿ ಎಂದು ಸಚಿವರಿಗೆ ಸೂಚಿಸಿದ್ದಾರೆ ಎನ್ನಲಾಗಿದೆ

ಲಿಂಗಾಯತ ಸಚಿವರ ಸಭೆಯಲ್ಲಿ ವಿರೋಧ: ಮುಖ್ಯಮಂತ್ರಿಗಳೊಂದಿಗೆ ಲಿಂಗಾಯತ ಸಚಿವರು ಸಭೆ ನಡೆಸುವ ಮೊದಲು ಸಮುದಾಯದ ಸಚಿವರೆಲ್ಲ ಪ್ರತ್ಯೇಕ ಸಭೆ ನಡೆಸಿದ್ದಾರೆ. ಈ ಸಭೆಯಲ್ಲಿ ಭಾಗವಹಿಸಿದ್ದ ಸಚಿವರೆಲ್ಲ ಜಾತಿ ಗಣತಿಯನ್ನು ಒಪ್ಪಿಕೊಂಡರೆ ಅಥವಾ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ನೀಡಿದರೂ, ಸಮುದಾಯದಲ್ಲಿ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಇಡೀ ಸಮುದಾಯ ಕಾಂಗ್ರೆಸ್ ವಿರುದ್ಧ ತಿರುಗಿಬೀಳುವ ಸಾಧ್ಯತೆಯಿದೆ. ಬಿಜೆಪಿಯಲ್ಲಿನ ಗೊಂದಲದಿಂದ ಲಿಂಗಾಯತ ಸಮುದಾಯ ಈಗೀಗ ಕಾಂಗ್ರೆಸ್‌ನತ್ತ ಮುಖಮಾಡುತ್ತಿದೆ. ಈ ಸಮಯದಲ್ಲಿ ಇಂತಹ ತೀರ್ಮಾನ ಕೈಗೊಂಡರೆ, ಇದರ ನೇರ ಲಾಭ ಬಿಜೆಪಿಗೆ ಆಗಲಿದೆ. ಆದ್ದರಿಂದ ಇದನ್ನು ವಿರೋಧಿಸೋಣ ಎನ್ನುವ ಸರ್ವಾನುಮತದ ತೀರ್ಮಾನವನ್ನು ಕೈಗೊಳ್ಳಲಾಯಿತು. ಇದೇ ವಿಷಯವನ್ನು ಮುಖ್ಯಮಂತ್ರಿಗಳ ಸಭೆಯಲ್ಲಿಯೂ ಸಚಿವರು ಸ್ಪಷ್ಟಪಡಿಸಿದ್ದಾರೆ ಎನ್ನಲಾಗಿದೆ.

ಮುಸ್ಲಿಮರ ಉಪಜಾತಿಗಳೂ ಪ್ರಕಟ: ಜಾತಿ ಗಣತಿಯಲ್ಲಿ ಮುಸ್ಲಿಂ ಸಮುದಾಯದಲ್ಲಿರುವ ಒಳಪಂಗಡಗಳ ಬಗ್ಗೆ ಮಾಹಿತಿ ನೀಡಿಲ್ಲ ಎನ್ನುವ ಅಪಸ್ವರದ ನಡುವೆ, ಮುಸ್ಲಿಮರ 93 ಉಪ ಪಂಗಡಗಳನ್ನು ಗುರುತಿಸಿದ್ದು, ಇದೀಗ ಬಹಿರಂಗಪಡಿಸಲಾಗಿದೆ. ಆದರೆ ಮುಸ್ಲಿಂ ಉಪ ಪಂಗಡಗಳನ್ನು ಒಟ್ಟಾಗಿ ಪರಿಗಣಿಸಲಾಗಿದೆ. ಈ ವರದಿಯನ್ನು ಸಮರ್ಥಿಸಿಕೊಂಡಿರುವ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ಮುಸ್ಲಿಂಮರಲ್ಲಿ ಒಳಪಂಗಡಗಳಿರುವುದು ನಿಜ. ಆದರೆ ಕೆಲ ಲಿಂಗಾಯತರೇ ಕೇವಲ ಉಪಪಂಗಡಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ ಎಂದು ತಿಳಿಸಿದ್ದಾರೆ.

ಮತ್ತೊಂದೆಡೆ ಸಚಿವ ಜಮೀರ್ ಅಹ್ಮದ್ ಖಾನ್ ಪ್ರತಿಕ್ರಿಯಿಸಿ, 2011ರಲ್ಲೇ ಮುಸ್ಲಿಮರ ಜನಸಂಖ್ಯೆ 75 ಲಕ್ಷ ಇತ್ತು. ಆದರೆ ಈಗಿನ ಜಾತಿಗಣತಿ ವರದಿಯಲ್ಲಿ ಮುಸ್ಲಿಂ ಸಂಖ್ಯೆ ಕಡಿಮೆಯಿದೆ ಎಂದಿದ್ದರೆ, ಎನ್.ಎ.ಹ್ಯಾರಿಸ್, ನಮ್ಮಲ್ಲಿ ಒಳಪಂಗಡ ಇಲ್ಲ ಎಂದಿದ್ದಾರೆ.

ಮುಂದುವರಿದ ವಿರೋಧ: ಈ ನಡುವೆ ರಾಜ್ಯ ಸರಕಾರ ತರಲು ಹೊರಟಿರುವ ಜಾತಿ ಗಣತಿಗೆ ವಿರೋಧ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹುಬ್ಬಳ್ಳಿಯಲ್ಲಿ ಜೈನ ಮುನಿಗಳಾದ ಗುಣಧರನಂದಿ ಮಹಾರಾಜ ಅವರು ಮಾತನಾಡಿ, ರಾಜ್ಯ ಸರಕಾರ ಬಹಿರಂಗಪಡಿಸಲು ಮುಂದಾಗಿರುವ ಜಾತಿಗಣತಿ ಅವೈಜ್ಞಾನಿಕವಾಗಿದೆ. ಅದನ್ನು ನಾವು ವಿರೋಧಿಸುತ್ತೇವೆ. ರಾಜ್ಯದಲ್ಲಿ ಜೈನ ಸಮುದಾಯ ಕೇವಲ 1,65,565 ಜನಸಂಖ್ಯೆ ಹೊಂದಿದೆ ಎಂದು ಅಂಕಿಅಂಶಗಳಿಲ್ಲದೆ ಜನಗಣತಿಯಲ್ಲಿ ತಿಳಿಸಿದ್ದಾರೆ. ಗುರುವಾರದಿಂದ ರಾಜ್ಯಾದ್ಯಂತ ಸಂಚರಿಸಿ ಜಾತಿ ಸಮೀಕ್ಷೆ ನಡೆಸಿ ಜೂ.8ರಂದು ರಾಜ್ಯ ಸರಕಾರಕ್ಕೆ ವರದಿ ಸಲ್ಲಿಸುತ್ತೇವೆ ಎಂದಿದ್ದಾರೆ. ಇನ್ನೊಂದೆಡೆ ಗದಗದ ತೋಂಟದಾರ್ಯ ಮಠದ ಪೀಠಾಧಿಪತಿ ಡಾ. ಸಿದ್ದರಾಮ ಶ್ರೀಗಳು ಮಾತನಾಡಿ, ಜಾತಿ ಗಣತಿ ವರದಿ ದೋಷಪೂರಿತವಾಗಿದೆ. ವರದಿಯಲ್ಲಿ ಲಿಂಗಾಯತರಿಗೆ ಅನ್ಯಾಯವಾಗಿದೆ. ಹೀಗಾಗಿ, ಸರಕಾರ ಇನ್ನೊಮ್ಮೆ ಸಮೀಕ್ಷೆ ನಡೆಸಿ, ವರದಿ ಸಿದ್ಧಪಡಿಸಬೇಕು. ಕರ್ನಾಟಕದಲ್ಲಿ ಲಿಂಗಾಯತರು ಬಹುಸಂಖ್ಯಾತರೆಂಬುದು ಎಲ್ಲರಿಗೂ ತಿಳಿದಿದೆ. ಬಳಿಕ ಒಕ್ಕಲಿಗರು ಸೇರಿದಂತೆ ವಿವಿಧ ಜಾತಿಯವರು ಇದ್ದಾರೆ. ಆದರೆ, ವರದಿಯಲ್ಲಿ ಲಿಂಗಾಯತರ ಜನಸಂಖ್ಯೆ ಗಣನೀಯವಾಗಿ ಕಡಿಮೆ ಆಗಿದೆ. ದೋಷಪೂರಿತ ವರದಿಯನ್ನು ಸರಕಾರ ಒಪ್ಪಿಕೊಳ್ಳುವುದರಿಂದ ಅನೇಕರಿಗೆ, ಶಿಕ್ಷಣ, ರಾಜಕಾರಣ, ಉದ್ಯೋಗ ಹಾಗೂ ವ್ಯವಸಾಯ ಸೇರಿದಂತೆ ಅನೇಕ ರೀತಿಯಲ್ಲಿ ಜಾತಿ, ಉಪಜಾತಿಗಳಿಗೆ ಅನ್ಯಾಯವಾಗ ಬಹುದು ಎಂದು ಎಚ್ಚರಿಸಿದರು.

ಸಿಇಟಿ ಪರೀಕ್ಷೆ ಕೇಂದ್ರದಲ್ಲಿ ಜನಿವಾರ ತೆಗೆಸಿದ್ದಕ್ಕೆ ಆಕ್ಷೇಪ

ಶಿವಮೊಗ್ಗ: ಸಿಇಟಿ ಬರೆಯಲು ಪರೀಕ್ಷಾ ಕೇಂದ್ರದೊಳಗೆ ತೆರಳುವಾಗ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ್ದಕ್ಕೆ ವಿರೋಧ ವ್ಯಕ್ತವಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಶಿವಮೊಗ್ಗ ಜಿಲ್ಲೆಯ ವಿವಿಧ ಬ್ರಾಹ್ಮಣ ಸಂಘಗಳ ಒಕ್ಕೂಟದಿಂದ ಗುರುವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ತಮ್ಮ ಮಕ್ಕಳು ಇಲ್ಲಿನ ಆದಿಚುಂಚನಗಿರಿ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಬುಧವಾರ ಸಿಇಟಿ ಬರೆಯಲು ಹೋಗಿದ್ದರು. ಈ ವೇಳೆ ಅವರು ಕೈಗೆ ಕಟ್ಟಿಕೊಂಡಿದ್ದ ಕಾಶಿದಾರ ಮತ್ತು ಮೈಮೇಲೆ ಧರಿಸಿದ್ದ ಜನಿವಾರವನ್ನು ಭದ್ರತಾ ಸಿಬ್ಬಂದಿ ತೆಗೆಸಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ. ಈ ವಿಚಾರವನ್ನು ಬ್ರಾಹ್ಮಣ ಮಹಾಸಭಾದ ಗಮನಕ್ಕೆ ತಂದಿದ್ದಾರೆ. ಗಾಯತ್ರಿ ದೀಕ್ಷೆ ಪಡೆದು ಜನಿವಾರ ಧರಿಸಿರುತ್ತೇವೆ. ಅದನ್ನು ತೆಗೆಸಿರುವುದರಿಂದ ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗಿದೆ ಎಂದು ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ನಟರಾಜ್ ಭಾಗವತ್ ತಿಳಿಸಿದರು.

ಶಿವದಾರ, ರುದ್ರಾಕ್ಷಿ ತೆಗೆಸಿದ ಆರೋಪ:

ಶಿವಮೊಗ್ಗದ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಪರೀಕ್ಷೆಗೆ ತೆರಳಿದ್ದ ವೀರಶೈವ-ಲಿಂಗಾಯತ ಸಮುದಾಯದ ವಿದ್ಯಾರ್ಥಿಗಳ ಕೊರಳಲ್ಲಿದ್ದ ಶಿವದಾರ ಹಾಗೂ ರುದ್ರಾಕ್ಷಿ ತೆಗೆಸಲಾಗಿದೆ. ಸರಕಾರ ಸುತ್ತೋಲೆ ಹೊರಡಿಸದಿದ್ದರೂ ಇದನ್ನೆಲ್ಲಾ ತೆಗೆಸಿರುವ ಕೆಇಎ ಕ್ರಮ ಖಂಡನೀಯ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ.ಯೋಗೀಶ್ ದೂರಿದ್ದಾರೆ.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ & ಉಪ ಅರಣ್ಯ ಸಂರಕ್ಷಣಾಧಿಕಾರಿಯುವರ ತಾಂತ್ರಿಕ ಸಹಾಯುಕರು ಹಾಸನ, ಸಾಮಾಜಿಕ ಅರಣ್ಯ ವಿಭಾಗ, ಹಾಸನ
ಸಂಖ್ಯೆ : ಎ3/ಹೊ.ಟೆಂಡರ್/ವಿವ-03/2025-26 ದಿನಾಂಕ: 16.04.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

2025-26ನೇ ಸಾಲಿನಲ್ಲಿ ಹಾಸನ ಸಾಮಾಜಿಕ ಅರಣ್ಯ ವಿಭಾಗ ಮತ್ತು ವಲಯಗಳಲ್ಲಿ ಅಗತ್ಯವಿರುವ ಕಛೇರಿ ಸಹಾಯಕರು, ವಾಹನ ಚಾಲಕರು, ಲಿಪಿಕ ಸಹಾಯಕರು ಮತ್ತು ಗಣಕಯಂತ್ರ ಸಹಾಯಕರು ಇತ್ಯಾದಿಯವರ ಮಾನವ ಸಂಪನ್ಮೂಲ ಸೇವೆಯ ಅಂದಾಜು ಮೊತ್ತ ರೂ.102.39 ಮಾನವ ಸಂಪನ್ಮೂಲ ಸೇವೆಯನ್ನು ದಿನಾಂಕ:01.04.2025 ರಿಂದ 31.03.2026ರ ವರೆಗೆ ಪಡೆಯಲು ಅರ್ಹ ಅಧಿಕೃತ ಹೊರಗುತ್ತಿಗೆ ಸಂಪನ್ಮೂಲ ಏಜೆನ್ಸಿಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:07.05.2025ರ 16:00 ಗಂಟೆಗೆ (4.00 ಗಂಟೆ) ನಿಗಧಿಪಡಿಸಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಪಡೆಯಬಹುದಾಗಿದೆ.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ & ಉಪ ಅರಣ್ಯ ಸಂರಕ್ಷಣಾಧಿಕಾರಿಯುವರ ತಾಂತ್ರಿಕ ಸಹಾಯುಕರು ಸಾಮಾಜಿಕ ಅರಣ್ಯ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/31/ಕೆಎಸ್‌ಎಂಸಿಎ/2025-26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN : U31401KA2002SGC030437)
ನಿಗಮ ಕಛೇರಿ, ನವನಗರ, ಪಿ. ಬಿ. ರಸ್ತೆ, ಹುಬ್ಬಳ್ಳಿ - 580 025,
ದೂರವಾಣಿ : 0836 - 2322771, 2324307.
ಮಿಂಚಂಚೆ : seeit@hescom.co.in
ಸಂಖ್ಯೆ : ಹು.ವಿ.ಸ.ಕಂ.ನಿ./ಅ.ಇಂ.(ಐ.ಟಿ.&ಎಂ.ಟಿ.)/ಐ.ಟಿ-1/ಎಸ್.ಎಂ/1291/2025-26/ಸಿ.ವೈ.ಎಸ್.-575 ದಿನಾಂಕ : 17-04-2025

ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಐಟಿ & ಎಮ್‌ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಈ ಕೆಳಕಂಡ ಅಲ್ಪಾವಧಿ ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

1) ಬಿಡ್ ಇಂಡೆಂಟ್ ಸಂಖ್ಯೆ : HESCOM/2024-25/SE0369/CALL-2, ಟೆಂಡರ್ ವಿವರಗಳು : ಹೆಸ್ಕಾಂ ವ್ಯಾಪ್ತಿಯಲ್ಲಿನ ಹೊಸ ಸಂಪರ್ಕಗಳಿಗೆ (ತಾತ್ಕಾಲಿಕ ಸ್ಥಾಪನೆಗಳನ್ನು ಸೇರಿದಂತೆ) ಮತ್ತು ಸಂಭಾವ್ಯ ಗ್ರಾಹಕರಿಗೆ ಸ್ಮಾರ್ಟ್ ಮೀಟರ್‌ಗಳಿಂದ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು 05 ವರ್ಷಗಳ ಅವಧಿಗೆ ದರ ಒಪ್ಪಂದದ ಆಧಾರದ ಮೇಲೆ ಮೀಟರ್ ಮಾರಾಟಕ್ಕಾಗಿ ಮೀಟರ್ ಔಟ್‌ಲೇಟ್ ಮಾರಾಟಗಾರರ ಆಯ್ಕೆ.

ಸದರಿ ಟೆಂಡರ್‌ದ ಪೂರ್ಣ ವಿವರಗಳನ್ನು ವೆಬ್‌ಸೈಟ್ : www.kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/-
ಅಧೀಕ್ಷಕ ಇಂಜಿನೀಯರರು (ವಿ),
(ಐಟಿ & ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ.
ಡಿಐಪಿಆರ್/ಧಾರವಾಡ/62/ಮಣಿಪಾಲ್/2025-26

ಜಿಲ್ಲಾ ಶಸ್ತ್ರಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ,
ಬಿ.ಹೆಚ್.ರಸ್ತೆ, ತುಮಕೂರು-572101
ದೂರವಾಣಿ :0816-2257404, ಸ.ಆ.ಅ-2251250 ಇ-ಮೇಲ್-dstumkur@gmail.com
ಸಂಖ್ಯೆ:ಜಿಆತು/ಟ್ರಾಮಕೇರ್ ಸೆಂಟರ್/09/2024-25 ದಿನಾಂಕ: 08.04.2025

ನೇರ ಸಂದರ್ಶನ ಅಧಿಸೂಚನೆ

ವಿಷಯ: ಜಿಲ್ಲಾ ಆಸ್ಪತ್ರೆ ತುಮಕೂರು ಇಲ್ಲಿನ ಆವರಣದಲ್ಲಿರುವ ಟ್ರಾಮಾಕೇರ್ ಸೆಂಟರ್‌ಗೆ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.
ಜಿಲ್ಲಾ ಆಸ್ಪತ್ರೆ ತುಮಕೂರು ಇಲ್ಲಿನ ಆವರಣದಲ್ಲಿರುವ ಟ್ರಾಮಾಕೇರ್ ಸೆಂಟರ್‌ಗೆ ಈ ಕೆಳಕಂಡಂತಿರುವ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ನೇರ ಸಂದರ್ಶನವನ್ನು ದಿ:25.04.2025 ರಂದು ಬೆಳಿಗ್ಗೆ 11.00ಗಂಟೆಗೆ ಜಿಲ್ಲಾ ಆಸ್ಪತ್ರೆಯ ಸಭಾಂಗಣದಲ್ಲಿ ನೇರ ಸಂದರ್ಶನವನ್ನು ಏರ್ಪಡಿಸಿದ್ದು, ಆಸಕ್ತ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲಾ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳು ಹಾಗೂ ಹಾಗೂ ಒಂದು ಜೆರಾಕ್ಸ್ ಪ್ರತಿಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ.

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ರೇಡಿಯಾಲಜಿಸ್ಟ್	02
2	ಅರವಳಿಕೆ ತಜ್ಞರು	01
3	ಜನರಲ್ ಸರ್ಜನ್	01
4	ತುರ್ತು ಚಿಕಿತ್ಸಾ ವಿಭಾಗ ವೈದ್ಯಾಧಿಕಾರಿಗಳು	04

* ಹೆಚ್ಚಿನ ಮಾಹಿತಿ/ವಿವರಗಳನ್ನು ಆಸ್ಪತ್ರೆಯ ಆಡಳಿತ ಕಛೇರಿಯಲ್ಲಿ ಕಛೇರಿ ಅವಧಿಯಲ್ಲಿ ಪಡೆಯಬಹುದು.
ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ತುಮಕೂರು
DIPR/TUM/22/KSMCA/2025-26

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.
ಇ ಮೇಲ್: cosp@mybmtc.com
ಬೆಮಸಾಸಂ/ಉ&ಖ/ಕೇಂ.ಉ/ಎಸ್.ಡಿ.ಎಸ್/038/25-26 ದಿನಾಂಕ: 17.04.2025

"ಇ-ಹರಾಜು ಪ್ರಕಟಣೆ"

ಬೆಂ.ಮ.ಸಾರಿಗೆ ಸಂಸ್ಥೆಯ ನಿರುಪಯುಕ್ತ ವಸ್ತುಗಳನ್ನು ಮೆ॥ ಎಂಎಸ್‌ಟಿಸಿ (ಭಾರತ ಸರ್ಕಾರದ ಅಧೀನ ಸಂಸ್ಥೆ) ಇವರು ನಡೆಸುವ ಇ-ಹರಾಜು ಪ್ರಕ್ರಿಯೆ ಮೂಲಕ ಮಾರಾಟ ಮಾಡಲಾಗುವುದು. ನಿರುಪಯುಕ್ತ ವಸ್ತುಗಳ ಇ-ಹರಾಜು ಪ್ರಕ್ರಿಯೆ ಜರಗುವ ದಿನಾಂಕ:29.04.2025. ಆಸಕ್ತಿಯುಳ್ಳ ಬಿಡ್ಡುದಾರರು ವೆಬ್‌ಸೈಟ್: www.mstcecommerce.com ಗೆ ಲಾಗ್‌ಆನ್ ಆಗಬಹುದು ಮತ್ತು ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು. ಕಛೇರಿ ವಿಳಾಸ: ಮೆ॥ ಎಂಎಸ್‌ಟಿಸಿ ಲಿಮಿಟೆಡ್, ನಂ.19/5, 19/6 ಮೂರನೆ ಮಹಡಿ, ಕರೀಮ್ ಟವರ್, ಕನ್ನಿಂಗ್ ಹ್ಯಾಮ್‌ರಸ್ತೆ, ಬೆಂಗಳೂರು-560052. ದೂರವಾಣಿ.ಸಂ: 080-22260054/ 22266417/ 22287356, ಬೆಂ.ಮ.ಸಾರಿಗೆ ಸಂಸ್ಥೆ ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ: + 91 7760991157
ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು-570010.
ದೂರವಾಣಿ (ಕಛೇರಿ): 0821-2523626, ಇಮೇಲ್: exhibitionauthority@gmail.com
ಸಂಖ್ಯೆ: ಕವಪ್ರಾ/ಮುಕಾನಿ/2024-25 ದಿನಾಂಕ: 16.04.2025

ಪ್ರಕಟಣೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ "ಇ" ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ಮೊತ್ತ ರೂ.84,71,324=84/-(18% ಜಿ.ಎಸ್.ಟಿ ಹೊರತುಪಡಿಸಿ) ಗಳಾಗಿದ್ದು, ಟೆಂಡರ್ ಅನ್ನು ದಿನಾಂಕ 02.05.2025 ರಂದು ಸಂಜೆ 04:30 ಗಂಟೆಯವರೆಗೆ ಸಲ್ಲಿಸಬಹುದಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್), ರವರನ್ನು ಸಂಪರ್ಕಿಸಿ ಹಾಗೂ ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ.
ಮೊಬೈಲ್ ಸಂಖ್ಯೆ: 9900568915/7892920878
ಇ-ಮೇಲ್ : exhibitionauthority@gmail.com
ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು.
DIPR/MYS/KAVITA/65/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020
ಬೆಂಅಪ್ರಾ/ನಯೋಸ/CLU-368/2024-25/169/2025-26 ದಿನಾಂಕ: 17.04.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ: ಬಾಲಿ ವೈಟ್ ಸ್ಟೋನ್ ಪ್ರೈ ಲಿ., (ಜಿಪಿಎ & ಜೆಡಿಎ)	ಬೆಂಗಳೂರು ಪೂರ್ವ	ಬಿದರಹಳ್ಳಿ	ಖಾಜಿಸೊಣ್ಣೆನ ಹಳ್ಳಿ	141	2-00	ವ್ಯವಸಾಯ	ವಸತಿ

ಷರಾ: ಈ ಜಮೀನಿನಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

‘ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಬಾರದು’ ಎಂದು ಬಾಬಾಸಾಹೇಬ್ ಅಂಬೇಡ್ಕರ್ ಹೇಳಿದ್ದಾರೆ ಎನ್ನುವ ಹಸಿ ಸುಳ್ಳನ್ನು ದೇಶದ ಪ್ರಧಾನಿ ಮೋದಿ ಹೇಳಿರುವುದು ಅತ್ಯಂತ ವಿಷಾದನೀಯ. ಅವರ ಆರೋಪಗಳಿಗೆ ತಲೆಬುಡ ಇಲ್ಲ. ಮತೀಯ ದ್ವೇಷ ಹುಟ್ಟುಹಾಕಬೇಕೆಂಬ ಏಕೈಕ ದುರುದ್ದೇಶದಿಂದ ಈ ರೀತಿಯ ಸುಳ್ಳುಗಳನ್ನು ಹೇಳುವ ಮಟ್ಟಕ್ಕೆ ಪ್ರಧಾನಿಗಳು ಇಳಿಯಬಾರದಿತ್ತು.

ಹಿರೇಮಠ

ಒಟ್ಟಿನಲ್ಲಿ ನಿಮ್ಮ ರಾಜಕೀಯ ದುರುದ್ದೇಶಕ್ಕೆ ಲಾಭಕ್ಕೆ ಧರ್ಮಗಳ ನಡುವೆ ಜಗಳ ಹಚ್ಚಿದ್ದಾಯ್ತು, ಜಾತಿಗಳ ನಡುವೆ ಬೆಂಕಿ ಹಾಕಿದ್ದಾಯ್ತು, ಮನೆ ಮನೆಗಳಲ್ಲಿ ರಕ್ತ ದಾಹ ಕಂಡಿದ್ದಾಯ್ತು ಮತ್ತೇನು ಉಳಿಸಿದ್ದೀರಿ ರಾಜಕೀಯ ನಾಯಕರೇ... ಇನ್ನಾದರೂ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಚ್ಚುವುದು ಬಿಡಿ.

ವಿಶ್ವವಾಣಿ ಕ್ಲಬ್ ಹೌಸ್
18.04.2025
ಸಂಜೆ: 06.55 ರಿಂದ 08.05 ರವರೆಗೆ



ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಕುವೆಂಪು ರಾಮಾಯಣ ದರ್ಶನಂ - 41

vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಶಿವಮೊಗ್ಗ

ಸಮಸ್ಯೆಯೇನು..?

- ಹಣಗೆರೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಹಣಗೆರೆ ಗ್ರಾಮದ ಹಳ್ಳ ಕಲುಷಿತಗೊಂಡಿರುವ ಬಗ್ಗೆ
- **ಪರಿಹಾರ:** ಹಣಗೆರೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಹಣಗೆರೆ ಗ್ರಾಮ ಪಂಚಾಯಿತಿಯಿಂದ ಕಲುಷಿತಗೊಂಡಿದ್ದ ಹಳ್ಳವನ್ನು ಸ್ವಚ್ಛಗೊಳಿಸಲಾಗಿರುತ್ತದೆ.

ಸಮಾಚಾರ ಸಣ್ಣದಲ್ಲ

ಜಾತಿ ಗಣತಿ ರಾಜ್ಯ ಸರಕಾರಕ್ಕೆ ಬಿಟ್ಟಿದ್ದು

ಕಲಬುರಗಿ: ಜಾತಿಗಣತಿ ರಾಜ್ಯ ಸರಕಾರಕ್ಕೆ ಬಿಟ್ಟ ವಿಚಾರವಾಗಿದೆ. ಎಲ್ಲಾ ರಾಜ್ಯಗಳಲ್ಲೂ ಇಂತಹ ವರದಿ ಸಮೀಕ್ಷೆ ನಡೆಸುತ್ತಿದ್ದಾರೆ. ಕೇಂದ್ರ ಸರಕಾರದಿಂದ ಇಂತಹ ಸಮೀಕ್ಷೆಗಳು ಮಾಡುವುದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುರುವಾರ ನಡೆದ ಸಚಿವ ಸಂಪುಟದಲ್ಲಿ ಎಲ್ಲವೂ ತೀರ್ಮಾನ ಆಗಲಿದೆ. ಅಲ್ಲಿ ಯಾವ ತೀರ್ಮಾನ ಹೊರ ಬರುತ್ತೆ ಕಾದು ನೋಡಬೇಕು. ಆ ವರದಿ ನಾನು ನೋಡಿಲ್ಲ. ಜಾತಿಗಣತಿಗೆ ವಿರೋಧ ವಿಚಾರ ನನ್ನ ಅಭಿಪ್ರಾಯ ಇಷ್ಟೇ ಎಂದು ತಿಳಿಸಿದರು.

ಜಾತಿ ಜನಗಣತಿ ಹಿಂದೆ ಸಿಎಂ ಷಡ್ಯಂತ್ರ

ವಿಜಯಪುರ: ಜಾತಿ ಜನಗಣತಿ ಮಂಡನೆ ಹಿಂದೆ ಸಿದ್ದರಾಮಯ್ಯ ಷಡ್ಯಂತ್ರ ಇದೆ. ಷಡ್ಯಂತ್ರ, ಹುನ್ನಾರ ಹಿನ್ನೆಲೆ ಸಿದ್ದರಾಮಯ್ಯ ಜಾತಿ ಜನಗಣತಿ ಮೂಲಕ ವಿವಾದ ಸೃಷ್ಟಿಸಿದ್ದಾರೆ. ಸಿದ್ದರಾಮಯ್ಯ ಮೇಲೆ ಆರೋಪ ಬಂದಾಗಲೆಲ್ಲ ಜಾತಿ ಜನಗಣತಿ ತರುತ್ತಾರೆ. ಎಂದು ಮಾಜಿ ಸಿಎಂ ಜಗದೀಶ ಶೆಟ್ಟರ್ ಗಂಭೀರ ಆರೋಪ ಮಾಡಿದರು. ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಅಧಿಕಾರದಿಂದ ಇಳಿಯುವ ಸಮಯ ಬಂದಾಗಲೆಲ್ಲ ಹೀಗೆ ಮಾಡುತ್ತಾರೆ. ಇದು ಲಿಂಗಾಯತ, ಒಕ್ಕಲಿಗರು, ದಲಿತರನ್ನ ಒಡೆಯುವ ಹುನ್ನಾರವಾಗಿದೆ. ಮುಸ್ಲಿಂರನ್ನ ಪ್ರೊಜೆಕ್ಟ್ ಮಾಡಲು ಜಾತಿ ಗಣತಿ ಮಂಡನೆ ಮಾಡಿದ್ದಾರೆ. ಕಾಂಗ್ರೆಸ್ ನಲ್ಲಿಯ ಆಂತರಿಕ ಯುದ್ಧ ನಡೆಯುತ್ತದೆ. ಸಿದ್ದರಾಮಯ್ಯ ಬಳಿಕ ಡಿ.ಕೆ.ಶಿವಕುಮಾರ್ ಸಿಎಂ ಕುರ್ಚಿ ಏರಲು ಕಾಯುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಪರ ಕೆಲ ಶಾಸಕರ ಲಾಬಿ ನಡೆಸಿದ್ದಾರೆ ಎಂದರು.

ಕೇಂದ್ರದ ವಿರುದ್ಧ ಫ್ರೀಡಂ ಪಾರ್ಕ್‌ನಲ್ಲಿ ಸಿಎಂ, ಡಿಸಿಎಂ ನೇತೃತ್ವದಲ್ಲಿ ಪ್ರತಿಭಟನೆ | ಕೇಂದ್ರದ ವಿರುದ್ಧ ಕಿಡಿಕಾರಿದ ಕಾಂಗ್ರೆಸ್ ನಾಯಕರು

ಬಿಜೆಪಿ ಸರಕಾರದಿಂದ ಅಚ್ಛೇ ದಿನ್ ಮಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

‘ಅಚ್ಛೇ ದಿನ್’ ಘೋಷಣೆಯೊಂದಿಗೆ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ಅವರು ನಿರಂತರ ಬೆಲೆ ಏರಿಕೆಯಿಂದ ದೇಶದಲ್ಲಿದ್ದ ಒಳ್ಳೆಯ ದಿನಗಳನ್ನೂ ಓಡಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಕೇಂದ್ರ ಸರಕಾರದ ದರ ಏರಿಕೆ ನೀತಿಯನ್ನು ಖಂಡಿಸಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಕೇಂದ್ರ ಬಿಜೆಪಿ ಸರಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

ನರೇಂದ್ರ ಮೋದಿ ಅವರು 2014ರ ಲೋಕಸಭಾ ಚುನಾವಣೆಗೂ ಮುನ್ನ ‘ಅಚ್ಛೇ ದಿನಗಳನ್ನು ತರುತ್ತೇವೆ’ ಎಂದು ಘೋಷಿಸಿದ್ದರು. ಆ ಒಳ್ಳೆಯ ದಿನಗಳು ಬಂದಿತಾ? ಎಲ್ಲದರ ಬೆಲೆಯನ್ನು ಏರಿಕೆ ಮಾಡಿ, ಇದ್ದ ಒಳ್ಳೆಯ ದಿನಗಳನ್ನೂ ಓಡಿಸಿದರು. ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಪ್ರತಿ 10 ಗ್ರಾಂ ಚಿನ್ನದ ಬೆಲೆ 28,000ದಷ್ಟಿತ್ತು. ಮೋದಿ ಅವರ ಈ ಕಾಲದಲ್ಲಿ ಆ ಬೆಲೆ 96,000ಕ್ಕೆ ಏರಿಕೆಯಾಗಿದೆ. ಇದೇ ಒಳ್ಳೆಯ ದಿನವೇ? ಎಂದು ಪ್ರಶ್ನಿಸಿದರು. ಯುಪಿಎ ಸರಕಾರದ ಅವಧಿಯಲ್ಲಿ ಪ್ರತಿ ಡಾಲರ್ ಮೌಲ್ಯ 56 ರು.ನಷ್ಟಿತ್ತು. ತಾವು ಅಧಿಕಾರಕ್ಕೆ ಬಂದರೆ, ಡಾಲರ್ ಎದುರು ರುಪಾಯಿ ಮೌಲ್ಯವನ್ನು ಒಂದಕ್ಕೆ ಇಳಿಸುತ್ತೇವೆ ಎಂದು ಎಲ್ಲೆಡೆ ಘೋಷಿಸಿಕೊಂಡಿದ್ದರು. ಆದರೆ ಈಗ ಡಾಲರ್ ಬೆಲೆ 87ರಷ್ಟಾಗಿದೆ. ಮೋದಿ ಅವರ ಒಳ್ಳೆಯ ದಿನ ಅಂದರೆ ಇದೇನಾ ಎಂದು ಟೀಕಿಸಿದರು.

ಕೇಂದ್ರ ಸರಕಾರ ಸಿಲಿಂಡರ್ ಬೆಲೆ 50 ರು. ಏರಿಕೆ ಮಾಡಿದ್ದಾರೆ. ಅದು ಲಜ್ಜೆಗೆಟ್ಟ ಸರಕಾರವಾಗಿದ್ದು, ಬಿಜೆಪಿ ಹಾಗೂ ಜೆಡಿಎಸ್‌ಗೆ ಪ್ರತಿಭಟನೆ ಮಾಡುವ ಯಾವುದೇ ನೈತಿಕತೆ ಇಲ್ಲ. ಅವರಿಗೆ ಮಾನ, ಮರ್ಯಾದೆ ಇದ್ದರೆ ಪ್ರತಿಭಟನೆ ಮಾಡುತ್ತಿರಲಿಲ್ಲ. ಅವರು ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದ್ದರಿಂದ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿದೆ. ಬಡವರ ಬಗ್ಗೆ ಮಾತನಾಡುತ್ತಿರುವ ಮೋದಿಯವರು ಅಡುಗೆ ಸಿಲಿಂಡರ್ ಮೇಲಿನ ಸಹಾಯಧನವನ್ನು ಏಕೆ ತೆಗೆದು ಹಾಕಿದ್ದೀರಿ? ಗ್ಯಾರಂಟಿ ಯೋಜನೆಗೆ ವಾರ್ಷಿಕ 52,000 ಕೋಟಿ ರು. ಹಣ ಮೀಸಲಿಟ್ಟಿದ್ದೇವೆ. ಬೆಲೆ ಏರಿಕೆಗೆ ನರೇಂದ್ರ ಮೋದಿ ಕಾರಣ. ನಮ್ಮ ವಿರುದ್ಧ ಹೋರಾಟ ಮಾಡುವ ನೈತಿಕ ಹಕ್ಕಿಲ್ಲ. ಹಾಲಿನ ಬೆಲೆ ಏರಿಕೆ ಮಾಡುವಂತೆ ರೈತರು ಮನವಿ ಮಾಡುತ್ತಿದ್ದರು. ಅದಕ್ಕಾಗಿ ಹಾಲಿನ ಬೆಲೆ ಏರಿಕೆ ಮಾಡಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಹಾಲಿನ ದರ ಕಡಿಮೆ ಇದೆ. ಬಿಜೆಪಿಯವರು ರೈತರ ವಿರೋಧಿಗಳು. ಅದಕ್ಕಾಗಿ ಹಾಲಿನ ದರ ಏರಿಕೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜನಾಕ್ರೋಶವಿರುವುದು ಕೇಂದ್ರದ ವಿರುದ್ಧ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ದೇಶದಲ್ಲಿ ಇಂಧನ, ಅಗತ್ಯ ವಸ್ತುಗಳು, ರಸಗೊಬ್ಬರ, ಚಿನ್ನ, ಸಿಮೆಂಟ್, ಕಬ್ಬಿಣ ಸೇರಿದಂತೆ ಪ್ರತಿಯೊಂದು ವಸ್ತುಗಳ ಬೆಲೆ ಏರಿಕೆಗೆ ಮೂಲ ಕಾರಣ ಕೇಂದ್ರ ಬಿಜೆಪಿ ಸರಕಾರ. ಜನರ ಮೇಲೆ ಈ ಬೆಲೆ ಏರಿಕೆ ಹೊರೆ ತಗ್ಗಿಸಲು ನಾವು ಗ್ಯಾರಂಟಿ ಯೋಜನೆ ಕೊಟ್ಟಿದ್ದು, ರೈತರ ಬದುಕು ಕಾಪಾಡಲು ಹಾಲಿನ ಬೆಲೆ ಏರಿಸಿದ್ದೇವೆ. ಆದ್ದರಿಂದ ಜನಾಕ್ರೋಶ ಏನಿದ್ದರೂ ಬಿಜೆಪಿ ಸರಕಾರದ ವಿರುದ್ಧ ವ್ಯಕ್ತವಾಗಲಿ ಎಂದು ಟೀಕಿಸಿದರು.

ಬಿಜೆಪಿ ನಾಯಕರು ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಯಾತ್ರೆ ಮಾಡುತ್ತಿದ್ದಾರೆ. ಬೆಲೆ ಏರಿಕೆಗೆ ಮೂಲ ಕಾರಣ ಕೇಂದ್ರ ಬಿಜೆಪಿ ಸರಕಾರ. ಹೀಗಾಗಿ ಬಿಜೆಪಿ ನಾಯಕರ ಆಕ್ರೋಶ ಏನಿದ್ದರೂ ಕೇಂದ್ರ ಸರಕಾರದ ವಿರುದ್ಧ ಇರಬೇಕೇ ಹೊರತು, ಬಡವರ ಪರವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿರುವ ಕಾಂಗ್ರೆಸ್ ಸರಕಾರವಲ್ಲ. ಬಿಜೆಪಿಯಲ್ಲಿ ಹಾಗೂ ಜನತಾ ದಳದಲ್ಲಿ ಆಂತರಿಕ ಜಗಳ, ನಾಯಕತ್ವದ ಕೊರತೆ ಮುಚ್ಚಿಡಲು ಇಂದು ರಾಜ್ಯಾದ್ಯಂತ ಹೋರಾಟ ಮಾಡಲು ಮುಂದಾಗಿದ್ದಾರೆ ಎಂದು ಟೀಕಿಸಿದರು.

ರಾಜ್ಯ ಹಾಗೂ ದೇಶದ ಜನ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಹೀಗಾಗಿ ರಾಹುಲ್ ಗಾಂಧಿ ಅವರು ಭಾರತ ಜೋಡೋ ಯಾತ್ರೆ ಮಾಡಿದೆವು. 2023ರ ವಿಧಾನಸಭೆ ಚುನಾವಣೆಯಲ್ಲಿ ನಾನು ಭವಿಷ್ಯ ನುಡಿದಂತೆ 136 ಸೀಟು ಗೆದ್ದೆವು. ನಂತರ ಬಂದ ಉಪಚುನಾವಣೆಗಳಲ್ಲಿ ಚನ್ನಪಟ್ಟಣ, ಶಿಗ್ಗಾಂವ್ ಹಾಗೂ ಸಂಡೂರಿನಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತು. ಈ ಮೂರರಲ್ಲಿ ಜನ ಎರಡು ಕ್ಷೇತ್ರಗಳಲ್ಲಿ ಮಾಜಿ ಮುಖ್ಯಮಂತ್ರಿಗಳ ಮಕ್ಕಳನ್ನು ಸೋಲಿಸಿದರು. ಇದಕ್ಕೆ ಕಾರಣವೇನು ಎಂದು ಬಿಜೆಪಿ ನಾಯಕರು ಹೇಳಬೇಕು ಎಂದು ಪ್ರಶ್ನಿಸಿದರು.

ಕೇಂದ್ರ ಸರಕಾರದ ದರ ಏರಿಕೆ ನೀತಿಯನ್ನು ಖಂಡಿಸಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಕೇಂದ್ರ ಬಿಜೆಪಿ ಸರಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸಿದರು.

ಇ.ಡಿ. ಕಚೇರಿ ಬಳಿ ಪ್ರತಿಭಟನೆ

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಇಡಿ ಆರೋಪಪಟ್ಟಿ ಸಲ್ಲಿಸಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು, ಬೆಂಗಳೂರಿನ ಶಾಂತಿನಗರದಲ್ಲಿರುವ ಇ.ಡಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಹಾಗೂ ವಿಧಾನ ಪರಿಷತ್ತಿನಲ್ಲಿ ಸರಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ನೇತೃತ್ವದಲ್ಲಿ ಮಧ್ಯಾಹ್ನ 3ರ ವೇಳೆಗೆ ಶಾಂತಿನಗರದ ಟಿಟಿಎಂಸಿ ಬಳಿ ಸೇರಿದ ಕಾಂಗ್ರೆಸ್ ಕಾರ್ಯಕರ್ತರು, ಪ್ರತಿಭಟನೆಗೆ ಮುಂದಾದರು. ಅವರನ್ನು ಪೊಲೀಸರು ತಡೆದರು. ಆಗ ಕಾಂಗ್ರೆಸ್ ಕಾರ್ಯಕರ್ತರು ಬಸ್ ನಿಲ್ದಾಣದಲ್ಲಿಯೇ ಪ್ರತಿಭಟನೆ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಚಿತ್ರವಿದ್ದ ಫಲಕಗಳನ್ನು ಹಿಡಿದಿದ್ದ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರಕಾರ, ಬಿಜೆಪಿ ಹಾಗೂ ಇ.ಡಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆ ನಿಲ್ಲಿಸುವಂತೆ ಪೊಲೀಸರು ಮನವಿ ಮಾಡಿದರು. ಆಗ ಕಾಂಗ್ರೆಸ್ ಕಾರ್ಯಕರ್ತರು, ಪೊಲೀಸರು ಹಾಕಿದ್ದ ತಡೆಯನ್ನು ಬೀಳಿಸಿ ಇ.ಡಿ ಕಚೇರಿಯತ್ತ ನುಗ್ಗಲು ಯತ್ನಿಸಿದರು. ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಬಸ್ಸಗಳಿಗೆ ತುಂಬಲು ಮುಂದಾದರು. ಇದಕ್ಕೆ ತೀವ್ರ ಪ್ರತಿರೋಧ ಒಡ್ಡಿದ್ದ ಕಾರ್ಯಕರ್ತರು ರಸ್ತೆಯ ಮೇಲೆ ಮಲಗಿದರು. ಪೊಲೀಸರು ಅವರನ್ನು ಎತ್ತೊಯ್ದು ಬಸ್‌ಗಳಿಗೆ ತುಂಬಿದರು. ಕೆಲಕಾಲ ವಶದಲ್ಲಿ ಇರಿಸಿಕೊಂಡು, ನಂತರ ಬಿಡುಗಡೆ ಮಾಡಿದರು.

ಕುಮಾರಸ್ವಾಮಿ ಅಣ್ಣ ತಮ್ಮಂದಿರ ಆಸ್ತಿ ಬಿಚ್ಚಿಟ್ಟಿಲ್ಲ

ಕುಮಾರಸ್ವಾಮಿ ನನ್ನ ವಿರುದ್ಧ ಟನ್‌ಗಟ್ಟಲೆ ಸಾಕ್ಷಾಧಾರಗಳನ್ನು ಇಟ್ಟುಕೊಂಡಿದ್ದಾರೆ. ಇದನ್ನು ಏಕೆ ಇಟ್ಟುಕೊಂಡಿದ್ದಾರೆ, ಲಾರಿಗಳಲ್ಲಿ ರಾಜ್ಯಪಾಲರ ಬಳಿ ಕಳುಹಿಸುತ್ತಿಲ್ಲ ಏಕೆ? ಮಿಸ್ಟರ್ ಕುಮಾರಸ್ವಾಮಿ, ಈ ಡಿ. ಕೆ. ಶಿವಕುಮಾರ್ ನಿನ್ನ ಹಾಗೂ ಬಿಜೆಪಿಯ ಗೊಡ್ಡು ಬೆದರಿಕೆಗೆ ಹೆದರುವ ಮಗ ಅಲ್ಲ. ನಮ್ಮ ಕಷ್ಟ, ನಮ್ಮ ಶ್ರಮ, ನಮ್ಮ ಬದುಕು. ನಾವು ಆಸ್ತಿ ಮಾಡಿಕೊಳ್ಳುತ್ತೇವೆ. ಅದರ ಸತ್ಯಾಸತ್ಯತೆ ಸರಕಾರ ಪರಿಶೀಲನೆ ಮಾಡಲಿ. ನಾನು ನಿನ್ನ ಚರಿತ್ರೆಯನ್ನು ಇನ್ನು ಬಿಚ್ಚಿಲ್ಲ. ನಿಮ್ಮ ಅಣ್ಣ ತಮ್ಮಂದಿರ ಆಸ್ತಿ ಎಲ್ಲಿಂದ ಬಂತು ಎಂಬುದನ್ನು ನಾನಿನ್ನು ಬಿಚ್ಚಿಟ್ಟಿಲ್ಲ ಎಂದು ವಾಗ್ದಾಳಿ ನಡೆಸಿದರು. ಬಿಜೆಪಿಯ ಚಂಗಲು ನನ್ನ ವಿರುದ್ಧ ರಾಜ್ಯಪಾಲರಿಗೆ ದೂರು ಕೊಟ್ಟಿದ್ದಾನೆ. ಆತನ ವಿರುದ್ಧ ವಿಧಾನಸೌಧದಲ್ಲಿ ಅತ್ಯಾಚಾರ ಮಾಡಿರುವ ಪ್ರಕರಣಗಳಿವೆ. ಎಲ್ಲವೂ ಸಾಬೀತಾಗುತ್ತಿವೆ. ಆತ ಆಡಿರುವ ಮಾತುಗಳು ಸಾಬೀತಾಗಿವೆ. ಈಗ ನಾನು ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಭ್ರಷ್ಟ ಬಿಜೆಪಿ, ದಳದ ವಿರುದ್ಧ ಹೋರಾಟ ಮಾಡಿ 2028ರಲ್ಲಿ ಮತ್ತೆ ನಮ್ಮ ಸರಕಾರ ಅಧಿಕಾರಕ್ಕೆ ಬರಲಿದೆ ಎಂದರು.

ಕಳೆದ 10 ವರ್ಷಗಳಲ್ಲಿ ಮೋದಿ ಸರಕಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ಸುಮಾರು 34 ಲಕ್ಷ ಕೋಟಿ ಹಣವನ್ನು ಲೂಟಿ ಮಾಡಿದೆ. ಕೇಂದ್ರ ಸರಕಾರ ಅಬಕಾರಿ ಸುಂಕವನ್ನು ಪೆಟ್ರೋಲ್, ಡೀಸೆಲ್ ಮೇಲೆ ಹಾಕುತ್ತಿದೆ. ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗ ಡೀಸೆಲ್ ಮೇಲಿನ ಅಬಕಾರಿ ಸುಂಕ 3.14 ರು. ಮಾತ್ರ ಸಂಗ್ರಹ ಮಾಡುತ್ತಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣ ಇದನ್ನು 15. 80 ರು. ಹೆಚ್ಚು ಮಾಡಿ ಸುಲಿಗೆ ಮಾಡಲಾಗುತ್ತಿದೆ.

– ರಂದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಕಾರ್ಯಕರ್ತರು ಇನ್ನೊಂದು ಸ್ವಾತಂತ್ರ್ಯ ಹೋರಾಟ ಮಾಡಲು ತಯಾರಾಗಬೇಕು. ಸಿದ್ಧಾಂತ ಏನು ಎಂಬ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕು. ಹಾಗಿದ್ದಾಗ ಮಾತ್ರ ಹೋರಾಟ ಮಾಡಲು ಸಾಧ್ಯ. ಬೀದಿಗಿಳಿದು ಹೋರಾಟ ಮಾಡಿ, ಜಿಲ್ಲಾ ಮಟ್ಟದಲ್ಲಿ ಹೋರಾಟ ಮಾಡಬೇಕು. ಜನರಿಗೆ ಅರಿವು ಮೂಡಿಸುವ ಕೆಲಸ ಮಾಡಬೇಕು. ಆರ್‌ಎಸ್‌ಎಸ್, ಬಿಜೆಪಿಯವರು ಬರೀ ಸುಳ್ಳು ಹೇಳುತ್ತಾರೆ. ಅವರ ಮನೆ ದೇವರೇ ಸುಳ್ಳು.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್ ಕಾರ್ಯಕರ್ತರು.

ಮರು ಸಮೀಕ್ಷೆಗೆ ಆಗ್ರಹ

ದಾವಣಗೆರೆ: ಗೊಂದಲಕ್ಕೀಡಾಗಿರುವ ಜಾತಿ ಗಣತಿ ವರದಿ ಅನುಷ್ಠಾನಗೊಳಿಸಲು ಮುಂದಾಗಿರುವ ಕಾಂಗ್ರೆಸ್ ಸರಕಾರ, ಅದನ್ನು ಕೈಬಿಟ್ಟು ಮರು ಸಮೀಕ್ಷೆ ನಡೆಸಬೇಕೆಂದು ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಾತಿ ಗಣತಿ ಮಾಡಲು ಕೇಂದ್ರ ಸರಕಾರಕ್ಕೆ ಮಾತ್ರ ಅಧಿಕಾರವಿದೆ. ಆದರೆ 2015ರಲ್ಲಿ ಕಾಂಗ್ರೆಸ್ ಸರಕಾರ ಜಾತಿ ಗಣತಿಗೆ ಮುಂದಾಗಿತ್ತು. ಆಗ ಕೆಲವರು ಸುಪ್ರೀಂಗೆ ಮೊರೆ ಹೋದಾಗ ರಾಜ್ಯ ಸರಕಾರಕ್ಕೆ ಅಧಿಕಾರ ಇಲ್ಲ ಎಂದು ತೀರ್ಪು ನೀಡಿತು. ಆಗ ರಾಜ್ಯ ಸರಕಾರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆ ನಡೆಸಿ ಈಗ ಜಾತಿ ಗಣತಿ ಎಂದು ಬಿಂಬಿಸುತ್ತಿದೆ ಎಂದರು. ಪಂಚಮಸಾಲಿ ಸಮಾಜ ಬಾಂಧವರು 80 ಲಕ್ಷ ಜನಸಂಖ್ಯೆ ಹೊಂದಿದೆ ಎಂದು ಸಭೆ, ಸಮಾರಂಭ, ಕಾರ್ಯಕ್ರಮಗಳಲ್ಲಿ ಹೇಳಿಕೊಂಡು ಬಂದಿವೆ. ಈಗ ಸರಕಾರ ಜಾತಿಗಳ ಸಂಖ್ಯೆ ಹೊರ ಹಾಕಿ, 16 ಲಕ್ಷ ಸಂಖ್ಯೆ ತೋರಿಸುತ್ತಿದೆ. ಸಮಾಜಗಳ ನಡುವೆ ಜಾತಿ ಸಂಘರ್ಷ ಉಂಟು ಮಾಡಿ ಜನರ ಭಾವನೆ ಘಾಸಿಗೊಳಿಸುತ್ತಿದೆ ಎಂದು ಸರಕಾರದ ನಡೆಗೆ ಕಿಡಿಕಾರಿದರು.

19-20ರಂದು ನಿಗದಿಯಾಗಿದ್ದ ಸಭೆ ರದ್ದು

ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಉಚ್ಚಾಟಿತ ಬಿಜೆಪಿ ನಾಯಕ ಬಸನಗೌಡ ಆರ್.ಪಾಟೀಲ್ ಯತ್ನಾಳ್ ಪರವಾಗಿ ಬಹಿರಂಗವಾಗಿ ಬೆಂಬಲ ನೀಡಿದ ಸಂಬಂಧ ನಿಗದಿಗೊಳಿಸಿದ ಏ.19 ಮತ್ತು 20ರ ಸಭೆಗಳು ರದ್ದುಗೊಂಡಿವೆ ಎಂದು ಲಿಂಗಾಯತ ಪಂಚಮಸಾಲಿ ಸಮಾಜದ ರಾಷ್ಟ್ರಿಯ ಮಹಾಪ್ರಧಾನ ಕಾರ್ಯದರ್ಶಿ ಎಚ್.ಎಸ್.ಶಿವಶಂಕರ್ ತಿಳಿಸಿದರು.

ರಾಜ್ಯದ ರೈತರ ಹಿತ ಕಾಯಲು ಸರಕಾರ ಬದ್ಧ : ಸಿಎಂ

ಹಾಲಿನ ಸಬ್ಸಿಡಿ 2 ರು. ಏರಿಕೆ

ಬೆಂಗಳೂರು: ಸತತ ಬೆಲೆ ಏರಿಕೆಯ ನಡುವೆಯೂ ರಾಜ್ಯ ಸರಕಾರ ಸಬ್ಸಿಡಿ ದರವನ್ನು ಏರಿಸುವ ಪ್ರಸ್ತಾಪವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಫ್ರೀಡಂ ಪಾರ್ಕ್‌ನಲ್ಲಿ ನಡೆದ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ರಾಜ್ಯ ಸರಕಾರ ಈಗಾಗಲೇ ಪ್ರತಿಲೀಟರ್ ಹಾಲಿಗೆ ರೈತರಿಗೆ 5 ರುಪಾಯಿ ಸಹಾಯಧನವನ್ನು ನೀಡಲಾಗುತ್ತಿದೆ. ಮುಂದಿನ ದಿನದಲ್ಲಿ ಇದನ್ನು ಏಳು ರುಪಾಯಿಗೆ ಏರಿಸಲಾಗುವುದು. ದೇಶದ ಯಾವುದೇ ರಾಜ್ಯದಲ್ಲಿ ರೈತರಿಗೆ ಸಬ್ಸಿಡಿ ನೀಡುತ್ತಿಲ್ಲ. ಆದರೆ ರಾಜ್ಯ ಸರಕಾರ ನೀಡುವ ಮೂಲಕ ರಾಜ್ಯ ರೈತರ ಹಿತ ಕಾಯುತ್ತಿದೆ ಎಂದರು. ಹಾಲಿನ ದರ ಏರಿಕೆಯನ್ನು ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ನಾಯಕರು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ಪ್ರತಿಲೀಟರ್ ಕೆಎಂಎಫ್ ನಾಲ್ಕು ರುಪಾಯಿ ಏರಿಸಿದ್ದು, ಹೆಚ್ಚಳವಾಗಿರುವ ಈ ಮೊತ್ತವನ್ನು ನೇರವಾಗಿ ರೈತರಿಗೆ ನೀಡಲಾ ಗುತ್ತಿದೆ. ರೈತರಿಗೆ ಹೆಚ್ಚುವರಿ ಆದಾಯ ಬರುತ್ತಿದ್ದರೂ ಬಿಜೆಪಿ-ಜೆಡಿಎಸ್ ಪ್ರತಿಭಟಿಸು ವುದನ್ನು ನೋಡಿದರೆ ಇವರು ರೈತ ವಿರೋಧಿಗಳು ಎನ್ನುವುದರಲ್ಲಿ ಅನುಮಾನವಿಲ್ಲ ಎಂದು ಕಿಡಿಕಾರಿದರು.

ನಮ್ಮ ವಿರುದ್ಧ ಹೋರಾಟ ಮಾಡುವ ನೈತಿಕ ಹಕ್ಕಿಲ್ಲ

ಬಡವರ ಬಗ್ಗೆ ಮಾತನಾಡುತ್ತಿರುವ ಮೋದಿಯವರು ಅಡುಗೆ ಸಿಲಿಂಡರ್ ಮೇಲಿನ ಸಹಾಯಧನವನ್ನು ಏಕೆ ತೆಗೆದು ಹಾಕಿದ್ದೀರಿ? ಗ್ಯಾರಂಟಿ ಯೋಜನೆಗೆ ವಾರ್ಷಿಕ 52,000 ಕೋಟಿ ರು. ಹಣ ಮೀಸಲಿಟ್ಟಿದ್ದೇವೆ. ಬೆಲೆ ಏರಿಕೆಗೆ ನರೇಂದ್ರ ಮೋದಿ ಕಾರಣ. ನಮ್ಮ ವಿರುದ್ಧ ಹೋರಾಟ ಮಾಡುವ ನೈತಿಕ ಹಕ್ಕಿಲ್ಲ. ಹಾಲಿನ ಬೆಲೆ ಏರಿಕೆ ಮಾಡುವಂತೆ ರೈತರು ಮನವಿ ಮಾಡುತ್ತಿದ್ದರು. ಅದಕ್ಕಾಗಿ ಹಾಲಿನ ಬೆಲೆ ಏರಿಕೆ ಮಾಡಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಹಾಲಿನ ದರ ಕಡಿಮೆ ಇದೆ. ಬಿಜೆಪಿಯವರು ರೈತರ ವಿರೋಧಿಗಳು. ಅದಕ್ಕಾಗಿ ಹಾಲಿನ ದರ ಏರಿಕೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದರು.

ರಿಕ್ಷಾ ಚಾಲಕ ಸ್ನೇಹಿತರಿಂದ ಕೃತ್ಯ | ಮೂವರ ಬಂಧನ

ಯುವತಿ ಮೇಲೆ ಗ್ಯಾಂಗ್‌ರೇಪ್

ಉಳ್ಳಾಲ: ನಗರದ ಹೊರವಲಯದಲ್ಲಿರುವ ನೇತ್ರಾವತಿ ನದಿ ಕಿನಾರೆ ಗ್ರಾಮವೊಂದರಲ್ಲಿ ರಿಕ್ಷಾ ಚಾಲಕ ಸೇರಿ ಮೂವರು ಯುವತಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಘಟನೆ ತಡರಾತ್ರಿ ನಡೆದಿದೆ.

ಮುನ್ನೂರು ಗ್ರಾಮ ಮತ್ತು ಉಳ್ಳಾಲ ನಗರಸಭೆ ಗಡಿಯಲ್ಲಿರುವ ನೇತ್ರಾವತಿ ನದಿ ಸಮೀಪದ ಬೊಳ್ಳ ಹೌಸ್ ಬಳಿ ಘಟನೆ ನಡೆದಿದೆ. ಕುಂಪಲ ಬಗಂಬಿಲ ಮೂಲದ ರಿಕ್ಷಾ ಚಾಲಕ ಸೇರಿ ಮೂವರು ಈ ಕೃತ್ಯ ನಡೆಸಿದ್ದಾರೆ ಎನ್ನಲಾಗಿದ್ದು, ರಿಕ್ಷಾ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ.ಬಂಗಾಳ ಮೂಲದ ಯುವತಿ ಉದ್ಯೋಗ ಅರಸಿ ಬಂದಿದ್ದಳು. ಕೇರಳದ ಉಪ್ಪಳ ಎಂಬಲ್ಲಿ ವಾಸವಾಗಿದ್ದಳು. ಸ್ನೇಹಿತನ ಜತೆಗೆ ಮಂಗಳೂರಿಗೆ ಬಂದಿದ್ದ ವೇಳೆ ಇಬ್ಬರ ನಡುವೆ ಗಲಾಟೆಯಾಗಿದೆ. ಈ ವೇಳೆ ಆಕೆ ಒಬ್ಬಳೇ ಮಧ್ಯರಾತ್ರಿ ಹೊರಗೆ ಬಂದಿದ್ದಾಳೆ. ಈ ವೇಳೆ ಸಿಕ್ಕ ರಿಕ್ಷಾ ಚಾಲಕನ ಬಳಿ ಸಹಾಯ ಕೇಳಿದ್ದಾಳೆ. ಸಹಾಯ ಮಾಡುವ ನೆಪದಲ್ಲಿ ತನ್ನ ವಾಹನದಲ್ಲಿ ಕುಳ್ಳಿರಿಸಿದ ಚಾಲಕ ಆಕೆಗೆ ಅಮಲು ಪದಾರ್ಥ ನೀಡಿ ಸ್ನೇಹಿತರ ಜತೆಗೆ ಸೇರಿ ಕೃತ್ಯವೆಸಗಿದ್ದಾನೆ. ಈ ಸಂಬಂಧ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತನಿಖೆಯ ಭಾಗವಾಗಿ, ಮೂವರು ಶಂಕಿತರನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಗಳನ್ನು ಮೂಲ್ಕಿಯ ಕಾರ್ನಾಡ್‌ನ ಆಟೋ ಚಾಲಕ ಪ್ರಭುರಾಜ್ (38), ಕುಂಪಳದ ಚಿತ್ರಾಂಜಲಿ ನಗರದ ಮಿಥುನ್(37), ಮತ್ತು ಪಡೀಲ್‌ನ ಕೊಡಕ್ಕಲ್‌ನ ಶಿವಾಜಿನಗರ ಹೌಸ್‌ನ ಮನೀಶ್ (30) ಎಂದು ಗುರುತಿಸಲಾಗಿದೆ.

ಅರೆಪ್ರಜ್ಞಾವಸ್ಥೆ ಸ್ಥಿತಿಯಲ್ಲಿ ಯುವತಿ ಪತ್ತೆ

ಮೈಪೂರ್ತಿ ಗಾಯವಾಗಿದ್ದ ಯುವತಿ ತಡರಾತ್ರಿ ವೇಳೆ ಸ್ಥಳೀಯರೊಬ್ಬರ ಮನೆ ಬಾಗಿಲು ಬಡಿದಿದ್ದಾಳೆ. ನೀರು ಕೇಳುತ್ತಿ ದ್ದಂತೆ ಅಲ್ಲೇ ಪ್ರಜ್ಞೆ ತಪ್ಪಿ ಬಿದ್ದಿದ್ದಾಳೆ. ಮನೆಮಂದಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರು ಯುವತಿಯನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆ ವೇಳೆ ಯುವತಿ ನಶೆಯಲ್ಲಿ ಮಾತನಾಡದ ಸ್ಥಿತಿಯಲ್ಲಿದ್ದು, ಮೈಯಿಡೀ ಗಾಯದ ಗುರುತುಗಳಾಗಿತ್ತು.

ಸಮಯ ಮಿತಿಯಲ್ಲಿ ವರದಿ ನೀಡಿ: ಆಹಾರ ಸಚಿವ ಕೆ.ಎಚ್. ಮುನಿಯಪ್ಪ

ಒಳ ಮೀಸಲು ಸಮೀಕ್ಷೆಗೆ ವೇಗ

ಬೆಂಗಳೂರು: ರಾಜ್ಯದಲ್ಲಿ ಜಾತಿ ಗಣತಿಯ ವಿವಾದ ನಡುವೆಯೇ ಒಳ ಮೀಸಲಿನ ಸಮೀಕ್ಷೆಗೆ ಸಿದ್ಧತೆ ನಡೆಸಿಕೊಂಡಿದ್ದು, ಇದಕ್ಕಾಗಿ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ.

ಈ ಸಂಬಂಧ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರ ನೇತೃತ್ವದಲ್ಲಿ ಗುರುವಾರ ನಡೆದ ಸಭೆಯಲ್ಲಿ, ಒಳಮೀಸಲು ಕಲ್ಪಿಸುವ ಸಂಬಂಧ ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳ ದತ್ತಾಂಶ ಸಂಗ್ರಹಕ್ಕೆ ಸಮೀಕ್ಷೆ ನಡೆಸಲು 54 ಸಾವಿರ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಂಡು ನಿಗದಿ ಸಮಯದಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಳಿಕ ಮಾತನಾಡಿದ ಅವರು, 101 ಜಾತಿಗಳಿಗೆ ಅನ್ಯಾಯವಾಗದಂತೆ ಯಾವ ರೀತಿ ಒಳ ಮೀಸಲು ನೀಡಬೇಕು ಎಂಬ ಕುರಿತು ಚರ್ಚಿಸಲಾಯಿತು. ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಕುರಿತು ಇರುವ ಗೊಂದಲ ನಿವಾರಿಸಲು ಏನು ಮಾಡಬೇಕು ಎಂಬುದರ ಬಗ್ಗೆ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲಾಯಿತು. ಎರಡು ತಿಂಗಳಲ್ಲಿ ವರದಿ ಪಡೆಯಲು ಸೂಚಿಸಿದ್ದು, ಈಗಾಗಲೇ 15 ದಿನಗಳು ಕಳೆದಿದೆ. ತ್ವರಿತಗತಿಯಲ್ಲಿ ಮತ್ತು ಕಾಲ ಮಿತಿಯಲ್ಲಿ ಸಮೀಕ್ಷೆ ನಡೆಸಲು ಸೂಚಿಸಲಾಗಿದೆ ಎಂದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಆಯೋಗವು ಮಾರ್ಚ್‌ನಲ್ಲಿ ಮಧ್ಯಂತರ ವರದಿ ಸಲ್ಲಿಸಿ, ಒಳಮೀಸಲಾತಿ ನೀಡುವುದಕ್ಕಾಗಿ ಪರಿಶಿಷ್ಟ ಜಾತಿಯಲ್ಲಿನ 101 ಉಪಜಾತಿಗಳ ದತ್ತಾಂಶ ಸಂಗ್ರಹಿಸುವುದಕ್ಕೆ ಹೊಸ ಸಮೀಕ್ಷೆ ನಡೆಸಬೇಕು ಎಂದು ಶಿಫಾರಸು ಮಾಡಿತ್ತು. ಒಳಮೀಸಲಾತಿ ವರ್ಗೀಕರಣವನ್ನು ತ್ವರಿತವಾಗಿ ಮತ್ತು ವೈಜ್ಞಾನಿಕವಾಗಿ ಕೈಗೊಳ್ಳುವ ಸಂಬಂಧ, ಹೊಸ ಸಮೀಕ್ಷೆ ನಡೆಸುವ ಕಾರ್ಯವನ್ನು ನಾಗಮೋಹನ್ ದಾಸ್ ಆಯೋಗಕ್ಕೆ ವಹಿಸಲು ಸಚಿವ ಸಂಪುಟ ಸಭೆ ನಿರ್ಣಯಿಸಿತ್ತು. ಸಮೀಕ್ಷಾ ಕಾರ್ಯವನ್ನು 60 ದಿನಗಳೊಳಗೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ಅನುಕೂಲವಾಗುವಂತೆ ಆಯೋಗದ ಅವಧಿಯನ್ನು ಎರಡು ತಿಂಗಳವರೆಗೆ ವಿಸ್ತರಿಸಲಾಗಿತ್ತು. ಸಭೆಯಲ್ಲಿ ಮಾಜಿ ಸಚಿವ ಎಚ್.ಆಂಜನೇಯ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಸಮಾಜಕಲ್ಯಾಣ ಇಲಾಖೆ ಪ್ರಧಾನಕಾರ್ಯದರ್ಶಿ ಪಿ. ಮಣಿವಣ್ಣನ್, ಆಯುಕ್ತ ರಾಕೇಶ್ ಕುಮಾರ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಗೋನಾಳ ಬೀಮಪ್ಪ, ತೇಗನೂರು, ಭೀಮಾಶಂಕರ್ ಇದ್ದರು.

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಾಗರವಳ್ಳಿಯಲ್ಲಿ ನಡೆಯುವ ಸುಗ್ಗಿ ಹಬ್ಬದ ಜಾತ್ರಾ ಮಹೋತ್ಸವದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಭಾಗಿಯಾಗಿದ್ದರು. ಜಾತ್ರೆಯ ಕೊನೆಯ ದಿನವಾಗಿರುವುದರಿಂದ ಗನ್ ಹಿಡಿದು ತೆಂಗಿನಕಾಯಿಗೆ ಗುರಿ ಇಟ್ಟು ಅಂಬು ಹೊಡೆದು, ಗ್ರಾಮಸ್ಥರ ಜತೆ ಕೋಲಾಟಕ್ಕೆ ಹೆಜ್ಜೆ ಹಾಕಿದರು. ಸಿ.ಟಿ ರವಿ ಜತೆ ಗ್ರಾಮದ ಯುವಕರು, ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು.

ಕೆರೆಯಲ್ಲಿ ರಸ್ತೆ, ಅಕ್ರಮ ಮೈನಿಂಗ್ ದಂಧೆ ಬಯಲು

ಕ್ವಾರಿ, ಕ್ರಷರ್‌ಗಳಿಗೆ ಉಪ ಲೋಕಾಯುಕ್ತ ದಿಢೀರ್ ಭೇಟಿ

ಕೋಲಾರ: ಉಪ ಲೋಕಾಯುಕ್ತ ಬಿ.ವೀರಪ್ಪ ಅವರು ಗುರುವಾರ ಮಧ್ಯಾಹ್ನ ಮಾಲೂರು ಸಮೀಪದ ಟೇಕಲ್‌ನ ಕ್ವಾರಿ ಮತ್ತು ಕ್ರಷರ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದಾಗ ಅಕ್ರಮಗಳ ಸರಮಾಲೆಯೇ ಪತ್ತೆ ಆಗುವ ಮೂಲಕ ಜಿಲ್ಲಾಡಳಿತದ ಬಣ್ಣ ಬಯಲಾಯಿತು.

ಕ್ವಾರಿ ಮತ್ತು ಕ್ರಷರ್‌ಗಳಲ್ಲಿ ಒಂದು ಎಕರೆಗೆ ಅನುಮತಿ ಪಡೆದುಕೊಂಡು ಹತ್ತಾರು ಎಕರೆ ಒತ್ತುವರಿ ಮಾಡಿಕೊಂಡು ಸುಮಾರು 300 ಅಡಿಗೂ ಹೆಚ್ಚಿನ ಆಳದಲ್ಲಿ ಗಣಿಗಾರಿಕೆ ನಡೆಸುತ್ತಿ ರುವುದು ಬೆಳಕಿಗೆ ಬಂದು ಅಧಿಕಾರಿಗಳ ವಿರುದ್ಧ ಉಪ ಲೋಕಾಯುಕ್ತರು ಕೆಂಡ ಕಾರಿದರು. ಕೆರೆ ಮಧ್ಯೆ ಸುಸಜ್ಜಿತ ರಸ್ತೆ ನಿರ್ಮಾಣ ಮಾಡಿಕೊಂಡು ಅಕ್ರಮವಾಗಿ ಮಣ್ಣು ಮತ್ತು ಮರಳು ಸಾಗಣೆ ಮಾಡುತ್ತಿರುವ ದೃಶ್ಯವನ್ನು ಕಣ್ಣಾರೆಕಂಡ ವೀರಪ್ಪ ಅವರು ಮಾಲೂರು ತಹಸೀಲ್ದಾರ್ ರೂಪಾ ಮತ್ತು ಗಣಿ ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲು ಮಾಡಿಕೊಂಡು ತನಿಖೆ ನಡೆಸುವುದಾಗಿ ಸ್ಥಳದಲ್ಲೇ ಪ್ರಕಟಿಸಿದರು. ಗಣಿ ಅಕ್ರಮ ಬೆಳಕಿಗೆ ಬಾರದಂತೆ ಕ್ವಾರಿ ಮತ್ತು ಕ್ರಷರ್‌ಗಳಲ್ಲಿ ಸಂಜೆ 6 ರಿಂದ ಬೆಳಗ್ಗೆ 6 ಗಂಟೆವರೆಗೆ ಕಾರ್ಮಿಕರು ಕೆಲಸ ಮಾಡುತ್ತಿರುವ ರಹಸ್ಯ ಬಯಲಾಯಿತು. ಕ್ವಾರಿ ಮತ್ತು ಕ್ರಷರ್‌ಗಳಲ್ಲಿ ಯಾವುದೇ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡಿರಲಿಲ್ಲ. ಕನಿಷ್ಟ ಗೋಡೆ ಮತ್ತು ಫೆನ್ಸಿಂಗ್ ಸಹಾ ಕಾಣದೆ ಹೋಯಿತು. ಲೋಕಾಯುಕ್ತ ಎಸ್ಪಿ ಧನಂಜಯ, ಹಿರಿಯ ನ್ಯಾಯಾಧೀಶ ಸುನಿಲ್ ಎಸ್. ಹೊಸಮನಿ, ಲೋಕಾಯುಕ್ತ ಕಚೇರಿ ಕಾರ್ಯದರ್ಶಿ ಅರವಿಂದ, ತಹಸೀಲ್ದಾರ್ ರೂಪಾ, ಪರಿಸರ ಅಧಿಕಾರಿ ಡಾ.ರಾಜು, ಎಕ್ಸಿಕ್ಯುಟಿವ್ ಎಂಜಿನಿಯರ್ ರಾಮಮೂರ್ತಿ ಇದ್ದರು.

ಉಪ ಲೋಕಾಯುಕ್ತ ಬಿ.ವೀರಪ್ಪ ಟೇಕಲ್‌ನ ಕ್ವಾರಿ ಮತ್ತು ಕ್ರಷರ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ಕೋಲಾರದಲ್ಲಿ ಧರ್ಮಸ್ಥಾಪನೆ, ಭ್ರಷ್ಟರ ಆಟ ಕಟ್ಟಿ ಹಾಕುವೆ

ಕೋಲಾರ ಪುಣ್ಯಭೂಮಿಯ ಸ್ಥಿತಿ ನೋಡಿ ನೋವಾಗಿದೆ. ಕಣ್ಣೀರು ಬರುತ್ತಿದೆ. ಜನ್ಮಭೂಮಿ ಕೋಲಾರ ಕ್ಲೀನ್ ಮಾಡಿ ನಂತರ ಬೇರೆ ಕಡೆ ಗಮನಹರಿಸುವೆ. ಒಂದು ತಿಂಗಳಲ್ಲಿ 4 ಬಾರಿ ತವರು ಜಿಲ್ಲೆಗೆ ಭೇಟಿ ನೀಡಿದ್ದು ಕೋಲಾರದಲ್ಲಿ 22 ಕೇಸ್, ಮುಳಬಾಗಿಲಿನಲ್ಲಿ 22 ಹಾಗೂ ಕೆಜಿಎಫ್‌ನಲ್ಲಿ 8 ಪ್ರಕರಣ ದಾಖಲು ಆಗಿದೆ. ಕೋಲಾರ ಜಿಲ್ಲೆಯಲ್ಲಿ ಅಧಿಕಾರಿಗಳು ನಿಷ್ಠೆಯಿಂದ ಕೆಲಸ ಮಾಡುತ್ತಿಲ್ಲ. ಲಂಚ ತಿಂದರೆ ಇಡೀ ಕುಟುಂಬಕ್ಕೆ ಒಳ್ಳೆಯದಾಗಲ್ಲ. ಬೇರೆಯವರ ಹೊಟ್ಟೆ ಮೇಲೆ ಹೊಡೆದು ಬದುಕುವುದು ತರವಲ್ಲ. ದಪ್ಪ ಚರ್ಮದ ನಿಲುವು ಬದಲಾಗಬೇಕು. ಕೋಲಾರದಲ್ಲಿ ಧರ್ಮ ಸಂಸ್ಥಾಪನೆ ಮಾಡದೆ ಬಿಡಲ್ಲ. ಭ್ರಷ್ಟರ ಆಟ ಕಟ್ಟಿ ಹಾಕುವೆ ಎಂದು ಉಪ ಲೋಕಾಯುಕ್ತ ಬಿ.ವೀರಪ್ಪ ಗುಡುಗಿದರು.

ವಿಶ್ವವಾಣಿ

ಸಂಪಾದಕೀಯ

ನಕಲಿ ವೈದ್ಯರ ಹಾವಳಿ ತಪ್ಪಲಿ

ಮಧ್ಯಪ್ರದೇಶದ ದಾಮೋಹ್ ಜಿಲ್ಲೆಯಲ್ಲಿ ನಕಲಿ ವೈದ್ಯನೊಬ್ಬ 15 ರೋಗಿಗಳಿಗೆ ಹೃದಯ ಶಸ್ತ್ರ ಚಿಕಿತ್ಸೆ ನಡೆಸಿ ಏಳು ರೋಗಿಗಳ ಸಾವಿಗೆ ಕಾರಣನಾದ ಘಟನೆ ಆಘಾತಕಾರಿ. ಸುಳ್ಳು ಪ್ರಮಾಣ ಪತ್ರ ನೀಡಿ ಈ ವೈದ್ಯ ಸರಕಾರಿ ಆಸ್ಪತ್ರೆ ಸೇವೆಗೆ ಸೇರಿದ್ದ ಎನ್ನುವುದೇ ನಮ್ಮ ವ್ಯವಸ್ಥೆಯ ಬಗ್ಗೆ ಹತ್ತಾರು ಪ್ರಶ್ನೆಗಳನ್ನು ಮುಂದಿಡುತ್ತದೆ. ಈ ನಡುವೆ ರಾಜ್ಯದಲ್ಲಿ ವೈದ್ಯ ಪದವಿಯನ್ನು ಪಡೆಯದೇ ಕ್ಲಿನಿಕ್ ನಡೆಸುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಹೈಕೋರ್ಟ್ ಆದೇಶ ನೀಡಿದೆ. ಮಂಡ್ಯ ಕೆ. ಆರ್ ತಾಲ್ಲೂಕಿನ ನಕಲಿ ವೈದ್ಯರೊಬ್ಬರು ಕೇವಲ ಎಸ್ಸೆಸ್ಸೆಲ್ಸಿ ಮುಗಿಸಿ ಕಳೆದ 15 ವರ್ಷಗಳಿಂದ ಕ್ಲಿನಿಕ್ ನಡೆಸುತ್ತಿದ್ದರು. ಇತ್ತೀಚೆಗೆ ತಮ್ಮ ಕ್ಲಿನಿಕ್ ನೋಂದಣಿಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಪೀಠ, ರಾಜ್ಯದಲ್ಲಿ ನಕಲಿ ವೈದ್ಯರ ವಿರುದ್ಧ ಕಠಣ ಕ್ರಮ ಜರುಗಿಸಲು ಆದೇಶ ನೀಡಿದ್ದಾರೆ. ಆರೋಗ್ಯ ಇಲಾಖೆ ನೀಡಿರುವ ಅಧಿಕೃತ ಮಾಹಿತಿ ಪ್ರಕಾರ ಕಳೆದ ಒಂದೂವರೆ ವರ್ಷದಲ್ಲಿ ಕರ್ನಾಟಕದ ನಾನಾ ಜಿಲ್ಲೆಗಳಲ್ಲಿ 967 ಮಂದಿ ನಕಲಿ ವೈದ್ಯರನ್ನು ಪತ್ತೆ ಹಚ್ಚಲಾಗಿದೆ. 228 ಕ್ಲಿನಿಕ್‌ಗಳಿಗೆ ಬೀಗ ಜಡಿಯಲಾಗಿದೆ. 450 ವೈದ್ಯರಿಗೆ ನೋಟಿಸ್ ನೀಡಲಾಗಿದೆ. ಆದರೆ ಈ ವೈದ್ಯರಿಂದ ಸಂತ್ರಸ್ತ ರೋಗಿಗಳು ಮತ್ತವರ ಸಂಬಂಧಿಕರು ಅನುಭವಿಸಿದ ನೋವಿಗೆ ಪರಿಹಾರವಿದೆಯೆ? ರಾಜ್ಯದ ಬೀದರ್ (213), ಕೋಲಾರ (115) ಮತ್ತು ತುಮಕೂರು (112) ಜಿಲ್ಲೆಗಳಲ್ಲಿ ಅತಿ ಹೆಚ್ಚು ನಕಲಿ ವೈದ್ಯರನ್ನು ಪತ್ತೆ ಮಾಡಲಾಗಿದೆ. ಇವು ಗಡಿ ಜಿಲ್ಲೆಗಳಾಗಿರುವ ಕಾರಣ ಬೇರೆ ರಾಜ್ಯದ ನಕಲಿ ವೈದ್ಯರು ಇಲ್ಲಿ ಚಿಕಿತ್ಸೆ ಹೆಸರಿನಲ್ಲಿ ತಳವೂರಿದ್ದಾರೆ ಎನ್ನಲಾಗಿದೆ. ಸದ್ಯ ಕೆಪಿಎಂಇ ಕಾಯದೆ ಪ್ರಕಾರ ಮೊದಲ ಬಾರಿಗೆ ಸಿಕ್ಕಿಬೀಳುವ ನಕಲಿ ವೈದ್ಯರಿಗೆ 25 ಸಾವಿರ ರೂ. ದಂಡ, 2ನೇ ಬಾರಿ ಸಿಕ್ಕಿ ಬಿದ್ದರೆ 2.50 ಲಕ್ಷ ರೂ. ದಂಡ ಮತ್ತು 1 ವರ್ಷ ಜೈಲು ಶಿಕ್ಷೆ, 3ನೇ ಬಾರಿ ಸಿಕ್ಕಿಬಿದ್ದರೆ 5 ಲಕ್ಷ ರೂ. ದಂಡ ಮತ್ತು 3 ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಜನರ ಜೀವದ ಚೆಲ್ಲಾಟ ಆಡುವ ನಕಲಿ ವೈದ್ಯರಿಗೆ ಈ ಶಿಕ್ಷೆ ಏನೇನೂ ಅಲ್ಲ. ವೈದ್ಯ ವೃತ್ತಿಯಂತಹ ಪವಿತ್ರ ವೃತ್ತಿಗೆ ಕಳಂಕ ತರುವ, ಜನರ ನಂಬಿಕೆಯೊಂದಿಗೆ ಚೆಲ್ಲಾಟ ಆಡುವ, ಇಂತಹ ನಕಲಿ ವೈದ್ಯರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಲು ಮುಂದಾಗಬೇಕು.

ಸೊಂಪಾದಕೀಯ

ಯುವರ್ 'ಹೈನೆಸ್'!

ಇದು ಆಕಾಶದಲ್ಲಿ ತೇಲಾಡುವಾಗ ತೇಲಲು ಕಾರಣವಾದ ತೈಲ ಖಾಲಿಯಾದ ಸುದ್ದಿ. ಗುಜರಾತ್ ರಾಜ್ಯದಲ್ಲಿ ಮದ್ಯಪಾನ ನಿಷೇಧ ಜಾರಿಯಲ್ಲಿರೋದು ಎಲ್ಲರಿಗೂ ಗೊತ್ತು. ಹಾಗಾಗಿ ಅಲ್ಲಿನ ಮದ್ಯಪ್ರಿಯರಿಗೆ ಎಣ್ಣೆ ಹೊಡೆಯೋ ಅವಕಾಶಗಳು ತೀರಾ ಕಮ್ಮಿ. ಎಲ್ಲೋ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಸಿಗುವ ಎಣ್ಣೆಯನ್ನು ಕದ್ದು ಮುಚ್ಚಿ ಕುಡಿಯುವ ಪರಿಸ್ಥಿತಿ. ಹಾಗಾಗಿ ಕೆಲ ತಿಂಗಳ ಹಿಂದೆ ಸೂರತ್‌ನಿಂದ ಬ್ಯಾಂಕಾಕ್‌ಗೆ ಹೊರಟ ವಿಮಾನದಲ್ಲಿ ಕೆಲವೇ ಕ್ಷಣಗಳಲ್ಲಿ ಮದ್ಯ ಖಾಲಿ ಆಗಿ ವಿಮಾನದ ಸಿಬ್ಬಂದಿ 'ವಿ ಆರ್ ಡ್ರೈ' ಅಂತ ಘೋಷಿಸಬೇಕಾದ ಪರಿಸ್ಥಿತಿ ಬಂತಂತೆ. ಮದ್ಯಪಾನ ಮಾಡಂಗಿಲ್ಲ ಅನ್ನೋದು ಈ ನೆಲದ ಕಾನೂನು, ಆದ್ರೆ ನೆಲದಿಂದ ಮೇಲೆ ಹಾರಿದ ಮೇಲೆ ಈ ನಿಯಮವನ್ನು ಗಾಳಿಗೆ ತೂರಬಹುದು ಅನ್ನೋ ಅವಕಾಶವನ್ನು ಬಳಸಿಕೊಂಡ ಮದ್ಯಪ್ರಿಯರು ವಿಮಾನ ಸೂರತ್ ನೆಲದಿಂದ ಮೇಲೆ ಹಾರ್ತಾ ಇದ್ದಂತೆ ಹಾರಾಡೋಕೆ ಅಂದ್ರೆ, ಎಣ್ಣೆ ಹೊಡೆದು ತೇಲಾಡೋಕೆ ಮುಂದಾದರಂತೆ. 'ಒನ್ ಮೋರ್, ಒನ್ ಮೋರ್' ಅಂತ ಆರ್ಡರ್ ಮಾಡಿ ಕುಡಿದು ಸ್ಟಾಕ್ ಇದ್ದ ಎಣ್ಣೆಯನ್ನೆಲ್ಲ ಖಾಲಿ ಮಾಡಿದರಂತೆ. ಹಾಗಾಗಿ ನೆಲದಿಂದ ಮೇಲಕ್ಕೆ ವಿಮಾನ ಒಂದು ಹೈಟ್ ತಲುಪುವ ಹೊತ್ತಿಗೆ ಪ್ರಯಾಣಿಕರಲ್ಲಿ ಬಹುತೇಕರು ಹೈ ಆಗಿದ್ದರು ಎನ್ನಬಹುದು. ಕೆಲವೇ ಗಂಟೆಗಳಲ್ಲಿ 1.8 ಲಕ್ಷ ರು. ಮೌಲ್ಯದ ಮದ್ಯ ಖಾಲಿ ಆಗಿತ್ತಂತೆ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿ ಮಾತಿಗೆ ಬೆಲೆ ಕೊಟ್ಟು ಮದ್ಯಪಾನ ನಿಷೇಧ ಮಾಡಿದರೆ, ನೆಲದಿಂದ ವಿಮಾನ ಹಾರಿದ ಮೇಲೆ ಮದ್ಯಪ್ರಿಯರು ತಮ್ಮ ಮದ್ಯ ಕುಡಿಯುವ ಸ್ವಾತಂತ್ರ್ಯವನ್ನು ಬಳಸಿಕೊಂಡರು. ಕೆಲ ಸಮಯದಲ್ಲೇ ವಿಮಾನದಲ್ಲಿದ್ದ ಸ್ಪಿರಿಟ್‌ನ ಸ್ಟಾಕ್ ಖಾಲಿ ಆಗಿದ್ರಿಂದ ಇದನ್ನು ಒಂದು ಸಾಂಘಿಕ ಮತ್ತು ಸ್ಪಿರಿಟೆಡ್ ಪ್ರಯತ್ನ ಎನ್ನಬಹುದು. ಗುಜರಾತಿಗಳಿಗೆ ಎಣ್ಣೆ ಹೊಡೆಯುವ ಪರ್ಮಿಷನ್ ಕೊಟ್ಟರೆ ಅವರು ಹೇಗೆ ಕುಡಿಯುತ್ತಾರೆ ಅನ್ನೋದಕ್ಕೆ ಈ ಪ್ರಕರಣ ಸಾಕ್ಷಿ ಆಗಿದ್ದಂತೂ ನಿಜ!

ಸಂಪಾದಕರ ಸದ್ಯಶೋಧನೆ

ಸಾರ್ವಜನಿಕ ಪ್ರಾಮಾಣಿಕತೆ

ನಾನು ಜಪಾನಿನಲ್ಲಿದ್ದಾಗ ನಮ್ಮ ಗೈಡ್ ಹೇಳಿದ ಒಂದು ಪ್ರಸಂಗ ಕೇಳಿ ಆಶ್ಚರ್ಯವಾಯಿತು. 2024ರ ಅಕ್ಟೋಬರ್‌ನಲ್ಲಿ ಜಪಾನಿನಲ್ಲಿ ಇಟಿಎಸ್ (ETC- Electronic Toll Collection) ವ್ಯವಸ್ಥೆಯಲ್ಲಿ ಹಠಾತ್ ತಾಂತ್ರಿಕ ದೋಷ ಉಂಟಾಗಿ ಕೆಲವು ಹೆದ್ದಾರಿ ಟೋಲ್ ಗೇಟ್‌ಗಳು ಸುಮಾರು 38 ಗಂಟೆಗಳ ಕಾಲ ಸಂಪೂರ್ಣವಾಗಿ ಸ್ಥಗಿತವಾದವು. ಈ ಅನಿರೀಕ್ಷಿತ ತಾಂತ್ರಿಕ ವೈಫಲ್ಯದ ಕಾರಣದಿಂದಾಗಿ ಎಲ್ಲ ಟೋಲ್ ಗೇಟ್‌ಗಳ ದ್ವಾರಗಳನ್ನು ತೆರೆಯಬೇಕಾಯಿತು. ಅಷ್ಟೇ ಅಲ್ಲ, ವಾಹನ ಚಾಲಕರಿಗೆ ಉಚಿತವಾಗಿ ಸಂಚಾರ ಮಾಡಲು ಅವಕಾಶ ನೀಡಲಾಯಿತು. ಯಾವ ಕಾರಣಕ್ಕೂ ಸಂಚಾರ ವ್ಯತ್ಯಯವಾಗಬಾರದು ಎಂಬ ಅಂಶಕ್ಕೆ ಪ್ರಾಮುಖ್ಯ ನೀಡಲಾಯಿತು. ಅದೃಷ್ಟವಶಾತ್, ಈ ತುರ್ತು ಪರಿಸ್ಥಿತಿಯನ್ನು ಯಾವುದೇ ಗೊಂದಲವಿಲ್ಲದೇ ಅತ್ಯಂತ ಸಮರ್ಥವಾಗಿ ನಿಭಾಯಿಸಲಾಯಿತು. ಇದರಿಂದ ವಾಹನ ಚಾಲಕರಿಗೆ ಯಾವ ಸಮಸ್ಯೆ ಆಗಲಿಲ್ಲ. ಜಪಾನಿನ ಹೆದ್ದಾರಿ ವ್ಯವಸ್ಥೆ ಬಹುಮುಖ್ಯವಾಗಿ ಇಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ (ETC) ಮೇಲೆ ಅವಲಂಬಿತವಾಗಿದೆ. ಕಾರುಗಳಲ್ಲಿ ಇರುವ ಸಾಧನ (Device) ಟೋಲ್ ಗೇಟ್‌ಗಳ ಬಳಿ ಬರುವ ವೇಳೆ ಸ್ವಯಂಚಾಲಿತವಾಗಿ ಹಣ ಪಾವತಿ ಮಾಡುವ ವ್ಯವಸ್ಥೆ ಇದಾಗಿದೆ. ಆದರೆ ಅಕ್ಟೋಬರ್‌ನಲ್ಲಿ ಈ ವ್ಯವಸ್ಥೆಯ ಉಸ್ತುವಾರಿ ನೋಡಿಕೊಳ್ಳುತ್ತಿರುವ 'ನೆಕ್ಸ್ ಕೋ' ಕಂಪನಿಯ ಸರ್ವರ್‌ಗಳಲ್ಲಿ ತಾಂತ್ರಿಕ ದೋಷ ಉಂಟಾದ ಕಾರಣ, ಈ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಯಿತು. ಪರಿಣಾಮವಾಗಿ, ದೇಶಾದ್ಯಂತ ಎಲ್ಲ ಹೆದ್ದಾರಿ ಟೋಲ್ ಗೇಟ್‌ಗಳು ಕೈಚಾಲಿತವಾಗಿ (ಮ್ಯಾನ್ಯುಯಲ್) ಕಾರ್ಯನಿರ್ವಹಿಸಬೇಕಾದ ಅವಶ್ಯಕತೆ ಎದುರಾಯಿತು. ಈ ತಾಂತ್ರಿಕ ದೋಷದಿಂದ ಅನೇಕ ಹೆದ್ದಾರಿಗಳಲ್ಲಿ ವಾಹನ ಸಂಚಾರ ಸ್ತಬ್ಧವಾಗುವ ಸಾಧ್ಯತೆ ಇದ್ದರೂ, ಅಧಿಕಾರಿಗಳು ತಕ್ಷಣ ಟೋಲ್ ಗೇಟ್‌ಗಳ ದ್ವಾರಗಳನ್ನು ತೆರೆದು, ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಆದೇಶಿಸಿದರು. ಹೆದ್ದಾರಿಗಳ ಮೇಲೆ ಸಂಚಾರ ಸುಗಮವಾಗಿಡಲು, ವಾಹನ ಚಾಲಕರನ್ನು ತಡೆಯದೇ ಸರಾಗವಾಗಿ ಹೋಗಲು ಅವಕಾಶ ನೀಡಲಾಯಿತು. ವಾಹನ ಚಾಲಕರಿಗೆ 'ಮೊದಲು ನೀವು ಸಂಚರಿಸಿ, ನಂತರ ಟೋಲ್ ಹಣವನ್ನು ಆನ್‌ಲೈನ್‌ನಲ್ಲಿ ಪಾವತಿಸಬಹುದು' ಎಂದು ತಿಳಿಸಲಾಯಿತು. ಹೀಗೆ ನಿರ್ಬಂಧವಿಲ್ಲದೇ ಹೆದ್ದಾರಿಯಲ್ಲಿ ಸಂಚರಿಸಿದವರು ಟೋಲ್ ಪಾವತಿಸಲೇಬೇಕು ಎಂಬ ಒತ್ತಾಯವಿರಲಿಲ್ಲ. ಅದು ಕಡ್ಡಾಯವೂ ಆಗಿರಲಿಲ್ಲ. ಯಾರಾದರೂ ಹಣ ಪಾವತಿಸುವುದಿದ್ದರೆ, ಪಾವತಿಸಬಹುದು ಎಂದು ಸೂಚಿಸಲಾಗಿತ್ತು. ಅಚ್ಚರಿಯ ವಿಷಯವೆಂದರೆ, 24 ಸಾವಿರಕ್ಕಿಂತ ಹೆಚ್ಚು ಮಂದಿ ಸ್ವಇಚ್ಛೆಯಿಂದ ಆನ್‌ಲೈನ್ ಮೂಲಕ ಪಾವತಿಸಿದ್ದರು. ಇದರಿಂದಾಗಿ ಜಪಾನಿನ ನಾಗರಿಕ ಸಂಸ್ಕೃತಿಯಲ್ಲಿ ಅಡಕವಾಗಿರುವ ನಿಷ್ಠೆ, ಪ್ರಾಮಾಣಿಕತೆ ಮತ್ತು ಸಾಮೂಹಿಕ ಬದ್ಧತೆ ಮತ್ತೊಮ್ಮೆ ಸಾಬೀತಾಯಿತು. ಅವರು ಹಣ ನೀಡದಿದ್ದರೆ ಏನೂ ಆಗುತ್ತಿರಲಿಲ್ಲ. ಅವರ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳುತ್ತಿರಲಿಲ್ಲ. ಆದರೂ ಅವರು ಸ್ವಯಂಪ್ರೇರಿತರಾಗಿ ಹಣ ಪಾವತಿಸುವ ಮೂಲಕ ತಮ್ಮ ಪ್ರಾಮಾಣಿಕತೆ ಮತ್ತು ನಾಗರಿಕ ಕರ್ತವ್ಯವನ್ನು ಮೆರೆದರು. ಜಪಾನಿನ ಮುಖ್ಯ ಶಕ್ತಿ ಮತ್ತು ಅಂತಃಸತ್ವವಿರುವುದು ನಾಗರಿಕರ ಶಿಸ್ತು, ಪ್ರಾಮಾಣಿಕತೆ ಮತ್ತು ವಿಶ್ವಾಸದಲ್ಲಿ. ಅಲ್ಲಿ 'ಗುಂಪಿನಲ್ಲಿ ಗೋವಿಂದ' ಸಂಸ್ಕೃತಿಗೆ ಆಸ್ಪದವೇ ಇಲ್ಲ. ಶಿಕ್ಷಣ, ಸಂಸ್ಕೃತಿ ಮತ್ತು ಸಾಮಾಜಿಕ ನೀತಿಗಳ ಮೂಲಕ ಅವರು ಮಕ್ಕಳಿಗೆ ಎಳವೆಯಲ್ಲೇ ಪ್ರಾಮಾಣಿಕತೆ ಮತ್ತು ಜವಾಬ್ದಾರಿಯನ್ನು ಕಲಿಸುವುದು ಈ ನಿದರ್ಶನದಲ್ಲೂ ಮತ್ತೊಮ್ಮೆ ಕಾರ್ಯರೂಪಕ್ಕೆ ಬಂದಿತು. ಪ್ರಾಮಾಣಿಕತೆಗೆ ಯಾವುದೇ ನಿಯಮ ಅಥವಾ ಬಲವಂತವಿಲ್ಲ. ಅದು ಯಾರದ್ದೋ ಒತ್ತಡಕ್ಕೆ ಮಣಿಯುವುದಲ್ಲ. ಅದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ. ಅದು ವ್ಯಕ್ತಿಯ ಅಂತರಂಗದಲ್ಲಿ ಅಡಕವಾಗಿರಲೇಬೇಕಾದ ಆದರ್ಶ ಗುಣ. ಜನರು ತಮ್ಮಿಚ್ಛೆಯಿಂದ ಹಣ ಪಾವತಿಸಿದ ಈ ಪ್ರಸಂಗ ಇಡೀ ವಿಶ್ವದ ಗಮನ ಸೆಳೆಯಿತು. ಈ ಘಟನೆಯ ನಂತರ, ಜಪಾನಿನ ಸಾಮಾಜಿಕ ಮಾಧ್ಯಮಗಳಲ್ಲಿ ಈ ಪ್ರಾಮಾಣಿಕ ನಡೆಯ ಬಗ್ಗೆ ವ್ಯಾಪಕ ಶ್ಲಾಘನೆ ವ್ಯಕ್ತವಾಯಿತು. 'ಇದು ನಮ್ಮ ದೇಶದ ನೈತಿಕ ಶಕ್ತಿಯ ಸಾರ್ವಜನಿಕ ಪ್ರಕಟಣೆಯ ಸಂಕೇತ' ಎಂದು ಅನೇಕರು ಅಭಿಪ್ರಾಯಪಟ್ಟರು. ಈ ಘಟನೆ ಕೇವಲ ತಾಂತ್ರಿಕ ವೈಫಲ್ಯವಷ್ಟೇ ಅಲ್ಲ, ಜನಸಾಮಾನ್ಯರ ನಡವಳಿಕೆಯ ವಿಶಿಷ್ಟ ಅಭಿವ್ಯಕ್ತಿಯೂ ಹೌದು. ಇದು ಕೇವಲ ಒಂದು ತಾಂತ್ರಿಕ ಸಮಸ್ಯೆಯ ಪರಿಹಾರವಲ್ಲ, ಬದಲಿಗೆ ಸಮಾಜದ ಪ್ರಾಮಾಣಿಕತೆಯ ಪರೀಕ್ಷೆ ಕೂಡ ಆಗಿತ್ತು.

ದೊಡ್ಡಣ್ಣ ಟ್ರಂಪನ ಸುಂಕಸಂಧಾನ; ಮಾರುಕಟ್ಟೆ ಕಂಪನ

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಮಗನ ಮದುವೆ ಈಗ ತಾನೇ ಆಗಿದೆ. ಸೊಸೆ ಮನೆಗೆ ಬಂದು ಸೇರಿದ್ದಾಳೆ. ಈಗ ಕೆಲವು ತಿಂಗಳು ಕಳೆದಿವೆ. ಬೇಡವೆಂದರೂ, ಅದೆಷ್ಟೇ ಪ್ರೀತಿಯಿದ್ದರೂ ಅತ್ತೆ ಸೊಸೆಯರ ನಡುವೆ ಚಿಕ್ಕದಾಗಿ ಮುನಿಸು, ಮನಸ್ತಾಪ ಆರಂಭವಾಗಿದೆ. ಈಗ ಇಬ್ಬರೂ ಅಸಹನೆಯೆನಿಸುವ ವಿಷಯವನ್ನು ನೇರ ಮಾತಾಡಿ ಬಗೆಹರಿಸಿಕೊಳ್ಳುತ್ತಿಲ್ಲ. ಬದಲಿಗೆ ಏನೇನೋ ಕೃತ್ಯಗಳಿಂದ ಅತ್ತೆ ಸೊಸೆ ಇಬ್ಬರೂ ಪರಸ್ಪರ ಸಂದೇಶ ರವಾನಿಸಿಕೊಳ್ಳುತ್ತಿದ್ದಾರೆ. ಮನೆಯೆದುರಿಗಿನ ಚಪ್ಪಲಿ ಶಿಸ್ತಾಗಿ ಇಡಬೇಕೆಂದು ಅತ್ತೆ ನೇರವಾಗಿ ಸೊಸೆಗೆ ಹೇಳುತ್ತಿಲ್ಲ. ಬದಲಿಗೆ ಚಪ್ಪಲಿಯನ್ನು ತಾನೇ ಕೈಯಲ್ಲಿ ಎತ್ತಿ ಇಡುತ್ತಿದ್ದಾಳೆ. 'ಅತ್ತೆ ಹಾಗೇಕೆ ಮಾಡುವುದು, ನೇರವಾಗಿ ಹೇಳಿದರೆ ಆಗುವುದಿಲ್ಲವಾ. ಸೊಕ್ಕು ಅವರಿಗೆ' ಎಂದು ಸೊಸೆ ಚಪ್ಪಲಿಯನ್ನು ಎಲ್ಲೆಂದರಲ್ಲಿ ಬಿಡುತ್ತಿದ್ದಾಳೆ. ಇದೇ ರೀತಿ ಅವರಿಬ್ಬರ ನಡುವೆ ಏನೇನೋ ಸಂದೇಶ ರವಾನಿಸುವ ಕೆಲಸಗಳು. ಇಬ್ಬರೂ ನೇರವಾಗಿ ಇಂಥ ವಿಷಯದಲ್ಲಿ ಮಾತನಾಡಿಕೊಳ್ಳುವುದಿಲ್ಲ. ಇದು ಸದ್ಯ ಅಮೆರಿಕ ಮತ್ತು ಚೀನಾ ನಡುವಿನ ಪರಿಸ್ಥಿತಿ. ಅಮೆರಿಕವು ಚೀನಾವನ್ನು ಬಗ್ಗಿಸಬೇಕೆಂದು ಒಂದಿಷ್ಟು ಆಮದು ಸುಂಕ ಹಾಕಿದೆ. ಅತ್ತ ಚೀನಾ 'ನೀನ್ಯಾವ ದೊಡ್ಡ ಗಂಡೆ. ನಿಂದು ಎಂಟಾಣೆಯಾದರೆ ನನ್ನದೂ ಎಂಟಾಣೆ' ಎಂದು ಅಮೆರಿಕದಿಂದ ಚೀನಾಕ್ಕೆ ಆಮದಾಗುವ ವಸ್ತುಗಳ ಮೇಲೆ ಅಷ್ಟೇ ಸುಂಕವನ್ನು ಹೊರಿಸಿ ಕೂತಿದೆ. ಇತ್ತ ಭಾರತ, ಯುರೋಪ್ ರಾಷ್ಟ್ರಗಳು ಮಾತ್ರ ಮನೆಯ ಅಪ್ಪ ಮಗನಂತೆ- ಅತ್ತ ಸೊಸೆಯ ಪಕ್ಷವನ್ನೂ ವಹಿಸಲಾಗದೆ, ಇತ್ತ ಅಮ್ಮನ ಪಕ್ಕಕ್ಕೂ ನಿಲ್ಲಲಾಗದೆ ಕಂಗಾಲಾಗಿವೆ.

ಅಮೆರಿಕವು ಚೀನಾದ ಮೇಲೆ ಅದೆಷ್ಟು ಅವಲಂಬಿಸಿದೆ ಎಂದು ತಿಳಿಯಲು ಯಾವುದೇ ವಿಶೇಷ ಲೆಕ್ಕಾಚಾರ ಬೇಕಾಗಿಲ್ಲ. ನನ್ನದೇ ಮನೆಯ ಅಜಮಾಸು ಹದಿನೈದು ಸಾವಿರ ವಸ್ತುಗಳಲ್ಲಿ ಹೆಚ್ಚು ಕಡಿಮೆ ಎಂಟರಿಂದ ಹತ್ತು ಮಾತ್ರ 'ಮೇಡ್ ಇನ್ ಅಮೆರಿಕ'. ಬಾಕಿ ಎಲ್ಲವೂ 'ಮೇಡ್ ಇನ್ ಚೀನಾ'. ಕೆಲವೊಂದು ವಸ್ತುಗಳನ್ನು ಅಮೆರಿಕದಲ್ಲಿ ತಯಾರಿಸುವುದೇ ಇಲ್ಲ. ಉದಾಹರಣೆಗೆ ಅಮೆರಿಕದಲ್ಲಿ ಮಾರಾಟವಾಗುವ ಶೇ.99 ಚಪ್ಪಲಿ, ಶೂ ಚೀನಾದಿಂದ ಆಮದಾಗುತ್ತವೆ. ಮೊಬೈಲ್, ಟಿವಿ, ಪೀಠೋಪಕರಣಗಳು, ಬಕೆಟ್, ಚೊಂಬು ಹೀಗೆ ನಿತ್ಯ ಬಳಸುವ ವಸ್ತುಗಳಲ್ಲಿ ಸಿಂಹಪಾಲು 'ಮೇಡ್ ಇನ್ ಚೀನಾ'. ಎಷ್ಟೆಂದರೆ ಸುಲಿದ ಬೆಳ್ಳುಳ್ಳಿ ಚೀನಾದಿಂದ ಆಮದಾಗುತ್ತದಪ್ಪ! ಉಳಿದದ್ದು ನೀವೇ ಅಂದಾಜಿಸಿಕೊಳ್ಳಿ. ವಾಲ್‌ಮಾರ್ಟ್ ಮೊದಲಾದ ಅಂಗಡಿಗಳಿಗೆ ಹೋದರೆ ಮುಟ್ಟಿದ್ದೆಲ್ಲ 'ಮೇಡ್ ಇನ್ ಚೀನಾ'. ಅಮೆರಿಕವು ಚೀನಾದಿಂದ ಆಮದಾಗುವ ವಸ್ತುಗಳ ಮೇಲಿನ ಸುಂಕವನ್ನು ಈಗ ಏಕಾಏಕಿಯಾಗಿ ಶೇ.245ರ ಮಟ್ಟಕ್ಕೆ ಹೆಚ್ಚಿಸಿದೆ. ಅದೆಲ್ಲವನ್ನೂ ಅಮೆರಿಕದ ನಾಗರಿಕ ಅಷ್ಟು ಹೆಚ್ಚು ಹಣಕೊಟ್ಟು ಭರಿಸಬೇಕು. ಇಲ್ಲಿನ ಗ್ರಾಹಕರ ಪರಿಸ್ಥಿತಿ ಹೀಗಿರುವಾಗ, ವಿಧಿಸಿದ ಸುಂಕದಿಂದಾಗಿ ದಿನಬಳಕೆಯ ವಸ್ತುಗಳ ಬೆಲೆ ಅಷ್ಟೇ ಏರುವುದರಿಂದ ಕ್ರಮೇಣ ಜನರ ಕೊಳ್ಳುವಿಕೆ ತಗ್ಗಲಿದೆ. ಈ ಅಂದಾಜಿನಿಂದಾಗಿಯೇ ಚೀನಾ ಮೇಲೆ ಸುಂಕ ಹೇರಿಕೆಯದ್ದೇ ತಡ, ಮಾರನೇ ದಿನವೇ ಅಮೆರಿಕದ ಷೇರು ಮಾರುಕಟ್ಟೆ ಹಣ್ಣಾದ ಹಲಸಿನ ಹಣ್ಣು ಧೊಪ್ಪನೆ ನೆಲಕ್ಕೆ ಬೀಳುವಂತೆ ಕೆಳಗೆ ಬಿದ್ದಿದೆ. ಇವಿಷ್ಟಾಗುವಾಗ ಅಮೆರಿಕ- ಟ್ರಂಪ್ ಸುಂಕವನ್ನು ತಾತ್ಕಾಲಿಕವಾಗಿ 90 ದಿನ ತಡೆಹಿಡಿದಿದೆ. ಅದಾದಮೇಲೆ ಇಲ್ಲಿನ ಷೇರು ಮಾರುಕಟ್ಟೆ ಸದ್ಯ ಸುಧಾರಿಸಿಕೊಂಡಿದ್ದರೂ ಬಿದ್ದಲ್ಲಿಂದ ಪೂರ್ಣ ಮೇಲಕ್ಕೆದ್ದಿಲ್ಲ.

ಕೆಲವು ದೇಶಗಳಿಗೆ ಬದ್ಧ ವೈರಿ ಎನ್ನುವ ಒಂದೆರಡು ದೇಶವಿರುತ್ತದೆ. ಉದಾಹರಣೆಗೆ ಭಾರತಕ್ಕೆ ಪಾಕಿಸ್ತಾನ. ದಕ್ಷಿಣ ಕೊರಿಯಾಕ್ಕೆ ಉತ್ತರ ಕೊರಿಯಾ ಇತ್ಯಾದಿ. ಅದೇ ರೀತಿ ಅಮೆರಿಕಕ್ಕೆ ರಷ್ಯಾ. ಆದರೆ ರಷ್ಯಾ ವೈರುಧ್ಯವನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಿದ್ದು ಟ್ರಂಪ್, ಹಿಂದಿನ ಅವಧಿಯಲ್ಲಿ. ಶೀತಲ ಯುದ್ಧದ ನಂತರ ರಷ್ಯಾಕ್ಕೆ ಅಮೆರಿಕದ ಪ್ರಥಮ ವಿರೋಧಿಯ ಪಟ್ಟ ಇಂದು ಮುಂದುವರಿಸುವುದರಲ್ಲಿ ಅರ್ಥವಿರಲಿಲ್ಲ, ಅಸಲಿಗೆ ಅದಾಗಲೇ ಚೀನಾ ನೋಡನೋಡುತ್ತಲೇ ಅಮೆರಿಕಕ್ಕೆ ಸರಿಸಮನಾಗಿ ನಿಂತಾಗಿತ್ತು. ಚೀನಾದ ವ್ಯವಹಾರ, ವ್ಯಾಪಾರ ಮತ್ತು ಬುದ್ಧಿ ಎಲ್ಲರಿಗೂ ತಿಳಿದಿರುವುದೇ. ಅದು ಆಧುನಿಕ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯಂತೆಯೇ ಹಲವಾರು ದೇಶಗಳಲ್ಲಿ ವ್ಯವಹರಿಸುತ್ತಿದೆ. ಆಫ್ರಿಕಾದ ಬಡ ರಾಷ್ಟ್ರಗಳೆಲ್ಲ ಹೆಚ್ಚು ಕಡಿಮೆ ಚೀನಾ ತೆಕ್ಕೆಗೆ ಬಿದ್ದು ಅದೆಷ್ಟೋ ಕಾಲವಾಗಿದೆ. ಅವೆಲ್ಲವೂ ಚೀನಾ ಸಾಲದಲ್ಲಿ ಸಿಕ್ಕಿಕೊಂಡಾಗಿದೆ. ಚೀನಾ ಇಷ್ಟು ಪ್ರಬಲವಾಗಿದ್ದೇ ಅಮೆರಿಕದ ಗ್ರಾಹಕ ಕೇಂದ್ರಿತ ವ್ಯವಸ್ಥೆಯಿಂದಾಗಿ. ಅಮೆರಿಕದ ಡಾಲರ್ ಹಣದಿಂದ. ಚೀನಾ ಅದೆಷ್ಟು ಅಗ್ಗದ ಬೆಲೆಯಲ್ಲಿ ಅಮೆರಿಕಕ್ಕೆ ವಸ್ತುಗಳನ್ನು ಸರಬರಾಜು ಮಾಡುತ್ತದೆಯೆಂದರೆ, ಒಂದು ವೇಳೆ ಹತ್ತು ಡಾಲರಿನ ಅದೇ ವಸ್ತುವನ್ನು ಅಮೆರಿಕದಲ್ಲಿಯೇ ತಯಾರಿಸಬೇಕೆಂದರೆ ಇಪ್ಪತ್ತು ಡಾಲರ್ ಬೇಕಾಗುತ್ತದೆ. ಹೀಗಿರುವಾಗ ಕಳೆದ ನಾಲ್ಕೈದು ದಶಕದಿಂದ ಅಮೆರಿಕದ ಬಹುತೇಕ ಚಿಕ್ಕಪುಟ್ಟ ಕಾರ್ಖಾನೆಗಳೆಲ್ಲ ಬಾಗಿಲು ಬಂದ್ ಮಾಡಿವೆ. ಆ ಕಾರ್ಖಾನೆಗಳೆಲ್ಲ ಅಗ್ಗದ ಚೀನಾದಲ್ಲಿ ತಲೆಯೆತ್ತಿ ನಿಂತಿವೆ. ಅಮೆರಿಕನ್ ಕಂಪನಿಗಳು ಚೀನಾದಿಂದ ಅವನ್ನು ಆಮದು ಮಾಡಿ ಇಲ್ಲಿ ಮಾರಾಟಮಾಡಿ ಲಾಭಮಾಡುತ್ತಿವೆ. ಅದಷ್ಟೇ ಅಲ್ಲ, ಅಮೆಜಾನ್ ಬಹುತೇಕ ಚೀನಾ ಆಮದು ವಸ್ತುಗಳನ್ನೇ ಮಾರುವುದು. ಅಮೆರಿಕದ ಅದೆಷ್ಟೋ ಅಂಗಡಿಗಳು ಬಾಗಿಲು ಮುಚ್ಚಲು ಅಮೆಜಾನ್ ಇತ್ತೀಚಿನ ವರ್ಷಗಳಲ್ಲಿ ಕಾರಣವಾಗಿದೆ. ಅದಾದಮೇಲೆ ಈಗ 'ಟೆಮು' ಎಂಬಿತ್ಯಾದಿ ಮೊಬೈಲ್ ಅಪ್ಲಿಕೇಶನ್‌ಗಳು ಬಂದು ಅಮೆರಿಕದ ಗ್ರಾಹಕರು ಚೀನಾದ ಕಂಪನಿಗಳಿಂದಲೇ ನೇರವಾಗಿ ಖರೀದಿಸುವ ವ್ಯವಸ್ಥೆಯೂ ಈಗೆರಡು ವರ್ಷದಿಂದೀಚೆಗೆ ಬಂದಿದೆ. ಅದು ಅಮೆಜಾನ್‌ಗೂ ಹೊಡೆತ ಕೊಟ್ಟಿದೆ. ಹೀಗೆ ಅಮೆರಿಕದ ಮೇಲೆಯೂ ಚೀನಾದ್ದು ಆರ್ಥಿಕ ಆಕ್ರಮಣಕಾರಿ ನಡೆ-ವ್ಯವಹಾರ. ಚೀನಾದಿಂದ ಬಚಾವಿಲ್ಲದ ಸ್ಥಿತಿ.

ಟ್ರಂಪ್ ಹಿಂದಿನ ಅಧಿಕಾರಾವಧಿಯ ಕೊನೆಯಲ್ಲಿಯೇ ಚೀನಾ ವಿರುದ್ಧ ಸುಂಕಸಮರವನ್ನು ಸಣ್ಣಗೆ ಆರಂಭಿಸಿದ್ದರು. ಅದಾದ ಒಂದೆರಡು ತಿಂಗಳಲ್ಲೇ ಕರೋನಾ ಶುರುವಾಯ್ತು. 'ಟ್ರಂಪ್ ಸುಂಕ ವಿಧಿಸುತ್ತಾರೆ, ನಮಗೆ ಇನ್ನು ಉಳಿಗಾಲವಿಲ್ಲ' ಎಂಬ ಕಾರಣಕ್ಕೆ ಚೀನಾ ಕೋವಿಡ್ ವೈರಸ್ ಅನ್ನು ಜಗತ್ತಿಗೆ ಹರಡಿದ್ದು ಎಂಬ ಗುಲ್ಲು ಸುದ್ದಿಯಿದೆ. ಅದೇನೇ ಇರಲಿ, ಕೋವಿಡ್ ನಂತರ ಟ್ರಂಪ್ ಸೋತು ಹೋದರು, ಅಧಿಕಾರಕ್ಕೆ ಬಂದದ್ದು ಬೈಡನ್. ಅಮೆರಿಕದ 'ಚೀನಾ ಲವ್' ಯಥಾಸ್ಥಿತಿ ಮುಂದುವರಿಯಿತು. ಬೈಡನ್ 'ಚೀನಾ ನಮ್ಮ ವಿರೋಧಿಯಲ್ಲ, ರಷ್ಯಾವೇ ನಮ್ಮ ಮೊದಲ ವಿರೋಧಿ' ಎಂದರು. ಇಂದು ಮರುಸ್ಥಾಪಿಸಿದ್ದು ಉಕ್ರೇನ್ ಯುದ್ಧದಲ್ಲಿ.

ಏನೇ ಇರಲಿ, ಈ ವರ್ಷ ಟ್ರಂಪ್ ಅಧಿಕಾರಕ್ಕೆ ಬರುತ್ತಿದ್ದಂತೆ ಈ ಅತ್ತೆ-ಸೊಸೆ ಜಗಳ ಮತ್ತೆ ಶುರುವಾಗಿದೆ. ಟ್ರಂಪ್ ಅಧಿಕಾರಕ್ಕೆ ಬಂದ ಮಾರನೇ ಕ್ಷಣವೇ ಮೂರ್ನಾಲ್ಕು ವಿಷಯವನ್ನು ಚೀನಾದ ಜತೆ ಬಗೆಹರಿಸಬೇಕು ಎಂದು ತಮ್ಮ ಅಧಿಕಾರಿ ದಂಡಿಗೆ ಸೂಚಿಸಿದ್ದರು. ಮೊದಲನೆಯದು ತೈವಾನ್. ಮೈಕ್ರೋಚಿಪ್ ತಯಾರಿಸಿ ಜಗತ್ತಿಗೇ ಸರಬರಾಜು ಮಾಡುತ್ತದೆ ತೈವಾನ್. ಕಂಪ್ಯೂಟರ್, ಕಾರು, ವಿಮಾನ, ಹೀಗೆ ಇಂದು ತಯಾರಾಗುವ ಬಹುತೇಕ ಇಲೆಕ್ಟ್ರಾನಿಕ್ ಮತ್ತು ಇಲೆಕ್ಟ್ರಿಕಲ್ ಉಪಕರಣಗಳಿಗೆ ಮೈಕ್ರೋಚಿಪ್ ಬೇಕು. ಜಗತ್ತಿನ ಶೇ. 90ರಷ್ಟು ಅತ್ಯಾಧುನಿಕ ಚಿಪ್ ತಯಾರಾಗುವುದು ತೈವಾನ್‌ನಲ್ಲಿ. ಹಾಗಾಗಿ ಎಲ್ಲಾ ದೇಶಗಳಿಗೂ ತೈವಾನ್ ಸ್ವತಂತ್ರವಾಗಬೇಕು, ಚೀನಾ ಹಿಡಿತದಿಂದ ಹೊರಗಿರಬೇಕು. ತೈವಾನ್‌ನ ಚಿಪ್ ತಯಾರಿಕೆಯನ್ನು ನಿಯಂತ್ರಿಸುವ ಮೂಲಕ ಚೀನಾ ಜಗತ್ತಿನ ಎಲ್ಲಾ ದೇಶಗಳ ಕತ್ತು ಹಿಸುಕಬಹುದು. ಹಾಗಾಗಿ ಚೀನಾ ದೇಶವು ತೈವಾನ್‌ನ ತಂಟೆಗೆ ಹೋಗಬಾರದು. ಆದರೆ ತೈವಾನ್ ತನ್ನ ಭಾಗ ಎಂಬುದು ಚೀನಾದ ವಾದ. ಚೀನಾ ಅಲ್ಲಿ ಮಾಡದ ಉಪದ್ರವಿಲ್ಲ. ಇನ್ನೊಂದು 'ಟಿಕ್ ಟಾಕ್'. ಬಹುತೇಕ ಎಲ್ಲಾ ಅಮೆರಿಕನ್ನರು ಪ್ರೀತಿಸುವ ಈ ಸೋಶಿಯಲ್ ಮೀಡಿಯಾ ಚೀನಿಯರದ್ದು. ಈ ಮೂಲಕ ಅಮೆರಿಕದ ಎಲ್ಲರ ಮೊಬೈಲ್‌ನಲ್ಲಿರುವ ಮಾಹಿತಿಯನ್ನು ಚೀನಾ ಕದಿಯುತ್ತಿದೆ, ಹಾಗಾಗಿ ಅದನ್ನು ಅಮೆರಿಕಕ್ಕೆ ಮಾರಬೇಕು ಎಂದು ಟ್ರಂಪ್ ವರಾತ. ಇನ್ನೊಂದು ವಿಷಯ ಮಾದಕ ಡ್ರಗ್ಸ್ ಫೆಂಟನಿಲ್‌ಗೆ ಸಂಬಂಧಿಸಿದ್ದು. ಅಮೆರಿಕದಾದ್ಯಂತ ಕಳ್ಳವಂತಿಕೆಯಲ್ಲಿ ಮಾರಾಟವಾಗುವ ಫೆಂಟನಿಲ್ ಚೀನಾದಲ್ಲಿ ತಯಾರಾಗಿ, ಬೇರೆ ಬೇರೆ ಮಾರ್ಗದ ಮೂಲಕ ಅಮೆರಿಕಕ್ಕೆ ತಲುಪುತ್ತದೆ. ಹೀಗೆ ಚೀನಾ ಅಮೆರಿಕನ್ನರ ಮಾಹಿತಿ ಕದಿಯುತ್ತಿದೆ, ಮೈಕ್ರೋಚಿಪ್‌ನ ಮೇಲಿನ ಹಿಡಿತ ಹೊಂದಿದೆ, ಅಮೆರಿಕನ್ನರ ಆರೋಗ್ಯದ ಮೇಲೆ ಫೆಂಟನಿಲ್ ಹೊಡೆತ ಕೊಡುತ್ತಿದೆ, ಇದೆಲ್ಲವನ್ನೂ ನಿಲ್ಲಿಸಬೇಕು ಎಂಬ ಅಮೆರಿಕದ ಸಂದೇಶ ಮಾತ್ರ ನೇರ ಮಾತುಕತೆಯಲ್ಲಾಗಿಲ್ಲ. ಬದಲಿಗೆ ಟ್ರಂಪ್ ಮೊದಲು ಮಾಡಿದ ಕೆಲಸವೆಂದರೆ ಚೀನಾದ ಮೇಲೆ ಸುಂಕ ಹೇರಿದ್ದು.

ಟ್ರಂಪ್ ಮೊದಲಿಗೆ ಸುಂಕದ ಸಂಧಾನಕ್ಕೆ ಮುಂದಾದದ್ದು ಅಕ್ಕಪಕ್ಕದ ದೇಶಗಳಾದ ಕೆನಡಾ ಮತ್ತು ಮೆಕ್ಸಿಕೋ ಜತೆ. ಮೊದಲು ಸುಂಕ ಹೇರುವುದು, ಆಮೇಲೆ ಸಂಧಾನಕ್ಕೆ ಕೂರುವುದು- ಇದು ಟ್ರಂಪ್ ಯೋಜನೆ. ಹೇಳಿಕೇಳಿ ಮೆಕ್ಸಿಕೋ ಬಡದೇಶ. ಅಮೆರಿಕದ ಮೇಲೆಯೇ ಸಂಪೂರ್ಣ ಅವಲಂಬಿತ. ಹಾಗಾಗಿ ಅಮೆರಿಕ ವಿಧಿಸಿದ ಸುಂಕಕ್ಕೆ ಹೆದರಿ ಅಲ್ಲಿನ ಸರಕಾರ ಟ್ರಂಪ್ ಹೇಳಿದ್ದನ್ನು ಕೇಳಿ ಎಲ್ಲದಕ್ಕೂ ಓಕೆ ಎಂದುಬಿಟ್ಟಿತು. ಕೆನಡಾ ತಕರಾರೆಬ್ಬಿಸಿ ಇಂದಿಗೂ ಅಳುತ್ತಲೇ ಇದೆ. ಇವೆಲ್ಲ ಸುಂಕದ ಸಂಧಾನ ಕೇವಲ ಚೀನಾದ ಜತೆಗಿನ ಸುಂಕದ ಯುದ್ಧಕ್ಕೆ ತಾಲೀಮು ಇದ್ದಂತಿದೆ. ಆದರೆ ಚೀನಾವನ್ನು ಬಗ್ಗುಬಡಿಯುವುದು ಸುಲಭವೇನಲ್ಲ. ಅದು ಎರಡನೇ ಆರ್ಥಿಕ ಶಕ್ತಿ.

ಅಮೆರಿಕದ ಸ್ನೇಹಿತ ರಾಷ್ಟ್ರಗಳಿಗೆ ಚೀನಾ ಅಷ್ಟಕ್ಕಷ್ಟೇ. ಅವೆಲ್ಲಕ್ಕೂ ಚೀನಾ ಭೀತಿಯೇ. ಏಕೆಂದರೆ ಯುರೋಪ್ ಸಾಕಷ್ಟು ವಿಷಯಗಳಲ್ಲಿ ಆಫ್ರಿಕಾ ದೇಶಗಳನ್ನು ಅವಲಂಬಿಸಿದೆ. ಅಲ್ಲೆಲ್ಲ ಚೀನಾ ಬೇರೂರಿ ನಿಂತಿದೆ. ಇತ್ತ ಅಮೆರಿಕದ ಸ್ನೇಹಿತ ರಾಷ್ಟ್ರ, ಚೀನಾ ಎಂದರೆ ಅಷ್ಟಕ್ಕಷ್ಟೇ ಎಂದಿರುವ ಭಾರತಕ್ಕೆ ಕೂಡ ಚೀನಾ ಇಂದಲ್ಲ ನಾಳೆ ಆಪತ್ತೇ. ಆದರೆ ಟ್ರಂಪ್ ಚೀನಾದ ಮೇಲೆ ಮಾತ್ರವಲ್ಲ, ಸಿಕ್ಕ ಸಿಕ್ಕ ದೇಶಗಳ ಮೇಲೆಲ್ಲಾ ಕಂದಾಯ ಏರಿಸಿ ಕೂತಿದ್ದಾರೆ. ಟ್ರಂಪ್ ಮಾತುಕತೆಯ ಟೇಬಲ್ಲಿಗೆ ಆಹ್ವಾನಿಸುವುದೇ ಹೀಗೆ. ಹಾಗಾಗಿ ಈ ಗಲಾಟೆಯಲ್ಲಿ ಬೇರೆ ದೇಶಗಳು ಅಮೆರಿಕದ ಬೆನ್ನಿಗೆ ನಿಂತು ಚೀನಾವನ್ನು ಎದುರಿಸುವ ಬದಲು, ಮೊದಲು ತಾವು ಹೇಗೆ ಅಮೆರಿಕದ ಜತೆ ವ್ಯವಹಾರ ಸರಿಮಾಡಿಕೊಳ್ಳಬಹುದು ಎಂದೇ ಹೆಣಗಾಡುತ್ತಿವೆ. ಹಾಗಾಗಿ ಈ ತೆರೆಗೆ ಸಂಧಾನದಲ್ಲಿ ಅಮೆರಿಕ ಒಂಟಿಯಾಗಿದೆ.

ಅಮೆರಿಕ ಇದೆಲ್ಲವನ್ನೂ ಡಾಲರ್ ಬಲದಿಂದ ತಕ್ಕಮಟ್ಟಿಗೆ ಅರಗಿಸಿಕೊಳ್ಳಬಹುದು. ಆದರೆ ಇಲ್ಲೊಂದು ಸಮಸ್ಯೆ ಇದೆ. ಸದ್ಯ ಟ್ರಂಪ್ ಹೇಳುವುದೇನೆಂದರೆ, 'ನಾವು ವಿಧಿಸಿದ ಹೆಚ್ಚಿನ ಸುಂಕದಿಂದಾಗಿ ಚೀನಾದಿಂದ ಮತ್ತು ಅನ್ಯದೇಶಗಳಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳು ತುಟ್ಟಿಯಾಗುತ್ತವೆ. ಈ ಮೂಲಕ ಸ್ವದೇಶಿ ಉತ್ಪಾದನೆ ಹೆಚ್ಚುತ್ತದೆ. ಅಮೆರಿಕವನ್ನು ಬಿಟ್ಟು ಚೀನಾಕ್ಕೆ ಹೋದ ಕಾರ್ಖಾನೆಗಳು ಅಮೆರಿಕಕ್ಕೆ ಮರಳುತ್ತವೆ' ಎಂದು. ಆದರೆ ಅದೆಲ್ಲ ದಿನಬೆಳಗಾಗುವುದರೊಳಗೆ ಸಂಭವಿಸುವುದಿಲ್ಲ. ಕಂಪ್ಯೂಟರ್ ಮೈಕ್ರೋಚಿಪ್ ಅನ್ನೇ ತೆಗೆದುಕೊಳ್ಳೋಣ. ಒಂದು ಮೈಕ್ರೋಚಿಪ್ ಕಾರ್ಖಾನೆ ಹೊಸತಾಗಿ ನಿರ್ಮಾಣಗೊಂಡ ಮೇಲೆ ಪೂರ್ಣ ಕಾರ್ಯನಿರ್ವಹಿಸಲು ಕನಿಷ್ಠ ನಾಲ್ಕೈದು ವರ್ಷವೇ ಬೇಕು. ಅದಕ್ಕಿಂತ ವೇಗದಲ್ಲಿ ಮಾಡಲಿಕ್ಕೆ ಅಸಂಭವ. ಅದೇ ರೀತಿ ಉಳಿದ ಕಾರ್ಖಾನೆಗಳಿಗೂ ಸಮಯ ಬೇಕು. ಅಷ್ಟೇ ಅಲ್ಲ, ಅವು ಅಮೆರಿಕದಲ್ಲಿ ನಿರ್ಮಾಣವಾಗಬೇಕೆಂದರೆ ಸರಕಾರದ ಸಹಾಯ ಬೇಕು ಇತ್ಯಾದಿ. ಆದರೆ ಸದ್ಯ ಅಮೆರಿಕದ ಬಡ್ಡಿದರ ಕೋವಿಡ್ ಮೊದಲಿನದಕ್ಕಿಂತ ಮೂರರಿಂದ ನಾಲ್ಕು ಪಟ್ಟು ಹೆಚ್ಚಿದೆ. ಅಲ್ಲದೆ ಅಮೆರಿಕದಲ್ಲಿ ಚೀನಾದಷ್ಟು ಜನರೇ ಇಲ್ಲ. ಹೀಗಿರುವಾಗ ಅಮೆರಿಕಕ್ಕೆ ಸ್ವಾವಲಂಬಿಯಾಗುವುದು ಬಹಳ ಕಷ್ಟದ ಕೆಲಸ. ಚೀನಾದಿಂದ ವಿಮುಕ್ತಿ ಸದ್ಯಕ್ಕೆ ಅಸಾಧ್ಯ. ಅದಾಗ್ಯೂ ಕಾರ್ಖಾನೆಗಳು ಅಮೆರಿಕದಲ್ಲಿಯೇ ತೆರೆದುಕೊಂಡರೆ ಇಂದಲ್ಲ ನಾಳೆ ಅವು ಮತ್ತೆ ಚೀನಾದ ಕಾರ್ಖಾನೆಗಳ, ಅಗ್ಗದ ವಸ್ತುಗಳ ಮುಂದೆ ಸೆಣೆಸಾಡಲೇಬೇಕು.

ಅಸಲಿಗೆ ಟ್ರಂಪ್ ಇದೆಲ್ಲವನ್ನೂ ಮಾಡಿದ್ದು ಸಂಧಾನಕ್ಕೋಸ್ಕರ ಎಂಬುದು ಈಗ ಸ್ಪಷ್ಟ. ಏಕೆಂದರೆ ಶೇ.45-50 ಸುಂಕಕ್ಕೆ ಯಾವುದೇ ಲೆಕ್ಕವೇ ಇಲ್ಲ, ಅಲ್ಲದೆ ಕಂಡ ಕಂಡ ದೇಶಗಳ ಮೇಲೆಲ್ಲ ಈ ರೀತಿ ಮನಸಿಗೆ ಬಂದಷ್ಟು ತೆರಿಗೆ ಹಾಕಿದರೆ ಆ ಹೊಡೆತವನ್ನು ಅಮೆರಿಕವೇ, ಅಮೆರಿಕನ್ನರೇ ತಿನ್ನಬೇಕಾಗುತ್ತದೆ. ಈಗಾಗಲೇ ಸುಂಕ ವಿಧಿಸಲಾಗಿದೆ ಎಂದಾದ ಮಾರನೆಯ ದಿನವೇ ಅಮೆರಿಕ ಷೇರು ಮಾರುಕಟ್ಟೆ ಕುಸಿದಿದ್ದು ಇನ್ನು 90 ದಿನದ ನಂತರ ಲಾಗುವಾದರೆ, ಮತ್ತೊಂದು ಆರ್ಥಿಕ ಮುಗ್ಗಟ್ಟು ಪ್ರಪಂಚವನ್ನೆಲ್ಲ ಬಾಧಿಸುವುದು ಶತಸಿದ್ಧ. ಆದರೆ ಹಾಗಾಗುವುದಿಲ್ಲ. ಏಕೆಂದರೆ ಇದೆಲ್ಲವನ್ನೂ ಟ್ರಂಪ್ ಮಾಡುತ್ತಿರುವುದೇ ಚೀನಾವನ್ನು ಸರಿದಾರಿಗೆ, ಮಾತುಕತೆಗೆ ಕರೆತರಬೇಕೆಂದು. ಆದರೆ ಚೀನಾ ಮಾತನಾಡುತ್ತಲೇ ಇಲ್ಲ.

ಈ ತೆರಿಗೆ ಯುದ್ಧವನ್ನು ಅಮೆರಿಕ ಏಕಾಂಗಿಯಾಗಿ ಎದುರಿಸಲಾರದು ಎಂಬುದು ಖುದ್ದು ಟ್ರಂಪ್‌ಗೂ, ಅಮೆರಿಕ ಆಡಳಿತಕ್ಕೂ ಚೆನ್ನಾಗಿಯೇ ಗೊತ್ತು. ಆ ಕಾರಣಕ್ಕೆ ಅಮೆರಿಕವು ಜಪಾನ್, ದಕ್ಷಿಣ ಕೊರಿಯಾ, ಭಾರತ, ತೈವಾನ್, ಯುರೋಪ್ ದೇಶಗಳ ಜತೆಗಿನ ಪ್ಯಾಚಪ್ ಸಂಧಾನ ಆರಂಭಿಸಿದೆ. ಟ್ರಂಪ್ ಹಿಂದಿನ ಸೋಮವಾರ ಚೀನಾದ ಮೇಲಿನ ಸುಂಕ ಸರಿಯಾಗಿಯೇ ಕೆಲಸ ಮಾಡುತ್ತಿದೆ ಎಂದು ಹೇಳಿಕೊಂಡಿದ್ದರು. ಅದಾದ 48 ಗಂಟೆಗಳಲ್ಲಿಯೇ ಮೊಬೈಲ್ ಫೋನ್, ಕಂಪ್ಯೂಟರ್ ಇವಕ್ಕೆಲ್ಲ ಸುಂಕವಿಲ್ಲ ಎಂದು ತಾವಾಗಿಯೇ ಬಾಗಿದ್ದಾರೆ. ಅದಾದ ಮೇಲೆ ಚೀನಾ ಕೂಡ ಸ್ವಲ್ಪ ಬಾಗಿದೆ. ಒಟ್ಟಾರೆ ಇವರನ್ನು ಅವರು, ಅವರನ್ನು ಇವರು ಬಗ್ಗಿಸುತ್ತಿದ್ದಾರೆ. ಇದರಿಂದಾಗಿ ಇಡೀ ಜಗತ್ತಿನ ಆರ್ಥಿಕ ವ್ಯವಸ್ಥೆ ತಗ್ಗಿ ಬಗ್ಗಿ ನಡೆಯುತ್ತಿದೆ. ಸದ್ಯ ಅಮೆರಿಕ ಮತ್ತು ಚೀನಾ ನಡುವಿನದು ಸುಮಾರು 640 ಬಿಲಿಯನ್ ಡಾಲರ್ ವ್ಯವಹಾರ. ಹೆಚ್ಚು ಕಡಿಮೆ ಐವತ್ನಾಲ್ಕು ಲಕ್ಷ ಕೋಟಿ ರುಪಾಯಿ. ಅದರಲ್ಲಿ ಅಮೆರಿಕ 180 ಬಿಲಿಯನ್‌ನಷ್ಟು ಚೀನಾಕ್ಕೆ ರಫ್ತು ಮಾಡುತ್ತದೆ. ಚೀನಾದಿಂದ 460 ಬಿಲಿಯನ್ ಡಾಲರ್ ವಸ್ತುಗಳನ್ನು ಅಮೆರಿಕ ಆಮದು ಮಾಡಿಕೊಳ್ಳುತ್ತದೆ. ಇದರರ್ಥ ಅಮೆರಿಕದ ಸುಂಕ ಚೀನಾಕ್ಕೆ ಹೊಡೆತವೇನೋ ಕೊಡಲಿದೆ, ಆದರೆ ಅಮೆರಿಕದ ಅವಲಂಬನೆಯೂ ಅಷ್ಟೇ ಇದೆ. ಅತ್ತೆ-ಸೊಸೆ ಗಲಾಟೆಯಲ್ಲಿ ನಷ್ಟ ಇಬ್ಬರಿಗೂ, ಜತೆಯಲ್ಲಿ ಮನೆಯ ಎಲ್ಲರಿಗೂ.

ಇದೆಲ್ಲದರಿಂದ ಕರ್ನಾಟಕಕ್ಕೆ, ಕನ್ನಡಿಗರಿಗೆ ಏನಾಗಬೇಕಿದೆ ಎಂಬ ಪ್ರಶ್ನೆ ಬರಹುದು. ಒಂದು ನೆನಪಿಡಬೇಕು- ಏನೆಂದರೆ ಬೆಂಗಳೂರಿನ ಐಟಿ ಮತ್ತು ಬಿಟಿ ವ್ಯವಹಾರ ನಿಂತಿರುವುದೇ ಅಮೆರಿಕದ ಕಂಪನಿಗಳ ಮೇಲೆ. ಈಗಾಗಲೇ ಈ ಸುಂಕದ ಗಲಾಟೆಯಿಂದಾಗಿ ಅದೆಷ್ಟೋ ಪ್ರಾಜೆಕ್ಟ್‌ಗಳು ಸದ್ಯ ನಿಂತಿವೆ. ಈ ವರ್ಷ ಬಹುತೇಕ ಅಮೆರಿಕನ್ ಕಂಪನಿಗಳು ತಮ್ಮೆಲ್ಲ ವೆಚ್ಚವನ್ನು ನಿಯಂತ್ರಿಸುತ್ತಿವೆ. ನಿಮಗೊಂದಿಷ್ಟು ಲೆಕ್ಕಾಚಾರ ತಿಳಿದಿರಲಿ. ಕರ್ನಾಟಕದ ಶೇ.60ರಷ್ಟು ಆದಾಯ ಬೆಂಗಳೂರು ಮತ್ತು ಸುತ್ತಲಿನ ಪ್ರದೇಶದಿಂದ ಬರುತ್ತದೆ. ಬೆಂಗಳೂರಿನ ಆದಾಯ ಎಂದರೆ ಅಲ್ಲಿ ಐಟಿ-ಬಿಟಿಯದೇ ಸಿಂಹಪಾಲು. ಬೆಂಗಳೂರು ಸುಮಾರು 12 ಲಕ್ಷ ಕೋಟಿ ರುಪಾಯಿಯ ಸಾಫ್ಟ್‌ವೇರ್ ಕೆಲಸವನ್ನು ಮಾಡಿಕೊಡುತ್ತದೆ. ಕಳೆದ ವರ್ಷವಷ್ಟೇ ಬೆಂಗಳೂರಿನ ಸಾಫ್ಟ್‌ವೇರ್ ಉದ್ಯಮ ಶೇ.27ರಷ್ಟು ವೃದ್ಧಿಯಾಗಿದೆ. ಬೆಂಗಳೂರಿನ ಐಟಿ-ಬಿಟಿಯ ಆದಾಯದ ಶೇ. 65ರಷ್ಟು ಭಾಗ ಅಮೆರಿಕನ್ ಕಂಪನಿಗಳಿಂದ ಬರುವುದು. ಹೀಗಾಗಿ ಭಾರತದ ಮಟ್ಟಿಗೆ, ಅದರಲ್ಲಿಯೂ ಕರ್ನಾಟಕ-ಬೆಂಗಳೂರಿನ ಮಟ್ಟಿಗೆ ಅಮೆರಿಕ ಆರ್ಥಿಕತೆ ಬಹಳ ಮಹತ್ವದ್ದು. ಅಮೆರಿಕದ ಡಾಲರ್ ಎದುರು ರುಪಾಯಿ ಕುಸಿದಷ್ಟೂ ಬೆಂಗಳೂರಿನ ಐಟಿ-ಬಿಟಿ ಕಂಪನಿಗಳಿಗೆ ಲಾಭ. ಏಕೆಂದರೆ ಒಂದು ಡಾಲರ್‌ಗೆ ಬರುವ ರುಪಾಯಿ ಹೆಚ್ಚಾಗುತ್ತದೆ. ಅಂತೆಯೇ ಅಮೆರಿಕದ ಆರ್ಥಿಕ ಹಿನ್ನಡೆ ಎಂದರೆ ಅದು ಬೆಂಗಳೂರಿನ ಕಂಪನಿಗಳ ಹಿನ್ನಡೆ. ಇದೆಲ್ಲ ಬಿಸಿ ಬೆಂಗಳೂರಿಗೆ ಮೊದಲು ಮುಟ್ಟುತ್ತದೆ. ಈಗ ಅಮೆರಿಕದ ಭಾರತದ ಅವಲಂಬನೆ ಕೇವಲ ಐಟಿ-ಬಿಟಿ ಮಾತ್ರವಲ್ಲ, ಗುಜರಾತಿನ ವಜ್ರ ಮತ್ತು ಇನ್ನಿತರ ಆಭರಣದ ವ್ಯವಹಾರ (ಶೇ.10), ಔಷಧಿ (ಶೇ.9), ಇಲೆಕ್ಟ್ರಾನಿಕ್ಸ್, ಬಟ್ಟೆ ಇವೆಲ್ಲ ವ್ಯವಹಾರ- ಒಟ್ಟಾಗಿ ಸರಿಸುಮಾರು 77 ಬಿಲಿಯನ್ ಡಾಲರ್ ಎಂದರೆ 6.5 ಲಕ್ಷ ಕೋಟಿ ರುಪಾಯಿ ವ್ಯವಹಾರವನ್ನು ಭಾರತ ಮಾಡುತ್ತದೆ. ಅವುಗಳ ಮೇಲಿನ ಸುಂಕ ಮತ್ತು ಅವುಗಳ ತಗ್ಗಿದ ಬೇಡಿಕೆ ಇವೆಲ್ಲ ಭಾರತದ ಆರ್ಥಿಕತೆಯ ಮೇಲೂ ಹೊಡೆತ ನೀಡಲಿದೆ, ಏಳ್ಗೆಯ ವೇಗ ಕುಗ್ಗಲಿದೆ. ಆ ಕಾರಣಕ್ಕೇ ಭಾರತದ ಷೇರು ಮಾರುಕಟ್ಟೆ ಕೆಲ ದಿನದಿಂದ ಮೇಲೆಕೆಳಗಾಗುತ್ತಿರುವುದು.

'ಕೋಣ ಕೆಳಗಿಳಿದರೆ ಎಮ್ಮೆಗೆ ಬರೆ'- ಇಂದಿನ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಇದೆಲ್ಲ ಸಹಜ. ಹಾಗಾಗಿ ಈ ಅಮೆರಿಕದ, ಟ್ರಂಪ್‌ರ ಸುಂಕದ ಕಟ್ಟೆಯ ಮಾತುಕತೆಗಳು, ಜಗಳಗಳು ಬೇಗ ಮುಗಿದರೆ ಎಲ್ಲರಿಗೂ ಒಳ್ಳೆಯದು. ಕನ್ನಡಿಗರ ಮಟ್ಟಿಗಂತೂ ಈ ಬಿಸಿ ಬೆಂಗಳೂರಿಗೆ ಮುಟ್ಟುವುದರೊಳಗೆ ಶಮನವಾದರೆ ಜನರಿಗೂ ಒಳಿತು, ಸ್ಕೀಮುಗಳಿಗೂ ಒಳಿತು!

ಅಮೆರಿಕ-ಚೀನಾ ಮ್ಯಾಚ್ ಟೈ ಆದ್ರೆ ಭಾರತಕ್ಕೆ ಕಪ್ ಸಿಗುತ್ತಾ?!

ಅಮೆರಿಕವು ಈಗ ಚೀನಾ ವಿರುದ್ಧ ಶೇ.245ರ ತನಕ ಪ್ರತಿಸುಂಕವನ್ನು ಹೇರಿದೆ. ಚೀನಾ ಶೇ.145ರ ಪ್ರತಿಸುಂಕ ವಿಧಿಸಿದೆ. ಇದರರ್ಥ ಉಭಯ ದೇಶಗಳು ಸುದೀರ್ಘ ವಾಣಿಜ್ಯ ಸಂಘರ್ಷಕ್ಕೆ ಸಜ್ಜಾಗಿವೆ. ಇದುವರೆಗೆ ಅಮೆರಿಕದ ಜತೆಗಿದ್ದ ಯುರೋಪ್, ವಾಣಿಜ್ಯ ಸಮರದ ನಂತರ ಕ್ರಮೇಣ ದೂರ ಸರಿಯುತ್ತಿವೆ. ಆಗ್ನೇಯ ಏಷ್ಯಾದ ರಾಷ್ಟ್ರಗಳತ್ತ ಕೂಡ ಚೀನಾ ಮೈತ್ರಿ ಬಯಸುತ್ತಿದೆ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಈಗ ಎರಡು ಸ್ಕೋರ್‌ಗಳು ರೋಚಕ ಘಟ್ಟವನ್ನು ಮುಟ್ಟಿವೆ. ಒಂದು ಐಪಿಎಲ್ ಸ್ಕೋರ್, ಮತ್ತೊಂದು ಚೀನಾ ವಿರುದ್ಧ ಟ್ರಂಪ್ ಬಾರಿಸುತ್ತಿರುವ ಟ್ಯಾಕ್ಸ್ ಸ್ಕೋರ್! ಇತ್ತೀಚಿನ ವರ್ತಮಾನದ ಪ್ರಕಾರ ಟ್ರಂಪ್ ಟ್ಯಾಕ್ಸ್‌ನ ಪರ್ಸಂಟೇಜ್ ಸ್ಕೋರ್ 145ರಿಂದ ನಾಟೌಟ್ 245ಕ್ಕೆ ಏರಿದೆ. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸ್ಕೋರ್ 125ಕ್ಕೆ ನಿಂತ ಹಾಗಿದೆ. ಪಂದ್ಯವನ್ನು ಗೆದ್ದೇ ಗೆಲ್ಲುವ ವಿಶ್ವಾಸದೊಂದಿಗೆ ಟ್ರಂಪ್ ಭರ್ಜರಿ ಬ್ಯಾಟಿಂಗ್ ಮಾಡುತ್ತಿದ್ದರೆ, 'ಇಬ್ಬರೂ ಗೆಲ್ಲಲ್ಲ, ಟೈ ಆಗೋದು ಗ್ಯಾರಂಟಿ' ಅಂತ ಜಿನ್‌ಪಿಂಗ್ ಅಗ್ರೆಸಿವ್ ಆಗಿದ್ದಾರೆ. ಅಮೆರಿಕ-ಚೀನಾ ಮ್ಯಾಚ್ ಟೈ ಆದ್ರೆ ಭಾರತಕ್ಕೆ ಕಪ್ ಸಿಗುತ್ತಾ?

ಈಗ ನೇರ ವಿಷಯಕ್ಕೆ ಬರೋಣ. ಚೀನಾ ವಿರುದ್ಧದ ಟ್ರಂಪ್ ಸುಂಕಸಮರದ ಉದ್ದೇಶವೇನು? ಇದರಿಂದ ಭಾರತಕ್ಕೆ ಲಾಭ ಅಥವಾ ನಷ್ಟ ಆಗುತ್ತಾ? ಕೆಲವು ವರದಿಗಳ ಪ್ರಕಾರ 2028-2030ರ ವೇಳೆಗೆ ಚೀನಾವು ಜಿಡಿಪಿ ಲೆಕ್ಕದಲ್ಲಿ ಅಮೆರಿಕವನ್ನು ಹಿಂದಿಕ್ಕಲಿದೆ. ಉದಾಹರಣೆಗೆ ಮಾರುಕಟ್ಟೆ ಮತ್ತು ಆರ್ಥಿಕತೆಯ ದತ್ತಾಂಶಗಳನ್ನು ಸಂಗ್ರಹಿಸಿ ಒದಗಿಸುವ Statista ಸಂಸ್ಥೆಯ ಪ್ರಕಾರ 2030ಕ್ಕೆ ಅಮೆರಿಕದ ಜಿಡಿಪಿ 33 ಲಕ್ಷ ಕೋಟಿ ಡಾಲರ್‌ನಷ್ಟಿರಲಿದ್ದರೆ, ಚೀನಾದ್ದು 33 ಲಕ್ಷ ಕೋಟಿ ಡಾಲರ್‌ಗೆ ಏರಲಿದೆ. ಇದು ನಿಜವಾದರೆ 2ನೇ ಬಾರಿಗೆ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರಾವಧಿ ಮುಕ್ತಾಯವಾಗುವ ಹೊತ್ತಿಗೆ, ಜಿಡಿಪಿ ಲೆಕ್ಕಾಚಾರದಲ್ಲೂ ಚೀನಾ ಮೊದಲ ಬಾರಿಗೆ ಅಮೆರಿಕವನ್ನು ಹಿಂದಿಕ್ಕಲಿದೆ.

ಜಾಗತಿಕ ಉತ್ಪಾದನೆಯಲ್ಲಿ 2023ರಲ್ಲಿ ಚೀನಾ ಶೇ.29ರಷ್ಟು ಪಾಲನ್ನು ಹೊಂದಿತ್ತು. ಅಮೆರಿಕ ಶೇ.17ರೊಂದಿಗೆ 2ನೇ ಸ್ಥಾನದಲ್ಲಿತ್ತು. ಆ ವರ್ಷ ಚೀನಾದ ಒಟ್ಟು ಆರ್ಥಿಕ ಉತ್ಪನ್ನದಲ್ಲಿ ಉತ್ಪಾದನೆಯ (Manufacturing) ಪಾಲು ಶೇ.29ರಷ್ಟಿತ್ತು. ಆದ್ದರಿಂದ ಚೀನಾವು ಜಗತ್ತಿನ ಕಾರ್ಖಾನೆ ಎಂಬ ಖ್ಯಾತಿಗೆ ಪಾತ್ರವಾಗಿದೆ. ಇಷ್ಟೆಲ್ಲ ಉತ್ಪಾದಿಸಿದ ನಂತರ ಯಾವ ದೇಶಕ್ಕೆ ಅತಿ ಹೆಚ್ಚು ರಫ್ತನ್ನು ಚೀನಾ ಮಾಡುತ್ತದೆ? ನಿಸ್ಸಂದೇಹವಾಗಿ ಅಮೆರಿಕಕ್ಕೆ. 2023ರಲ್ಲಿ 501 ಶತಕೋಟಿ ಡಾಲರ್ ಮೌಲ್ಯದ ರಫ್ತನ್ನು ಅದು ಮಾಡಿತ್ತು. ಚೀನಾದ ಒಟ್ಟು ರಫ್ತಿನಲ್ಲಿ ಸುಮಾರು ಶೇ.15ರಷ್ಟನ್ನು ಅಮೆರಿಕ ಭರಿಸಿತ್ತು.

ಚೀನಾವು ಅಮೆರಿಕಕ್ಕೆ ಸರಕುಗಳನ್ನು ರಫ್ತು ಮಾಡುತ್ತಿದ್ದರೆ ಟ್ರಂಪ್‌ಗೆ ತಲೆನೋವೇಕೆ? ಇದಕ್ಕೆ ಕಾರಣ, ಅಮೆರಿಕದ ವ್ಯಾಪಾರ ಕೊರತೆ ಹೆಚ್ಚುತ್ತದೆ. ಆಗ ವಿತ್ತೀಯ ಕೊರತೆಯೂ ಏರುತ್ತದೆ. ಆದ್ದರಿಂದ ವಿತ್ತೀಯ ಕೊರತೆ ತಗ್ಗಿಸಲು ವ್ಯಾಪಾರ ಕೊರತೆಯನ್ನು ತಗ್ಗಿಸಬೇಕು. ಅಂದರೆ ಚೀನಾದಿಂದ ಅಮೆರಿಕದ ಒಳಕ್ಕೆ ಬರುವ ವಸ್ತುಗಳ ವ್ಯಾಪಾರ ಕಡಿಮೆಯಾಗಬೇಕು. ಅಮೆರಿಕದಲ್ಲೇ ಉತ್ಪಾದನೆ ಹೆಚ್ಚಬೇಕು. ಅದಕ್ಕೇನು ಮಾರ್ಗ? ಆಮದು ಸುಂಕವನ್ನು ಗಣನೀಯವಾಗಿ ಏರಿಸುವುದು. ಅಮೆರಿಕದ ಮಾರುಕಟ್ಟೆಗೆ ಬರುವ ಚೀನಾದ ವಸ್ತುಗಳು ದುಬಾರಿಯಾಗಬೇಕಿದ್ದರೆ, ಅವುಗಳ ಮೇಲಿನ ತೆರಿಗೆಯನ್ನು ಹೆಚ್ಚಿಸದೆ ಬೇರೆ ದಾರಿ ಇಲ್ಲ. ಅದನ್ನೇ ಟ್ರಂಪ್ ಈಗ ಮಾಡುತ್ತಿದ್ದಾರೆ. ಆದರೆ 245 ಪರ್ಸೆಂಟ್ ತನಕ ಪ್ರತಿಸುಂಕ ಹಾಕಿದ್ದೇಕೆ? ಈ ಪರಿಯ 'ಟಾರಿಫ್ ವಾರ್ ಸ್ಫೋಟ'ಕ್ಕೆ ವಾಣಿಜ್ಯಿಕ ಕಾರಣ ಒಂದೇ ಇರಲಾರದು; ಅದಕ್ಕಿಂತಲೂ ವ್ಯಾಪಕವಾದ ಹೊಸ ಶೀತಲ ಸಮರದ ಭಾಗ ಇದಾಗಿರಬಹುದು ಎಂಬ ವಾದವಿದೆ, ಇರಲಿ.

ಹಾಗಾದರೆ ಚೀನಾ ಏನು ಮಾಡಬಹುದು? ಅಮೆರಿಕದ ಬಾಂಡ್‌ಗಳಲ್ಲಿ ಜಪಾನ್ ಬಿಟ್ಟರೆ ಅತಿ ಹೆಚ್ಚು ಹೂಡಿಕೆಯನ್ನು ಚೀನಾ ಮಾಡಿದೆ (760 ಶತಕೋಟಿ ಡಾಲರ್). ಆದ್ದರಿಂದ ಚೀನಾ ಒಂದು ವೇಳೆ ಅಮೆರಿಕದ ಬಾಂಡ್‌ಗಳಲ್ಲಿರುವ ತನ್ನ ಹೂಡಿಕೆಯನ್ನು ಹಿಂತೆಗೆದುಕೊಂಡರೆ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಪತನವಾಗಬಹುದು. ಆದರೆ ಇದರಿಂದ ಸ್ವತಃ ಚೀನಾಕ್ಕೂ ನಷ್ಟವಾಗಲಿದೆ. ಮುಖ್ಯವಾಗಿ ಚೀನಾ ರಫ್ತು ಆಧರಿತ ಇಕಾನಮಿ. ಆದ್ದರಿಂದ ಡಾಲರ್ ಮೌಲ್ಯ ಕುಸಿದರೆ ಕೂಡ ಚೀನಾದ ರಫ್ತುದಾರರಿಗೆ ಆದಾಯ ಖೋತವಾಗಬಹುದು. ಡಾಲರ್ ಮೌಲ್ಯ ಇಳಿಕೆಯಾದರೆ, ಅಮೆರಿಕಕ್ಕೆ ಬಾಂಡ್‌ಗಳ ಅಥವಾ ತನ್ನ ಸಾಲದ ಮೇಲಿನ ಬಡ್ಡಿಯ ಹೊರೆ ಕಡಿಮೆಯಾಗಲಿದೆ. ಆದ್ದರಿಂದ ಅಮೆರಿಕಕ್ಕೆ ಕೊಟ್ಟಿರುವ ಸಾಲವನ್ನೇ ಅಸ್ತ್ರವಾಗಿ ಪ್ರಯೋಗಿಸುವುದು ಚೀನಾಕ್ಕೆ ಸಂಕೀರ್ಣ ಸವಾಲಾಗಲಿದೆ. ಹೀಗಾಗಿ ತನ್ನದೇ ಆಂತರಿಕ ಮಾರುಕಟ್ಟೆ, ಯುರೋಪ್ ಸೇರಿದಂತೆ ಹೊಸ ಮಿತ್ರರ ಜತೆ ಸಂಬಂಧ ವೃದ್ಧಿ, ನಾನಾ ದೇಶಗಳ ಜತೆಗೆ ವ್ಯಾಪಾರ ಒಪ್ಪಂದಗಳಿಗೆ ಅದು ಯತ್ನಿಸುತ್ತಿದೆ.

ಈಗ ಭಾರತ ಯಾವ ರೀತಿ ಜಾಣ್ಮೆಯ ನಡೆಯನ್ನು ಅನುಸರಿಸಬಹುದು? 'ಇಕನಾಮಿಕ್ ಟೈಮ್ಸ್' ವರದಿಯ ಪ್ರಕಾರ ಭಾರತವು ಕನಿಷ್ಠ 10 ಕ್ಷೇತ್ರಗಳಲ್ಲಿ ಹೊಸ ಬಿಸಿನೆಸ್ ಅವಕಾಶಗಳನ್ನು ತನ್ನದಾಗಿಸಬಹುದು. ಅಪಾರೆಲ್ (ಜವಳಿ), ರಾಸಾಯನಿಕ ವಸ್ತುಗಳು, ಔಷಧ, ಪ್ಲಾಸ್ಟಿಕ್, ರಬ್ಬರ್, ಕೃಷಿ ಉತ್ಪನ್ನಗಳು, ಆಟೊಮೊಬೈಲ್ ಬಿಡಿ ಭಾಗಗಳು, ಎಂಜಿನಿಯರಿಂಗ್ ಉತ್ಪನ್ನಗಳು, ಸ್ಮಾರ್ಟ್‌ಫೋನ್ ಮತ್ತಿತರ ರಫ್ತು ವಲಯದಲ್ಲಿ ಭಾರತಕ್ಕೆ ಉಜ್ವಲ ಅವಕಾಶಗಳು ಸಿಗಲಿದೆ. ಜತೆಗೆ ಚೀನಾದಲ್ಲಿರುವ ಅಮೆರಿಕನ್ ಕಂಪನಿಗಳನ್ನೂ ಭಾರತದಲ್ಲಿ ಹೂಡಿಕೆ ಮಾಡುವಂತೆ ಆಕರ್ಷಿಸಬಹುದು.

2014ರಲ್ಲಿ 'ಮೇಕ್ ಇನ್ ಇಂಡಿಯಾ' ಅಭಿಯಾನ ಆರಂಭವಾಯಿತು. ಬಳಿಕ ಉತ್ಪಾದನೆ ಆಧರಿತ ಇನ್ಸೆಂಟಿವ್ ಸ್ಕೀಮ್ ಅಥವಾ ಪಿಎಲ್‌ಐ (Production Linked Incentive) ಜಾರಿಯಾಯಿತು. ಇದರಿಂದಾಗಿ ಫಾಕ್ಸ್‌ಕಾನ್ ಭಾರತದಲ್ಲಿ ಐಫೋನ್‌ಗಳ ಉತ್ಪಾದನೆಯನ್ನು ಹೆಚ್ಚಿಸಿತು. ಶೀಘ್ರದಲ್ಲಿಯೇ ಭಾರತವು ಜಾಗತಿಕ ಮಟ್ಟದಲ್ಲಿಯೇ ಒಟ್ಟು ಐಫೋನ್ ಉತ್ಪಾದನೆಯಲ್ಲಿ ಶೇ. 30ರಷ್ಟನ್ನು ತಯಾರಿಸಲಿದೆ. ಕೆಲವೇ ವರ್ಷಗಳ ಹಿಂದೆ ಈ ಸಾಧನೆಯನ್ನು ಊಹಿಸಲೂ ಸಾಧ್ಯವಿರಲಿಲ್ಲ. ಆದರೆ ಕ್ರಮಿಸಬೇಕಿರುವ ಹಾದಿ ಸುದೀರ್ಘವಾಗಿದೆ. 2023ರಲ್ಲಿ ಜಾಗತಿಕ ಉತ್ಪಾದನೆಯಲ್ಲಿ ಚೀನಾ (ಶೇ.29), ಅಮೆರಿಕ (ಶೇ.17), ಜಪಾನ್ (ಶೇ.5), ಜರ್ಮನಿ (ಶೇ.5), ದಕ್ಷಿಣ ಕೊರಿಯಾ (ಶೇ.2.8), ಭಾರತ (ಶೇ.2.8) ಇದ್ದವು. ಈಗ ನಮ್ಮ ಪಾಲು ಎಷ್ಟು ಕಡಿಮೆ ಇದೆ ಎಂಬುದನ್ನು ಊಹಿಸಿಕೊಳ್ಳಿ. ಪಿಎಲ್‌ಐನಂಥ ಯೋಜನೆಯಿದ್ದರೂ, ಎಲ್ಲಿ ಲೋಪಗಳಾಗಿದೆ ಎಂಬುದನ್ನು



ಪತ್ತೆ ಹಚ್ಚಬೇಕಾಗಿದೆ. ಮುಖ್ಯವಾಗಿ 'ಮೇಕ್ ಇನ್ ಇಂಡಿಯಾ' ಎಂದರೆ 'ಅಸೆಂಬಲ್ಡ್ ಇನ್ ಇಂಡಿಯಾ' ಆಗಬಾರದು. ಸ್ವದೇಶಿ ವಸ್ತುಗಳು, ಬಿಡಿಭಾಗಗಳ ಬಳಕೆ ಹೆಚ್ಚಬೇಕಾಗಿದೆ. ಉದ್ಯಮ ಸ್ಥಾಪನೆಗೆ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ಭೂಮಿಯ ವೆಚ್ಚ ಹೆಚ್ಚಳವಾಗಿರುವುದು, ಕೌಶಲದ ಕೊರತೆ, ಕೆಂಪು ಪಟ್ಟಿಯ ನ್ಯೂನತೆಯನ್ನು ಬಗೆಹರಿಸಬೇಕು. ನ್ಯಾಯಾಂಗವೂ ಸುಧಾರಣೆಯಾಗಬೇಕು. ಉದ್ದಿಮೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ, ಡಿಜಿಟಲ್ ತಂತ್ರಜ್ಞಾನದ ಸೌಲಭ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಗಣನೀಯ ಸುಧಾರಣೆಯಾಗಿದೆ. ಆದರೆ ಮೂಲಭೂತ ವಿಷಯಗಳಲ್ಲಿ ಬದಲಾವಣೆಯ ಅಗತ್ಯವಿದೆ. ಅಮೆರಿಕವಂತೂ ಚೀನಾದ ಎದುರಿನ ಕಾಳಗದ ಭಾಗವಾಗಿ ಭಾರತದ ಜತೆಗಿನ ವ್ಯಾವಹಾರಿಕ ಸಂಬಂಧವನ್ನು ಬಲಪಡಿಸಲು ಮುಂದಾಗಿದೆ. ಪೂರಕವಾಗಿ ಈಗಾಗಲೇ ಭಾರತ ಸ್ಪಂದಿಸುತ್ತಿದೆ. ಭಾರತದಲ್ಲಿರುವ ವಿಶಾಲ ಮಾರುಕಟ್ಟೆಯೇ ಅಮೆರಿಕಕ್ಕೆ ಆಕರ್ಷಣೆ.

ಭಾರತದ ಮುಂದೆ 2 ಪ್ರಮುಖ ಆಯ್ಕೆಗಳಿವೆ. ಅಮೆರಿಕಕ್ಕೆ ರಫ್ತನ್ನು ಹೆಚ್ಚಿಸುವುದು, ಎರಡನೆಯದ್ದು ಅಮೆರಿಕದಿಂದ ರಿಯಾಯಿತಿ ದರದಲ್ಲಿ ಆಮದು ಮಾಡಿಕೊಳ್ಳುವುದು. ಉದಾಹರಣೆಗೆ ಅಮೆರಿಕನ್ ಕಂಪನಿಗಳನ್ನು ಗುರಿಯಾಗಿಟ್ಟುಕೊಂಡು ಚೀನಾ ಇದೀಗ ನಿರ್ಬಂಧಗಳನ್ನು ಹೇರುತ್ತಿದೆ. ಅಮೆರಿಕದ ಬೋಯಿಂಗ್ ಕಂಪನಿಯ 9,000ಕ್ಕೂ ಹೆಚ್ಚು ಜೆಟ್ ವಿಮಾನಗಳನ್ನು ಮುಂದಿನ 20 ವರ್ಷಗಳಲ್ಲಿ ಖರೀದಿಸಲು ಚೀನಾ ಒಪ್ಪಂದ ಮಾಡಿಕೊಂಡಿತ್ತು. ಇದೇ ಅವಧಿಯಲ್ಲಿ ಭಾರತ 2,400 ವಿಮಾನಗಳನ್ನು ಖರೀದಿಸಬಹುದು. ಆದರೆ ಇದೀಗ ಬೋಯಿಂಗ್‌ನಿಂದ ವಿಮಾನಗಳನ್ನು ಖರೀದಿಸದಂತೆ ಚೀನಾ ಸರಕಾರ ತನ್ನ ಏರ್‌ಲೈನ್ ಸಂಸ್ಥೆಗಳಿಗೆ ನಿರ್ದೇಶಿಸಿದೆ. ವೈಮಾನಿಕ ಕ್ಷೇತ್ರದಲ್ಲೂ ಅಮೆರಿಕದ ಜತೆಗಿನ ವಹಿವಾಟನ್ನು ರದ್ದುಪಡಿಸಲು ಸಿದ್ಧವಿರುವುದಾಗಿ ಚೀನಾ ಸಂದೇಶ ರವಾನಿಸಿದಂತಾಗಿದೆ. ಈ ಅವಕಾಶವನ್ನು ಭಾರತದ ಏರ್‌ಲೈನ್ ಸಂಸ್ಥೆಗಳು ಬಳಸಿಕೊಳ್ಳಬಹುದು. ಕಡಿಮೆ ಬೆಲೆಗೆ ಅತ್ಯುತ್ತಮ ವಿಮಾನಗಳನ್ನು ಖರೀದಿಸಬಹುದು. ದೇಶೀಯ ವೈಮಾನಿಕ ಕ್ಷೇತ್ರದ ಅಭಿವೃದ್ಧಿಗೆ ಇದು ಸಹಕಾರಿಯಾಗಬಹುದು.

ಅಮೆರಿಕವು ಈಗ ಚೀನಾ ವಿರುದ್ಧ ಶೇ.245ರ ತನಕ ಪ್ರತಿಸುಂಕವನ್ನು ಹೇರಿದೆ. ಚೀನಾ ಶೇ.145ರ ಪ್ರತಿಸುಂಕ ವಿಧಿಸಿದೆ. ಇದರರ್ಥ ಉಭಯ ದೇಶಗಳು ಸುದೀರ್ಘ ವಾಣಿಜ್ಯ ಸಂಘರ್ಷಕ್ಕೆ ಸಜ್ಜಾಗಿವೆ. ಇದುವರೆಗೆ ಅಮೆರಿಕದ ಜತೆಗಿದ್ದ ಯುರೋಪ್, ವಾಣಿಜ್ಯ ಸಮರದ ನಂತರ ಕ್ರಮೇಣ ದೂರ ಸರಿಯುತ್ತಿವೆ. ಆಗ್ನೇಯ ಏಷ್ಯಾದ ರಾಷ್ಟ್ರ ಗಳತ್ತ ಕೂಡ ಚೀನಾ ಮೈತ್ರಿ ಬಯಸುತ್ತಿದೆ. ಇಂಥ ಸಂದರ್ಭ ದಲ್ಲಿ ಟ್ರಂಪ್‌ರಿಗೆ ಭಾರತದ ಮೈತ್ರಿ ಮುಖ್ಯವಾಗಲಿದೆ.

ಕೊನೆಯದಾಗಿ, ಬಹಳ ದಿನಗಳ ಬಳಿಕ ಷೇರು ಮಾರುಕಟ್ಟೆಯಲ್ಲಿ (ಏಪ್ರಿಲ್ 17, 2025) ಸೆನ್ಸೆಕ್ಸ್ 1,500 ಅಂಕ ಜಿಗಿದು 78,553ಕ್ಕೆ ತಲುಪಿದೆ. ನಿಫ್ಟಿ 23,851ಕ್ಕೆ ಏರಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮರಳಿದ್ದಾರೆ. ಡಾಲರ್ ಅಬ್ಬರ ಕಡಿಮೆಯಾಗಿದ್ದು, ಸ್ವಲ್ಪ ದುರ್ಬಲವಾಗಿದೆ. ಕಚ್ಚಾತೈಲ ದರ ಸ್ಥಿರವಾಗಿದೆ. ಅಮೆರಿಕದ ಸುಂಕಸಮರವೂ ಏಷ್ಯಾ ಖಂಡದಲ್ಲಿ ಭಾರತದ ಪರವಾಗಿದೆ. ಇದೊಂದು ಉತ್ತಮ ಅವಕಾಶವೆಂಬುದನ್ನು ಸ್ಟಾಕ್ ಮಾರ್ಕೆಟ್ ಈಗಾಗಲೇ ಗ್ರಹಿಸಿದಂತೆ ಕಾಣಿಸುತ್ತಿದೆ.

ಭಟ್ಟರ್ ಸ್ಕಾಚ್

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಮೋದಿ ಪ್ರಧಾನಿಯಾಗಿ ದರ್ಶನ ಕೊಡುವವರೆಗೂ ಚಪ್ಪಲಿಯನ್ನೇ ಹಾಕದ ಅಭಿಮಾನಿಯನ್ನು ಕಂಡು ನಿಮಗೆ ಏನು ಅನಿಸಿತು?
- **ಒಂದು ವೇಳೆ ಆತ, ರಾಹುಲ್ ಗಾಂಧಿ ಪ್ರಧಾನಿಯಾಗಿ ದರ್ಶನ ಕೊಡುವವರೆಗೂ 'ನಾನು ಏನನೂ ಹಾಕುವುದಿಲ್ಲ' ಅಂತ ಪ್ರತಿಜ್ಞೆ ಮಾಡಿದ್ದರೆ ಏನು ಗತಿ?!**

- **ರುದ್ರೇಶ ಹಿತ್ತಲಮನಿ, ಧಾರವಾಡ**
ಭಟ್ರೇ, ಶತಮಾನದ ಯುವಕ-ಯುವತಿ ಪ್ರಶಸ್ತಿಯನ್ನು ಅವರವರೇ ಕೊಟ್ಟುಕೊಂಡರೆ ಯಾರು ಯಾರಿಗೆ ಕೊಡಬಹುದು?
- **ರಾಹುಲ್ ಗಾಂಧಿ ರಮ್ಯಾಗೆ ಕೊಡಬಹುದು!**

- **ರಾಮಪ್ಪ, ಬೆಂಗಳೂರು**
ಭಟ್ರೇ, ಹಾಲಿನ ದರ ಏರಿಸಿ ಆ ಹಣವನ್ನು ರೈತರಿಗೆ ಕೊಡ್ತಾರಂತೆ?
- **ಅದಿರಲಿ, ಬಿಯರ್ ದರ ಏರಿಸಿದ್ದನ್ನು ಯಾರಿಗೆ ಕೊಟ್ಟಿದ್ದಾರಂತೆ?!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಸಂಸಾರವನ್ನು ಸಾಗರಕ್ಕೆ ಹೋಲಿಸುತ್ತಾರೆ, ಏಕೆ?
- **ಸರಿ, ಇನ್ನು ಮುಂದೆ ಶಿವಮೊಗ್ಗಕ್ಕೆ ಹೋಲಿಸೋಣ, ಬಿಡು!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ನೀವೇಕೆ ಯಾವ ಪ್ರತಿಭಟನೆಯಲ್ಲೂ ಭಾಗವಹಿಸುವುದಿಲ್ಲ?
- **ಪ್ರತಿ 'ಭಟ್'ನೆಯಲ್ಲೇ ನಾನಿದ್ದೇನಲ್ಲ?!**

- **ಡಾ. ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ನಿಮ್ಮ ಶಿಷ್ಯರಾಗಿ ಬಿಜೆಪಿಯಲ್ಲಿ ಪ್ರತಾಪ, ಕಾಂಗ್ರೆಸ್ಸಿನಲ್ಲಿ ಪ್ರದೀಪ ಆಯ್ತು. ಜೆಡಿಎಸ್‌ನಲ್ಲಿ 'ಪ್ರ'ಕಾರ ಯಾರು ?
- **ಸದ್ಯದಲ್ಲಿಯೇ 'ಪ್ರ'ತ್ಯಕ್ಷ ಆಗ್ತಾರೆ!**

- **ಎ.ಬಿ.ಉಮರ್ಜಿ, ಮುದ್ದೇಬಿಹಾಳ**
ಭಟ್ರೇ, ಜಾತಿ ಗಣತಿಯಲ್ಲಿ ನಿಮ್ಮನ್ನೇ ಎಣಿಸಿಲ್ಲವಂತೆ?
- **ಮಾಜಿ ಪ್ರಧಾನಿ ಗೌಡರನ್ನೇ ಲೆಕ್ಕಕ್ಕೆ ಹಿಡಿದಿಲ್ಲದಿರುವಾಗ ನಾನ್ಯಾವ ಲೆಕ್ಕ?!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಭಾನುವಾರವೂ 'ಭಟ್ಟರ ಸ್ಕಾಚ್' ಬೇಕು ಅಂತ ಜನ ಕೇಳ್ತಿದ್ದಾರಂತೆ?
- **ಭಾನುವಾರಕ್ಕೂ ಸಾಕಾಗುವಷ್ಟು ಶನಿವಾರವೇ ಹಾಕಬೇಕಪ್ಪ?!**

- **ಸುರೇಶ ವಾಡಿ, ಬೆಳಗಾವಿ**
ಭಟ್ರೇ, ಯತ್ನಾಳ ಅವರನ್ನು ಜನ ಮರೆತುಬಿಟ್ರಾ?
- **ಸುಮ್ಮನೆ ಮಲಗಿದವರನ್ನು ಮಲಗಲು ಬಿಡು, ಎಬ್ಬಿಸಬೇಡ!**

- **ರಾಜು, ಕೊಪ್ಪಲು**
ಭಟ್ರೇ, ಒಂದು ಡ್ರಾಪ್ ಎಣ್ಣೆ ಕುಡಿಸಿ ಬಾಯಿಬಿಡಿಸಬಹುದಾ?
- **ಅದು ಕೂಡ ಹನಿ (ಡ್ರಾಪ್) ಟ್ರ್ಯಾಪ್!**

- **ಸುಮಿತ್ರಾ ನಾರಾಯಣ, ಬೆಂಗಳೂರು**
ಭಟ್ರೇ, ನನ್ನ ವಾರಭವಿಷ್ಯದಲ್ಲಿ 'ಸುಗಮ ಸಂಚಾರ ಯೋಗ' ಎಂದಿದೆ. ನೀವಾದರೂ ಬಿಡಿಸಿ ಹೇಳಬಾರದಾ?
- **ಹಾಗಾದ್ರೆ ಬಿಎಂಟಿಸಿ ಬಸ್ಸಿನಲ್ಲಿ ಹಾಗೂ ಮೆಟ್ರೋದಲ್ಲಿ ಯಾರಿಗೂ ಕಿಂಚಿತ್ತೂ ತಾಕಿಸಿಕೊಳ್ಳದೇ ಪ್ರಯಾಣ ಮಾಡುವ ಭಾಗ್ಯ ಒದಗಿಬಂದಿದೆ!**

ಇವರು ಅತ್ಯುನ್ನತ ಹುದ್ದೆಯನ್ನು ಬೇಡವೆಂದರು!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಇಂದು ನಮ್ಮ ದೇಶದಲ್ಲಿ ನಾನಾ ರೀತಿಯ ಬೆಳವಣಿಗೆಗಳು ಆಗುತ್ತಿವೆ. ಪ್ರಭುತ್ವವು ಪ್ರಜೆಗಳ ಮೇಲಿನ ತನ್ನ ಹಿಡಿತವನ್ನು ಬಲಗೊಳಿಸುತ್ತಿದೆ. ತಾನು ಹೇಳಿದ್ದೇ ನಡೆಯಬೇಕು ಎನ್ನುತ್ತಿರುವ ಪ್ರಭುತ್ವವು, ಅದಕ್ಕಾಗಿ ನಾನಾ ರೀತಿಯ ತಂತ್ರಗಳನ್ನು ಉಪಯೋಗಿಸುತ್ತಿದೆ. ಪ್ರಭುತ್ವದ ವಿರುದ್ಧ ಮಾತನಾಡುವುದೇ ಕಷ್ಟ ಎಂಬ ಸ್ಥಿತಿ ಇಂದು ಇದೆ. ವಿಶೇಷವೆಂದರೆ, ನಮ್ಮ ದೇಶದಲ್ಲಿ ಪ್ರಭುತ್ವದ ವಿರುದ್ಧ ಮಾತನಾಡಿದವರು ಹಿಂದೆಯೂ ಸಾಕಷ್ಟು ಸಂಕಷ್ಟಕ್ಕೆ ಸಿಲುಕಿದ ಹಲವು ಉದಾಹರಣೆಗಳಿವೆ. ಸ್ವತಂತ್ರ ಭಾರತದಲ್ಲಿ, ತಪ್ಪನ್ನು ತಪ್ಪು ಎಂದು ಪ್ರಭುತ್ವಕ್ಕೆ, ಅಧಿಕಾರಸೂತ್ರ ಹಿಡಿದವರಿಗೆ ನೇರವಾಗಿ ಹೇಳಿದವರಲ್ಲಿ ಜಯಪ್ರಕಾಶ್ ನಾರಾಯಣ್ ಒಬ್ಬರು. ''ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು 27 ವರ್ಷಗಳ ನಂತರವೂ, ದೇಶದ ಜನರನ್ನು ಹಸಿವು ಕಾಡುತ್ತಿದೆ, ಏರುತ್ತಿರುವ ಬೆಲೆ, ಭ್ರಷ್ಟಾಚಾರ, ಎಲ್ಲಾ ರೀತಿಯ ಅನ್ಯಾಯಗಳು ಜನರ ಬದುಕನ್ನು ದುರ್ಭರಗೊಳಿಸಿವೆ. ಇದಕ್ಕೆ ಪರಿಹಾರವಾಗಿ ನಮಗೆ ಬೇಕಾಗಿರುವುದು ಸಂಪೂರ್ಣ ಕ್ರಾಂತಿ!''- ಈ ರೀತಿ ಘೋಷಣೆ ಮಾಡಿದವರು ಜಯಪ್ರಕಾಶ್ ನಾರಾಯಣ್. ಜೆಪಿ ಮತ್ತು ಲೋಕನಾಯಕ ಎಂದೇ ಹೆಸರಾಗಿದ್ದ ಅವರು ಸಂಪೂರ್ಣ ಕ್ರಾಂತಿಗೆ ಕರೆಕೊಟ್ಟು, 27 ವರ್ಷಗಳ ಕಾಂಗ್ರೆಸ್ ಆಡಳಿತಕ್ಕೆ (1974ರ ಸಮಯ) ನೇರ ಸವಾಲನ್ನು ಎಸೆದಿದ್ದರು. ಆಗ ಅಧಿಕಾರದಲ್ಲಿದ್ದದ್ದು ಇಂದಿರಾ ಗಾಂಧಿಯವರ ನೇತೃತ್ವದ ಸರಕಾರ.

ಜೆಪಿ ಅವರ ಪರಿಕಲ್ಪನೆಯ ಸಂಪೂರ್ಣ ಕ್ರಾಂತಿಯಲ್ಲಿ 7 ವಿಭಾಗಗಳಿದ್ದವು: ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ತಾತ್ವಿಕ, ಶೈಕ್ಷಣಿಕ ಮತ್ತು ಅಧ್ಯಾತ್ಮ- ಈ ಏಳೂ ವಿಭಾಗಗಳಲ್ಲಿ ವ್ಯಾಪಕ ಬದಲಾವಣೆ ತಂದು, ಸಂಪೂರ್ಣ ಕ್ರಾಂತಿಯನ್ನು ದೇಶದಲ್ಲಿ ಜಾರಿಗೊಳಿಸಬೇಕು ಮತ್ತು ಇವೆಲ್ಲವೂ ಸರ್ವೋದಯದ ಆಶಯಗಳಾಗಿವೆ ಎಂದು ಹೇಳುತ್ತಿದ್ದರು. ಅದಕ್ಕಾಗಿ, ಯಾವ ಪಕ್ಷದಲ್ಲಿದ್ದುಕೊಂಡು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರೋ, ಅದೇ ಪಕ್ಷದ ವಿರುದ್ಧ ಅವರು ಯುದ್ಧ ಸಾರಿದ್ದರು- 1970ರ ದಶಕದಲ್ಲಿ!

ಸ್ವಾತಂತ್ರ್ಯಪೂರ್ವ ಭಾರತದಲ್ಲಿ, ಕಾಂಗ್ರೆಸ್ ಪಕ್ಷ ನಡೆಸುತ್ತಿದ್ದ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಜೆಪಿ, 1942ರಲ್ಲಿ ನಡೆಸಿದ ಸಾಹಸವು ಅಭೂತಪೂರ್ವ. ಆದರೆ ಅದೇಕೋ, ಈಚಿನ ವರ್ಷಗಳಲ್ಲಿ ಸರಿಯಾದ ಪ್ರಚಾರ ಪಡೆದಿಲ್ಲ! ಗಾಂಧೀಜಿ ಕರೆಯಂತೆ 'ಕ್ವಿಟ್ ಇಂಡಿಯಾ' ಚಳವಳಿ ಕಾವು ಪಡೆಯಿತು. ಜೆಪಿಯವರೂ ಹೋರಾಟದಲ್ಲಿ ಭಾಗವಹಿಸಿದ್ದರು. ಜಾರ್ಖಂಡ್‌ನ ಹಜಾರಿಬಾಗ್ ಜೈಲಿನಲ್ಲಿ ಜೆಪಿಯವರನ್ನು ಬಂಧನಕ್ಕೆ ಒಳಪಡಿಸಲಾಗಿತ್ತು. ಆ ಸಮಯದಲ್ಲಿ ಕಾಂಗ್ರೆಸ್‌ನ ಬಹುತೇಕ ನಾಯಕರು ಮತ್ತು ಪ್ರಮುಖ ಕಾರ್ಯಕರ್ತರು ವಿವಿಧ ಜೈಲುಗಳಲ್ಲಿದ್ದರು. ಇದೇ ರೀತಿ ಜೈಲಿನಲ್ಲೇ ಇದ್ದರೆ, ಹೋರಾಟವನ್ನು ಮುಂದುವರಿಸಲು ಆಗುವುದಿಲ್ಲ ಎಂದರಿತ ಜೆಪಿ ತಮ್ಮ ಸ್ನೇಹಿತರ ಜತೆ ಜೈಲಿನಿಂದ ಪರಾರಿಯಾದರು!

ಅದು ದೀಪಾವಳಿಯ ದಿನ. ನವೆಂಬರ್ 1942. ಜೈಲಿನ ಸಿಬ್ಬಂದಿ ಮತ್ತು ಇತರರು ದೀಪಾವಳಿ ಆಚರಿಸುತ್ತಿದ್ದಾಗ, 17 ಅಡಿ ಎತ್ತರದ ಜೈಲುಗೋಡೆಯನ್ನು ಐವರು ಗೆಳೆಯರೊಂದಿಗೆ ಏರಿ, ಹೊರ ಬಂದರು. ಜೆಪಿಯವರ ಜತೆಯಲ್ಲೇ ಯೋಗೇಂದ್ರ ಶುಕ್ಲಾ, ಸೂರಜ್ ನಾರಾಯಣ ಸಿಂಗ್, ಗುಲಾಬ್ ಚಂದ್ ಗುಪ್ತಾ, ಪಂಡಿತ್ ರಮಾನಂದನ್ ಮಿಶ್ರಾ, ಶಾಲಿಗ್ರಾಮ ಸಿಂಗ್ ಮೊದಲಾದವರು ಜೈಲಿನಿಂದ ಹೊರಬಂದು ಭೂಗತ ಕಾರ್ಯಾಚರಣೆಗೆ ಸಿದ್ಧರಾದರು. ಜೈಲಿನಿಂದ ತಪ್ಪಿಸಿಕೊಂಡ ಜೆಪಿಯವರನ್ನು ಹಿಡಿಯಲು ಬ್ರಿಟಿಷರು ನಾನಾ ತಂತ್ರ ಹೂಡಿದರು, ಅವರ ತಲೆಗೆ ಬಹುಮಾನ ಘೋಷಿಸಲಾಯಿತು. ಅವರು ತಪ್ಪಿಸಿಕೊಂಡ ಸುದ್ದಿ ಎಲ್ಲೆಡೆ ಪ್ರಚಾರಕ್ಕೂ ಒಳಗಾಯಿತು. ಈ ಸುದ್ದಿಯೇ ಜನರಲ್ಲಿದ್ದ ಹೋರಾಟದ ಕಿಚ್ಚನ್ನು ಬಡಿದೆಬ್ಬಿಸಿತು. ಕ್ವಿಟ್ ಇಂಡಿಯಾ ಚಳವಳಿಗೆ ಇನ್ನಷ್ಟು ಬಲ ಬಂದಿತು. ಭೂಗತರಾಗಿದ್ದುಕೊಂಡು ಬ್ರಿಟಿಷರ ವಿರುದ್ಧ ಹೋರಾಡಲು ಜೆಪಿಯವರ ಜತೆ, ರಾಮ ಮನೋಹರ ಲೋಹಿಯಾ, ಅರುಣಾ ಅಸಫ್ ಅಲಿ ಮೊದಲಾದವರು ಕೈಜೋಡಿಸಿದರು. ಈ ಹೊತ್ತಿಗಾಗಲೇ ಜೆಪಿ ನುರಿತ ಹೋರಾಟಗಾರರಾಗಿದ್ದರು; 1930ರ ಅಸಹಕಾರ ಚಳವಳಿಯ ಸಮಯದಲ್ಲಿ ಜೆಪಿಯವರನ್ನು ನಾಸಿಕ್ ಜೈಲಿನಲ್ಲಿ ಬಂಧನಕ್ಕೆ ಒಳಪಡಿಸಿದ್ದಾಗ, ರಾಮ ಮನೋಹರ ಲೋಹಿಯಾ, ಮಿನೂ ಮಸಾಣಿ ಮೊದಲಾದವರ ಗೆಳೆತನ ದೊರಕಿತ್ತು. ಬ್ರಿಟಿಷರನ್ನು ದೇಶದಿಂದ ಒದ್ದೋಡಿಸಬೇಕು ಮತ್ತು ನಮ್ಮ ದೇಶದ ಎಲ್ಲಾ ಜನರೂ ಸುಖವಾಗಿ ಬಾಳಬೇಕು ಎಂಬುದು ಜೆಪಿಯವರ ಕನಸು. ಅದಕ್ಕೆಂದೇ ಅವರು ಸರ್ವೋದಯ ಪರಿಕಲ್ಪನೆಯನ್ನು ಪ್ರಚುರಗೊಳಿಸಿದ್ದರು.

ಹಾಗೆ ನೋಡಿದರೆ, ಜೆಪಿ ಈ ರೀತಿ ಭೂಗತ ಕಾರ್ಯಾಚರಣೆ ನಡೆಸುತ್ತಾ, ತಮ್ಮ ಜೀವಕ್ಕೆ ಅಪಾಯ ತಂದೊಡ್ಡುವ ಸಂದರ್ಭಗಳನ್ನು ಎದುರಿಸುತ್ತಾ ಹೋರಾಟ ನಡೆಸಬೇಕಾಗಿರಲಿಲ್ಲ. ಉನ್ನತ ವಿದ್ಯಾಭ್ಯಾಸ ಪಡೆದಿದ್ದ ಅವರು, ಮನಸ್ಸು ಮಾಡಿದ್ದರೆ ಅಂದಿನ ಬ್ರಿಟಿಷ್ ಸರಕಾರದಲ್ಲಿ ಉತ್ತಮ ಉದ್ಯೋಗ ಪಡೆಯಬಹುದಿತ್ತು! 11.10.1902ರಂದು ಬಿಹಾರದ ಸೀತಾಬ್ದಿರ ಎಂಬ ಹಳ್ಳಿಯಲ್ಲಿ ಜನಿಸಿದ್ದ ಜೆಪಿ, ಮಾಧ್ಯಮಿಕ ಶಿಕ್ಷಣವನ್ನು ಪಟನಾದಲ್ಲಿ ಪೂರೈಸಿದರು. ಅವರ ತಂದೆಯು ಬ್ರಿಟಿಷ್ ಸರಕಾರದ ನೀರಾವರಿ ಇಲಾಖೆಯಲ್ಲಿ ಉದ್ಯೋಗ ಮಾಡುತ್ತಿದ್ದರು; ಜೆಪಿಯವರು 16ನೆಯ ವಯಸ್ಸಿನಲ್ಲಿ ಪ್ರಭಾವತಿ ಎಂಬುವವರನ್ನು ಮದುವೆಯಾದರು. ಸತಿ, ಪತಿ ಇಬ್ಬರಲ್ಲೂ ಸ್ವಾತಂತ್ರ್ಯ ಹೋರಾಟದ ಕಿಚ್ಚು! 1919ರಲ್ಲಿ ಗಾಂಧೀಜಿ ಅಸಹಕಾರ ಚಳವಳಿಗೆ ಕರೆಕೊಟ್ಟಾಗ, ಜೆಪಿ ತಮ್ಮ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಇತ್ತು, ಬಿಜಾರ್ ವಿದ್ಯಾಪೀಠದಲ್ಲಿ ಸೇರ್ಪಡೆಗೊಂಡು, ವಿದ್ಯಾಭ್ಯಾಸ ಮುಂದುವರಿಸಿದರು. ನಂತರದ ದಿನಗಳಲ್ಲಿ ಅವರ ಪತ್ನಿ ಪ್ರಭಾವತಿ ಸಬರಮತಿ ಆಶ್ರಮದ ಸದಸ್ಯೆಯಾದರು.

1923ರಲ್ಲಿ ಜೆಪಿ ಅಮೆರಿಕಕ್ಕೆ ತೆರಳಿ, ಬಾರ್ಕಲಿಯಲ್ಲಿ ಉನ್ನತ ವ್ಯಾಸಂಗ ಮುಂದುವರಿಸಿದರು; ದ್ರಾಕ್ಷಿ ತೋಟ, ಗರಾಜುಗಳಲ್ಲಿ ಕೆಲಸ ಮಾಡಿದರು; ಪಾತ್ರೆ ತೊಳೆದಿದ್ದೂ ಉಂಟು. ಈ ನಡುವೆ, ವಿವಿಧ ಕಾಲೇಜುಗಳು ಶುಲ್ಕವನ್ನು ಹೆಚ್ಚಿಸಿದ್ದರಿಂದಾಗಿ, ಅವರು ಕಾಲೇಜುಗಳನ್ನು ಬದಲಿಸಿದರು; ಅಲ್ಲಿದ್ದಾಗ ಅವರು ಸಮಾಜವಾದವನ್ನು ಪ್ರಮುಖವಾಗಿ ಅಧ್ಯಯನ ಮಾಡಿದರು. ಈ ನಡುವೆ, ವಿಸ್ಕಾನ್ಸಿನ್‌ನಲ್ಲಿದ್ದಾಗ, ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಪುಸ್ತಕದ ಸಂಪರ್ಕಕ್ಕೆ ಬಂದರು. ಅದೇ ಸಮಯದಲ್ಲಿ ರಷ್ಯಾದಲ್ಲಿ ರಕ್ತಸಹಿತ ಕ್ರಾಂತಿಯಾದ ವಿಚಾರವು (1917- 1923) ಬಹಳ ಪ್ರಚಾರಕ್ಕೆ ಬಂದಿತ್ತು. ಜನಸಾಮಾನ್ಯರ ಮತ್ತು ಬಡವರ ಸಂಕಷ್ಟಗಳಿಗೆ 'ಮಾರ್ಕ್ಸಿಸಂ'ನಲ್ಲಿ ಉತ್ತರವಿದೆ ಎಂದು ಜೆಪಿ ಗಮನಿಸಿದರು. ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ಎಂಎ ಪದವಿ ಪಡೆದು, 1929ರಲ್ಲಿ ಭಾರತಕ್ಕೆ ವಾಪಸಾದಾಗ ಜೆಪಿ ಮಾರ್ಕ್ಸಿಸ್ಟರಾಗಿದ್ದರು! ಆಗ ಭಾರತದಲ್ಲಿ ಗಾಂಧಿ, ನೆಹರು ಅವರ ಹವಾ; ಬ್ರಿಟಿಷರ ಬಂದೂಕಿನ ವಿರುದ್ಧ ಅಹಿಂಸಾತ್ಮಕ ಹೋರಾಟ ಮುಂಚೂಣಿಯಲ್ಲಿದ್ದ ಕಾಲ. ಜೆಪಿ ಭಾರತಕ್ಕೆ ಬಂದವರೇ, ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿ, ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ತೀವ್ರವಾಗಿ ತೊಡಗಿಕೊಂಡರು.

ಅವರು ಅಮೆರಿಕದಿಂದ ವಾಪಸಾದ ಒಂದೇ ವರ್ಷದಲ್ಲಿ ಗಾಂಧೀಜಿ ಅಸಹಕಾರ ಚಳವಳಿಯನ್ನು (1930) ಘೋಷಿಸಿದರು. ಆ ಹೋರಾಟದಲ್ಲಿ ಪಾಲ್ಗೊಂಡ ಜೆಪಿ ಬಂಧನಕ್ಕೆ ಒಳಗಾದರು. ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ, ಜೆಪಿ ಕಾರ್ಮಿಕರ, ಜನಸಾಮಾನ್ಯರ ಪರವಾಗಿ ಹೋರಾಟವನ್ನು ಮುಂದುವರಿಸಿದರು. ಭಾರತೀಯ ರೈಲ್ವೆಯ ಕಾರ್ಮಿಕ ಸಂಘದ ಅಧ್ಯಕ್ಷರಾಗಿ, ಕಾರ್ಮಿಕರ ಹಿತಾಸಕ್ತಿ ಕಾಯುವಲ್ಲಿ ತೊಡಗಿಸಿಕೊಂಡರು. ಹಿರಿಯ ಕಾಂಗ್ರೆಸ್ ಸದಸ್ಯ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಜೆಪಿ, ಇಂದಿರಾ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರಕಾರದ ವಿರುದ್ಧ ನಡೆಸಿದ ಹೋರಾಟ ಐತಿಹಾಸಿಕ. ದೇಶಕ್ಕೆ ಸ್ವಾತಂತ್ರ್ಯ ದೊರೆತ ಹೊಸದರಲ್ಲಿ, ನೆಹರು ಹೇಳುತ್ತಿದ್ದರು: ''ಎಂಥದೇ ಬಿರುಗಾಳಿ ಬೀಸಲಿ, ನಮ್ಮ ಸ್ವಾತಂತ್ರ್ಯದ ದೊಂದಿಯ ಬೆಳಕು ಆರಿಹೋಗಲು ಎಂದಿಗೂ ಬಿಡುವುದಿಲ್ಲ''. ಆದರೆ, ನೆಹರು ಅವರ ಮಗಳು ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ, 26.6.1975ರಂದು ಸ್ವಾತಂತ್ರ್ಯದ ಬೆಳಕು ಮಸುಕಾಯಿತು, ಆಂತರಿಕ ತುರ್ತುಪರಿಸ್ಥಿತಿಯನ್ನು ಹೇರಲಾಯಿತು, ಪತ್ರಿಕಾ ಸ್ವಾತಂತ್ರ್ಯ ಮತ್ತು ಜನರ ಮೂಲಭೂತ ಹಕ್ಕುಗಳ ದಮನವಾಯಿತು. ಜೆಪಿ ಜನಸಾಮಾನ್ಯರ ಪರವಾಗಿದ್ದರು. ಅದರಿಂದಾಗಿ ಅವರು ತಮ್ಮ ಹಿರಿಯ ಸ್ನೇಹಿತರಾಗಿದ್ದ ನೆಹರು ಮಗಳಾದ ಇಂದಿರಾರ ವೈರವನ್ನು ಕಟ್ಟಿಕೊಂಡಿದ್ದರು.

1970ರ ದಶಕದ ಹೊತ್ತಿಗೆ ನಮ್ಮ ದೇಶದ ಜನಸಾಮಾನ್ಯರ ಪರಿಸ್ಥಿತಿ ಬಿಗಡಾಯಿಸಿತ್ತು. ನಿರುದ್ಯೋಗ, ಹೆಚ್ಚಿನ ಮಟ್ಟದ ಹಣದುಬ್ಬರ, ಅಗತ್ಯವಸ್ತುಗಳ ಕೊರತೆ ಮೊದಲಾದ ಸಂಕಟಗಳು ದೇಶವನ್ನು ಕಾಡುತ್ತಿದ್ದವು. 1974ರಲ್ಲಿ ಬಿಹಾರದ ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರು ಸರಕಾರದ ವಿರುದ್ಧ ಹೋರಾಟ ನಡೆಸಿದರು. ಪ್ರತಿಭಟನೆ ನಡೆಸುತ್ತಿದ್ದ ಜನರ ಮೇಲೆ ಬಿಹಾರ ಪೊಲೀಸರು ಗುಂಡು ಹಾರಿಸಿದಾಗ 8 ಸಾವಾದವು. ಆಗ ಜೆಪಿಯವರಿಗೆ 72 ವರ್ಷ; ಆದರೆ ಜನರ ಮೇಲಾಗುತ್ತಿದ್ದ ದಬ್ಬಾಳಿಕೆಯನ್ನು ನೋಡುತ್ತಾ ಕೂರುವವರಾಗಿರಲಿಲ್ಲ ಜೆಪಿ.

ಪಟನಾದಲ್ಲಿ ನಡೆದ ಮೌನಪ್ರತಿಭಟನೆಯ ನೇತೃತ್ವವನ್ನು ಜೆಪಿ ವಹಿಸಿದರು. ಪೊಲೀಸರು ಲಾಠಿ ಚಾರ್ಜ್ ನಡೆಸಿದರು. ಹೋರಾಟ ಮುಂದುವರಿಯಿತು. ಪಟನಾದಲ್ಲಿ 5.6.1974ರಂದು ನಡೆದ ಸಾರ್ವಜನಿಕ ಸಭೆಯಲ್ಲಿ 'ಸಂಪೂರ್ಣ ಕ್ರಾಂತಿ'ಯ ಘೋಷಣೆ ಮಾಡಿದರು- ''ಗೆಳೆಯರೆ, ಇದು

ಸಂಪೂರ್ಣ ಕ್ರಾಂತಿಗೆ ಕರೆ. ವಿಧಾನಸಭೆಯನ್ನು ವಿಸರ್ಜಿಸಿದರೆ ಸಾಲದು, ಇದೊಂದು ಹೆಜ್ಜೆ ಮಾತ್ರ. ನಾವು ಇನ್ನೂ ಮುಂದೆ ಹೋಗಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು 27 ವರ್ಷಗಳ ನಂತರವೂ, ದೇಶದ ಜನರನ್ನು ಹಸಿವು ಕಾಡುತ್ತಿದೆ, ಏರುತ್ತಿರುವ ಬೆಲೆ, ಭ್ರಷ್ಟಾಚಾರ, ಎಲ್ಲಾ ರೀತಿಯ ಅನ್ಯಾಯಗಳು ಜನರ ಬದುಕನ್ನು ದುರ್ಭರಗೊಳಿಸಿವೆ. ಇದಕ್ಕೆ ಪರಿಹಾರವಾಗಿ, ನಮಗೆ ಬೇಕಾಗಿರುವುದು ಸಂಪೂರ್ಣ ಕ್ರಾಂತಿ!''. ಬಿಹಾರದ ವಿದ್ಯಾರ್ಥಿಗಳು ನಡೆಸುತ್ತಿದ್ದ ಹೋರಾಟವು ನಿಧಾನವಾಗಿ ಇತರ ಭಾಗಗಳಿಗೆ ಹರಡಿತು. ಗುಜರಾತ್‌ನಲ್ಲೂ ಹೋರಾಟದ ಕಿಚ್ಚು. ತಮಗೆ ಹೋರಾಟದಲ್ಲಿ ಮಾರ್ಗದರ್ಶನ ನೀಡಲು ಅಲ್ಲಿನವರು ಜೆಪಿಯವರನ್ನು ಕೇಳಿಕೊಂಡರು.

ಇದೇ ಸಮಯದಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯವು ಒಂದು ಐತಿಹಾಸಿಕ ತೀರ್ಪನ್ನು ನೀಡಿತು. ತಮ್ಮ ಚುನಾವಣಾ ಪ್ರಚಾರಕ್ಕೆ ಸರಕಾರಿ ಅಧಿಕಾರಿಗಳನ್ನು ಬಳಸಿಕೊಂಡ ಆರೋಪ ಸಾಬೀತಾಗಿದ್ದಕ್ಕಾಗಿ, ಲೋಕಸಭೆಗೆ ಆಗಿದ್ದ ಇಂದಿರಾರ ಆಯ್ಕೆಯನ್ನು ಅನರ್ಹಗೊಳಿಸಿತು. ತಕ್ಷಣ ರಾಜೀನಾಮೆ ನೀಡುವಂತೆ ಜೆಪಿ ಇಂದಿರಾರಿಗೆ ಕರೆ ನೀಡಿದರು. ಇಂದಿರಾ ರಾಜೀನಾಮೆ ನೀಡಲಿಲ್ಲ; ಬದಲಿಗೆ ದೇಶದ ಸ್ವಾತಂತ್ರ್ಯದ ಬೆಳಕನ್ನು ಮಸುಕುಗೊಳಿಸುವ ಕ್ರಮ ಕೈಗೊಂಡರು. ಆಗ ಜಾರಿಗೆ ಬಂದದ್ದೇ ಆಂತರಿಕ ತುರ್ತುಪರಿಸ್ಥಿತಿ. ಯಾವುದೇ ಕಾರಣ ನೀಡದೇ ವಿರೋಧ ಪಕ್ಷದ ನಾಯಕರನ್ನು ಮತ್ತು ಸರಕಾರದ ವಿರುದ್ಧ ಮಾತನಾಡುತ್ತಿದ್ದವರನ್ನು ಸಾಮೂಹಿಕವಾಗಿ ಬಂಧಿಸಲಾಯಿತು. ಕೆಲವು ಪತ್ರಕರ್ತರನ್ನು ಬಂಧಿಸಲಾಯಿತು. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸುದ್ದಿಗಳು ಸೆನ್ಸಾರ್‌ಗೆ ಒಳಪಟ್ಟಿದ್ದವು. 1975ರ ತುರ್ತುಪರಿಸ್ಥಿತಿಯ ಸಮಯದಲ್ಲಿ ಒಂದು ಲಕ್ಷಕ್ಕೂ ಅಧಿಕ ಜನರನ್ನು ಬಂಧಿಸಲಾಗಿದ್ದು, ಅದೊಂದು ದಾಖಲೆ!

ಬಂಧನಕ್ಕೆ ಒಳಗಾದ ಜಯಪ್ರಕಾಶ ನಾರಾಯಣರನ್ನು ಚಂಡಿಗಢ ಜೈಲಿನಲ್ಲಿ ಇರಿಸಲಾಗಿತ್ತು. ಒಮ್ಮೆಗೇ ಅವರ ಆರೋಗ್ಯ ಕ್ಷೀಣಿಸಿತು. ನವೆಂಬರ್ 12ರಂದು ಅವರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿದಾಗ, ಮೂತ್ರಪಿಂಡಗಳು ಸಂಪೂರ್ಣ ವಿಫಲಗೊಂಡದ್ದು ಪತ್ತೆಯಾಯಿತು. ಆ ನಂತರ ಅವರು ಬದುಕಿರುವ ತನಕವೂ, ಡಯಾಲಿಸಿಸ್ ಮಾಡಿಸಿಕೊಳ್ಳಬೇಕಾಯಿತು. ಆದರೆ ಜೆಪಿಯವರ ಹೋರಾಟ ನಿಲ್ಲಲಿಲ್ಲ.

18.1.1977ರಂದು ತುರ್ತುಪರಿಸ್ಥಿತಿಯನ್ನು ಹಿಂಪಡೆದ ಇಂದಿರಾ, ಚುನಾವಣೆ ನಡೆಸಲು ಮುಂದಾದರು. ಬಹುಶಃ ದೇಶದಾದ್ಯಂತ ತಮ್ಮ ವಿರುದ್ಧ ಇದ್ದ ಅಲೆಯನ್ನು ಅವರು ಸರಿಯಾಗಿ ಅಂದಾಜಿಸಲಿಲ್ಲ ಎನಿಸುತ್ತದೆ. ತಮ್ಮ ಅನಾರೋಗ್ಯದ ನಡುವೆಯೂ ಜೆಪಿ ಹೋರಾಟಕ್ಕೆ ಧುಮುಕಿದರು; ಜನತಾ ಪಾರ್ಟಿಯ ಆಶ್ರಯದಲ್ಲಿ ಬಹುಪಾಲು ಎಲ್ಲಾ ವಿರೋಧ ಪಕ್ಷಗಳನ್ನು ಒಗ್ಗೂಡಿಸಿ, ಚುನಾವಣಾ ಪ್ರಚಾರ ನಡೆಸಿದರು. ಇಂದಿರಾರ ನೇತೃತ್ವದ ಕಾಂಗ್ರೆಸ್ ಸೋತಿತು. ಜನತಾಪಕ್ಷವು ಮಿತ್ರ ಪಕ್ಷಗಳ ಸಹಾಯದಿಂದ 330 ಸ್ಥಾನದಲ್ಲಿ ಗೆದ್ದಿತು, ಕೇಂದ್ರದಲ್ಲಿ ಅದೇ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಪಕ್ಷವೊಂದು ಅಧಿಕಾರದ ಚುಕ್ಕಾಣಿ ಹಿಡಿಯಿತು. ಮೊರಾರ್ಜಿ ದೇಸಾಯಿ ಪ್ರಧಾನಿಯಾದರು. ಅಂದು ಮೊದಲ ಕಾಂಗ್ರೆಸ್ಸೇತರ ಪಕ್ಷವಾಗಿ ಅಧಿಕಾರ ಹಿಡಿದ ಜನತಾಪಕ್ಷವು, ಕಾಂಗ್ರೆಸ್ ಇಲ್ಲದೆಯೂ ದೇಶ ಮುನ್ನಡೆಯಬಲ್ಲದು ಎಂದು ತೋರಿಸಿಕೊಟ್ಟು, ದಾಖಲೆ ಬರೆಯಿತು.

ಸಂಪೂರ್ಣ ಕ್ರಾಂತಿಗೆ ಕರೆ ನೀಡಿ, ದೇಶದಲ್ಲಿ ಮೊದಲ ಬಾರಿಗೆ ಜನತಾಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜೆಪಿಯವರನ್ನು ರಾಷ್ಟ್ರಪತಿಯಾಗುವಂತೆ ಕೇಳಿಕೊಳ್ಳಲಾಯಿತು. ಆದರೆ, ಅದೇಕೋ ಜೆಪಿ ಅಂಥ ಪ್ರಮುಖ ಹುದ್ದೆಯನ್ನು ಅಲಂಕರಿಸಲು ಇಷ್ಟಪಡಲಿಲ್ಲ. ಆದ್ದರಿಂದ ನೀಲಂ ಸಂಜೀವ ರೆಡ್ಡಿ ರಾಷ್ಟ್ರಪತಿಯಾಗಿ ಆಯ್ಕೆಗೊಂಡರು. ಜೆಪಿ ರಾಷ್ಟ್ರಪತಿಯಾಗಿದ್ದರೆ, ದೇಶದ ಸ್ಥಿತಿ ಬದಲಾಗುತ್ತಿತ್ತೋ ಇಲ್ಲವೋ ಹೇಳಲು ಅಸಾಧ್ಯ. ಬಹುಶಃ ತಮ್ಮ ಅನಾರೋಗ್ಯದ ಹಿನ್ನೆಲೆಯಲ್ಲಿ ಜೆಪಿ ರಾಷ್ಟ್ರಪತಿಯಾಗಲು ಹಿಂದೆ ಸರಿದರು. ಜೆಪಿ ಅಂಥ ಪ್ರಮುಖ ಹುದ್ದೆಯನ್ನು ತಿರಸ್ಕರಿಸಿದ್ದರು ಎಂಬ ವಿಷಯವೇ ಇಂದು ನಂಬಲು ಕಷ್ಟ ಎನಿಸುವ ವಿದ್ಯಮಾನ.

ಅದಾಗಿ ಎರಡು ವರ್ಷಗಳಲ್ಲಿ, 8.10.1979ರಂದು ಜೆಪಿ ನಿಧನರಾದರು. ನಂತರ, ಜನತಾಪಕ್ಷದಲ್ಲಿನ ಒಗ್ಗಟ್ಟು ಕುಸಿಯಿತು; ಜೆಪಿಯವರಂಥ ಹಿರಿಯರ ಮಾರ್ಗದರ್ಶನದ ಕೊರತೆಯೋ ಏನೋ, ಜನತಾ ಪಕ್ಷದ ನಾಯಕರುಗಳಲ್ಲಿ ಒಳಜಗಳಗಳು ತಾರಕಕ್ಕೇರಿದವು. ಜನತಾ ಪಕ್ಷವು ಪೂರ್ಣಾವಧಿಯ ತನಕ (ಐದು ವರ್ಷ) ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಗಲಿಲ್ಲ. ದೇಶದ ಮೊದಲ ಕಾಂಗ್ರೆಸ್ಸೇತರ ಸರಕಾರವು ಕುಸಿದುಬಿತ್ತು. 1980ರ ಜನವರಿ 14ರಂದು ಕಾಂಗ್ರೆಸ್‌ನ ಇಂದಿರಾ ಪುನಃ ಪ್ರಧಾನಮಂತ್ರಿಯಾದರು.

1977ರಲ್ಲಿ ಜನತಾ ಪಕ್ಷವು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವಲ್ಲಿ ಜೆಪಿಯವರ ಕೊಡುಗೆ ಅಪಾರ. 21 ತಿಂಗಳುಗಳ ಆ ಹೋರಾಟದ ನೇತೃತ್ವ ವಹಿಸಿದ್ದ ಜೆಪಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಮರಳಿ ದೊರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಜತೆಗೆ, ಅವರು ಅಧಿಕಾರಕ್ಕಾಗಿ ಎಂದೂ ಆಸೆಪಡಲಿಲ್ಲ. ಜನಸಾಮಾನ್ಯರ ಹಿತ ಮತ್ತು ಸರ್ವೋದಯಕ್ಕಾಗಿ ಹಪಹಪಿಸಿ, ಹೋರಾಟದ ನೇತೃತ್ವವನ್ನು ವಹಿಸಿ, ಅದಕ್ಕಾಗಿ ತಮ್ಮ ಆರೋಗ್ಯವನ್ನು ಕೆಡಿಸಿಕೊಂಡರು. ಅದೇ ಅವರ ಸಾವಿಗೂ ಕಾರಣವಾಯಿತು.

1999ರಲ್ಲಿ ಅವರಿಗೆ ಮರಣೋತ್ತರ 'ಭಾರತರತ್ನ' ಪ್ರಶಸ್ತಿಯನ್ನು ಘೋಷಿಸಲಾಯಿತು. ಜೆಪಿಯವರ ಸಂಪೂರ್ಣ ಕ್ರಾಂತಿಯ ಪರಿಕಲ್ಪನೆ ಇಂದಿಗೂ ಒಂದು ಆದರ್ಶವಾಗಿಯೇ ಉಳಿದಿದೆ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- **ಚೀನಾ ವಿರುದ್ಧದ ಅಮೆರಿಕದ ಪ್ರತಿಸುಂಕ ಶೇ.245ಕ್ಕೆ ಏರಿಕೆ: ಸುದ್ದಿ**
- ಇದನ್ನು ನೋಡಿ ಚೀನಾ 'ಕಡುಬು' ತಿಂತಾ ಕೂತಿರುತ್ತಾ? ಅದೂ ಏರಿಸುತ್ತೆ. ಒಟ್ನಲ್ಲಿ, 'ನೀನು ನನ್ನ ಒಂದು ಕಣ್ಣು ಕಿತ್ತರೆ, ನಾನು ನಿನ್ನ ಎರಡೂ ಕಣ್ಣು ಕೀಳುವೆ' ಅಂದ್ಹಂಗಾಗುತ್ತೆ ನೋಡಿ!

- **ತಂದೆಯಾದ ಸಂಭ್ರಮದಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ವೇಗದ ಬೌಲರ್ ಜಹೀರ್ ಖಾನ್: ಸುದ್ದಿ**
- ಸದ್ಯ! 'ಇಡೀ ಭಾರತವೇ ಸಂಭ್ರಮಿಸ್ತೋ ಸುದ್ದಿ' ಅಂತ ಯಾವ ವಾಹಿನಿಯವರೂ 'ಬ್ರೇಕಿಂಗ್ ನ್ಯೂಸ್' ಹಾಕಿದ್ದಿನ್ನೂ ಕಣ್ಣಿಗೆ ಬಿದ್ದಿಲ್ಲ!

- **ಮುಂಬೈ ಎಕ್ಸ್‌ಪ್ರೆಸ್ ರೈಲಿನಲ್ಲಿ 'ಎಟಿಎಂ' ಯಂತ್ರದ ಅಳವಡಿಕೆ: ಸುದ್ದಿ**
- ಇದನ್ನು ಕೇಳಿ ರೈಲು ದರೋಡೆಕೋರರು ಅದಿನ್ಯಾವ ಹೊಸ 'ವ್ಯೂಹಾತ್ಮಕ ಕಾರ್ಯತಂತ್ರ' ರೂಪಿಸುತ್ತಾರೋ?!

- **ಭಾರತದ 'ಸಿಲಿಕಾನ್ ಸಿಟಿ' ಬೆಂಗಳೂರಿನಲ್ಲಿ ಭರ್ಜರಿ ಮಳೆ, ರಸ್ತೆಗಳು ಜಲಾವೃತ, ವಾಹನ ಸವಾರರ ಪರದಾಟ: ಸುದ್ದಿ**
- 'ಕಳೆದ ವರ್ಷವೂ ಈ ಸುದ್ದಿಯನ್ನು ಓದಿದ್ವಿ, ಮುಂದಿನ ವರ್ಷವೂ ಓದುತ್ತೀವಿ... ಒಟ್ನಲ್ಲಿ ಈ ಅವಾಂತರ ನಿರಂತರ' ಎಂದು ನಿಟ್ಟುಸಿರುಬಿಟ್ರಂತೆ ಪತ್ರಿಕೆಯ ಓದುಗರು!!

- **ವೈಟ್ ಟಾಪಿಂಗ್ ಕಾಮಗಾರಿ ಅವಾಂತರದಿಂದಾಗಿ ವ್ಯಾಪಾರ-ವಹಿವಾಟು ಕುಸಿತ, ವರ್ತಕರ ಅಸಮಾಧಾನ: ಸುದ್ದಿ**
- ಆ ಕಾಮಗಾರೀನೂ ನಡೀಲಿಲ್ಲ ಅಂದ್ರೆ, ರಸ್ತೆಗಳೇ ಕುಸೀತವಲ್ಲಾ, ಏನು ಮಾಡೋದು? ಅನ್ನೋದು ಮತ್ತೆ ಕೆಲವರ ಜಿಜ್ಞಾಸೆಯಂತೆ!

- **ರಾಜ್ಯದಲ್ಲಿ ಯಾವ ಜನಾಕ್ರೋಶವೂ ಇಲ್ಲ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸಂಬಂಧದ ಆಕ್ರೋಶ ಶಮನ ಮಾಡಲು ಬಿಜೆಪಿ ಜನಾಕ್ರೋಶ ಯಾತ್ರೆ ನಡೆಸುತ್ತಿದೆ: ಸಚಿವ ಪ್ರಿಯಾಂಕ್ ಖರ್ಗೆ ಟೀಕೆ**
- ಈ ಮಾತಿಗೆ ಕೂಲಿಕಾರ ಕಲ್ಲೇಶಿ, ''ಅಯ್ಯೋ ಕೊಂಚ ತಡ್ಕಳಣ್ಣಾ, ನಿನ್ನೆ ತಂಕ 10 ರುಪಾಯಿಗೆ ಸಿಗ್ತಿದ್ದ ಕಾಫಿ ಈಗ 15 ರುಪಾಯಿ ಆಗಿಬುಟ್ಟದೆ, ಚಿಲ್ಲರೆ ಹುಡುಕ್ತಾ ಇವ್ನಿ, ಆಮೇಲೆ ನಿಮ್ ಮಾತಿಗೆ ಉತ್ತರ ಕೊಡ್ತೀನಿ'' ಅಂತ ಟವೆಲ್ ಕೊಡವಿದನಂತೆ!

- **ರಾಜ್ಯ ಸರಕಾರವು ಸಮರ್ಪಕ ಗಣತಿ ಮಾಡಿಸದೆ, ಮನಸ್ಸಿಗೆ ಬಂದಂತೆ ತಪ್ಪು ತಪ್ಪಾಗಿ ಜಾತಿಗಣತಿ ಮಾಡಿಸಿದೆ: ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಕ್ಷೇಪ**
- 'ಕ್ಯಾಲ್ಕ್ಯುಲೇಟರ್ ಕೈಕೊಟ್ಟಿದ್ದೇ ಇದಕ್ಕೆ ಕಾರಣ ಅಂತ ಹೇಳಿಕೆ ವಗಾಯಿಸಿಬಿಡ್ಲಾ ಸಾ..?' ಅಂತ ಕಾಂಗ್ರೆಸ್ ಕಾರ್ಯಕರ್ತನೊಬ್ಬ ಪ್ರಶ್ನಿಸಿ ಅದ್ಯಾರಿಂದಲೋ ಬೈಸಿಕೊಂಡನಂತೆ..!!

- **ಸರಕಾರದಿಂದ ಮುಸ್ಲಿಂ ಓಲೈಕೆ ರಾಜಕಾರಣ: ಜನಾಕ್ರೋಶ ಯಾತ್ರೆ ವೇದಿಕೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ**
- ''ಅಯ್ಯೋ ಬಿಡೀಪ್ಪಾ, ನೀವೊಂದು! ಇವತ್ತಿನ ರಾಜಕಾರಣದಲ್ಲಿ ಝೂಂಡಾ ಊರಿಕೊಂಡು ಇರಬೇಕು ಅಂದ್ರೆ, ಯಾರನ್ನಾದ್ರೂ ಓಲೈಕೆ ಮಾಡ್ಲೇಬೇಕಲ್ಲವೇ?'' ಎಂದು ಹಿರಿಯ ಕಾಂಗ್ರೆಸ್ಸಿಗರೊಬ್ಬರು 'ಕಾಂಗ್ರೆಸ್ ಕಳ್ಳೇಬೀಜ' ತಿನ್ನುತ್ತಾ ಕಾಮೆಂಟು ವಗಾಯಿಸಿದರಂತೆ!!

- **ಕೇಂದ್ರ ಸರಕಾರದ ಕೈಗೊಂಬೆಯಾಗಿರುವ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಮುಚ್ಚಬೇಕು: ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಆಗ್ರಹ**
- 'ಗೊಂಬೆ ಆಡ್ಸೋನು ಮೇಲೆ ಕುಂತೋನು, ನಮ್ಮ ನಿಮಗೆ ಯಾಕೆ ಟೆನ್ಸನ್ನು; ಲಗಾಮು ದೇವರ ಕೈಲಿ ನಾವೇನ್ ಮಾಡಾಣ, ಎಲ್ಲಾರು ಮುಖ ಮುಚ್ಕೊಂಡು ಡ್ರಾಮಾ ಆಡಾಣ....'!!

ತ್ರಿಪುರಾಂತಕ ದೇವರ ಮೂಲ ಅನುಭವ ಮಂಟಪದ ಸುತ್ತಮುತ್ತ...

ಅಭಿಪ್ರಾಯ ಮಂಟಪ
ಜನಮೇಜಯ ಉಮರ್ಜಿ
vveditoped@gmail.com

ಅನುಭವ ಮಂಟಪ: ಸ್ಥಾವರ ಜಂಗಮವೆಂಬೋ ದಿಗಿಲು ಭುಗಿಲು' ಶೀರ್ಷಿಕೆಯ ನನ್ನ ಹಿಂದಿನ ಬರಹದಲ್ಲಿ ಮೂಲ ಅನುಭವ ಮಂಟಪದ ಬಗ್ಗೆ ಜಾಗತಿಕ ಮತ್ತು ಮಾರ್ಕ್ಸ್‌ವಾದಿ ತಂಡ ಹೊಂದಿರುವ ಸಂದಿಗ್ಧಗಳನ್ನು ಬಿಚ್ಚಿಡಲಾಗಿತ್ತು. ಮೂಲ ಅನುಭವ ಮಂಟಪಕ್ಕಾಗಿ ಹೋರಾಟ ಮಾಡದ ಇವರ ಮೋಹ-ಮೈತ್ರಿಗಳನ್ನು ಪ್ರಸ್ತಾಪಿಸಲಾಗಿತ್ತು. ಶಿವಶರಣರ ವಚನೇತರ ಸಾಹಿತ್ಯವನ್ನೂ ನಂಬದೇ, 'ಕೇವಲ ವಚನಗಳು ಮಾತ್ರ ನಮಗೆ ಸಂವಿಧಾನ' ಎಂದು ಹೊರಡುವ ಈ ಆಯಕಟ್ಟಿನ ಗುಂಪು, ಅದೇ ವಚನ ಸಂವಿಧಾನ ರಚನೆಯಾದ ಮೊದಲ ಪಾರ್ಲಿಮೆಂಟನ್ನೇ ಹುಡುಕದಿರುವ ವಿಸ್ಮೃತಿಗೆ ಕಾರಣ ಏನಿರಬಹುದು? ಒಬ್ಬ ಸ್ವಾಮಿಗಳು ಬಸವಣ್ಣನವರನ್ನು ಪ್ರವಾದಿ ಎಂದು ಕರೆದಿದ್ದರೆ, ಇನ್ನೊಬ್ಬ ಸ್ವಾಮಿಗಳು ಲಿಂಗಾಯತವನ್ನು ಮರಳುಗಾಡಿನ ಮತವೊಂದರ ಹತ್ತಿರ ತರಲು ಯತ್ನಿಸುತ್ತಿರುವುದು ಇರಬಹುದೇ? ಇಂಥ ಹಲವು ಸಂಶಯಗಳಿವೆ. ಮೂಲ ಅನುಭವ ಮಂಟಪವೇ ಮೊದಲ ಪವಿತ್ರ ಕ್ಷೇತ್ರವಾಗಿರಬೇಕಾಗಿತ್ತು ಎಂಬುದು ಯಾರಾದರೂ ಒಪ್ಪುವ ಮಾತು. ಅದರ ಅನ್ವೇಷಣೆಯೇ ಆದ್ಯತೆಯಾಗಿರಬೇಕಾಗಿತ್ತು ಹಾಗಾಗಿಲ್ಲ. ಬದಲಾಗಿ ಈ ಜಾಡಿನ ಪುಸ್ತಕಗಳಲ್ಲೆಲ್ಲ ಮೊದಲು ಅದೊಂದು ಸಂಸ್ಥೆ, ಕಟ್ಟಡವಲ್ಲ ಎಂಬುದನ್ನು ಪ್ರಚಾರ ಮಾಡಲಾಗಿದೆ. ಇತ್ತೀಚೆಗೆ ಜಾಗತಿಕ ನಾಯಕರೊಬ್ಬರು ಅನುಭವ ಮಂಟಪ ಕಟ್ಟಡ ಇರಲಿಲ್ಲ ಎಂಬುದನ್ನು ಒಪ್ಪಿಕೊಂಡೂ ಇದ್ದಾರೆ.

ಇವರು ಅನುಭವ ಮಂಟಪವನ್ನು ಸಮರ್ಥಿಸಲು ಬಳಸಿಕೊಂಡ ಉಲ್ಲೇಖಗಳು ಆಸಕ್ತಿಕರವಾಗಿವೆ ಅದಕ್ಕೊಂದು ಧನ್ಯವಾದ ಹೇಳಬೇಕು. ಆದರೆ ಅದನ್ನು ಪೂರ್ಣರೂಪದಲ್ಲಿ ಹೇಳದೇ, ಬೇಕಾದದ್ದನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಈ ಉಲ್ಲೇಖಗಳು ಇನ್ನೂ ಅಧ್ಯಯನಕ್ಕೆ ಹಚ್ಚುತ್ತವೆ. ಅವುಗಳನ್ನು ಓದುಗರ ಮುಂದೆ ತೆರೆದಿಡುವ ಪ್ರಯತ್ನ ಇಲ್ಲಿದೆ. ಮೊದಲನೆಯದು ಅನುಭವಮಂಟಪದ ಇರುವನ್ನು ಸ್ಪಷ್ಟಪಡಿಸುವ ತಾಯಿ ನೀಲಮ್ಮನವರ ವಚನ. ಅದು ಅಲ್ಲಿನ ಚರ್ಚೆಯ ವಿಷಯಗಳನ್ನು ಪಟ್ಟಿಮಾಡುತ್ತಾ ಈ ವಚನ, ಸೃಷ್ಟಿಯ ಮೂಲಸತ್ಯ, ಪಿಂಡಾಂಡ, ಬ್ರಹ್ಮಾಂಡ, ಪಂಚತತ್ವ ಮೊದಲಾದವುಗಳನ್ನು ಉಲ್ಲೇಖಿಸುತ್ತಲೇ ಅನುಭವಮಂಟಪದ ಮೂಲಕ 'ಕಲ್ಯಾಣ ಕೈಲಾಸ'ವಾದ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತದೆ.

ಇನ್ನು ಎರಡನೆಯದು ಶೂನ್ಯ ಸಂಪಾದನೆಗಳು. ಇಲ್ಲಿಯವರೆಗೆ ನಾಲ್ಕು ಶೂನ್ಯಸಂಪಾದನೆಗಳು ಪ್ರಕಟವಾಗಿವೆ. ಪ್ರಭುದೇವರು ಶಾಪದಿಂದ ಬಂದರು ಎಂದು ಮೊದಲೆರಡು ಸಂಪಾದನೆಗಳು ಹೇಳಿದರೆ, ಮುಂದಿನ ಎರಡು ಅವರು ಪರಶಿವನ ಕಳೆ ಎಂದು ಹೇಳುತ್ತವೆ. ಗುಮ್ಮಳಾಪುರ ಸಿದ್ಧಲಿಂಗದೇವರ ಮೂರನೆಯ ಸಂಪಾದನೆಯಲ್ಲಿ ''ಶೈವ ಪುರಾತನರ ಚರಿತ್ರೆಗಳಲ್ಲಿ ಶಿವನು ಬಗೆ ಬಗೆಯ ರೂಪದಿಂದ ಬಂದು ಭಕ್ತಜನರನ್ನು ಉದ್ಧರಿಸಿದಂತೆ ಸಾಕಾರ ಶಿವನಾದ ಈ ಪ್ರಭುದೇವರು ಬಗೆಬಗೆಯ ಹಾದಿಯಿಂದ ಭಕ್ತಪ್ರಮಥರನ್ನು ಉದ್ಧರಿಸುತ್ತಾನೆ'' ಎಂದು ಹೇಳಲಾಗಿದೆ (ಡಾ. ಆರ್.ಸಿ. ಹಿರೇಮಠರ ಪ್ರಸ್ತಾವನೆಯಲ್ಲಿ). ನಾಲ್ಕನೆಯ ಶೂನ್ಯ ಸಂಪಾದನೆ ಗೋಳೂರು ಸಿದ್ಧವೀರಣ್ಣೊಡೆಯರದು. ಇಲ್ಲಿಯೂ ನಿಷ್ಕಲ ಪರಶಿವನ ಸ್ಥೂಲ ತತ್ವ ಬಸವೇಶ್ವರ, ನಿಷ್ಕಲ ಪರಶಿವನ ಸೂಕ್ಷ್ಮ ತತ್ವ ಚೆನ್ನ ಬಸವೇಶ್ವರ ಎಂದು ಅಲ್ಲಮ ಪ್ರಭುಗಳ ಯುಗಾವತಾರಗಳನ್ನು ಹೇಳಲಾಗಿದೆ. ಇನ್ನು ಮೂರನೇಯ ಉಲ್ಲೇಖ ಶ್ರೀನಿವಾಸಮೂರ್ತಿಯವರು ವಚನಗಳಿಗೆ ಮತ್ತು ಉಪನಿಷತ್ತುಗಳಿಗೆ ಸಂಬಂಧ ಇಲ್ಲ ಎಂದು 'ವಚನ ಧರ್ಮಸಾರ'ದಲ್ಲಿ ಹೇಳಿದ್ದಾರೆ ಎನ್ನುವ ಮಾತುಗಳು.

ಈ ವಿಷಯವಾಗಿ ಜಾಗತಿಕ ಮತ್ತು ಮಾರ್ಕ್ಸ್‌ವಾದಿ ಚಿಂತಕರಲ್ಲಿ

ದ್ವಂದ್ವಗಳಿವೆ. ಮೊದಲನೆಯ ಉಲ್ಲೇಖದಲ್ಲಿ ಸ್ವತಃ ಬಸವಣ್ಣನವರ ಪತ್ನಿಯೇ ಕಲ್ಯಾಣವನ್ನು ಕೈಲಾಸ ಎಂದು ಕರೆದಿದ್ದಾರೆ. ಇದು ಶಿವನು ಇಂದುಧರನಲ್ಲ, ಕೇವಲ ವೈಚಾರಿಕ, ಕೈಲಾಸದ ಕಲ್ಪನೆಯನ್ನು ಶರಣರು ನಿರಾಕರಿಸಿದ್ದಾರೆ ಎನ್ನುವ ವಾದವನ್ನು ನಿರಾಕರಿಸುತ್ತದೆ, ಈ ವಚನದ ಆಧಾರದಲ್ಲಿ ಪರಶಿವನ ಕೈಲಾಸವನ್ನು, ಸನಾತನವಾದ ಪಿಂಡಾಂಡ-ಬ್ರಹ್ಮಾಂಡ-ಪಂಚತತ್ವಗಳನ್ನು ಒಪ್ಪಬೇಕಾಗುತ್ತದೆ. ಇನ್ನು ಸಾಕ್ಷಿಗಾಗಿ ಶೂನ್ಯ ಸಂಪಾದನೆಗಳನ್ನು ಬಳಸಿಕೊಂಡವರು, ಬಸವೇಶ್ವರರು, ಅಲ್ಲಮ ಪ್ರಭುಗಳು ಮರ್ತ್ಯಲೋಕಕ್ಕೆ ಬಂದ ಕಾರಣಗಳಲ್ಲಿ ಶೂನ್ಯ ಸಂಪಾದನೆಯ ಒಂದನ್ನಾದರೂ ಪೂರ್ತಿ ಒಪ್ಪುತ್ತಾರೆಯೇ? ಉತ್ತರವಿಲ್ಲ.

ಇದೇ ಜಾಡಿನ ಜನ ಹಿಂದೆ ಶೂನ್ಯ ಸಂಪಾದನೆಗಳನ್ನು ಟೀಕಿಸಿಕೊಂಡು ಬಂದಿದ್ದೇ ಇದೆ. ಉದಾಹರಣೆಗೆ ''ಶೂನ್ಯ ಸಂಪಾದನೆಗಳಲ್ಲಿ ಅನುಭವ ಮಂಟಪದ ಪರಿಕಲ್ಪನೆಯನ್ನೇ ಬುಡಮೇಲು ಮಾಡಲಾಗಿದೆ. ಮುಕ್ತ ಚರ್ಚೆಯೇ ಅಲ್ಲಿಯ ಮುಖ್ಯ ಉದ್ದೇಶವಾಗಿದೆ. ಆದರೆ ಶೂನ್ಯ ಸಂಪಾದನೆಗಳಲ್ಲಿ ನಡೆದದ್ದೇನು? ತೋರಿಕೆಗೆ ಚರ್ಚೆ ಎಂದೆನಿಸಿದರೂ, ಆ ಚರ್ಚೆಯು ಸಿದ್ಧಗೊಂಡ ಏಕಸೂತ್ರವನ್ನವಲಂಬಿಸಿದೆ. ಪ್ರಮುಖ ಪ್ರಸಂಗಗಳಲ್ಲಿ ಲಿಂಗದೀಕ್ಷೆ, ಅಧ್ಯಾತ್ಮ ಇವೇ ಮುಖ್ಯವಾಗಿವೆ. ಶೂನ್ಯಸಂಪಾದನೆಗಳ ಎಲ್ಲ ಅಧ್ಯಾಯಗಳಲ್ಲಿಯೂ ಅಲ್ಲಮಪ್ರಭುವೇ ನಿರ್ಣಯ ಕೊಡುತ್ತ ಹೋಗುತ್ತಾನೆ. ಉಳಿದ ಶರಣರ ವಿಚಾರಗಳು ಅಲ್ಲಿ ಗೌಣವಾಗಿವೆ. ಶರಣರ ಬಹುಮುಖಿ ಚಿಂತನೆಗೆ ಶೂನ್ಯಸಂಪಾದನೆ ದೊಡ್ಡಪೆಟ್ಟು ಕೊಟ್ಟಿದೆ. ಅನೇಕ ವಚನಗಳನ್ನು ತಾವೇ ಸೃಷ್ಟಿಸಿ ಅವುಗಳನ್ನು ಅಲ್ಲಮಪ್ರಭುವಿನ ಮೂಲಕ ಹೇಳಿಸುತ್ತಾ, ವಚನ ಚಳವಳಿಯ ಒಟ್ಟು ಆಶಯವನ್ನೇ ಶೂನ್ಯ ಸಂಪಾದನಾಕಾರರು ಮುಚ್ಚಿಬಿಟ್ಟಿದ್ದಾರೆ. ಹೀಗಾಗಿ ಅನುಭವ ಮಂಟಪದ ಚರ್ಚೆಗೂ ಶೂನ್ಯಸಂಪಾದನೆಯ ಚರ್ಚೆಗೂ ಸಂಬಂಧವಿಲ್ಲದಂತಾಗಿದೆ'' ('ಶೂನ್ಯ ಸಂಪಾದನೆ ಪ್ರಸ್ತುತ ಸವಾಲುಗಳು' ಪುಸ್ತಕ). ಆದರೆ ಈಗ ಇವರಿಗೆ ಶೂನ್ಯಸಂಪಾದನೆಗಳ ಗುರಾಣಿ ಬೇಕಾಗಿದೆ, ಅಂದರೆ ಇವರಿಗೆ ಇಷ್ಟಲಿಂಗ ದೀಕ್ಷೆ ಮತ್ತು ಅಧ್ಯಾತ್ಮ ಇವುಗಳು ಮುಖ್ಯ ವಿಷಯಗಳೇ ಅಲ್ಲ.

ಮೂರನೆಯ ಗುರಾಣಿ ಶ್ರೀನಿವಾಸಮೂರ್ತಿಯವರು ವಚನಗಳಿಗೆ ಮತ್ತು ಉಪನಿಷತ್ತುಗಳಿಗೆ ಸಂಬಂಧವೇ ಇಲ್ಲ ಎಂದು 'ವಚನ ಧರ್ಮಸಾರ'ದಲ್ಲಿ ಹೇಳಿದ್ದಾರೆ ಎನ್ನುವ ಮಾತುಗಳು. ಅಸಲು ಇಂತಿದೆ: ''ವಚನಸಾಹಿತ್ಯವೇ ತಪೋವನದ ಈ ಉಪನಿಷತ್ಸಾಹಿತ್ಯ, ವಚನಕಾರರೇ ಉಪನಿಷತ್ಕರ್ತೃಗಳಾದ ಮಹರ್ಷಿಗಳು. ಇಲ್ಲಿ 'ಗುಹ್ಯಾತ್ ಗುಹ್ಯತರ'ವಾದ ರಹಸ್ಯಗಳೂ ಮುಚ್ಚು ಮರೆಗಳೂ ಇಲ್ಲ. ವರ್ಣ ವ್ಯತ್ಯಾಸಗಳಿಂದಾಗಲಿ, ಲಿಂಗಭೇದದಿಂದಾಗಲಿ, ಅಧಿಕಾರಿ-ಅನಧಿಕಾರಿ ಎಂಬ ತಾರತಮ್ಯವಿಲ್ಲ. ವೇದಗಳು ಹೆಚ್ಚೇ, ಆಗಮಗಳು ಹೆಚ್ಚೇ ಎಂಬ ತರ್ಕ ವಿತರ್ಕಗಳೂ ಇಲ್ಲ. ವೇದಗಳ ಕಾಲದ ಶಾಂಡಿಲಿ, ಗಾರ್ಗಿ ಮೊದಲಾದವರಂತೆ, ಮುಕ್ತಾಯಕ್ಕ, ಮಹಾದೇವಿಯಕ್ಕ ಮೊದಲಾಗಿ ಹೆಂಗಸರು ಆತ್ಮ ಜಿಜ್ಞಾಸೆ ಮಾಡುವವರಾಗಿ ವಚನಸಾಹಿತ್ಯದಲ್ಲಿ ದೊರೆಯುತ್ತಾರೆ. ವಚನಕಾರರು ತಲೆಯೆತ್ತುವ ಕಾಲಕ್ಕೆ ಉಪನಿಷತ್ತುಗಳು ಹಿನ್ನೆಲೆಯಾಗಿದ್ದವು. ಆದುದರಿಂದ ಪರವಸ್ತು, ಜೀವ, ಸೃಷ್ಟಿ ಮೊದಲಾದ ವಿಚಾರಗಳೆಲ್ಲ ಚರ್ಚೆಯಾಗಿ ಹೊಸಬೆಳಕು ಹರಡಿ, ಎಲ್ಲವೂ ಕಾಣುವಂತಿದ್ದವು. ಇವುಗಳನ್ನು ಕೆಲವರು ಬಳಸಿಕೊಂಡಿರಬಹುದು. ಆದರೆ ವಚನಕಾರರು ಸ್ವತಂತ್ರವಾಗಿ ಸತ್ಯಶೋಧನೆಗೆ ಪ್ರಯತ್ನ ಪಟ್ಟವರಾದ್ದರಿಂದ, ಅವರ ಅನುಭವ ವಚನಗಳು ಉಪನಿಷತ್ತಿನ ವಚನಗಳನ್ನು ಹೋಲುತ್ತವೆ. ಈ ವಚನಕಾರರಲ್ಲಿ ಎಲ್ಲರೂ ಒಂದೇ ಪಂಥವನ್ನು ಹಿಡಿದವರಲ್ಲ, ಒಂದೇ ಮಟ್ಟಕ್ಕೆ ಏರಿದವರೂ ಅಲ್ಲ. ಆದುದರಿಂದ ಉಪನಿಷತ್ತುಗಳ ಆಧಾರದಿಂದ ಹೇಗೆ ವಿವಿಧ ಸಿದ್ಧಾಂತಗಳನ್ನು ಕಲ್ಪಿಸಿಕೊಳ್ಳಬಹುದಾಗಿದೆಯೋ ಹಾಗೆಯೇ ಮೊದಲಿನ ವಚನಸಾಹಿತ್ಯದಿಂದಲೂ ವಿವಿಧ ಸಿದ್ಧಾಂತವನ್ನು ಕಲ್ಪಿಸಿಕೊಳ್ಳಬಹುದಾಗಿದೆ'' ('ವಚನ ಧರ್ಮಸಾರ'. ಅಧ್ಯಾಯ: ವಚನ ಧರ್ಮದ ಉದಯ). ಆದರೆ ಇರುವುದನ್ನು ಬಿಟ್ಟು ಬೇಕಾದ್ದನ್ನು ಮಾತ್ರ ಹೇಳಲಾಗುತ್ತಿದೆ.

ಅನುಭವ ಮಂಟಪ ಇದ್ದದ್ದು ಸತ್ಯವೇ ಎರಡು ಮಾತಿಲ್ಲ. ''ಅನುಭವ ಮಂಟಪ ನಾಲ್ಕು ಮಹಾದ್ವಾರ, ಮೂವತ್ತಾರು ಕಂಬಗಳಿಂದ ಕೂಡಿದೆ, ಇದರ ಅಧ್ಯಕ್ಷ ಪೀಠವೇ ಶೂನ್ಯ ಸಿಂಹಾಸನ'' ಎಂದು ಅನುಭವಮಂಟಪ ರಚನೆಯ ಕುರಿತು ಕನ್ನಡ ವಿಶ್ವಕೋಶ ಹೇಳುತ್ತದೆ. ಬಸವಣ್ಣನವರ ಕಾಲಜ್ಞಾನ ವಚನದಲ್ಲಿ, ''ಅಮರಗಣಂಗಳು ಸಹಿತ ಆನಂದ ಸಂವತ್ಸರದ ಕಾರ್ತಿಕ ಮಾಸದ ದಶಮಿ ಸೋಮವಾರ ಶ್ರವಣಾ ನಕ್ಷತ್ರ ಬಂದು, ಅಹೋರಾತ್ರಿಯಲ್ಲಿ ಕಲ್ಯಾಣದ ತ್ರಿಪುರಾಂತಕ ದೇವರ 'ಅನುಭವ ಮಂಟಪ'ದಲ್ಲಿ ವೀರ ವಸಂತಗೆ ಪಟ್ಟಣವಾದೀತು'' ಎಂದು ಇದೆ. ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಒಂದು ಅದು ಕೇವಲ ಶುಷ್ಕ ಅನುಭವ ಮಂಟಪವಲ್ಲ, ಅದು ತ್ರಿಪುರಾಂತಕ ದೇವರ ಅನುಭವ ಮಂಟಪ. ಎರಡನೆಯದು ಬಸವಣ್ಣನವರು ಸನಾತನ ಪಂಚಾಂಗವನ್ನು ಪ್ರಚಲಿತದಲ್ಲಿಟ್ಟಿದ್ದರು. ಸ್ವತಃ ಬಸವಣ್ಣನವರೇ ಸಂವತ್ಸರ, ಮಾಸ, ತಿಥಿ, ವಾರ, ನಕ್ಷತ್ರ ಸಹಿತ ಪಂಚಾಂಗವನ್ನು ಈ ವಚನದಲ್ಲಿ ಉಲ್ಲೇಖಿಸಿದ್ದಾರೆ, ಇಲ್ಲವಾದರೆ ಬೇರೆ ರೂಪದಲ್ಲಿ ಹೇಳುತ್ತಿದ್ದರು. ಇನ್ನು ಪ್ರಭುದೇವರ ಕಾಲಜ್ಞಾನ ವಚನದಲ್ಲಿ ಇದೇ ರೀತಿಯ ಸಾಲುಗಳಿವೆ: ''ಶಂಭು ತ್ರಿಪುರಾಂತಕ ದೇವರ ಮುಂದಣ ಅನುಭವಮಂಟಪದಲ್ಲಿ ಕಪಿಲೆ ಬಾಣಸವ ಮಾಡ್ಯಾರು ನಂದಿಕಂಬ ಮುರಿದಾರು'' (ಪುಸ್ತಕ: ಅನುಭವ ಮಂಟಪ- ಚಾರಿತ್ರಿಕ ಹಿನ್ನೆಲೆಗಳು). ತ್ರಿಪುರಾಂತಕ ದೇವರಿದ್ದು, ನಂದಿಯಿದ್ದು ಮತ್ತು ಅನುಭವ ಮಂಟಪವೆಂಬ ಸ್ಥಾವರ ಇತ್ತು ಎಂದು ಈ ವಚನ ಹೇಳುತ್ತದೆ. ಇಲ್ಲಿ ಕಲ್ಯಾಣವನ್ನು ಕೈಲಾಸದಂತೆ ವರ್ಣಿಸಲಾಗಿದ್ದು, ಕಲ್ಯಾಣದಲ್ಲಿರುವ ಅನುಭವ ಮಂಟಪವು ಕಲ್ಯಾಣದಲ್ಲಿದ್ದ ಲಕ್ಷದ ತೊಂಬತ್ತಾರು ಸಾವಿರ ಶಿವಾಲಯಕ್ಕೆ ಸಮವೆಂದು ಹೇಳಿದೆ. ದೇವಾಲಯ ಸಂಸ್ಕೃತಿ ನಿರಾಕರಿಸಿದರು ಎಂದು ಹೇಳಲಾಗುವ ಬಸವಣ್ಣನವರೇ ಶಿವಾಲಯದ ಸಂಖ್ಯೆ ಉಲ್ಲೇಖ ಮಾಡುತ್ತಾರೆ. ಚೆನ್ನ ಬಸವಣ್ಣನವರ ಕಾಲಜ್ಞಾನ ವಚನದಲ್ಲಿಯೂ ಅನುಭವ ಮಂಟಪ ತ್ರಿಪುರಾಂತಕ ದೇವರ ಮುಂದೆ ಇದೆ. ಈಗ ತ್ರಿಪುರಾಂತಕ ದೇವಾಲಯ ಅದರ ಮುಂದಿರುವ ನಂದಿಯನ್ನು ಹುಡುಕಬೇಕಾಗಿದೆ.

ಶಿವಶರಣರ ಬದಲಿಗೆ ಶರಣ, ಶಿವಾನುಭವ ಮಂಟಪದ ಬದಲು ಅನುಭವ ಮಂಟಪ, ಅನುಭವ ಮಂಟಪದ ಸಮರ್ಥನೆಯಲ್ಲಿ ತ್ರಿಪುರಾಂತಕ ದೇವರ ಇಲ್ಲದಿರುವಿಕೆ, ಪೂಜೆ-ಪತ್ರೆ-ಪ್ರಸಾದಗಳ ನಿರಾಕರಣೆ, ಮೂಲ ಅನುಭವ ಮಂಟಪದ ಕಟ್ಟಡದ ಬದಲು ಹೊಸ ಕಾಂಕ್ರೀಟ್ ಕಟ್ಟಡ ಇವೆಲ್ಲಾ ಸನಾತನದ ಕುರುಹುಗಳನ್ನು, ಸನಾತನ ಭಕ್ತಿ ಪರಂಪರೆಯ ಕೊಂಡಿಗಳನ್ನು ವ್ಯವಸ್ಥಿತವಾಗಿ ನಾಶಪಡಿಸಲು ಒಂದು ಗುಂಪು ಮಾಡುತ್ತಿರುವ ಹುನ್ನಾರಗಳು ಎಂಬುದು ಯಾರಿಗಾದರೂ ಗೊತ್ತಾಗುತ್ತದೆ.

ಇದೊಂದು ರೀತಿಯ ಸಾಂಸ್ಕೃತಿಕ ಮಾರ್ಕ್ಸ್‌ವಾದ. 'ಓತಿಕ್ಯಾತಕ್ಕೆ ಬೇಲಿ ಸಾಕ್ಷಿ' ಎಂಬಂತೆ ಇವರ 'ಟೂಲ್-ಕಿಟ್'ಗಳಿಗೆ ಅವರದೇ ಪಟಾಲಂ ಬರೆದ ಸಾಹಿತ್ಯಗಳು, ವಿಡಿಯೋ ಲಿಂಕುಗಳು ಆಧಾರ. ವಚನಾಭಿಮಾನಿಗಳು ಇವುಗಳನ್ನು ಅರಿತುಕೊಂಡಿರುವುದು ಒಳಿತು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 94

ಸಮಾಚಾರ ಸಣ್ಣದಲ್ಲ

ಬ್ರೌನ್ ವಿವಿ ಭಾಷಣ: ರಾಹುಲ್ ಅಮೆರಿಕಕ್ಕೆ

ದೆಹಲಿ: ಲೋಕಸಭೆ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮತ್ತೆ ಅಮೆರಿಕ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಏ.21ರಂದು ಪ್ರವಾಸ ಆರಂಭಿಸಲಿರುವ ರಾಹುಲ್, ಐರ್ಲೆಂಡ್‌ನಲ್ಲಿರುವ ಬ್ರೌನ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡಲಿದ್ದಾರೆ. 2 ದಿನಗಳ ಕಾರ್ಯಕ್ರಮದಲ್ಲಿ ವಿವಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಜತೆ ಸಂವಾದ ಕೂಡಾ ನಡೆಸಲಿದ್ದಾರೆ. ಅದಕ್ಕೂ ಮುನ್ನ ಅನಿವಾಸಿ ಭಾರತೀಯ ಸಮುದಾಯದವರನ್ನು ಸಂಧಿಸಲಿರುವ ಕಾಂಗ್ರೆಸ್ ಮುಖಂಡ, ಸಾಗರೋತ್ತರ ಕಾಂಗ್ರೆಸ್ ಘಟಕದ ಪದಾಧಿಕಾರಿಗಳನ್ನೂ ಭೇಟಿ ಮಾಡಲಿದ್ದಾರೆ ಎಂದು ಪಕ್ಷದ ಮಾಧ್ಯಮ ವಿಭಾಗ ಮುಖ್ಯಸ್ಥ ಪವನ್ ಖೇರಾ ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ.



ನಿತೀಶರೇ ಎನ್‌ಡಿಎ ಸಿಎಂ ಅಭ್ಯರ್ಥಿ: ರಾಯ್

ಪಟನಾ: ಬಿಹಾರ ವಿಧಾನಸಭೆಗೆ ಅಕ್ಟೋಬರ್-ನವೆಂಬರ್‌ನಲ್ಲಿ ಚುನಾವಣೆ ನಡೆಯಲಿದ್ದು, ಎನ್‌ಡಿಎ ಮೈತ್ರಿಕೂಟ ಮರಳಿ ಅಧಿಕಾರಕ್ಕೆ ಬರಲಿದೆ. ಆಗ ನಿತೀಶ್ ಕುಮಾರ್ ಅವರೇ ಮತ್ತೆ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಕೇಂದ್ರ ಸಚಿವ ನಿತ್ಯಾನಂದ ರಾಯ್ ಗುರುವಾರ ಹೇಳಿದ್ದಾರೆ. ಚುನಾವಣೆಗೂ ಮುನ್ನ ಎನ್‌ಡಿಎ ಸಿಎಂ ಅಭ್ಯರ್ಥಿ ಕುರಿತ ಊಹಾಪೋಹಗಳ ಮಧ್ಯೆ ರಾಯ್ ಹೇಳಿಕೆ ಮಹತ್ವ ಪಡೆದಿದೆ. ನಿತೀಶ್ ಅವರನ್ನು ಚುನಾವಣೆಗೆ ಮುನ್ನವೇ ಎನ್‌ಡಿಎ ಸಿಎಂ ಅಭ್ಯರ್ಥಿ ಎಂದು ಘೋಷಿಸಲು ಬಿಜೆಪಿ ವರಿಷ್ಠರು ಹಿಂಜರಿಯುತ್ತಿದ್ದಾರೆ ಎಂಬ ಮಾತುಗಳು ಕೇಳಿಬರುತಿತ್ತು. ಈ ಮಾತುಗಳಿಗೆ ರಾಯ್ ತೆರೆ ಎಳೆಯುವ ಪ್ರಯತ್ನ ಮಾಡಿದ್ದಾರೆ.

3ನೇ ದಿನ ವಾದ್ರಾ ಇ.ಡಿ ವಿಚಾರಣೆ

ದೆಹಲಿ: ಹರಿಯಾಣದ ಗುರುಗ್ರಾಮದಲ್ಲಿ 2008ರಲ್ಲಿ 7.50 ಕೋಟಿ ರು.ಗೆ ಭೂಮಿ ಖರೀದಿಸಿ ನಂತರದ 4 ವರ್ಷದಲ್ಲೇ 58 ಕೋಟಿ ರು.ಗೆ ಮಾರಾಟ ಮಾಡಿದ್ದ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆಯಾಗಿರುವ ಆರೋಪದಡಿ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ವಾದ್ರ ಪತಿ, ಉದ್ಯಮಿ ರಾಬಾರ್ಟ್ ವಾದ್ರಾ ಸತತ 3ನೇ ದಿನವೂ ಜಾರಿ ನಿರ್ದೇಶನಾಲಯದಿಂದ ವಿಚಾರಣೆಗೆ ಒಳಗಾದರು. ವಿಚಾರಣೆ ಬಳಿಕ ಹೊರಬಂದ ವಾದ್ರಾ, ಸುದ್ದಿಗಾರರ ಪ್ರಶ್ನೆಗಳಿಗೆ ಸಿಡಿಮಿಡಿಗೊಂಡರು. 'ಇ.ಡಿ ಅಧಿಕಾರಿಗಳು ಕೇಳಿದ್ದನ್ನೇ ಕೇಳುತ್ತಿದ್ದಾರೆ. ಹೊಸದೇನೂ ಇಲ್ಲ' ಎಂದಷ್ಟೇ ಉತ್ತರಿಸಿ ನಿರ್ಗಮಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕೇರಳದ ತ್ರಿಶೂರ್ ಜಿಲ್ಲೆ ನಿವಾಸಿಯ ಅರ್ಜಿ ವಿಚಾರಣೆಗೆ ಸುಪ್ರೀಂ ಸಮ್ಮತಿ | ಕೇಂದ್ರ-ಕೇರಳ ಸರಕಾರಗಳ ಪ್ರತಿಕ್ರಿಯೆ ಕೇಳಿ ಸಿಜೆಐ ಪೀಠದ ನೋಟಿಸ್ | ಉಳಿದ ಅರ್ಜಿಗಳನ್ನೂ ಸೇರಿಸಿ ವಿಚಾರಣೆ

ಷರಿಯಾಗೆ ಬದಲು ಉತ್ತರಾಧಿಕಾರ ಕಾಯಿದೆಗೆ ಅವಕಾಶ ಕೇಳಿದ ನೌಶಾದ್

ದೆಹಲಿ: ಜಾತ್ಯತೀತ ದೇಶವಾದ ಭಾರತದಲ್ಲಿ ಸದ್ಯ ಬಳಕೆಯಲ್ಲಿರುವ 'ಉತ್ತರಾಧಿಕಾರ ಅಧಿನಿಯಮ' ಕಾಯಿದೆಯನ್ನು ಮುಸ್ಲಿಮರು ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ಷರಿಯಾ ಕಾಯಿದೆಗೆ ಬದಲಾಗಿ ಬಳಸಬಹುದೇ? ಎಂಬ ಪ್ರಶ್ನೆ ಸುಪ್ರೀಂ ಕೋರ್ಟ್ ಮುಂದೆ ಮತ್ತೆ ಬಂದಿದೆ. ಈ ಕುರಿತ ಅರ್ಜಿಯ ವಿಚಾರಣೆ ನಡೆಸಲು ಮುಖ್ಯ ನ್ಯಾಯಮೂರ್ತಿ ನೇತೃತ್ವದ ದ್ವಿಸದಸ್ಯ ಪೀಠ ಗುರುವಾರ ಸಮ್ಮತಿಸಿದೆ.

ಕೇರಳದ ತ್ರಿಶೂರ್‌ನ ಕೆ.ಕೆ.ನೌಶಾದ್ ಎಂಬವರು ಪಿತ್ರಾರ್ಜಿತ ಆಸ್ತಿ ನಿರ್ವಹಣೆ ವಿಚಾರದಲ್ಲಿ ಷರಿಯಾಗೆ ಬದಲಾಗಿ ದೇಶದಲ್ಲಿ ಸದ್ಯ ಬಳಕೆಯಲ್ಲಿರುವ 'ಉತ್ತರಾಧಿಕಾರ ಅಧಿನಿಯಮ-1957' ಕಾಯಿದೆಯನ್ನು ಬಳಸಿಕೊಳ್ಳಲು ಅವಕಾಶ ನೀಡಿ ಎಂದು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ. ಈ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾ.ಸಂಜಯ್ ಕುಮಾರ್ ಅವರ ಪೀಠ ಒಪ್ಪಿಗೆ ಸೂಚಿಸಿದೆ. ಯಾವುದೇ ಮುಸ್ಲಿಂ ವ್ಯಕ್ತಿ ತನ್ನ ಧರ್ಮವನ್ನು ತ್ಯಜಿಸದೇ ಇದ್ದರೂ ಷರಿಯಾ ಕಾನೂನಿಗೆ ಬದಲಾಗಿ ಉತ್ತರಾಧಿಕಾರ ಅಧಿನಿಯಮವನ್ನು ತಮ್ಮ ಕುಟುಂಬದ ಆಸ್ತಿಗಳ ನಿರ್ವಹಣೆ ವಿಚಾರದಲ್ಲಿ ಬಳಸಿಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂಬ ಕೋರಿಕೆ ಒಳಗೊಂಡ ಅರ್ಜಿ ಇದಾಗಿದೆ. ಗುರುವಾರ ಬೆಳಗ್ಗೆ ಅರ್ಜಿಯ ವಿಚಾರಣೆ ಆರಂಭಿಸಿದ ದ್ವಿಸದಸ್ಯ ಪೀಠ, ಈ ಸಂಬಂಧ ಪ್ರತಿಕ್ರಿಯೆ ಕೇಳಿ ಕೇಂದ್ರ ಮತ್ತು ಕೇರಳ ಸರಕಾರಗಳಿಗೆ ನೋಟಿಸ್ ನೀಡಿದೆ. ಇದೇ ವಿಚಾರವಾಗಿ ಸಲ್ಲಿಕೆಯಾಗಿರುವ ಇತರೆ ಅರ್ಜಿಗಳನ್ನೂ ನೌಶಾದ್ ಅವರ ಅರ್ಜಿಯ ಜತೆಗೇ ವಿಚಾರಣೆಗೆ ಒಳಪಡಿಸುವಂತೆಯೂ ಕೋರ್ಟ್ ರಿಜಿಸ್ಟ್ರಾರ್‌ಗೆ ನಿರ್ದೇಶನ ನೀಡಿದೆ.

ತಾರತಮ್ಯವೇಕೆ?: ಸಫಿಯಾ ಪ್ರಶ್ನೆ

ಭಾರತದಲ್ಲಿನ ಮುಸ್ಲಿಮರ ಪಿತ್ರಾರ್ಜಿತ ಆಸ್ತಿ ಹಂಚಿಕೆ ವಿಚಾರ 'ಮುಸ್ಲಿಂ ಪರ್ಸನಲ್ ಲಾ (ಷರಿಯಾ) ಅಪ್ಲಿಕೇಷನ್ ಆಕ್ಟ್-1937' ಅನ್ವಯ ನಿರ್ವಹಣೆಯಾಗುತ್ತದೆ. ಪಿ.ಎಂ.ಸಫಿಯಾ 2024ರಲ್ಲಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಇಸ್ಲಾಮಿಕ್ ಷರಿಯಾ ಕಾನೂನಿನಲ್ಲಿರುವ ಆಸ್ತಿ ಹಂಚಿಕೆ ತಾರತಮ್ಯವನ್ನು ಪ್ರಶ್ನಿಸಿದ್ದಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕುದಾರರಾಗಿರುವ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಲ್ಲಿ ತಾರತಮ್ಯ ಏಕೆ? ಪುತ್ರಿಯರಿಗೆ ಕೊಟ್ಟ ಪಾಲಿಗಿಂತ ದುಪ್ಪಟ್ಟು ಪಾಲನ್ನು ಗಂಡು ಮಕ್ಕಳಿಗೆ ನೀಡಬೇಕೆಂಬ ನಿಯಮ ಸರಿಯೇ? ಎಂದು ಪ್ರಶ್ನೆ ಮಾಡಿದ್ದಾರೆ.

2 ಹಳೆಯ ಅರ್ಜಿಗಳ ವಿಚಾರಣೆ

ಇಸ್ಲಾಂ ಧರ್ಮವನ್ನು ತ್ಯಜಿಸುವವರನ್ನು ಬೆಂಬಲಿಸುವ ಸಲುವಾಗಿ 'ಎಕ್ಸ್ ಮುಸ್ಲಿಂ ಆಫ್ ಕೇರಳ' ಸಂಘಟನೆ 2022ರಲ್ಲಿ ಆರಂಭಗೊಂಡಿದೆ. ಈ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾಗಿರುವ ಅಲಪ್ಪುಳ ನಿವಾಸಿ ಪಿ.ಎಂ.ಸಫಿಯಾ, 'ಮೂಲತಃ ಮುಸ್ಲಿಂ ಧರ್ಮದವಳಾಗಿದ್ದರೂ ಈಗ ನಾಸ್ತಿಕಳಾಗಿದ್ದೇನೆ. ಪೂರ್ವಜರ ಆಸ್ತಿ ವರ್ಗಾವಣೆ ವಿಚಾರದಲ್ಲಿ ಷರಿಯಾಗೆ ಬದಲಾಗಿ ದೇಶದಲ್ಲಿನ ಉತ್ತರಾಧಿಕಾರ ಅಧಿನಿಯಮ-1925 ಕಾಯಿದೆ ಮೊರೆ ಹೋಗಲು ಇಚ್ಛಿಸಿದ್ದೇನೆ. ಯಾರು ಮುಸ್ಲಿಮರಾಗಿದ್ದರೂ 'ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ'ಯ ಷರಿಯತ್ ಕಾನೂನು ಬಳಸಿಕೊಳ್ಳಲು ಇಚ್ಛಿಸುವುದಿಲ್ಲವೋ ಅವರೆಲ್ಲರಿಗೂ ಉತ್ತರಾಧಿಕಾರ ಅಧಿನಿಯಮವನ್ನು ಆಸ್ತಿ ವರ್ಗಾವಣೆ ವಿಚಾರದಲ್ಲಿ ಬಳಸಿಕೊಳ್ಳಲು ಅವಕಾಶ ಮಾಡಿಕೊಡಬೇಕು' ಎಂದು ಸುಪ್ರೀಂ ಕೋರ್ಟ್‌ಗೆ 2024ರ ಏಪ್ರಿಲ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ವಕೀಲ ಪ್ರಶಾಂತ್ ಪದ್ಮನಾಭನ್ ಎಂಬವರ ಮೂಲಕ ಸಫಿಯಾ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ವಿಚಾರಣೆಗೆ ಕಳೆದ ವರ್ಷವೇ ಅಂಗೀಕರಿಸಿದೆ. 'ಕುರಾನ್ ಸುನ್ನತ್ ಸೊಸೈಟಿ' ಇದೇ ಉತ್ತರಾಧಿಕಾರ ಅಧಿನಿಯಮ ನೆರವು ಕೋರಿ 2016ರಲ್ಲಿ ಸಲ್ಲಿಸಿದ್ದ ಅರ್ಜಿಯೂ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿಯಿದೆ. ಈಗ ನೌಶಾದ್ ಅರ್ಜಿಯ ಜತೆಗೇ ಹಳೆಯ ಎರಡೂ ಅರ್ಜಿಗಳನ್ನು ವಿಚಾರಣೆಗೆ ಒಳಪಡಿಸಲು ದ್ವಿಸದಸ್ಯ ಪೀಠ ಸಮ್ಮತಿಸಿದೆ.

ಸಚಿವ ಪಿಯೂಷ್ ಭೇಟಿ ಮಾಡಿದ ಚಾಡ್ ಗಿಬ್ಸ್

ಭಾರತಕ್ಕೆ ಶೀಘ್ರ ಸ್ಟಾರ್‌ಲಿಂಕ್

ದೆಹಲಿ: ವಿಶ್ವದ ಶ್ರೀಮಂತ ಉದ್ಯಮಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮುಖ್ಯ ಸಲಹೆಗಾರ ಎಲಾನ್ ಮಸ್ಕ್ ಒಡೆತನದ 'ಸ್ಟಾರ್‌ಲಿಂಕ್' ಭಾರತದಲ್ಲಿ ಶೀಘ್ರದಲ್ಲೇ 'ಉಪಗ್ರಹ ಆಧಾರಿತ ಬ್ರಾಡ್ ಬ್ಯಾಂಡ್ ಸೇವೆ' ಆರಂಭಿಸುವ ಸಾಧ್ಯತೆ ಇದೆ.

'ಸ್ಟಾರ್‌ಲಿಂಕ್' ಭಾರತ ಪ್ರವೇಶಕ್ಕೆ ಹಲವು ದಿನಗಳಿಂದ ಪ್ರಯತ್ನ ನಡೆದಿದ್ದು, ಸ್ಟಾರ್‌ಲಿಂಕ್ ಉಪಾಧ್ಯಕ್ಷ ಚಾಡ್ ಗಿಬ್ಸ್ ಮತ್ತು ಹಿರಿಯ ನಿರ್ದೇಶಕ ರಯಾನ್ ಗುಡ್‌ನೈಟ್ ಸಹಿತ ಕಂಪನಿಯ ಕೆಲವು ಪ್ರತಿನಿಧಿಗಳು ಬುಧವಾರ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿದ್ದರು. ಭಾರತದಲ್ಲಿ ಸ್ಟಾರ್‌ಲಿಂಕ್ ಸೇವೆ ಆರಂಭ ಮತ್ತು ಭವಿಷ್ಯದ ಹೂಡಿಕೆಗಳ ಕುರಿತು ಚರ್ಚಿಸಿದರು.

ಸ್ಟಾರ್‌ಲಿಂಕ್ ಅಧಿಕಾರಿಗಳ ಭೇಟಿ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಸಚಿವ ಪಿಯೂಷ್ ಗೋಯಲ್, ಸ್ಟಾರ್‌ಲಿಂಕ್ ನಿಯೋಗ ಅತ್ಯಾಧುನಿಕ ತಂತ್ರಜ್ಞಾನ ಹಂಚಿಕೆ, ಸದ್ಯ ಭಾರತದ ಕಂಪನಿಗಳ ಜತೆಗಿನ ಪಾಲುದಾರಿಕೆ ಮತ್ತು ಭವಿಷ್ಯದಲ್ಲಿನ ಹೂಡಿಕೆ ಬಗ್ಗೆ ಚರ್ಚಿಸಿತು ಎಂದು ವಿವರಿಸಿದ್ದಾರೆ. ಪ್ರಸ್ತುತ 125ಕ್ಕೂ ಹೆಚ್ಚು ದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಟಾರ್‌ಲಿಂಕ್ ಕಂಪನಿ ಭಾರತದ ಉಪಗ್ರಹ ಸಂವಹನ ವಲಯವನ್ನು ಪ್ರವೇಶಿಸಲು 2021ರಿಂದಲೇ ಯತ್ನಿಸುತ್ತಿದೆ. ಆದರೆ ಅದಕ್ಕೆ ಅಗತ್ಯವಾದ ಪರವಾನಗಿ ಪಡೆದುಕೊಳ್ಳಲಾಗಿಲ್ಲ. ಭಾರತದಲ್ಲಿ ಉಪಗ್ರಹ ಸೇವೆ ಒದಗಿಸಲು 'ಗ್ಲೋಬಲ್ ಮೊಬೈಲ್ ಪರ್ಸನಲ್ ಕಮ್ಯುನಿಕೇಷನ್ ಬೈ ಸ್ಯಾಟಲೈಟ್'(ಜಿಎಂಪಿಸಿಎಸ್) ಪರವಾನಗಿ ಅಗತ್ಯವಿದೆ.

ಭಾರ್ತಿ ಏರ್‌ಟೆಲ್ ಗ್ರೂಪ್ ಬೆಂಬಲಿತ ಒನ್‌ವೆಬ್ ಮತ್ತು ಜಿಯೋ-ಎಸ್‌ಇಎಸ್ ಜಂಟಿ ಉದ್ಯಮ 'ಜಿಯೋ ಸ್ಯಾಟಲೈಟ್ ಕಮ್ಯುನಿಕೇಷನ್ಸ್', ಸ್ಟಾರ್‌ಲಿಂಕ್ ಮತ್ತು ಅಮೆಜಾನ್ ಪ್ರಾಜೆಕ್ಟ್ ಕೈಪರ್ ಕಂಪನಿಗಳ ಪಾಲುದಾರಿಕೆ ವ್ಯವಹಾರಗಳಿಗೆ ಪರವಾನಗಿ ನೀಡಲಾಗಿದೆ. ಆದರೆ, ಸ್ಟಾರ್‌ಲಿಂಕ್ ನೇರವಾಗಿ ಭಾರತದ ಟೆಲಿಕಾಂ ಸೇವಾ ವಲಯ ಪ್ರವೇಶಕ್ಕೆ ಇನ್ನೂ ಅವಕಾಶವಾಗಿಲ್ಲ.

ರಾಷ್ಟ್ರಪತಿಗೇ ಸುಪ್ರೀಂ ಗಡುವು: ಉಪ ರಾಷ್ಟ್ರಪತಿ ಧನಕರ್ ಆಕ್ಷೇಪ

ದೆಹಲಿ: ವಿಧೇಯಕಗಳ ಕುರಿತು ನಿರ್ಧಾರ ಕೈಗೊಳ್ಳಲು ರಾಷ್ಟ್ರಪತಿಗೆ ಗಡುವು ನಿಗದಿಪಡಿಸಿದ ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಗುರುವಾರ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ನ್ಯಾಯಾಲಯಗಳು ರಾಷ್ಟ್ರಪತಿಗಳಿಗೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಾಜ್ಯಸಭೆಯ ಇಂಟರ್ನ್‌ಗಳನ್ನು ಉದ್ದೇಶಿಸಿ ಮಾತನಾಡಿದ ಸಭಾಪತಿಯೂ ಆಗಿರುವ ಉಪ ರಾಷ್ಟ್ರಪತಿ ಧನಕರ್, ರಾಷ್ಟ್ರಪತಿಗಳಿಗೇ ಕೋರ್ಟ್ ನಿರ್ದೇಶನ ನೀಡುತ್ತಿದೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ? ದೇಶದಲ್ಲಿ ಏನು ನಡೆಯುತ್ತಿದೆ? ಯಾರಾದರೂ ಟೀಕಿಸುತ್ತಾರೆಯೋ ಇಲ್ಲವೋ ಎಂಬ ಪ್ರಶ್ನೆಯಲ್ಲ. ರಾಷ್ಟ್ರಪತಿಗಳಿಗೆ ಗಡುವು ನೀಡಲಾಗಿದೆ ಮತ್ತು ಆ ಗಡುವು ಮೀರಿದರೆ ಅದು ಕಾನೂನಾಗುತ್ತದೆ ಎಂಬ ಆದೇಶ ಎಷ್ಟು ಸರಿ ಎಂದು ಧನಕರ್ ಪ್ರಶ್ನೆ ಮಾಡಿದರು.

ಶಾಸನ ರಚಿಸಿ ಸೂಪರ್ ಪಾರ್ಲಿಮೆಂಟ್ ಆಗಿರುವ, ಕಾರ್ಯಾಂಗದ ಕಾರ್ಯಗಳನ್ನೂ ನಿರ್ವಹಿಸುವ ನ್ಯಾಯಾಧೀಶರು ಇದ್ದಾರೆ ಮತ್ತು ಅವರಿಗೆ ಯಾವುದೇ ಹೊಣೆಗಾರಿಕೆ ಇಲ್ಲ. ಏಕೆಂದರೆ ಈ ನೆಲದ ಕಾನೂನು ಅವರಿಗೆ ಅನ್ವಯಿಸುವುದಿಲ್ಲ ಎಂದು ವಾಗ್ದಾಳಿ ನಡೆಸಿದರು. ಭಾರತದ ರಾಷ್ಟ್ರಪತಿಗಳು ಬಹಳ ಉನ್ನತ ಸ್ಥಾನದಲ್ಲಿದ್ದಾರೆ. ಸಂವಿಧಾನ ಸಂರಕ್ಷಿಸುವುದಾಗಿ, ರಕ್ಷಿಸುವುದಾಗಿ ಮತ್ತು ಸಮರ್ಥಿಸಿಕೊಳ್ಳುವುದಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಆದರೆ ಉಪ ರಾಷ್ಟ್ರಪತಿ, ಕೇಂದ್ರ ಸಚಿವರು, ಸಂಸದರು ಮತ್ತು ನ್ಯಾಯಮೂರ್ತಿಗಳು ಸಂವಿಧಾನವನ್ನು ಪಾಲಿಸುವುದಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಇದರಲ್ಲಿನ ವ್ಯತ್ಯಾಸವನ್ನು ಗಮನಿಸಬೇಕಿದೆ ಎಂದರು. ರಾಜ್ಯಪಾಲರು ಅಥವಾ ರಾಷ್ಟ್ರಪತಿ ವಿಧೇಯಕ ಗಳನ್ನು ಸ್ವೀಕರಿಸಿದ ದಿನದಿಂದ 3 ತಿಂಗಳೊಳಗೆ ಅವುಗಳಿಗೆ ಅಂಕಿತ ಹಾಕಬೇಕು. ಇಲ್ಲವಾದರೆ ಸಹಿ ಹಾಕದೇ ಇರುವುದಕ್ಕೆ ಕಾರಣ ತಿಳಿಸಿ ವಾಪಸ್ ಮಾಡಬೇಕು ಎಂದು ಗಡುವು ವಿಧಿಸಿ ಸುಪ್ರೀಂ ಮಹತ್ವದ ಆದೇಶ ನೀಡಿರುವುದನ್ನು ಉಲ್ಲೇಖಿಸಿ ಧನಕರ್ ಮಾತನಾಡಿದರು.

ನಿಮ್ಮ ಅಧಿಕಾರವೆಷ್ಟು?

ರಾಷ್ಟ್ರಪತಿಗೇ ಕೋರ್ಟ್ ನಿರ್ದೇಶನ ನೀಡುವಂತಹ ಪರಿಸ್ಥಿತಿಯನ್ನು ನಾವು ನೋಡಲು ಸಾಧ್ಯವಿಲ್ಲ. ಯಾವ ಆಧಾರದ ಮೇಲೆ? ಸಂವಿಧಾನದ ಯಾವ ವಿಧಿಯಡಿ ನಿರ್ದೇಶನ ನೀಡಲಾಗಿದೆ. ಸುಪ್ರೀಂಕೋರ್ಟ್‌ಗೆ ಸಂವಿಧಾನದ 142ನೇ ವಿಧಿಯಡಿ ನೀಡಲಾಗಿರುವ ವಿಶೇಷಾಧಿಕಾರವೆಂದರೆ ಅದರ ಪ್ರಯೋಗಕ್ಕೆ ಅಲ್ಲಿ ಐದು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ನ್ಯಾಯಮೂರ್ತಿಗಳು ಇರಬೇಕಾಗುತ್ತದೆ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಒತ್ತಿ ಹೇಳಿದರು.

ಲೈಂಗಿಕ ದೌರ್ಜನ್ಯ ಬಳಿಕ 'ಮಾಲಿವುಡ್'ಗೆ ಡ್ರಗ್ಸ್ ಪೀಡೆ | ನಟಿ ವಿನ್ಸಿ ಆಕ್ಷೇಪ

ಡ್ರಗ್ಸ್ ಸೇವಿಸಿ ಅಸಭ್ಯ ನಡೆ: ನಟ ಶೈನ್ ವಿರುದ್ಧ ದೂರು

ತಿರುವನಂತಪುರ: ನಟಿಯರು, ಸಹ ನಟಿಯರು, ಮಹಿಳಾ ತಂತ್ರಜ್ಞರ ಮೇಲೆ ಹಲವು ನಟರು, ನಿರ್ಮಾಪಕ-ನಿರ್ದೇಶಕರಿಂದ ಲೈಂಗಿಕ ದೌರ್ಜನ್ಯ ಪ್ರಕರಣಗಳ ಸರಮಾಲೆಯೇ ನಡೆದಿರುವುದು ಬಹಿರಂಗಗೊಂಡ ಬಳಿಕ ಕಪ್ಪುಚುಕ್ಕೆಗೆ ಗುರಿಯಾಗಿದ್ದ ಮಲಯಾಳಂ ಚಲನಚಿತ್ರ ರಂಗಕ್ಕೆ ಈಗ 'ಮಾದಕ ದ್ರವ್ಯ' ಸೇವನೆ ಕಳಂಕವೂ ಅಂಟಿಕೊಂಡಿದೆ.

ಮಲಯಾಳಂ ಸಿನಿಮಾ ನಟ ಶೈನ್ ಟಾಮ್ ಚಾಕೊ ಮಾದಕದ್ರವ್ಯ ಸೇವಿಸಿ ತಮ್ಮ ಹಾಗೂ ಇತರೆ ಮಹಿಳಾ ಸಹೋದ್ಯೋಗಿಗಳ ಜತೆಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ನಟಿ ವಿನ್ಸಿ ಅಲೋಶಿಯಸ್ ದೂರಿದ್ದಾರೆ.

'ಸೂತ್ರವಕ್ಯಂ' ಸಿನಿಮಾ ಚಿತ್ರೀಕರಣ ವೇಳೆ ಡ್ರಗ್ಸ್ ಸೇವಿಸಿದ್ದ ನಟ ಶೈನ್ ಅಸಭ್ಯವಾಗಿ ವರ್ತಿಸಿ ತಮಗೆ ಹಾಗೂ ಮಹಿಳಾ ಸಹೋದ್ಯೋಗಿಗಳಿಗೆ ತೊಂದರೆ ನೀಡಿದರು ಎಂದು ನಟಿ ವಿನ್ಸಿ 'ಕೇರಳ ಚಲನಚಿತ್ರ ವಾಣಿಜ್ಯ ಮಂಡಳಿ' ಹಾಗೂ 'ಮಲಯಾಳಂ ಚಲನ ಚಿತ್ರ ಕಲಾವಿದರ ಸಂಘ'(ಎಎಂಎಂಎ-ಅಮ್ಮ)ಕ್ಕೆ ಗೆ ದೂರು ಸಲ್ಲಿಸಿದ್ದಾರೆ. ವಿಚಾರಣೆ ನಡೆಸಿ ಆರೋಪ ದೃಢಪಟ್ಟರೆ ನಟ ಶೈನ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಫಿಲ್ಮ್ ಚೇಂಬರ್ ಪ್ರಧಾನ ಕಾರ್ಯದರ್ಶಿ ಸಜಿ ನಂತ್ಯಾಟ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 'ಅಮ್ಮ' ಸಂಘ ನಟಿ ವಿನ್ಸಿ ಬೆಂಬಲಕ್ಕಿದೆ ಎಂದು ಸಂಚಾಲಕ ಜಯನ್ ಚೆರ್ತಲಾ ಹೇಳಿದ್ದಾರೆ. ಲೈಂಗಿಕ ದೌರ್ಜನ್ಯ ಆರೋಪ 'ಅಮ್ಮ' ಕಾರ್ಯದರ್ಶಿ ಸಿದ್ದಿಕ್ ವಿರುದ್ಧವೇ ಕೇಳಿಬಂದಿದ್ದರಿಂದ ಆಗ ಸಂಘದ ಅಧ್ಯಕ್ಷರಾಗಿದ್ದ ನಟ ಮೋಹನ್‌ಲಾಲ್ ರಾಜೀನಾಮೆ ಸಲ್ಲಿಸಿದರು. ಆಗಿನಿಂದಲೂ 'ಅಮ್ಮ' ತಾತ್ಕಾಲಿಕ ಸಮಿತಿ ನಿರ್ವಹಣೆಯಲ್ಲಿದೆ. ನಟ ಶೈನ್ ಅನುಚಿತ ವರ್ತನೆ ಬಗ್ಗೆ ವಿನ್ಸಿ ಜಾಲತಾಣದಲ್ಲಿ ಬರೆದಿದ್ದರು. ಅಲ್ಲದೇ, ಇತ್ತೀಚೆಗೆ ಮಾದಕ ದ್ರವ್ಯ ವಿರೋಧಿ ಜಾಗೃತಿ ಕಾರ್ಯಕ್ರಮದಲ್ಲಿಯೂ ಮಾತನಾಡಿ, ಮಾದಕ ದ್ರವ್ಯ ಸೇವಿಸುವ ಸಿನಿಮಾ ವ್ಯಕ್ತಿಗಳ ಜತೆ ಕೆಲಸ ಮಾಡುವುದಿಲ್ಲ ಎಂದೂ ಘೋಷಿಸಿದ್ದರು.

ಹೋಟೆಲ್‌ಗೆ ದಾಳಿ: ಓಡಿಹೋದ ನಟ

ಕೊಚ್ಚಿಯ ಕಲೂರಿನ ಲಿಸ್ಸಿ ಮೆಟ್ರೊ ನಿಲ್ದಾಣ ಬಳಿ ಇರುವ ಹೋಟೆಲೊಂದು ಮಾದಕ ದ್ರವ್ಯ ಬಳಕೆದಾರರ ಅಡ್ಡೆ ಎಂಬ ಆರೋಪ ಹೊತ್ತಿದೆ. ಅದರ ಮೇಲೆ ಜಿಲ್ಲಾ ಮಾದಕ ದ್ರವ್ಯ ನಿಗ್ರಹ ವಿಶೇಷ ಕಾರ್ಯ ಪಡೆ ಅಧಿಕಾರಿಗಳ ತಂಡ ಗುರುವಾರ ಬೆಳಗ್ಗೆ ಹಠಾತ್ ದಾಳಿ ನಡೆಸಿದಾಗ, ಅಲ್ಲಿದ್ದ ಹಲವರೊಂದಿಗೆ ನಟ ಶೈನ್ ಚಾಕೊ ಕೂಡಾ ಓಡಿಹೋಗಿರುವುದು ಸಿಸಿಟಿವಿ ಯಲ್ಲಿ ದಾಖಲಾಗಿದೆ. ಆದರೆ, ಸ್ಥಳದಲ್ಲಿ ಮಾದಕದ್ರವ್ಯ ವಶವಾಗದ ಕಾರಣ ಪ್ರಕರಣ ದಾಖಲಿಸಿಲ್ಲ ಎಂದು ಎಸಿಪಿ ಅಬ್ದುಲ್ ಸಲಾಂ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ತೆರೆಮರೆಗೆ ಸರಿಯಲಿರುವ ಫಾಸ್ಟ್‌ಟ್ಯಾಗ್, ಟೋಲ್‌ಬೂತ್

ಮೇ 1ರಿಂದ ಜಿಪಿಎಸ್ ಟೋಲ್

ದೆಹಲಿ: ಮೇ 1ರಿಂದ ದೇಶದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನಗಳ ಸಂಚಾರ ಹೆಚ್ಚು ಸುಗಮವಾಗಲಿದೆ, ಟೋಲ್ ಸಂಗ್ರಹ ಘಟಕಗಳ ಬಳಿ ಕಾಯುತ್ತಾ ನಿಲ್ಲುವುದು ತಪ್ಪಲಿದೆ. ಕಾರಣ, ಫಾಸ್ಟ್‌ಟ್ಯಾಗ್ ಬದಲು 'ಜಿಪಿಎಸ್' ಆಧಾರಿತ ಟೋಲ್ ಸಂಗ್ರಹದ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ.

ಏ.1ರಿಂದಲೇ ಜಾರಿಗೆ ಬರಬೇಕಿದ್ದ 'ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ'(ಜಿಎನ್‌ಎಸ್‌ಎಸ್-ಜಾಗತಿಕ ಸಂಚಾರ ಉಪಗ್ರಹ ವ್ಯವಸ್ಥೆ) ಸ್ವಲ್ಪ ತಡವಾಗಿದೆ. ಇದೇ ಮೇ 1ರಿಂದ ಜಾರಿಗೆ ಬರುತ್ತಿದೆ ಎಂದು ಕೇಂದ್ರ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಮುಂದಿನ 15 ದಿನಗಳಲ್ಲಿ ಹೊಸ ಟೋಲ್ ನೀತಿ ಜಾರಿಗೆ ತರಲಾಗುತ್ತಿದೆ. ಟೋಲ್ ಪ್ಲಾಜಾ ಬಳಿ ವಾಹನಗಳ ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ತಪ್ಪಲಿದೆ. ಕಾರಣ 'ಸ್ಯಾಟಲೈಟ್ ಆಧರಿಸಿದ ಟೋಲ್ ವ್ಯವಸ್ಥೆ' ಆರಂಭವಾಗುತ್ತಿದೆ ಎಂದರು.

ಪರಿಣಾಮಕಾರಿ: ಇದು ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯಾಗಿದೆ. ಹೆದ್ದಾರಿಗಳಲ್ಲಿ ಒಂದು ವಾಹನ ಸಂಚರಿಸಿದ ಅಂತರ ಆಧರಿಸಿ ಅದಕ್ಕೆ ತಕ್ಕಷ್ಟೇ ಪ್ರಮಾಣದ ಹಣವನ್ನು ವಾಹನದ ಮಾಲೀಕರ ಬ್ಯಾಂಕ್ ಖಾತೆಯಿಂದ ನೇರವಾಗಿ ಕಡಿತಗೊಳಿಸಲಾಗುತ್ತದೆ. ಹೊಸ ವ್ಯವಸ್ಥೆ ಹೆಚ್ಚು ಪರಿಣಾಮಕಾರಿಯಾರುತ್ತದೆ ಎಂದು ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಫಾಸ್ಟ್‌ಟ್ಯಾಗ್‌ಗಿಂತ ಜಿಎನ್ಎಸ್‌ಎಸ್ ಭಿನ್ನ

'ಫಾಸ್ಟ್‌ಟ್ಯಾಗ್' ಸ್ವಯಂಚಾಲಿತ ಶುಲ್ಕ ಸಂಗ್ರಹ ವಿಧಾನವೇ ಆಗಿದ್ದರೂ ವಾಹನಗಳು ಟೋಲ್ ಬೂತ್ ಬಳಿ ಕೆಲ ಕ್ಷಣಗಳು, ವಾಹನ ಸಂಖ್ಯೆ ಹೆಚ್ಚಿದ್ದರೆ ಹಲವು ನಿಮಿಷ ಕಾದು ನಿಲ್ಲಬೇಕಾಗುತ್ತದೆ. ತಡೆರಹಿತ ವಾಹನ ಸಂಚಾರ ಸೌಲಭ್ಯ ಇದರಲ್ಲಿಲ್ಲ. ಆದರೆ, ಜಿಎನ್‌ಎಸ್‌ಎಸ್ ವ್ಯವಸ್ಥೆಯು ಜಿಪಿಎಸ್ ಮತ್ತು ಉಪಗ್ರಹ ಸಂವಹನದ ವರ್ಚುವಲ್ ಟೋಲ್ ಬೂತ್ ಮೂಲಕ ವಾಹನ ಸಂಚರಿಸುವ ಮಾರ್ಗ ಮತ್ತು ಸಂಚರಿಸಿದ ದೂರವನ್ನು ಕಂಡುಕೊಂಡು ಶುಲ್ಕ ನಿಗದಿಗೊಳಿಸುತ್ತದೆ. ವಾಹನ ಮಾಲೀಕರ ಬ್ಯಾಂಕ್ ಖಾತೆಯಿಂದ (ಯುಪಿಐ) ಮಾದರಿಯಲ್ಲಿ ಹಣ ವರ್ಗಾಯಿಸಿಕೊಳ್ಳುತ್ತದೆ. ಜಿಎನ್‌ಎಸ್‌ಎಸ್‌ನಲ್ಲಿ ಟೋಲ್ ಬೂತ್‌ಗಳ ಅಗತ್ಯವಿರುವುದಿಲ್ಲ. ಮಾನವ ಹಸ್ತಕ್ಷೇಪವೂ ಇರುವುದಿಲ್ಲ. ಆದರೆ, ವಾಹನಗಳಿಗೆ ಜಿಪಿಎಸ್ ಅಳವಡಿಕೆ ಅಗತ್ಯವಿರುತ್ತದೆ.



ಸಮ್ಮಿಶ್ರ ಸರಕಾರವಿಲ್ಲ: 'ಇಪಿಎಸ್' ಸ್ಪಷ್ಟನುಡಿ

ಚೆನ್ನೈ: 2026ರ ವಿಧಾನಸಭಾ ಚುನಾವಣೆ ನಂತರ ತಮಿಳುನಾಡಿನಲ್ಲಿ ಎನ್‌ಡಿಎ ಸಮ್ಮಿಶ್ರ ಸರಕಾರವಲ್ಲ, ಎಐಎಡಿಎಂಕೆ ಸರಕಾರ ರಚನೆ ಆಗಲಿದೆ ಎಂದು 'ಎಐಎಡಿಎಂಕೆ' ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ(ಇಪಿಎಸ್) ಹೇಳಿದ್ದಾರೆ. ಚೆನ್ನೈನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಪಳನಿಸ್ವಾಮಿ, ಕೇಂದ್ರ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ. 2026ಕ್ಕೆ ಸಮ್ಮಿಶ್ರ ಸರಕಾರ ಎಂದು ಅವರು ಹೇಳಿಲ್ಲ. ನೀವು ತಪ್ಪಾಗಿ ಬಿಂಬಿಸುತ್ತಿದ್ದೀರಿ. ದಯವಿಟ್ಟು ಆ ತಂತ್ರವನ್ನು ನಿಲ್ಲಿಸಿ ಎಂದು ವರದಿಗಾರರಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. 2026ರಲ್ಲಿ ಎಐಎಡಿಎಂಕೆ ನೇತೃತ್ವದ ಸಮ್ಮಿಶ್ರ ಸರ್ಕಾರ ರಚನೆಯಾಗಲಿದೆ ಎಂದು ಏಪ್ರಿಲ್ 11ರಂದು ಚೆನ್ನೈನಲ್ಲಿ ಮೈತ್ರಿ ಘೋಷಣೆಯ ಸಂದರ್ಭ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆಗೆ ವಿರುದ್ಧವಾಗಿ ಇಪಿಎಸ್ ಗುರುವಾರ ಹೇಳಿದ್ದಾರೆ.ರಾಷ್ಟ್ರಮಟ್ಟದಲ್ಲಿ ಎನ್‌ಡಿಎ ಮೈತ್ರಿ ಕೂಟವನ್ನು ಪ್ರಧಾನಿ ನರೇಂದ್ರ ಮೋದಿ ಮುನ್ನಡಿಸಿದರೆ, ತಮಿಳುನಾಡಿನಲ್ಲಿ ಪಳನಿಸ್ವಾಮಿ ಮುನ್ನಡೆಸುತ್ತಾರೆ. ಎಐಎಡಿಎಂಕೆ ಮತ್ತು ಬಿಜೆಪಿ ಒಟ್ಟಾಗಿ ಚುನಾವಣೆ ಎದುರಿಸುತ್ತವೆ ಮತ್ತು ಚುನಾವಣೆ ನಂತರ ಸರಕಾರ ರಚಿಸುತ್ತವೆ ಎಂದಷ್ಟೇ ಅಮಿತ್ ಶಾ ಹೇಳಿರುವುದು. 'ಸಮ್ಮಿಶ್ರ ಸರಕಾರ' ಎಂದು ಅವರು ಹೇಳಿಯೇ ಇಲ್ಲ ಎಂದು ಪಳನಿಸ್ವಾಮಿ ಪ್ರತಿಪಾದಿಸಿದರು.

ಮಂತ್ರಿ ವಿರುದ್ಧ ಎಫ್ಐಆರ್ ವಿಳಂಬ: ಹೈಕೋರ್ಟ್ ಗರಂ

ಚೆನ್ನೈ: ಡಿಎಂಕೆ ಸರಕಾರದ ಸಚಿವ ಕೆ.ಪೊನ್ನುಮುಡಿ, ಮಹಿಳೆಯರ ವಿಚಾರದಲ್ಲಿ ಅಶ್ಲೀಲ ಪದ ಬಳಕೆ ಮಾಡಿದ ಪ್ರಕರಣದಲ್ಲಿ ಈವರೆಗೂ ಪ್ರಕರಣ ದಡಲಿಸದ ತಮಿಳುನಾಡು ಪೊಲೀಸ್ ಇಲಾಖೆ ಮೇಲೆ ಚೆನ್ನೈ ಹೈಕೋರ್ಟ್ ಗುರುವಾರ ಸಿಟ್ಟಾಯಿತು. ಸಚಿವ ಪೊನ್ನುಮುಡಿ ವಿರುದ್ಧ ತಕ್ಷಣವೇ 'ಎಫ್‌ಐಆರ್' ದಾಖಲಿಸಿ. ಇಲ್ಲವೇ ನಿಮ್ಮ ಇಲಾಖೆ ವಿರುದ್ಧವೇ 'ನ್ಯಾಯಾಂಗ ನಿಂದನೆ' ಪ್ರಕರಣ ದಾಖಲಿಸಬೇಕಾಗುತ್ತದೆ, ಎಚ್ಚರಿಕೆ ಎಂದು ಚಾಟಿ ಬೀಸಿತು.

22 ನಕ್ಸಲರ ಬಂಧನ

ಬಿಜಾಪುರ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ 22 ನಕ್ಸಲರನ್ನು ಬಂಧಿಸಲಾಗಿದೆ. ಅವರ ಬಳಿ ಇದ್ದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೋಬ್ರಾ ಪಡೆ ಮತ್ತು ಸ್ಥಳೀಯ ಪೊಲೀಸರ ಜಂಟಿ ಕಾರ್ಯಾಚರಣೆಯಲ್ಲಿ ಟೆಕಮೆಟ್ಲಾ ಗ್ರಾಮದ ಬಳಿ 7, ಬೆಲ್ಚೂರು ಬಂದರು ಬಳಿ 6 ಮತ್ತು ಕಂಡಕರ್ಕ ಗ್ರಾಮ ಬಳಿ 9 ನಕ್ಸಲರು ಸೆರೆ ಸಿಕ್ಕರು. ಎಂದು ನಕ್ಸಲ್ ನಿಗ್ರಹ ಪಡೆಯ ಹಿರಿಯ ಅಧಿಕಾರಿಗಳು ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ.

ಭಾರತದ 13 ಲಕ್ಷ ಸೈನಿಕರೇ ಏನೂ ಮಾಡಲಿಲ್ಲ: ಪಾಕ್ ಸೇನಾ ಮುಖ್ಯಸ್ಥ

ಇಸ್ಲಾಮಾಬಾದ್: 13 ಲಕ್ಷ ಯೋಧರಿದ್ದ ಭಾರತೀಯ ಸೇನೆಗೇ ನಮ್ಮನ್ನು ಹೆದರಿಸಲು ಸಾಧ್ಯವಾಗಲಿಲ್ಲ. ಇನ್ನು ಬಲೂಚಿಸ್ತಾನದ 1500 ಉಗ್ರರು ಏನು ಮಾಡಲು ಸಾಧ್ಯ? ಎಂದು ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್ ಹೇಳಿದ್ದಾರೆ. ಆ ಮೂಲಕ ಭಾರತೀಯ ಸೇನೆ ಯನ್ನು ಹೀಗಳೆದಿದ್ದಾರೆ.

ಬಲೂಚ್ ಲಿಬರೇಶನ್ ಆರ್ಮಿ, ಬಲೂಚ್ ಲಿಬರೇಶನ್ ಫ್ರಂಟ್ ಮತ್ತು ಬಲೂಚ್ ರಿಪಬ್ಲಿಕನ್ ಆರ್ಮಿಯಂತಹ ಸಂಘಟನೆಗಳಿಂದ ದೇಶಕ್ಕೆ ಬೆದರಿಕೆ ಎಂಬುದೆಲ್ಲಾ ಸುಳ್ಳು. ಈ ಉಗ್ರ ಸಂಘಟನೆಗಳಿಗೆ ತಕ್ಕ ಪಾಠ ಕಲಿಸಲಾಗುವುದು ಎಂದರು. ವಿದೇಶವಾಸಿ ಪಾಕ್ ಪ್ರಜೆಗಳ ಸಭೆ ಯಲ್ಲಿ ಗುರುವಾರ ಮಾತನಾಡಿದ ಜ.ಮುನೀರ್, ನಮ್ಮ ಪೂರ್ವಜರು ಜೀವನದ ಪ್ರತಿ ವಿಷಯದಲ್ಲೂ ಹಿಂದೂಗಳಿಗಿಂತ ಭಿನ್ನರು. ನಮ್ಮ ಧರ್ಮ, ಪದ್ಧತಿ, ಸಂಸ್ಕೃತಿ ಎಲ್ಲವೂ ಬೇರೆ ಬೇರೆ. ಅದುವೇ 2 ರಾಷ್ಟ್ರಗಳ ಸಿದ್ಧಾಂತಕ್ಕೆ ಕಾರಣವಾಗಿತ್ತು. ಅದರಂತೇ ಪಾಕಿಸ್ತಾನ ರಚನೆಯಾಗಿದೆ. ಜಿನ್ನಾ ಸೇರಿದಂತೆ ನಮ್ಮ ಪೂರ್ವಜರು ದೇಶಕ್ಕಾಗಿ ತ್ಯಾಗ ಮಾಡಿದ್ದಾರೆ. ಅಂಥ ದೇಶವನ್ನು ಹೇಗೆ ರಕ್ಷಿಸಬೇಕೆಂದು ನಮಗೆ ತಿಳಿದಿದೆ ಎಂದರು. ಕಾಶ್ಮೀರ ಪಾಕ್‌ನ ಕೊರಳಿನ ರಕ್ತನಾಳವಿದ್ದಂತೆ. ಅದನ್ನು ದೇಶ ಎಂದೂ ಮರೆಯಲ್ಲ. ಕಾಶ್ಮೀರ ವಿಚಾರದಲ್ಲಿ ಪಾಕ್ ನಿಲುವು ಸ್ಪಷ್ಟ. ಕಾಶ್ಮೀರಿ ಸೋದರರನ್ನು ಅವರ ವೀರೋಚಿತ ಹೋರಾಟದಲ್ಲಿ ಏಕಾಂಗಿಯಾಗಿ ಬಿಡುವುದಿಲ್ಲ ಎಂದರು.

ಮೊದಲು ಪಿಒಕೆ ಖಾಲಿ ಮಾಡಿ: ಭಾರತ ಗುದ್ದು

ದೆಹಲಿ: ಪಾಕಿಸ್ತಾನದ ಸೇನಾ ಮುಖ್ಯಸ್ಥ ಜ. ಮುನೀರ್ ಹೇಳಿಕೆಗೆ ಭಾರತ, 'ಕಾಶ್ಮೀರಕ್ಕೂ-ಪಾಕ್‌ಗೂ ಇರುವ ಸಂಬಂಧ ಜಾಗ ಖಾಲಿ ಮಾಡುವುದಕ್ಕಷ್ಟೇ ಮಿತವಾಗಿದೆ' ಎಂದು ತಿರುಗೇಟು ನೀಡಿದೆ. ಜಮ್ಮು-ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಆ ಜಾಗವನ್ನು ಪಾಕ್ ಆಕ್ರಮಿಸಿಕೊಂಡಿದ್ದು, ತಕ್ಷಣ ಖಾಲಿ ಮಾಡುವುದಷ್ಟೇ ಇರುವ ದಾರಿ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಕುಟುಕಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ-1, ನರಸಿಂಹ ರಾಜ ಚೌಕ-1, ಬೆಂಗಳೂರು-560 002.

ಸಂಖ್ಯೆ: ಬೃಬೆಂಮಪಾ/ಮು ಆಯುಕ್ತರು/ಪಿಎಸ್‌ಆರ್(ಜೆ)/99/2024-25 ದಿನಾಂಕ: 15.04.2025

ಸಾರ್ವಜನಿಕ ಪ್ರಕಟಣೆ

***ನಮೂನೆ*-III ನಿಯಮ-3ರ ಉಪ ನಿಯಮ (3) ಗಮನಿಸಿ**

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಯಿಂದ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, **30.00ಮೀಟರ್ ಅಗಲಕ್ಕೆ ಅನುಮೋದಿತ ಮಾಸ್ಟರ್ ಪ್ಲಾನ್-2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಪಣತ್ತೂರು ಮುಖ್ಯ ರಸ್ತೆ ಯಿಂದ ಬೋಗನಹಳ್ಳಿ, ದೊಡ್ಡಕನ್ನೇನಹಳ್ಳಿ ಮೂಲಕ ಬಿಬಿಎಂಪಿ ವ್ಯಾಪ್ತಿಯವರೆಗೆ ಅಗಲೀಕರಣ 30.00 ಮೀಟರ್‌ಗಳ ಅಗಲ ರಸ್ತೆ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳ ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳ ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ / ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ **ದಿನಾಂಕದಿಂದ 30 ದಿನಗಳೊಳಗಾಗಿ** ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ / ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು: ಬೆಂಗಳೂರು ನಗರ ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ ಗ್ರಾಮದ ಹೆಸರು: ಬೋಗನಹಳ್ಳಿ

Sy.No/ Khatha No.	Type of Land		Nature of Land			Dimension of the land/ plot and Extent in Sq.m		Boundaries of the Land/ Plot				Building Details			Present Activity on Land/ Building (Specify Specific activity such as Shop, Office, Factory, Apartment, Individual house etc.,	Market (guidel-ines) value of the land per Sq.m.	Name and address of the owner of the plot/Land for which DRC is to be issued
	Vacant	Built up	Agriculture	Converted undeveloped	Approved Layout/ Developed Land Building Site	Dimension	Extent	East	West	North	South	Extent in Sq.m	Type of Construction and No. of Floors	Floor Area Ratio			
Sy No.139/2, Katha Sl. No.1482	Vacant Land			Converted Land		1629.95		Sy No.139/3 & Sy No.2	Remaining Portion of Sy.No.139/2	Sy.No.138	Sy.No.139/1	None	None	None	Vacant	50,000/-	M/s.Shreshta Apartments Pvt. Ltd. Represented by its Director Sri. B. M. Karunesh, Having its registered Office at No.10, Vittal Mallya Road, Bengaluru-560 001.

Note: Market guideline value of this property is considered subject to conditions of payment of fee as per Government Order No.ಸರ್ಕಾರದ ಆದೇಶ ಸಂಖ್ಯೆ:ನಅಇ 137 ಎಂಎನ್‌ಯು 2024 (ಇ), ಬೆಂಗಳೂರು, ದಿನಾಂಕ: 09.09.2024

Objections and suggestions made be submitted at the address specified below:

ವಿಭಾಗ / ಉಪ-ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂ ಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಕಟ್ಟಡ-3, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು-560002.

ಸಹಿ/-
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಭಾಗ್ಯಲಕ್ಷ್ಮಿಯ ಶಿವ ಸ್ತುತಿ

ರಂಗಿ ತರಂಗ, ಅವನೇ ಶ್ರೀಮನ್ನಾರಾಯಣದಂತಹ ಯಶಸ್ವಿ ಚಿತ್ರಗಳನ್ನು ನಿರ್ಮಿಸಿದ ನಿರ್ಮಾಪಕ ಹೆಚ್.ಕೆ ಪ್ರಕಾಶ್ ಈಗ ಬ್ಯಾಂಕ್ ಆಫ್ ಭಾಗ್ಯ ಲಕ್ಷ್ಮಿ ಚಿತ್ರವನ್ನು ನಿರ್ಮಿಸಿದ್ದಾರೆ. ಸಂಪೂರ್ಣ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಈ ಸಿನಿಮಾದ ಮೊದಲ ಹಾಡು ಬಿಡುಗಡೆ ಮಾಡಿದೆ.

ಹರ ಓಂ.. ಎಂಬ ಹಾಡು ಇದಾಗಿದ್ದು ಮಧುರವಾಗಿ ಮೂಡಿಬಂದಿದೆ. ನಾಗಾರ್ಜುನ ಶರ್ಮಾ ಸಾಹಿತ್ಯದ ಈ ಹಾಡಿಗೆ ಜ್ಯುಡಾ ಸ್ಯಾಂಡಿ ಸಂಗೀತ ಸಂಯೋಜಿಸಿದ್ದಾರೆ. ಕನ್ನಡ ಹಾಗೂ ತೆಲುಗು ಎರಡು ಭಾಷೆಗಳಲ್ಲಿ ಈ ಚಿತ್ರ ಮೂಡಿಬರುತ್ತಿದ್ದು, ಹಾಡು ಸಹ ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಿದೆ. ಕನ್ನಡದಲ್ಲಿ ಶಿಲ್ಪಾ ಹಾಗೂ ತೆಲುಗಿನಲ್ಲಿ ಗಾಯಕಿ ಮಂಗ್ಲಿ ಹಾಡಿಗೆ ದನಿಯಾಗಿದ್ದಾರೆ. ಉಷಾ ಭಂಡಾರಿ ಹಾಗೂ ದರ್ಶನ್ ಗೀತೆಗೆ ನೃತ್ಯ ಸಂಯೋಜನೆ ಮಾಡಿದ್ದಾರೆ. ಲಹರಿ ವೇಲು ಈ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ ಬ್ಯಾಂಕ್ ರಾಬರಿ ಕಥೆಯನ್ನು ಒಳಗೊಂಡಿದೆ. ದಿಯಾ ಖ್ಯಾತಿಯ ದೀಕ್ಷಿತ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ಬೃಂದಾ ಆಚಾರ್ಯ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸಿಂಪಲ್ ಸುನಿ ಜತೆಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಅಭಿಷೇಕ್ ಈ ಚಿತ್ರವನ್ನು ನಿರ್ದೇಶಿಸಿದ್ದು, ಆ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಈ ಹಾಡಿನಲ್ಲಿ ನನ್ನ ಗುರುಗಳು ಹಾಗೂ ನಾನು ಪಾಠ ಹೇಳಿ ಕೊಟ್ಟಿರುವ ಹುಡುಗರು ಅಭಿನಯಿಸಿದ್ದಾರೆ ಎಂದು ನಾಯಕ ದೀಕ್ಷಿತ್ ಶೆಟ್ಟಿ ತಿಳಿಸಿದರು.

ನನ್ನ ದಿನಚರಿ ಆರಂಭವಾಗುವುದೆ ಶಿವನಾಮ ಸ್ಮರಣೆಯಿಂದ. ನಮ್ಮ ಚಿತ್ರದ ಈ ಹಾಡನ್ನು ಕೇಳಿದ ಮೇಲಂತೂ ಎಷ್ಟು ಸಲ ಗುನುಗಿದ್ದೇನೊ ಲೆಕ್ಕವಿಲ್ಲ.ಹಾಡು ಅಷ್ಟು ಅದ್ಬುತವಾಗಿದೆ ಎಂದು ಬೃಂದಾ ಆಚಾರ್ಯ ಸಂತಸದಿಂದ ನುಡಿದರು. ಅಭಿಷೇಕ್ ಕಾಸರಗೋಡು ಛಾಯಾಗ್ರಹಣ ಈ ಚಿತ್ರಕ್ಕಿದೆ.



ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ. ಪ್ರೀ ಕ್ಲೈಮ್ಯಾಕ್ಸ್‌ನಲ್ಲಿ ಈ ಹಾಡು ಬರುತ್ತದೆ. ಚಿತ್ರದ ಕಥೆಗೆ ಹಾಗೂ ಈ ಹಾಡಿಗೂ ಸಂಬಂಧವಿದೆ. ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರುವ ಸಿದ್ಧತೆ ನಡೆಯುತ್ತಿದೆ.

-ಅಭಿಷೇಕ್. ನಿರ್ದೇಶಕ

ರಂಗಿತರಂಗ ಚಿತ್ರದ ಹಾಡುಗಳು ಲಹರಿ ಸಂಸ್ಥೆಯಿಂದ ಬಿಡುಗಡೆಯಾಗಿದ್ದವು. ಈ ಚಿತ್ರದ ಹಾಡುಗಳು ಸಹ ಲಹರಿ ಸಂಸ್ಥೆಯಿಂದಲೇ ಬಿಡುಗಡೆಯಾಗಿವೆ. ನಮ್ಮ ರಂಗಿತರಂಗ ಚಿತ್ರ ಹತ್ತು ವರ್ಷಗಳ ಹಿಂದೆ ಜುಲೈ ತಿಂಗಳಲ್ಲಿ ಬಿಡುಗಡೆಯಾಗಿತ್ತು. ಈ ಚಿತ್ರವನ್ನು ಸಹ ಜುಲೈನಲ್ಲೇ ಬಿಡುಗಡೆ ಮಾಡುತ್ತೇವೆ.

-ಪ್ರಕಾಶ್ ನಿರ್ಮಾಪಕ

ನಾವು ಹಿಂದೂಗಳು ಹಿಂದಿಗಳಲ್ಲ: ಎಂಎನ್‌ಎಸ್ ಅಧ್ಯಕ್ಷ ರಾಜ್ ಠಾಕ್ರೆ

ಮಹಾರಾಷ್ಟ್ರದಲ್ಲಿ ಹಿಂದಿ ತೃತೀಯ ಭಾಷೆ: ಆದೇಶ

ಮುಂಬೈ: ಮಹಾರಾಷ್ಟ್ರದಲ್ಲಿ 1ರಿಂದ 5ನೇ ತರಗತಿವರೆಗೆ ಶಾಲೆಗಳಲ್ಲಿ ಮರಾಠಿ ಹಾಗೂ ಇಂಗ್ಲಿಷ್ ಭಾಷೆಯ ಜತೆಯಲ್ಲಿ ಹಿಂದಿಯನ್ನು ಮೂರನೇ ಭಾಷೆಯಾಗಿ ಕಡ್ಡಾಯಗೊಳಿಸಿ ರಾಜ್ಯ ಸರಕಾರ ಗುರುವಾರ ಆದೇಶಿಸಿದೆ.

ಮಹಾರಾಷ್ಟ್ರ ಸರಕಾರ ರಾಜ್ಯದಲ್ಲಿ 25-26ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಿದೆ. ಸರಕಾರದ ಈ ನಡೆಗೆ ಮಹಾರಾಷ್ಟ್ರ ನವನಿರ್ಮಾಣ ಸೇನೆ (ಎಂಎನ್‌ಎಸ್) ಅಧ್ಯಕ್ಷ ರಾಜ್ ಠಾಕ್ರೆ ಹಾಗೂ ಕಾಂಗ್ರೆಸ್ ಕಟುವಾಗಿ ಟೀಕಿಸಿವೆ.

ಮೂರನೇ ಭಾಷೆಯಾಗಿ 1-5ನೇ ತರಗತಿವರೆಗೆ ಹಿಂದಿ ಭಾಷೆ ಕಲಿಕೆಯು ಕಡ್ಡಾಯ. 25-26ನೇ ಸಾಲಿನಿಂದ 1ರಿಂದ ತರಗತಿಗೆ ಅನ್ವಯವಾಗುವಂತೆ ಎನ್‌ಇಪಿ ಜಾರಿಗೊಳಿಸಲಾಗಿದೆ ಎಂದು ಗುರುವಾರ ಹೊರಡಿಸಲಾದ ಸರಕಾರದ ಅದೇಶ ತಿಳಿಸಿದೆ. 2, 3, 4 ಮತ್ತು 6ನೇ ತರಗತಿಗಳಿಗೆ 26-27ನೇ ಸಾಲಿನಿಂದ; 5, 9 ಮತ್ತು 11ನೇ ತರಗತಿಗಳಿಗೆ 2027-28ನೇ ಸಾಲಿನಿಂದ, 8, 10 ಮತ್ತು 12ನೇ ತರಗತಿಗಳಿಗೆ 28-29ನೇ ಸಾಲಿನಿಂದ ಎನ್‌ಇಪಿ ಜಾರಿಗೊಳಿಸಲಾಗುವುದು ಎಂದು ಆದೇಶ ವಿವರಿಸಿದೆ.

ಮೂರನೇ ಭಾಷೆಯಾಗಿ ಹಿಂದಿಯನ್ನು ಅಳವಡಿಸಿರುವ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವಿಸ್, ನೂತನ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತಂದು, ಮರಾಠಿ ಕಲಿಕೆಯನ್ನು ಕಡ್ಡಾಯಗೊಳಿಸಲಾಗಿದೆ ಎಂದಿದ್ದಾರೆ.

ಹಿಂದಿ ರಾಷ್ಟ್ರಭಾಷೆಯಲ್ಲ. ಇತರ ಭಾಷೆಗಳಂತೆಯೇ ಅದೂ ಒಂದು ರಾಜ್ಯ ಭಾಷೆ. ಮಹಾರಾಷ್ಟ್ರದಲ್ಲಿ ಅದನ್ನೇಕೆ ಕಲಿಸಬೇಕು? ತ್ರಿಭಾಷಾ ಸೂತ್ರವನ್ನು ಸರಕಾರದ ಮಟ್ಟಕ್ಕಷ್ಟೇ ಸೀಮಿತಗೊಳಿಸಬೇಕು. ಅದನ್ನು ಶಿಕ್ಷಣಕ್ಕೆ ತರಬಾರದು. ನಾವು ಹಿಂದೂಗಳೇ ಹೊರತು, ಹಿಂದಿಗಳಲ್ಲ. ಮಹಾರಾಷ್ಟ್ರದಲ್ಲಿ ಹಿಂದಿ ಬಣ್ಣ ಬಳಿಯಲು ಯತ್ನಿಸಿದರೆ, ಹೋರಾಟ ನಿಶ್ಚಿತ.

- ರಾಜ್ ಠಾಕ್ರೆ, ಎಂಎನ್‌ಎಸ್ ಅಧ್ಯಕ್ಷ

ಇದು ಮರಾಠಿ ಅಸ್ಮಿತೆಯ ಪ್ರಶ್ನೆ. ಹಿಂದಿ ಐಚ್ಛಿಕ ವಿಷಯವಾದರೆ ತೊಂದರೆ ಇಲ್ಲ. ಆದರೆ ಕಡ್ಡಾಯಗೊಳಿಸಿದರೆ ಮರಾಠಿ ಭಾವನೆಗೆ ಧಕ್ಕೆ ತಂದಂತೆ. ಹೀಗಾದಲ್ಲಿ ಉತ್ತರ ಪ್ರದೇಶ ಹಾಗೂ ಮಧ್ಯಪ್ರದೇಶಗಳಲ್ಲಿ ತೃತೀಯ ಭಾಷೆಯಾಗಿ ಮರಾಠಿಯನ್ನು ಕಲಿಸಬೇಕು ಎಂದು ಆಗ್ರಹಿಸಲಾಗುವುದು.

-ವಿಜಯ್ ವಡೆತ್ತಿವಾರ್ ಕಾಂಗ್ರೆಸ್ ಮುಖಂಡ

ದಾಸರಹಳ್ಳಿಯಲ್ಲಿ ಸಾಮಾಜಿಕ ಸಂಕಥನ

ಕನ್ನಡ ಚಿತ್ರರಂಗದಲ್ಲಿ ನೃತ್ಯ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದ ಎಂ.ಆರ್.ಶ್ರೀನಿವಾಸ್ ಹಲವು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಈಗ ಸಾಮಾಜಿಕ ಕಳಕಳಿ ಸಾರುವ ದಾಸರಹಳ್ಳಿ ಚಿತ್ರವನ್ನು ತೆರೆಗೆ ತರುತ್ತಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿರುವ ಘಟನೆಗಳನ್ನು ಆಯ್ದುಕೊಂಡು ಅದನ್ನು ಕಮರ್ಷಿಯಲ್ ಆಯಾಮದಲ್ಲಿ ಎಲ್ಲರಿಗೂ ಹಿಡಿಸುವಂತೆ ಕಟ್ಟಿಕೊಟ್ಟಿದ್ದಾರೆ. ದಾಸರಹಳ್ಳಿ ಕುರಿತಂತೆ ನಿರ್ದೇಶಕರು ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್: ದಾಸರಹಳ್ಳಿ ಇದು ಗ್ರಾಮೀಣ ಭಾಗದ ಕಥೆಯೆ ?

ಶ್ರೀನಿವಾಸ್ : ದಾಸರಹಳ್ಳಿ ಎಂಬ ಪ್ರದೇಶದಲ್ಲಿ ನಡೆಯುವ ಕಥೆ ಇದು. ಹಾಗಾಗಿ ದಾಸರಹಳ್ಳಿ ಎಂಬ ಶೀರ್ಷಿಕೆ ಆಯ್ದುಕೊಂಡಿದ್ದೇವೆ. ಇದು ಗ್ರಾಮೀಣ ಕಥೆಯಲ್ಲ. ಇಂದು ಎಲ್ಲೆಡೆ ನಡೆಯುತ್ತಿರುವ ಕಥೆಯಾಗಿದೆ. ಇದು ಸ್ಟೋರಿ ಅನ್ನುವುದಕ್ಕಿಂತ ಸಾಮಾಜಿಕ ಸಮಸ್ಯೆ ಎಂದು ಹೇಳಬಹುದು.

ವಿ.ಸಿ: ಸಾಮಾಜಿಕ ಸಮಸ್ಯೆಯ ಕುರಿತು ಸಾಗುವ ಕಥೆಯೆ ?

ಶ್ರೀನಿವಾಸ್ : ಹೌದು, ಇಂದು ಎಲ್ಲೆಡೆ ಕಾಡುತ್ತಿರುವ ಮದ್ಯ ವ್ಯಸನದ ಕುರಿತ ಕಥೆ ಇದಾಗಿದೆ. ನಾಯಕ ಕುಡಿತಕ್ಕೆ ವ್ಯಸನಿಯಾಗಿರುತ್ತಾನೆ. ಆತನ ಬಾಳಲ್ಲಿ ಹುಡುಗಿಯೊಬ್ಬಳ ಪ್ರವೇಶವಾಗುತ್ತದೆ. ಇದರಿಂದ ಆತನ ಬಾಳು ಹೇಗೆ ಬದಲಾಗುತ್ತದೆ ಎಂಬುದನ್ನು ಹೇಳಲಾಗಿದೆ. ಜತೆಗೆ ಒಂದು ಸಮಾಜ ಹೇಗೆ ವ್ಯಕ್ತಿಗಳ ವ್ಯಕ್ತಿತ್ವ ಬದಲಾಯಿಸುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.

ವಿ.ಸಿ : ಇದು ನೈಜ ಘಟನೆಯಾಧಾರಿತ ಕಥೆಯೆ ?

ಶ್ರೀನಿವಾಸ್ : ಇದು ನೈಜ ಘಟನೆಗಳನ್ನು ಆಯ್ದು ಹೆಣೆದ ಕಥೆಯಾಗಿದೆ. ಕುಡಿತದಿಂದ ಯುವಕರು ಹೇಗೆ ತಮ್ಮ ಬಾಳನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ, ಇದರಿಂದ ಹೇಗೆ ಸಾಮಾಜಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂಬುದನ್ನು ಹೇಳಲಾಗಿದೆ. ಮದ್ಯ ವ್ಯಸನ ಹೇಗೆ ಸಮಾಜಕ್ಕೆ ಮಾರಕ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ.

ವಿ.ಸಿ : ತಾರಾಗಣದ ಬಗ್ಗೆ ಹೇಳುವುದಾದರೆ ?

ಶ್ರೀನಿವಾಸ್ : ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿದ್ದಾರೆ. ಉಳಿದಂತೆ ಉಮೇಶಣ್ಣ, ಡಿಂಗ್ರಿ ನಾಗರಾಜ್, ರೇಖಾದಾಸ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಜಾಗ್ವರ್ ಸಣ್ಣಪ್ಪ, ಥ್ರಿಲ್ಲರ್ ಮಂಜು, ಕೌರವ ವೆಂಕಟೇಶ್ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ವಿಶೇಷ ಎಂದರೆ ಮೊದಲು ಚಿತ್ರದ ಕ್ಲೈಮ್ಯಾಕ್ಸ್ ಶೂಟಿಂಗ್ ಮುಗಿಸಿ ಬಳಿಕ ಉಳಿದ ಭಾಗ ಚಿತ್ರೀಕರಣ ನಡೆಸಿದೆವು.

ಈ ವರ್ಷ ರಕ್ಷಣಾ ಕ್ಷೇತ್ರದ ಉತ್ಪಾದನೆ 1.6 ಲಕ್ಷ ಕೋಟಿ ರು. ದಾಟುವ ನಿರೀಕ್ಷೆ

2029ರ ವೇಳೆಗೆ ರಫ್ತು 50 ಸಾವಿರ ಕೋಟಿಗೆ ಮುಟ್ಟಬೇಕು

ದೆಹಲಿ: ಭಾರತದಲ್ಲಿ ಈ ವರ್ಷ ರಕ್ಷಣಾ ಕ್ಷೇತ್ರದ ಉತ್ಪಾದನೆ ₹1.60 ಲಕ್ಷ ಕೋಟಿ ದಾಟುವ ನಿರೀಕ್ಷೆಯಿದೆ. 2029ರವರೆಗೆ ₹3 ಲಕ್ಷ ಕೋಟಿ ಮೊತ್ತದ ಸೇನಾ ಪರಿಕರ ಉತ್ಪಾದನೆ ಗುರಿ ನಿಗದಿಪಡಿಸಲಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

'ರಕ್ಷಣಾ ಸಮಾವೇಶ-ಭವಿಷ್ಯದ ಬಲ' ವಿಷಯದ ಕುರಿತು ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಆಮದು ಮೇಲಿನ ಅವಲಂಬನೆಯನ್ನು ತಗ್ಗಿಸಲಾಗುವುದು. ದೇಶದ ಅಗತ್ಯ ಈಡೇರಿಕೆ ಜತೆಗೆ ರಫ್ತು ಅವಕಾಶವನ್ನು ಬಲಪಡಿಸುವಂತೆ ರಕ್ಷಣಾ ಕೈಗಾರಿಕಾ ಕ್ಷೇತ್ರವನ್ನು ರೂಪಿಸಲಾಗುವುದು ಎಂದು ಹೇಳಿದರು.

ರಾಷ್ಟ್ರದ ಭದ್ರತೆ, ಕಾರ್ಯತಂತ್ರ ಸ್ವಾಯತ್ತತೆಗೆ ಪೂರಕವಾಗಿ ರಕ್ಷಣಾ ಉತ್ಪಾದನೆಯ ಸಾಮರ್ಥ್ಯ ರೂಪಿಸುವ ಗುರಿ ಇದೆ. ರಕ್ಷಣಾ ಕ್ಷೇತ್ರದಲ್ಲಿ ನಮ್ಮ ರಫ್ತು ವಹಿವಾಟು ಈ ವರ್ಷ ₹30 ಸಾವಿರ ಕೋಟಿಗೆ ಹಾಗೂ 2029ರ ವೇಳೆಗೆ ₹50 ಸಾವಿರ ಕೋಟಿಗೆ ಮುಟ್ಟಬೇಕು ಎಂದರು.

ಭಾರತವು ತನ್ನ ಗಡಿಯ ರಕ್ಷಣೆ ಜತೆಗೆ ಅಂತಾರಾಷ್ಟ್ರೀಯ ಗಡಿ ರಕ್ಷಣಾ ವ್ಯವಸ್ಥೆಯಲ್ಲೂ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಭಾರತ, ರಕ್ಷಣಾ ಅಗತ್ಯಗಳಿಗೆ ಆಮದು ಮಾಡಿಕೊಳ್ಳಲಿದೆ ಎಂಬ ಮನಃಸ್ಥಿತಿ ಬದಲಿಸುವುದೇ ಮೊದಲ ಮತ್ತು ಪ್ರಮುಖ ಸವಾಲಾಗಿದೆ.

-ರಾಜನಾಥ್ ಸಿಂಗ್ ರಕ್ಷಣಾ ಸಚಿವ

ನಾಳೆ ಕಾಂಗ್ರೆಸ್ ಸಭೆ

ದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇ.ಡಿ (ಜಾರಿ ನಿರ್ದೇಶನಾಲಯ) ಸಲ್ಲಿಸಿರುವ ದೋಷಾರೋಪ ಪಟ್ಟಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿ ನಡೆಸಿದ ಕ್ರಮ ಎಂದು ಕಾಂಗ್ರೆಸ್ ಆರೋಪಿಸಿದೆ. ಇ.ಡಿ. ಕ್ರಮ ಖಂಡಿಸಿ ಪ್ರತಿಭಟನೆ ನಡೆಸಲು ರೂಪರೇಷೆ ಸಿದ್ಧಪಡಿಸುವ ಕುರಿತು ಶನಿವಾರ (ಏಪ್ರಿಲ್ 19) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಉಸ್ತುವಾರಿಗಳು ಮತ್ತು ತನ್ನ ಮುಂಚೂಣಿ ಸಂಸ್ಥೆಗಳ ಮುಖ್ಯಸ್ಥರ ಸಭೆ ಕರೆದಿದೆ. ಶನಿವಾರ ಸಂಜೆ 4 ಗಂಟೆಗೆ ನವದೆಹಲಿಯ ಇಂದಿರಾ ಗಾಂಧಿ ಭವನದಲ್ಲಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಸಭೆ ನಡೆಯಲಿದೆ. ಪ್ರತಿಭಟನೆ ಮತ್ತು ಮುಂದಿನ ಹೋರಾಟದ ಕಾರ್ಯತಂತ್ರಗಳನ್ನು ಸಭೆಯಲ್ಲಿ ನಿರ್ಧರಿಸಲಾಗುತ್ತದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಳ ಮೀಸಲು: ಸುಗ್ರೀವಾಜ್ಞೆ

ಅಮರಾವತಿ: ರಾಜ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿಯವರನ್ನು ಮೂರು ಉಪ ವರ್ಗಗಳಾಗಿ ವರ್ಗೀಕರಿಸಿ ಒಳಮೀಸಲಾತಿ ನೀಡಲು ಆಂಧ್ರಪ್ರದೇಶ ಸರಕಾರವು ಗುರುವಾರ ಸುಗ್ರೀವಾಜ್ಞೆ ಹೊರಡಿಸಿದೆ. ಆಂಧ್ರ ಪ್ರದೇಶ ಪರಿಶಿಷ್ಟ ಜಾತಿ (ಉಪ-ವರ್ಗೀಕರಣ) ಸುಗ್ರೀವಾಜ್ಞೆ-2025 ಅನ್ನು ರಾಜ್ಯದ ಗೆಜೆಟ್‌ನಲ್ಲಿ ಇಂಗ್ಲಿಷ್, ತೆಲುಗು ಮತ್ತು ಉರ್ದು ಭಾಷೆಗಳಲ್ಲಿ ಆಂಧ್ರಪ್ರದೇಶ ಸುಗ್ರೀವಾಜ್ಞೆ-2025ರ ನಂ.2 ಎಂದು ಪ್ರಕಟಿಸಲಾಗಿದೆ ಎಂದು ಕಾನೂನು ಇಲಾಖೆಯ ಆದೇಶದಲ್ಲಿ ತಿಳಿಸಿದೆ. ಏಪ್ರಿಲ್ 15ರಂದು ಪರಿಶಿಷ್ಟ ಜಾತಿಗಳನ್ನು ಒಟ್ಟು ಶೇ.15ರಷ್ಟು ಮೀಸಲಾತಿಗೆ ಒಳಪಟ್ಟಂತೆಯೇ ಮೂರು ಗುಂಪುಗಳಾಗಿ ಉಪ ವರ್ಗೀಕರಣ ಮಾಡುವ ಸುಗ್ರೀವಾಜ್ಞೆಯ ಪ್ರಸ್ತಾಪವನ್ನು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೇತೃತ್ವದ ಸಚಿವ ಸಂಪುಟವು ಅನುಮೋದಿಸಿತ್ತು.

ಇಲ್ಲಿ ಏಗಲಾರೆ, ಅಲ್ಲಿಗೆ ಹೋಗಲಾರೆ...

ಪ್ರಾದೇಶಿಕ ಪಕ್ಷವ್ರೋ, ಅವಕಾಶವಾದವ್ರೋ?

ಯಗಟಿ ರಘು ನಾಡಿಗ್

ಬಿಜೆಪಿಯಿಂದ ಇತ್ತೀಚೆಗಷ್ಟೇ ಉಚ್ಚಾಟಿಸಲ್ಪಟ್ಟ ಶಾಸಕ ಬಸನಗೌಡ ಪಾಟೀಲ ಯತ್ನಾಳರು, ಉತ್ತರ ಕರ್ನಾಟಕ ಭಾಗದಲ್ಲಿ ತಮಗಿರುವ ವರ್ಚಸ್ಸು, ಹಿಂದೂಗಳ ಬೆಂಬಲವನ್ನು ಬಳಸಿಕೊಂಡು ತಮ್ಮದೇ ಪಕ್ಷವನ್ನು ಹುಟ್ಟುಹಾಕಲಿದ್ದಾರೆ ಎಂಬ ಗುಸುಗುಸು ಕೆಲ ದಿನಗಳ ಹಿಂದೆ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ, ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷಗಳ ಅಸ್ತಿತ್ವದ ಸಾಧ್ಯಾಸಾಧ್ಯತೆಗಳನ್ನು ಅವಲೋಕಿಸುವ ಪುಟ್ಟಯತ್ನ ಇಲ್ಲಿದೆ.



ನಮ್ಮವರು ಯಾರೂ ಇಲ್ಲ!

ಮೇಕೆದಾಟು ಜಲಾಶಯಕ್ಕೆ ಸಂಬಂಧಿಸಿ ನೆರೆರಾಜ್ಯ ತಮಿಳುನಾಡು ಎತ್ತುತ್ತಿರುವ ಅಪಸ್ವರ, ಕಾವೇರಿ ನದಿನೀರು ಹಂಚಿಕೆ ವಿಷಯದಲ್ಲಿ ರಾಜ್ಯಕ್ಕೆ ದಶಕಗಳಿಂದ ಆಗುತ್ತಲೇ ಇರುವ ಅನ್ಯಾಯ, ಬೆಳಗಾವಿ ವಿಷಯಕ್ಕೆ ಮಹಾರಾಷ್ಟ್ರದೊಡನೆ ಆಗಾಗ ಶುರುವಾಗುವ ಗಡಿ ತಕರಾರು ಹೀಗೆ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುತ್ತಿದೆ ಎನಿಸಿದಾಗಲೆಲ್ಲಾ ರಾಜಕೀಯ ಬಲದ ನೆಲೆಯಲ್ಲಿ 'ನಮ್ಮವರು ಯಾರೂ ಇಲ್ಲ' ಎಂಬ ಅನಾಥಪ್ರಜ್ಞೆ ಕಾಡುವುದುಂಟು. ಕರ್ನಾಟಕದಲ್ಲೂ ಒಂದು ಪ್ರಬಲ ಪ್ರಾದೇಶಿಕ ಪಕ್ಷವಿದ್ದಿದ್ದರೆ ಅಥವಾ ಕೇಂದ್ರದ ಮೇಲೆ ಪ್ರಭಾವ ಬೀರುವ ಮಟ್ಟಿಗಿನ ಹಿಡಿತ ರಾಜ್ಯದ ಆಳುಗರಿಗೆ ಇದ್ದಿದ್ದರೆ ಎಷ್ಟು ಚೆನ್ನಿತ್ತು ಎನಿಸುವುದು ನಿಜ. ಆದರೆ ಅದೇನು ವಿಚಿತ್ರವೋ, ಕೆಲವೇ ನಿದರ್ಶನಗಳನ್ನು ಹೊರತುಪಡಿಸಿದರೆ ರಾಜ್ಯಕ್ಕೂ ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೂ ಆಗಿಬರುತ್ತಿಲ್ಲ ಎಂಬುದು ಖರೆ!

ಗಿಟ್ಟುತ್ತಿಲ್ಲ ಲೆಕ್ಕಾಚಾರ

ರಾಜ್ಯದಲ್ಲಿ ಪ್ರಾದೇಶಿಕ ಪಕ್ಷಗಳು ಭದ್ರನೆಲೆ ಕಾಣಲಾಗುತ್ತಿಲ್ಲ. ವಿವಿಧ ಕಾಲಘಟ್ಟಗಳಲ್ಲಿ ರಾಜಕೀಯ ಘಟಾನುಘಟಿಗಳು ಮಾಡಿದ

ಕಸರತ್ತೇ ಇದಕ್ಕೆ ಸಾಕ್ಷಿ. ಜನತಾದಳದಿಂದ ಉಚ್ಚಾಟನೆಗೊಂಡಾಗ ರಾಮಕೃಷ್ಣ ಹೆಗಡೆಯವರು ಹುಟ್ಟುಹಾಕಿದ 'ಲೋಕಶಕ್ತಿ', ಕಾಂಗ್ರೆಸ್‌ನಿಂದ ಸಿಡಿದು ಹೊರಬಂದ ಎಸ್.ಬಂಗಾರಪ್ಪನವರು ಕಟ್ಟಿದ 'ಕರ್ನಾಟಕ ಕಾಂಗ್ರೆಸ್ ಪಕ್ಷ', ಮಾತೃಪಕ್ಷ ಬಿಜೆಪಿಯೊಂದಿಗೆ ಮುನಿದು



ಯಡಿಯೂರಪ್ಪನವರು ಜನ್ಮವಿತ್ತ 'ಕರ್ನಾಟಕ ಜನತಾ ಪಕ್ಷ', ಅಷ್ಟೇಕೆ ಉದ್ಯಮಿ ವಿಜಯ ಸಂಕೇಶ್ವರರು ಶುರುಮಾಡಿದ 'ಕನ್ನಡನಾಡು ಪಾರ್ಟಿ' ಮುಂತಾದವು ಬೇರೂರುವಲ್ಲಿ ವಿಫಲವಾಗಿದ್ದು ಜಗಜ್ಜಾಹೀರು. ಇನ್ನು ಚಿತ್ರನಟ ಉಪೇಂದ್ರರು 'ಪ್ರಜಾಕೀಯ/ಉತ್ತಮ

ಪ್ರಜಾಕೀಯ ಪಾರ್ಟಿ' ಎಂದೊಮ್ಮೆ ಕನವರಿಸಿದ್ದು ಹೌದಾದರೂ ಅದು ನನಸಾಗಲಿಲ್ಲ. ಅಮೆರಿಕದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ನಂತರ ರಾಜಕಾರಣಕ್ಕೆ ಧುಮುಕಿ 'ಆಮ್ ಆದ್ಮಿ' ಪಕ್ಷದಲ್ಲಿ ಕೆಲಕಾಲ ವಿಹರಿಸಿದ ರವಿ ಕೃಷ್ಣಾ ರೆಡ್ಡಿ ಅವರು ತರುವಾಯದಲ್ಲಿ 'ಕರ್ನಾಟಕ ರಾಷ್ಟ್ರ ಸಮಿತಿ' ಎಂಬ ಪ್ರಾದೇಶಿಕ ಪಕ್ಷವನ್ನು ಅಸ್ತಿತ್ವಕ್ಕೆ ತಂದು, ಒಂದಷ್ಟು ಜನಪರ ಹೋರಾಟ ಕೈಗೊಂಡಿದ್ದು ಹೌದಾದರೂ, ಅದನ್ನು ರಾಜಕೀಯ ಅಧಿಕಾರವಾಗಿ ರೂಪಾಂತರಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಹಾಗಾದರೆ, ಪ್ರಾದೇಶಿಕ ಪಕ್ಷದ ಲೆಕ್ಕಾಚಾರ ಗಿಟ್ಟುತ್ತಿಲ್ಲವೇಕೆ, ತಪ್ಪಾಗುತ್ತಿರುವುದೆಲ್ಲಿ? ಎಂಬುದು ಪ್ರಶ್ನೆ.

ಅನುಕೂಲಸಿಂಧುತ್ವದಿಂದ ಧಕ್ಕೆ

ರಾಷ್ಟ್ರೀಯ ಮಟ್ಟದಲ್ಲಿ ರಾರಾಜಿಸುತ್ತಿರುವ 'ಎನ್‌ಡಿಎ' ಮತ್ತು 'ಇಂಡಿಯಾ' ಮೈತ್ರಿಕೂಟಗಳಿಗೆ ಹೊರತಾದ ತೃತೀಯ ರಂಗವನ್ನು ಮುಂಚೂಣಿಗೆ ತರುವುದು ಕಸರತ್ತೇ ಆಗಿರುವಂತೆ, ರಾಜ್ಯದಲ್ಲಿ ಪ್ರಾದೇಶಿಕ ಪಕ್ಷಗಳು ನೆಲೆಗೊಳ್ಳುವುದೂ ಹರಸಾಹಸದ ಬಾಬತ್ತಾಗಿದೆ. ''ಎಷ್ಟಾದ್ರೂ, ನಾವು ಪ್ರಾದೇಶಿಕ ಮಟ್ಟಕ್ಕೆ ಸೀಮಿತವಲ್ಲವೇ, ನಮ್ ಹತ್ರ ಹಣಬಲ-ಜನಬಲ ಎಲ್ಲಿಂದ ಬರಬೇಕು?'' ಅಂತ ಕಾಗೆ ಹಾರಿಸುತ್ತಲೇ ಅನುಕೂಲಸಿಂಧು ರಾಜಕಾರಣ ಮಾಡಿದವರು ನಮ್ಮಲ್ಲಿ ದ್ದಾರೆ ಎನ್ನಿ! ಇಂಥವರು ಸರಕಾರದ ರಚನೆಯ ವೇಳೆ ಬಾಹ್ಯರೂಪದಲ್ಲೋ ಅಥವಾ ಸಹಭಾಗಿಯಾಗುವ ಮೂಲಕವೋ ತಮ್ಮ ಬೇಳೆ ಬೇಯಿಸಿ ಕೊಂಡಿರುವುದುಂಟು. ಇದನ್ನು ಕಂಡೇ ರಾಜ್ಯದ ಮತದಾರರು ಪ್ರಾದೇಶಿಕ ಪಕ್ಷಗಳಿಗೆ ಬೆಲೆ ಮತ್ತು ಬಲವನ್ನು ನೀಡಿಲ್ಲವೇ? ಆ ಅನುಕೂಲಸಿಂಧುತ್ವವೇ ಪ್ರಾದೇಶಿಕ ಪಕ್ಷಗಳಿಗೆ ಮುಳುವಾಯಿತೇ? ಎಂಬುದು ಈ ಸಂದರ್ಭದಲ್ಲಿ ಹೊಮ್ಮುವ ಮತ್ತೊಂದು ಪ್ರಶ್ನೆ.

ತಮಿಳರ ಕಟ್ಟರ್ ಹಠ!

ತಮಿಳುನಾಡಿನಲ್ಲೀಗ ರಾಷ್ಟ್ರೀಯ ಪಕ್ಷ ಬಿಜೆಪಿ ಸದ್ದು ಮಾಡುತ್ತಿದೆಯಾದರೂ, ದಶಕಗಳಿಂದಲೂ ಅಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಪಾರಮ್ಯ. ಅಲ್ಲಿನ ದ್ರಾವಿಡ ಪಕ್ಷಗಳಾದ ಡಿಎಂಕೆ-ಎಐಎಡಿಎಂಕೆಗಳು 'ಪರ್ಯಾಯ'ದ ರೀತಿಯಲ್ಲಿ ಗದ್ದುಗೆ ಏರುತ್ತಿವೆಯೇ ವಿನಾ, ಅಲ್ಲಿ ರಾಷ್ಟ್ರೀಯ ಪಕ್ಷಗಳ ಒಳತೂರಿಕೆಗೆ ಆಸ್ಪದವಾಗಿಲ್ಲ (ದಶಕಗಳ ಹಿಂದೊಮ್ಮೆ ಕಾಂಗ್ರೆಸ್ ದರ್ಬಾರು ನಡೆಸಿದ್ದು ಬಿಟ್ಟರೆ). ಲೋಕಸಭಾ ಚುನಾವಣೆ ವೇಳೆ ರಾಷ್ಟ್ರೀಯ ಪ್ರಾಮುಖ್ಯದ ಚರ್ಚಾವಿಷಯಗಳು/ರಾಷ್ಟ್ರೀಯ ಪಕ್ಷಗಳು ಮುನ್ನೆಲೆಗೆ ಬರುವುದು ವಾಡಿಕೆ;

ಆದರೆ ತಮಿಳರದ್ದು ಇಲ್ಲೂ 'ಕಟ್ಟರ್' ಹಠ! ಈ ವೇಳೆ ಡಿಎಂಕೆ ಅಥವಾ ಎಐಎಡಿಎಂಕೆ ಪೈಕಿ ಒಂದರ ಅಭ್ಯರ್ಥಿಗಳನ್ನೇ ಅಲ್ಲಿ ಚುನಾಯಿಸುವುದು ವಾಡಿಕೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಅಬ್ಬರದ ಹೊರತಾಗಿಯೂ, ಗಣನೀಯ ಸಂಖ್ಯೆಯ ಡಿಎಂಕೆ ಸಂಸದರು ಆಯ್ಕೆಯಾಗಿದ್ದು ಇದಕ್ಕೆ ಸಾಕ್ಷಿ.

ಪ್ರಭಾವಿಸಲು ಸಾಧ್ಯವಿದೆ

ತಮಿಳುನಾಡಿನ ಡಿಎಂಕೆ ಪಕ್ಷವು 'ಎನ್‌ಡಿಎ' ಮೈತ್ರಿಕೂಟದ ಸಹಭಾಗಿಯಲ್ಲ, ಹೀಗಾಗಿ ಪ್ರಸ್ತುತ ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ಡಿಎಂಕೆಯ ಆಟಗಳಿಗೆ ಆಸ್ಪದ ಸಿಗದಿರಬಹುದು; ಆದರೆ ಹೀಗೆ ಸಹಭಾಗಿಯಾಗುವ ಅವಕಾಶ ಸಿಕ್ಕಾಗಲೆಲ್ಲಾ ಡಿಎಂಕೆ ಅಥವಾ ಎಐಎಡಿಎಂಕೆ ಪಕ್ಷಗಳು ತಮ್ಮ ಸಂಖ್ಯಾಬಲವನ್ನು ಬಳಸಿಕೊಂಡು (ಕೆಲವೊಮ್ಮೆ ಸರಕಾರವನ್ನು ಕದಲಿಸುವ ಬೆದರಿಕೆಯನ್ನೂ ಹಾಕಿ!), ತಮಿಳುನಾಡಿಗೆ ಆಗಬೇಕಿರುವ ಕೆಲಸಗಳನ್ನು ಮಾಡಿಸಿಕೊಂಡಿದ್ದಿದೆ, ಯೋಜನೆಗಳನ್ನು ಮಂಜೂರು ಮಾಡಿಸಿಕೊಂಡಿದ್ದಿದೆ. ರಾಜ್ಯ ಮಟ್ಟದಲ್ಲಿ 'ವರ್ಚಸ್ವಿ' ಪ್ರಾದೇಶಿಕ ಪಕ್ಷವೊಂದಿದ್ದರೆ, ಹೀಗೆ ಅಗತ್ಯ ಕೆಲಸಗಳನ್ನು ಮಾಡಿಸಿಕೊಳ್ಳಬಹುದು ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ.

ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳು

1. **ಜಮ್ಮು ಮತ್ತು ಕಾಶ್ಮೀರ** – ಜೆಕೆಎನ್‌ಸಿ
2. **ಪಂಜಾಬ್** – ಆಮ್ ಆದ್ಮಿ ಪಾರ್ಟಿ
3. **ಜಾರ್ಖಂಡ್** – ಜಾರ್ಖಂಡ್ ಮುಕ್ತಿ ಮೋರ್ಚಾ
4. **ಪಶ್ಚಿಮ ಬಂಗಾಳ** – ತೃಣಮೂಲ ಕಾಂಗ್ರೆಸ್
5. **ನಾಗಾಲ್ಯಾಂಡ್** – ಎನ್‌ಡಿಪಿಪಿ
6. **ಸಿಕ್ಕಿಂ** – ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ
7. **ಆಂಧ್ರಪ್ರದೇಶ** – ತೆಲುಗುದೇಶಂ
8. **ಕೇರಳ** – ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್
9. **ತಮಿಳುನಾಡು** – ಡಿಎಂಕೆ



ಭರಪೂರ ಪಕ್ಷಗಳು

ಡಿಎಂಕೆ ಮತ್ತು ಎಐಎಡಿಎಂಕೆ ಮಾತ್ರವಲ್ಲದೆ ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷಗಳ ಮಹಾಪೂರವೇ ಇದೆ. ಈ ಪೈಕಿ ಎಲ್ಲಕ್ಕೂ ಅಧಿಕಾರಭಾಗ್ಯ ಸಿಕ್ಕಿಲ್ಲವಾದರೂ, ಅಸ್ತಿತ್ವವನ್ನು ಕಾಪಿಟ್ಟುಕೊಳ್ಳುವಲ್ಲಿ ಅವು ಸಾಕಷ್ಟು ಕಸರತ್ತು ಮಾಡಿವೆ. ಅಂಥ ಕೆಲವದರ ಪ್ರವರ ಇಲ್ಲಿದೆ:

- ಮಕ್ಕಳ್ ನೀಧಿ ಮಯ್ಯಂ
- ತಮಿಳಗ ವೆಟ್ರಿ ಕಳಗಂ
- ದೇಸೀಯ ಮೂರ್ಪೋಕ್ಕು ಡ್ರಾವಿಡ ಕಳಗಂ
- ನಾಮ್ ತಮಿಳರ್ ಕಚ್ಚಿ
- ವಿಡುದಲೈ ಚಿರತೈಗಳ್ ಕಚ್ಚಿ
- ಅಮ್ಮಾ ಮಕ್ಕಳ್ ಮುನ್ನೇತ್ರ ಕಳಗಂ
- ಇಂಡಿಯಾ ಜನನಾಯಗ ಕಚ್ಚಿ
- ಕೊಂಗುನಾಡು ಮಕ್ಕಳ್ ದೇಸೀಯ ಕಚ್ಚಿ
- ಮರುಮಲರ್ಚಿ ದ್ರಾವಿಡ ಮುನ್ನೇತ್ರ ಕಳಗಂ
- ಪಟ್ಟಾಳಿ ಮಕ್ಕಳ್ ಕಚ್ಚಿ
- ಪುರಚ್ಚಿ ಭಾರತಂ ಕಚ್ಚಿ
- ಪುಥಿಯ ತಮಿಳಗಂ
- ತಮಿಳ್ ಮನಿಲಾ ಕಾಂಗ್ರೆಸ್

ಒಗ್ಗಟ್ಟು ಇಲ್ಲ ಕಣ್ರೀ!

ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗಿದೆ ಎನಿಸಿದಾಗೆಲ್ಲಾ, ''ನಮ್ಮ ಮನೆಯ ಹಿತ್ತಿಲನ್ನು ನಾವೇ ಕಾಯಬೇಕು'' ಎಂಬ ಆಗ್ರಹ ಮುನ್ನೆಲೆಗೆ ಬರುವುದಿದೆ. ಈ ವಿಷಯದಲ್ಲಿ ಎಲ್ಲರೂ ಬೆರಳುಮಾಡಿ ತೋರಿಸುವುದು ತಮಿಳುನಾಡಿನೆಡೆಗೆ. ಅಲ್ಲಿ ಶಿಕ್ಷಣದಲ್ಲಿ ಹಿಂದಿ ಹೇರಿಕೆ, ನದಿ ನೀರು ಹಂಚಿಕೆ ಹೀಗೆ ಯಾವುದೇ ವಿಷಯದಲ್ಲಿ ಹುಯಿಲೆದ್ದರೂ ಅಲ್ಲಿನ ಪ್ರಾದೇಶಿಕ ಪಕ್ಷಗಳ ಶಾಸಕರು/ಸಂಸದರು ಪಕ್ಷ ಭೇದ ಮರೆತು, ರಾಜ್ಯದ ಹಿತ ರಕ್ಷಣೆಯನ್ನು 'ಸಮಷ್ಟಿ ಗುರಿಯಾಗಿ' ಪರಿಗಣಿಸಿ ಸಾಧಿಸಿ ಕೊಳ್ಳುತ್ತಾರೆ. ಆದರೆ ಕರ್ನಾಟಕದಲ್ಲಿ ಇಂಥ ಒಗ್ಗಟ್ಟು ಕಮ್ಮಿ ಎಂಬುದು ಬಹುತೇಕರ ಅಳಲು.

ಭಿನ್ನವಾದವೂ ಇದೆ

'ಕೇಂದ್ರದ ಮಟ್ಟದಲ್ಲಿನ ಅಥವಾ ನೆರೆರಾಜ್ಯಗಳ ಜತೆಗಿನ ಎಲ್ಲ ಸಮಸ್ಯೆಗಳಿಗೂ ಪ್ರಬಲ ಪ್ರಾದೇಶಿಕ ಪಕ್ಷಗಳೇ ಮದ್ದು ಅರೆಯಬಲ್ಲವು, ಅವಿದ್ದರೆ ರಾಜ್ಯ ಪ್ರಗತಿಪಥದತ್ತ ಹೆಜ್ಜೆಹಾಕಬಲ್ಲದು' ಎಂಬ ವಾದವನ್ನು ನಿರಾಕರಿಸುವವರೂ ಇದ್ದಾರೆ. 'ಕರ್ನಾಟಕವನ್ನು ಇದುವರೆಗೂ ಪ್ರಾದೇಶಿಕ ಪಕ್ಷ ಆಳಿದ್ದಿಲ್ಲ; ಹಾಗಂತ ರಾಜ್ಯಕ್ಕೇನು ರಾವು ಬಡಿದಿದೆಯೇ, ಮಾಹಿತಿ ತಂತ್ರಜ್ಞಾನ, ಜವಳಿ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಕರ್ನಾಟಕ ಪಾರಮ್ಯ ಸಾಧಿಸಿದ್ದು ಆಯಾ ಕಾಲಘಟ್ಟದಲ್ಲಿ ಅಧಿಕಾರದಲ್ಲಿದ್ದ ರಾಷ್ಟ್ರೀಯ ಪಕ್ಷಗಳು ಕಲ್ಪಿಸಿದ ಉದ್ಯಮಿ-ಸ್ನೇಹಿ ವಾತಾವರಣದಿಂದಾಗಿ ಅಲ್ಲವೇ?' ಎಂಬುದು ಇಂಥ ನಿರಾಕರಣವಾದಿಗಳ ವಾದ! ಜತೆಗೆ, 'ಕಾವೇರಿ ನದಿನೀರು ಹಂಚಿಕೆ ಸಂಬಂಧಿತ ತಕರಾರಿನಲ್ಲಿ ರಾಜ್ಯಕ್ಕೆ ಪ್ರಾದೇಶಿಕ ಪಕ್ಷಗಳಷ್ಟೇ ನ್ಯಾಯ ಒದಗಿಸಬಲ್ಲವು ಎಂಬ ವಾದದಲ್ಲಿ ಹುರುಳಿಲ್ಲ; ಇದರ ಇತ್ಯರ್ಥಕ್ಕೆ ಬೇಕಿರುವುದು ರಾಜಕೀಯ ಇಚ್ಛಾಶಕ್ತಿಯಷ್ಟೇ. ಆಳುಗರಲ್ಲಿ ಅದಿಲ್ಲವಾದರೆ ರಾಷ್ಟ್ರೀಯ/ಪ್ರಾದೇಶಿಕ ಹೀಗೆ ಯಾವ ಹಣೆಪಟ್ಟಿಯವರಿದ್ದರೂ ರಾಜ್ಯಕ್ಕೆ ನ್ಯಾಯ ದೊರಕದು' ಎಂಬುದು ಇಂಥವರ 'ಭಿನ್ನವಾದ'!

ಜನರ ಒಲವು-ನಿಲುವು

ಪ್ರಾದೇಶಿಕ ಪಕ್ಷಗಳೆಡೆಗೆ ಕನ್ನಡಿಗರ ಒಲವಿಲ್ಲ ಎಂದೇನಿಲ್ಲ; ಆದರೆ ಅವುಗಳ ಹಿಂದಿನ 'ಗುಪ್ತ ಕಾರ್ಯಸೂಚಿ' ಕಂಡು ಅವರು ಭ್ರಮನಿರಸನಗೊಂಡಿದ್ದಾರಷ್ಟೇ! ಜನಕಲ್ಯಾಣದ ತುಡಿತದೊಂದಿಗೆ ಪ್ರಾದೇಶಿಕ ಪಕ್ಷಗಳನ್ನು ಹುಟ್ಟುಹಾಕಿದವರು ನಮ್ಮಲ್ಲಿ ಇರುವಂತೆಯೇ, ತಮ್ಮದೇ 'ಹಿತಾಸಕ್ತಿ'ಯ ನೆರವೇರಿಕೆಗೆ ಆ ನಿಟ್ಟಿನಲ್ಲಿ ಹಾತೊರೆದವರೂ ಇದ್ದಾರೆ. ಮೊದಲ ವರ್ಗದವರಿಗೆ ಜನಮನ್ನಣೆ ದಕ್ಕಲು ಇನ್ನೂ ಒಂದಿಷ್ಟು ಕಾಲವಾಗಬಹುದು; ಆದರೆ 2ನೇ ವರ್ಗದವರಿಂದ ಜನರು ಹತಾಶರಾಗಿದ್ದಾರೆ. ಅಂದರೆ, ಈ 2ನೇ ವರ್ಗದವರಿಗೆ ನಿಜಕ್ಕೂ ಜನಹಿತದ ಆಶಯ ಇದ್ದಿದ್ದರೆ ಪ್ರಾಯಶಃ ಜನರು ಅವರಿಗೆ ಓಗೊಡುತ್ತಿದ್ದರೇನೋ? ಆದರೆ ಇಂಥ ನಾಯಕರು ಪ್ರಾದೇಶಿಕ ಪಕ್ಷಕ್ಕೆ ಚಾಲನೆ ನೀಡಿದ್ದೇ ಭಿನ್ನ ಸಂದರ್ಭಗಳಲ್ಲಿ, ಅಂದರೆ, ಮೂಲಪಕ್ಷದಲ್ಲಿ ತಮಗೆ ಮಹತ್ವ - ಮರ್ಯಾದೆ-ಸ್ಥಾನಮಾನ ಸಿಗಲಿಲ್ಲ ಎಂಬ ಕಾರಣಕ್ಕೆ ಹೊರಬಂದು ತಮ್ಮದೇ ಪಕ್ಷವನ್ನು ಕಟ್ಟಿದವರನ್ನು 'ಇವರದ್ದು ಸ್ವಾರ್ಥಲಾಲಸೆ' ಎಂದೇ ರಾಜ್ಯದ ಪ್ರಜ್ಞಾವಂತರು ಪರಿಗಣಿಸಿ ಮೂಲೆಗೆ ತಳ್ಳಿದ್ದಾರಷ್ಟೇ!

ಪ್ರಾದೇಶಿಕ ಪಕ್ಷಗಳ ಪಕ್ಷಿನೋಟ

- 'ಇಂಡಿಯಾ' ಮೈತ್ರಿಕೂಟದ ಸಹಭಾಗಿಯಾಗಿರುವ 'ಜಾರ್ಖಂಡ್ ಮುಕ್ತಿ ಮೋರ್ಚಾ' ಕಳೆದ ವರ್ಷದ ಜುಲೈನಲ್ಲಿ ಜಾರ್ಖಂಡ್‌ನಲ್ಲಿ ಅಧಿಕಾರಕ್ಕೆ ಬಂತು.
- ಮಹಾರಾಷ್ಟ್ರದಲ್ಲಿ ಈಗಿನದು ಭಿನ್ನ ಪರಿಸ್ಥಿತಿಯೇ ಆಗಿದ್ದರೂ, ಬಾಳಾ ಠಾಕ್ರೆ ಅಬ್ಬರವಿದ್ದಾಗ ಮತ್ತು ನಂತರದ ಸಾಕಷ್ಟು ವರ್ಷಗಳವರೆಗೆ ಅಲ್ಲಿನ 'ಶಿವಸೇನೆ' ಭಾರಿ ಪ್ರಭಾವವನ್ನು ಹೊಂದಿತ್ತು. ಶರದ್ ಪವಾರ್‌ರ 'ನ್ಯಾಷನಲ್ ಕಾಂಗ್ರೆಸ್ ಪಾರ್ಟಿ'ಗೂ ಈ ಮಾತು ಅನ್ವಯ.
- ಪಶ್ಚಿಮ ಬಂಗಾಳವನ್ನು ಸಾಕಷ್ಟು ವರ್ಷ ಆಳಿದ ಕಮ್ಯುನಿಸ್ಟರನ್ನು ಪಲ್ಲಟಗೊಳಿಸಿದ್ದು 'ತೃಣಮೂಲ ಕಾಂಗ್ರೆಸ್'. ಇದರ ಅಧಿನಾಯಕಿ ಮಮತಾ ಬ್ಯಾನರ್ಜಿ ರಾಷ್ಟ್ರೀಯ ರಾಜಕಾರಣದ ಮೇಲೂ ಪ್ರಭಾವ ಬೀರಬಲ್ಲಾಕೆ.
- ಜಮ್ಮು-ಕಾಶ್ಮೀರದಲ್ಲಿ ಗದ್ದುಗೆಯೇರುವ ಹವಣಿಕೆಯಲ್ಲಿತ್ತು ಬಿಜೆಪಿ; ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಲ್ಲಿನ ಜನ ಓಗೊಟ್ಟಿದ್ದು 'ಜಮ್ಮು-ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್' ಪಕ್ಷಕ್ಕೆ.
- ಎನ್.ಟಿ.ರಾಮರಾವ್ ಸಿಎಂ ಆಗಿದ್ದಾಗ ತನ್ನದೇ ಆದ ಅಬ್ಬರ ಹೊಂದಿದ್ದ 'ತೆಲುಗುದೇಶಂ' ಈಗ ಮತ್ತೊಮ್ಮೆ ಆಂಧ್ರದಲ್ಲಿ ಪಾರಮ್ಯವನ್ನು ಸಾಧಿಸಿದೆ.



- ತೆಲಂಗಾಣದಲ್ಲಿ ಪ್ರಸ್ತುತ ಕಾಂಗ್ರೆಸ್ ಸರಕಾರ ಇದೆಯಾದರೂ, ಅದಕ್ಕೂ ಮುನ್ನ ಅಲ್ಲಿ ದರ್ಬಾರು ಮಾಡಿದ್ದು ಕೆ.ಸಿ.ಚಂದ್ರಶೇಖರ ರಾವ್ ಅವರ 'ತೆಲಂಗಾಣ ರಾಷ್ಟ್ರೀಯ ಸಮಿತಿ'.
- ಒಡಿಶಾದಲ್ಲಿ ಪ್ರಸ್ತುತ ಬಿಜೆಪಿಯ ಕಮಲದ ದಳಗಳು ರಾರಾಜಿಸುತ್ತಿರಬಹುದು, ಆದರೆ ಅಲ್ಲಿ ಸಾಕಷ್ಟು ವರ್ಷ ದರ್ಬಾರು ಮಾಡಿದ್ದು 'ಬಿಜು ಜನತಾ ದಳ' ಎಂಬುದನ್ನು ಮರೆಯಲಾಗದು.

ದಶಕಗಳಿಂದ ಕುಡಿಯುವ ನೀರಿನ ಸಮಸ್ಯೆಗೆ ಸಿಗದ ಶಾಶ್ವತ ಪರಿಹಾರ

ನೀರಿಗಾಗಿ ಹಾಹಾಕಾರ: ಸಮಸ್ಯೆ ಕೇಳುವವರಿಲ್ಲ

ಜಿಲ್ಲಾ ನೋಟ

ಮಾಳಿಂಗರಾಯ ಪೂಜಾರ

ಗದಗ ಜಿಲ್ಲೆ ಮೊದಲೇ ಬರದ ನಾಡು. ಇಲ್ಲಿನ ಜನರಿಗೆ ಹಲವು ದಶಕಗಳಿಂದ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದೆ ಇದಕ್ಕೆ ಶಾಶ್ವತ ಪರಿಹಾರ ಸಿಗುತ್ತಿಲ್ಲ. ನೀರಿಗಾಗಿ ಹಾಹಾಕಾರ ನೀರಿನ ಸಮಸ್ಯೆ ಕೇಳುವರೇ ಇಲ್ಲದಂತಾಗಿದೆ.

ನೀರು ಪ್ರತಿಯೊಂದು ಜೀವಕ್ಕೂ ಆಧಾರ ನೀರಿನ ಮೂಲಗಳ ಸಮರ್ಪಕ ನಿರ್ವಹಣೆ ಮೇಲೆ ಅವಲಂಬಿತವಾಗಿರುತ್ತದೆ. ಜಿಲ್ಲೆಯಲ್ಲಿನ ಅತ್ಯಂತ ಜನಪ್ರಿಯ ನಗರಗಳು ಎನಿಸಿಕೊಂಡಿರುವ ಗದಗ ಬೆಟಗೇರಿ ನಗರಸಭೆ ಸೇರಿದಂತೆ ಅನೇಕ ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ ಇನ್ನೂ ಹಲವೆಡೆ ನೀರಿಗೆ ತತ್ವಾರ ಎದುರಾಗುವ ಸಾಧ್ಯತೆ ಇದ್ದು, ಸಮಸ್ಯೆ ನಿವಾರಣೆಗೆ ಆಗದೆ ದಶಕಗಳಿಂದ ಸಮಸ್ಯೆ ಆಗಿಯೇ ಉಳಿದಿದೆ.

ಜಿಲ್ಲೆಯ ಪಟ್ಟಣ ಪ್ರದೇಶದಲ್ಲಿ ವಾಸವಾಗಿರುವ ಜನರು ಕುಡಿಯುವ ನೀರು ಪಡೆಯಲು ಬೀದಿಗಿಳಿದು ಹೋರಾಟ ಮಾಡುವದು ಪ್ರತಿಭಟನೆ ಮಾಡುವುದು ಸಾಮಾನ್ಯವಾಗಿ ಕಂಡು ಬರುವ ದೃಶ್ಯವಾಗಿದೆ. ಇಲ್ಲಿನ ಜನಪ್ರತಿನಿಧಿಗಳು ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಬಂಗಾರದ ಮೊಟ್ಟೆಯಂತೆ ತೋರಿಸುತ್ತಾ ಇದರಲ್ಲಿ ರಾಜಕೀಯ ಮಾಡುತ್ತಾ ಜಿಲ್ಲೆಯ ನಾಯಕರು ದಶಕಗಳಿಂದ ಬಂದಿದ್ದಾರೆ.

ಗದಗ ಜಿಲ್ಲೆಯು ಅಂದರೆ 7 ತಾಲೂಕು ಕೇಂದ್ರಗಳನ್ನು ಹೊಂದಿವೆ. ಜಿಲ್ಲೆಯ ಜನಮೂಲ ಎಂದರೆ ಉತ್ತರಕ್ಕೆ ಮಲಪ್ರಭಾ, ದಕ್ಷಿಣಕ್ಕೆ ತುಂಗ ಭದ್ರಾ ನದಿಯು ಹರಿಯುತ್ತಿದ್ದು, ಜಿಲ್ಲೆಯ ರೋಣ, ನರಗುಂದ, ಗಜೇಂದ್ರಗಡ ತಾಲೂಕಿನ

ಕೇಂದ್ರ ಸೇರಿದಂತೆ ಇವುಗಳ ಗ್ರಾಮೀಣ ಪ್ರದೇಶಗಳಿಗೆ ಮಲಪ್ರಭಾ ನದಿಯ ನೀರು ಸರಬರಾಜು ಮಾಡಿದರೆ, ಇನ್ನೂ ಗದಗ, ಮುಂಡರಗಿ, ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕು ಕೇಂದ್ರದಲ್ಲಿ ಹಾಗೂ ಇವುಗಳ ಗ್ರಾಮಗಳಿಗೆ ತುಂಗಭದ್ರಾ ನದಿಯ ನೀರನ್ನು ಸರಬರಾಜು ಮಾಡಲಾಗುತ್ತದೆ. ಶಿರಹಟ್ಟಿ ಹಾಗೂ ಮುಳಗುಂದ ಪಟ್ಟಣ ಪಂಚಾಯಿತಿಗಳಿಗೆ ತುಂಗಭದ್ರಾ ನದಿಯಿಂದ ಸರಬರಾಜು ಮಾಡಲಾಗುತ್ತಿತ್ತು.

ಆದರೆ ರಾಜ್ಯ ಹೆದ್ದಾರಿ ಕಾಮಗಾರಿಯಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ಪೈಪ್‌ಲೈನ್ ಕಿತ್ತು ಹೋಗಿರುವುದರಿಂದ ಈ ಪಟ್ಟಣಗಳಿಗೆ ಕೊಳವೆ ಬಾವಿ ನೀರೆ ಗತಿಯಾಗಿದೆ. ಅಲ್ಲದೆ ಅನೇಕ ಗ್ರಾಮೀಣ ಪ್ರದೇಶದಲ್ಲಿನ ಜನರು ಗ್ರಾಮದ ಕೆರೆಯ ನೀರು ಕುಡಿಯಲು ಬಳಸುತ್ತಾರೆ.

ಅಲ್ಲದೆ ಗ್ರಾಮೀಣ ಭಾಗದ ಪ್ರತಿ ಮನೆಗೂ ಮೇಲ್ಮೆ? ಜಲಮೂಲದಿಂದ ಶುದ್ಧ ಕುಡಿಯುವ ನೀರು ಪೂರೈಸುವ 'ಹರ್ ಘರ್ ಜಲ್' ಘೋಷಣೆಯಂತೆ ರೂಪಿಸಲಾದ ಮಿಷನ್ ಗುರಿ ಹೊಂದಲಾಗಿದೆ. ಈ ಯೋಜನೆ ಯಾವುದೇ ಒಂದು ಗ್ರಾಮದಲ್ಲಿ ಪೂರ್ಣಗೊಂಡಿಲ್ಲ ಎನ್ನುವ ಆರೋಪಗಳು ಸಾಕಷ್ಟಿವೆ.

ಶುದ್ಧ ಕುಡಿಯುವ ನೀರಿನ ಘಟಕ

ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ಒದಗಿಸುವ ನಿಟ್ಟಿನಲ್ಲಿ ಜಿಲ್ಲಾ ವ್ಯಾಪ್ತಿಯ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 439 ಶುದ್ಧ ಕುಡಿಯುವ ನೀರಿನ ಘಟಕ ನೀರಿನ ಘಟಕಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮೂಲಕ ಸ್ಥಾಪನೆ ಮಾಡಿ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವ ಜಿಲ್ಲೆ ಎಂದು ರಾಜ್ಯಕ್ಕೆ ಮಾದರಿಯಾಗಿತ್ತು. ಇದನ್ನು ನೋಡಿಕೊಂಡು ಅನೇಕ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲಾಗಿತ್ತು ಆದರೆ ಪ್ರಸ್ತುತ ಜಿಲ್ಲೆಯಲ್ಲಿ ಬೆರಳಿಕೆ ಮಾತ್ರ ಪ್ರಾರಂಭದಲ್ಲಿದ್ದು, ಇನ್ನುಳಿದ ಘಟಕಗಳು ತುಕ್ಕು ಹಿಡಿದಿವೆ.

ನೀರಿನ ಸರಬರಾಜು ಕಷ್ಟ

ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇದಕ್ಕೆ ಶಾಶ್ವತ ಪರಿಹಾರ ಒದಗಿಸಲು ಮುಂದಾಗುತ್ತಿಲ್ಲ ಕೇವಲ ಕಾಗದದಲ್ಲಿ ಮಾತ್ರ 24X7 ಕುಡಿಯುವ ನೀರಿನ ಯೋಜನೆ ಜಾರಿಗೆ ತಂದು ನೀರಿನಂತೆ ಹಣ ಖರ್ಚು ಮಾಡಿದರು ಶಾಶ್ವತ ಕುಡಿಯುವ ನೀರಿನ ಯೋಜನೆ ಸಮರ್ಪಕವಾಗಿ ಆಗಿಲ್ಲ. ನದಿಯ ನೀರು ಸಂಗ್ರಹಿಸುವ ಬ್ಯಾರೇಜ್ ನೀರಿನ ಮಟ್ಟ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ ಗದಗ ಬೆಟಗೇರಿ ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ನೀರು ಸರಬರಾಜು ಮಾಡುವುದು ದೊಡ್ಡ ಸವಾಲಾಗಿದೆ. ಜೀವಜಲಕ್ಕೆ ಹಾಹಾಕಾರ ಪ್ರಾರಂಭವಾಗಿದ್ದು, ನದಿ ಪಾತ್ರಗಳು, ಹಳ್ಳ, ಕೊಳ್ಳ, ಕೆರೆ ಕಟ್ಟೆಗಳು ನೀರಿನ ಪ್ರಮಾಣ ಇಳಿಕೆ ಕಂಡಿದೆ ಇದರಿಂದ ನೀರಿನ ಹಾಹಾಕಾರ ಉಲ್ಬಣಿಸುವ ಬೇಸಿಗೆ ಇರುವದರಿಂದ ಇನ್ನಷ್ಟು ಹೆಚ್ಚಾಗಿದೆ. ಅಲ್ಲದೆ ಮೊದಲೇ ಬಯಲು ಸೀಮೆ ಇಲ್ಲಿ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಕುಸಿತ ಕಾಣುತ್ತಿವೆ. ಕೊಳವೆ ಬಾವಿಗಳನ್ನು ಕೊರೆಸಿದರೆ ನೀರಿನ ಮಟ್ಟ ಪಾತಾಳ ಕಂಡಿದ್ದು, ಎಷ್ಟೇ ಆಳ ಕೊರೆಸಿದರು ನೀರು ಬೀಳುವುದಿಲ್ಲ.

ಜಿಲ್ಲಾದ್ಯಂತ ಪ್ರತಿ ವರ್ಷ ಬೇಸಿಗೆ ಸಂದರ್ಭದಲ್ಲಿ ನೀರಿನ ಕೊರತೆ ಎದುರಾಗೋದು ಮಾಮೂಲು. ಆದರೆ, ವರ್ಷದಿಂದ ವರ್ಷಕ್ಕೆ ನೀರಿನ ಅಭಾವ ವಿಪರೀತವಾಗಿದೆ. ನೀರನ್ನು ಮಿತವಾಗಿ ಬಳಸುವುದು ನೀರಿಗಾಗಿ ಹಾಹಾಕಾರ ಎದುರಾಗಿರುವ ಹೊತ್ತಲ್ಲಿ ಜಲ ಸಂರಕ್ಷಣೆಯ ಮಂತ್ರ ಪಠಿಸಬೇಕಾಗಿ ಬಂದಿದೆ. ನೀರಿಗೆ ಹಾಹಾಕಾರ ಎದುರಾಗಿರುವ ಇಂದಿನ ದಿನಗಳಲ್ಲಿ ಜಲ ಸಂರಕ್ಷಣೆಯೇ ಮುಖ್ಯವಾಗಿದೆ.

> **ದಶಕಗಳಿಂದ ಜಿಲ್ಲಾದ್ಯಂತ ನೀರಿನ ಸಮಸ್ಯೆ ಉಲ್ಬಣಿಸಿದೆ. ಇದಕ್ಕೆ ಶಾಶ್ವತ ಪರಿಹಾರ ಸಿಗುತ್ತಿಲ್ಲ. ಗದಗ ನಗರಕ್ಕೆ 24X7 ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಕೋಟಿ ಕೋಟಿ ಹಣ ಖರ್ಚು ಆದರೂ ಜನರಿಗೆ ಸಮರ್ಪಕ ನೀರು ಸಿಕ್ಕಿಲ್ಲ. ಜಿಲ್ಲೆಯ ರಾಜಕೀಯ ನಾಯಕರು ಹಾಗೂ ಅಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ.**
>
> **-ವೆಂಕನಗೌಡ ಗೋವಿಂದಗೌಡ್ರ**
> ಜೆಡಿಎಸ್ ರಾಜ್ಯ ವಕ್ತಾರರು

ಟ್ಯಾಂಕರ್ ಮೊರೆ

ಪ್ರತಿ ಬೇಸಿಗೆಯಲ್ಲಿ ಗದಗ ನಗರಸಭೆಯಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಇದಕ್ಕಾಗಿ ನಗರಸಭೆಯಿಂದ ಲಕ್ಷಾಂತರ ರೂಪಾಯಿ ಖರ್ಚು ಮಾಡಲಾಗುತ್ತದೆ ಹಾಗೂ ಪಟ್ಟಣದ ಪ್ರದೇಶದಲ್ಲಿ ನೀರಿನ ಟ್ಯಾಂಕ್ ಬೆಲೆ ಗಗನಕ್ಕೇರಿದ್ದು, ನೀರಿಗಾಗಿ ಜನ ನಗರಸಭೆ ಹಾಗೂ ಜಿಲ್ಲೆಯಲ್ಲಿರುವ ಪುರಸಭೆ, ಪಟ್ಟಣ ಪಂಚಾಯಿತಿ ವಿರುದ್ಧ ಬಿಂದಿಗೆ ಹಿಡಿದುಕೊಂಡು ನೀರೆಯರು ಬೀದಿಗೆ ಬರುವುದು ಸಾಮಾನ್ಯವಾಗಿದೆ. ಜಿಲ್ಲೆಯ ನೀರಿನ ಸಮಸ್ಯೆ ಬಗ್ಗೆ ಸಂಬಂಧಿಕರು ತಮ್ಮ ಮಗಳನ್ನು ಕೊಡಬೇಕಾಗ ದರೆ ವಿಚಾರ ಮಾಡುವಂತಾಗಿದ್ದು, ಗದಗನಲ್ಲಿ ನೀರಿಲ್ಲ ಅಂತಹ ನಗರಕ್ಕೆ ಮಗಳನ್ನು ಕೊಡುವುದಿಲ್ಲ ಎಂಬ ಪ್ರಶ್ನೆಗಳು ಮೂಡುತ್ತಿದೆ ಇದು ಸಾರ್ವಜನಿಕರಿಂದ ಕೇಳಿ ಬರುವ ಮಾತಾಗಿದೆ. ಅಲ್ಲದೆ ಬೆಳಗಾಗುತ್ತಿದ್ದಂತೆ ಬಿಂದಿಗೆಗಳನ್ನು ಹಿಡಿದು ತೋಟ ಗದ್ದೆಗಳಲ್ಲಿ ರುವ ಕೊಳವೆ ಬಾವಿಗಳಲ್ಲಿ ನೀರು ತರಲು ಗ್ರಾಮಸ್ಥರು ಅಲೆದಾಡುತ್ತಿದ್ದಾರೆ. ಗದಗ ನಗರದ ನೀರಿನ ಸಮಸ್ಯೆ ಬಗೆಹರಿಸಲು ಹಾಗೂ ಶಾಶ್ವತ ಪರಿಹಾರ ನೀಡುವಲ್ಲಿ ಸಂಬಂಧ ಪಟ್ಟ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಮುಂದಾಗುತ್ತಿಲ್ಲ ಸಮಸ್ಯೆ ಇನ್ನಷ್ಟು ಹೆಚ್ಚಾಗುತ್ತಾ ಹೋಗುತ್ತಿದೆ.

ತುಮಕೂರು: ಕಳೆದ ಹದಿನೈದು ತಿಂಗಳಲ್ಲಿ 939 ಮಂದಿ ಮರಣ

ಅಪಘಾತ ತಾಣವಾದ ಕಲ್ಪತರು ನಾಡು

ಜಿಲ್ಲಾ ನೋಟ

ರಂಗನಾಥ ಕೆ.ಹೊನ್ನಮರಡಿ

ತುಮಕೂರು ಜಿಲ್ಲೆಯಲ್ಲಿ ವಿವಿಧ ರೀತಿಯ ಅಪಘಾತಗಳಿಂದ ಮೃತ, ಗಾಯಾಳು, ಮಾರಣಾಂತಿಕ ಅಪಘಾತ ಪ್ರಕರಣಗಳು ಅಧಿಕವಾಗುತ್ತಿರುವುದು ಆತಂಕ ಮೂಡಿಸಿದೆ. ಜನವರಿ 2024 ರಿಂದ ಮಾರ್ಚ್ 2025 ರವರೆಗೆ (15 ತಿಂಗಳು) ಸಂಭವಿಸಿದ ಅಪಘಾತಗಳಲ್ಲಿ ಪುರುಷ, ಮಹಿಳೆ ಮಕ್ಕಳು ಸೇರಿ 939 ಮಂದಿ ಮೃತರಾಗಿದ್ದಾರೆ. 3743 ಮಂದಿ ಗಾಯಾಳುಗಳಾಗಿದ್ದಾರೆ. ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಅಪಘಾತದಿಂದ ಉಂಟಾಗುತ್ತಿರುವ ಸಾವಿನ ಪ್ರಮಾಣ ಹೆಚ್ಚಾಗುತ್ತಿದೆ.

2024 ಜನವರಿ-ಡಿಸೆಂಬರ್ ಮೃತಪಟ್ಟವರು

ತಿಂಗಳು	ಪುರುಷ	ಮಹಿಳೆ	ಮಕ್ಕಳು	ಒಟ್ಟು
ಜನವರಿ	56	09	01	66
ಫೆಬ್ರವರಿ	44	07	01	52
ಮಾರ್ಚ್	42	12	04	58
ಏಪ್ರಿಲ್	57	08	02	67
ಮೇ	50	08	01	59
ಜೂನ್	46	12	01	59
ಜುಲೈ	47	03	01	51
ಆಗಸ್ಟ್	54	09	01	64
ಸೆಪ್ಟಂಬರ್	51	07	07	65
ಅಕ್ಟೋಬರ್	5	12	02	59
ನವೆಂಬರ್	60	07	01	68
ಡಿಸೆಂಬರ್	61	10	01	72
ಒಟ್ಟು	613	104	23	740

ಅಪಘಾತದಿಂದ ಮೃತಪಡುತ್ತಿರುವ ಹಾಗೂ ಗಾಯಾಳುಗಳಾಗುತ್ತಿರುವ ಪ್ರಕರಣಗಳಲ್ಲಿ ಪುರುಷರ ಸಂಖ್ಯೆ ಹೆಚ್ಚಾಗಿದೆ. ಈ ಬಗ್ಗೆ ಇಲಾಖೆಗಳು ಸಾರ್ವಜನಿಕರಲ್ಲಿ ಸಾಕಷ್ಟು ಅರಿವು ಮೂಡಿಸಬೇಕಾದ ಅಗತ್ಯತೆಯಿದೆ.ಅಪಘಾತದಿಂದ ಸಾವಿನ ಪ್ರಮಾಣ ಹೆಚ್ಚುತ್ತಿರುವ ಆತಂಕದ ನಡುವೆ ಅವಘಡಗಳಿಂದ ದೇಹದ ಅಂಗಾಂಗಗಳು ಶಾಶ್ವತವಾಗಿ ಊನಗೊಳ್ಳುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ.

ದಾಖಲೆಗಳಿಲ್ಲದೆ ವಾಹನ ಸಂಚಾರ: ಜಿಲ್ಲೆಯಲ್ಲಿ ಡಿಎಲ್, ಆರ್ ಸಿ, ಇನ್ಸೂರೆನ್ಸ್ ಸೇರಿದಂತೆ ಮತ್ತಿತರ ದಾಖಲೆಗಳಿಲ್ಲದೆ ಸಂಚರಿಸುತ್ತಿರುವ ವಾಹನಗಳ ಸಂಖ್ಯೆ ಅಧಿಕವಾಗಿದೆ. ಅಪ್ರಾಪ್ತ ಮಕ್ಕಳು ವಾಹನಗಳನ್ನು ಚಲಾಯಿಸುತ್ತಿರುವುದರಿಂದ ಅನಾಹುತಗಳು ಹೆಚ್ಚಾಗುತ್ತಿದೆ. ಈ ಬಗ್ಗೆ ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕಿದೆ.

ಅಭಿವೃದ್ಧಿಗೂ ಮುನ್ನ ಟೋಲ್

ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ 5 ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ. ನೆಲಮಂಗಲ - ತುಮಕೂರು ಮಾರ್ಗವೊಂದರಲ್ಲಿಯೇ 2022 ರಿಂದ 2024ರ ಅವಧಿಯಲ್ಲಿ 256 ಮಂದಿ ಅಪಘಾತಕ್ಕೆ ಬಲಿಯಾಗಿದ್ದಾರೆ. ಆದರೆ ಇದನ್ನು ತಡೆಯಲು ಜಿಲ್ಲಾಡಳಿತ ವಾಗಲಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವಾಗಲಿ ಯಾವುದೇ ಖಚಿತ ಕ್ರಮ ತೆಗೆದುಕೊಂಡಿಲ್ಲ, ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಮುಗಿಯುವ ಮುನ್ನವೇ ಟೋಲ್ ಸಂಗ್ರಹಿಸಲು ಮುಂದಾಗುವ ಹೆದ್ದಾರಿ ಪ್ರಾಧಿಕಾರ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ನಾಗರಿಕರು ಬೇಸರಿಸಿದ್ದಾರೆ.

ಗ್ರೀನ್‌ಫೀಲ್ಡ್ ಕಾರಿಡಾರ್, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ, ಕೈಗಾರಿಕಾ ಹಬ್ ಸ್ಥಾಪನೆ ಸೇರಿದಂತೆ ಹತ್ತಾರು ಅಭಿವೃದ್ಧಿ ಕಲ್ಪನೆಗಳು ಭವಿಷ್ಯದ ತುಮಕೂರಿನ ಚಿತ್ರಣ ತೆರೆದಿಟ್ಟಿವೆ. ಆದರೆ ರಾಷ್ಟ್ರೀಯ ಹೆದ್ದಾರಿ ಸರಿದಾರಿಗೆ ಬಾರದ ಹೊರತು ತುಮಕೂರು ಅಭಿವೃದ್ಧಿ ಕನಸಾಗಿಯೇ ಉಳಿಯಲಿದೆ ಎನ್ನುವುದು ಇಲ್ಲಿನ ಪ್ರಜ್ಞಾವಂತ ನಾಗರಿಕರ ಅನಿಸಿಕೆ.

ಮುಖ್ಯವಾಗಿ ಹೆದ್ದಾರಿ ಪ್ರಾಧಿಕಾರ ಕಾಮಗಾರಿ ಮುಗಿದ ಕೂಡಲೆ ಅನುಪಯುಕ್ತ ಬ್ಲಾಕ್‌ಗಳು ಸೇರಿದಂತೆ ತ್ಯಾಜ್ಯಗಳನ್ನು ತೆರವುಗೊಳಿಸಬೇಕು. ಹೆಗ್ಗೆರೆಯಲ್ಲಿ ರೈಲ್ವೆ ಕೆಳಸೇತುವೆ ಕಾಮಗಾರಿ ಮುಗಿದು ಎರಡು ವರ್ಷಗಳ ಬಳಿಕವೂ ತ್ಯಾಜ್ಯ ವಿಲೇವಾರಿ ಮಾಡಿರಲಿಲ್ಲ. ಚರಂಡಿ ಕೆಲಸ ಅರೆಬರೆ ಮುಗಿಸಿ ಹೋದ ಉದಾಹರಣೆಗಳಿವೆ.

ಕಣ್ಣು ಕುಕ್ಕುವ ಲೈಟ್

ಎನ್‌ಎಚ್ 206ರಲ್ಲಿ ನಡೆಯುವ ಹೆಚ್ಚಿನ ಅಪಘಾತಗಳು ರಾತ್ರಿ ವೇಳೆ ನಡೆಯುತ್ತಿವೆ. ಹೈ ಎಂಡ್ ಕಾರುಗಳು ಹೈಬೀಮ್ ಲೈಟ್ ಹಾಕಿಕೊಂಡು ಬಂದಾಗ ಎದುರಿನಿಂದ ಬರುವ ವಾಹನ ಸವಾರರು ದಿಕ್ಕು ತೋಚದಂತಾಗುತ್ತಾರೆ. ಇದರಿಂದಾಗಿಯೇ ಹಲವು ಅಪಘಾತಗಳು ಸಂಭವಿಸಿವೆ. ಈ ನಿಟ್ಟಿನಲ್ಲಿ ಮೋಟಾರು ವಾಹನ ಕಾಯಿದೆಯಲ್ಲಿ ಉಲ್ಲೇಖಿಸಿರುವ ನಿಯಮಗಳಂತೆ ಹೆಡ್‌ಲೈಟ್ ಇರುವಂತೆ ಸಾರಿಗೆ ಪ್ರಾಧಿಕಾರ ಕಟ್ಟುನಿಟ್ಟಿನ ಸೂಚನೆ ಹೊರಡಿಸಬೇಕಾಗಿದೆ. ಹೆದ್ದಾರಿಗಳ ಉದ್ದಕ್ಕೂ ಇರುವ ಬಾರ್ ಮತ್ತು ದಾಬಾಗಳಲ್ಲಿ ಕಂಠಪೂರ್ತಿ ಕುಡಿದು ವಾಹನ ಚಲಾಯಿಸುವವರ ವಿರುದ್ಧವೂ ಪೊಲೀಸರು ಕ್ರಮ ಜರುಗಿಸಬೇಕಾಗಿದೆ.

2025

ಜನವರಿ

ಮಾರಕ ಅಪಘಾತ	60
ಮಾರಕವಲ್ಲದ ಅಪಘಾತ	146
ಅಪಘಾತದಲ್ಲಿ ಮೃತಪಟ್ಟವರು	68
ಗಾಯಾಳುಗಳು	244

ಫೆಬ್ರವರಿ

ಮಾರಕ ಅಪಘಾತ	56
ಮಾರಕವಲ್ಲದ ಅಪಘಾತ	155
ಅಪಘಾತದಲ್ಲಿ ಮೃತಪಟ್ಟವರು	59
ಗಾಯಾಳುಗಳು	246

ಮಾರ್ಚ್

ಮಾರಕ ಅಪಘಾತ	69
ಮಾರಕವಲ್ಲದ ಅಪಘಾತ	154
ಅಪಘಾತದಲ್ಲಿ ಮೃತಪಟ್ಟವರು	72
ಗಾಯಾಳುಗಳು	257

41 ನಿರಂತರ ಅಪಘಾತ ತಾಣಗಳು

ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿರಂತರವಾಗಿ ಅಪಘಾತಗಳು ಸಂಭವಿಸುತ್ತಿರುವ 41 ಅಪಾಯದ ತಾಣಗಳನ್ನು ಅಧಿಕಾರಿಗಳು ಗುರುತಿಸಿದ್ದು, ಅವುಗಳ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುವುದಾಗಿ ಜಿಲ್ಲಾ ಪೊಲೀಸರು ತಿಳಿಸಿದ್ದಾರೆ. ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ಪ್ರತಿ ತಿಂಗಳು ಸಂಬಂಧಿತ ಇಲಾಖೆ ಸಭೆ ನಡೆಸಿ, ಸೂಕ್ತ ಸುರಕ್ಷತಾ ಕ್ರಮಗಳು ಕೈಗೊಂಡಿದೆ. ರಸ್ತೆ ಅಪಘಾತಗಳನ್ನು ತಪ್ಪಿಸಲು ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಪ್ರತಿ ವರ್ಷ ಜನವರಿ ಮಾಹೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಶಾಲಾ- ಕಾಲೇಜುಗಳಲ್ಲಿಯೂ ರಸ್ತೆ ಸುರಕ್ಷತೆ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ. ಕಳೆದ ಕ್ಯಾಲೆಂಡರ್ ವರ್ಷದಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಸೇರಿದಂತೆ ರಸ್ತೆ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದ 425 ಚಾಲನಾ ಪರವಾನಗಿಯನ್ನು ಅಮಾನತು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

4 ಕೋಟಿ ದಂಡ ಸಂಗ್ರಹ

ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ 2024ರ ಜನವರಿ ಮಾಹೆಯಿಂದ ಡಿಸೆಂಬರ್ ತನಕ ದಂಡ ಶುಲ್ಕವಾಗಿ 1.71 ಲಕ್ಷ, 5663 ಇಲಾಖಾ ಪ್ರಕರಣಗಳಲ್ಲಿ 2.38 ಲಕ್ಷ ರೂ ಸೇರಿ 4.09 ಕೋಟಿ ರು. ದಂಡ ಸಂಗ್ರಹಿಸಲಾಗಿದೆ.

ಚಿತ್ತವಿಹಾರ

ಅವಸರದ ಅನಾಹುತಗಳು

ಧಾವಂತದಿಂದ ಓಟದ ಜೀವನವನ್ನು ನಡೆಸುತ್ತಿರುವವರನ್ನು ಬದುಕು ಬೇಗ ದಣಿಸಿ ಬಿಡುತ್ತದೆ. ಹಿಂದೊಮ್ಮೆ ಬಂಗಾಳದ ವಿಧಾನಸಭೆಯ ಸದಸ್ಯರೊಬ್ಬರು ಅಂಚೆ ಕಛೇರಿಗೆ ಬಂದು, 'ಕಂಪೆನಿಯೊಂದರ ಜನರಲ್ ಮ್ಯಾನೇಜರ್‌ಗೆ ಫೋನ್ ಮಾಡಬೇಕಿದೆ' ಎಂದಾಗ, ಅಲ್ಲಿಯ ಸಿಬ್ಬಂದಿ 'ಅವರು 10.30ರ ನಂತರ ಕಛೇರಿಗೆ ಬರುವುದು, ಈಗಿನ್ನೂ 9 ಗಂಟೆ, ನಂತರ ಕರೆ ಮಾಡಿ'ಸಲಹೆ ನೀಡಿದರು. ಸ್ವಲ್ಪ ಹೊತ್ತು ಚಡಪಡಿಸಿದ ಅವರು ತಾಳ್ಮೆ ಕಳೆದುಕೊಂಡು ಕಛೇರಿಗೆ ಕರೆ ಮಾಡಿದರು. ಆದರೆ ಆ ಕಡೆಯಿಂದ ಮಾತನಾಡುತ್ತಿರುವುದು ಸಹಾಯಕ ಎಂದು ತಿಳಿದ ನಂತರ ಇವರು ಒರಟಾಗಿ ಫೋನನ್ನು ಇಟ್ಟುಬಿಟ್ಟರು. ಅರ್ಧ ಗಂಟೆಯ ನಂತರ ಮತ್ತೆ ಕರೆ ಮಾಡಿದಾಗಲೂ ಸಹಾಯಕನೇ ಆ ಕೊನೆಯಲ್ಲಿರುವುದು ಎಂದು ಖಚಿತವಾಗಿ ಕೋಪದಿಂದ ಫೋನ್ ಕುಕ್ಕಿದರು. 10:30ರ ಹೊತ್ತಿಗೆ ಮತ್ತೊಮ್ಮೆ ಕರೆ ಮಾಡಿ ವ್ಯಂಗ್ಯ, ಅಸಹನೆ, ಅಸಮಾಧಾನದ ಧ್ವನಿಯಲ್ಲಿ, 'ಯಾರು ಸಹಾಯಕ ಮಾತಾಡುತ್ತಿರುವುದೇ?' ಎಂದು ಕೇಳಿದರು. ಈ ಬಾರಿ ಕರೆ ಸ್ವೀಕರಿಸಿದ ವರು ಸ್ವತಃ ಜನರಲ್ ಮ್ಯಾನೇಜರ್ ಆಗಿದ್ದರು. ಇವರ ಮಾತುಗಳನ್ನು ಕೇಳಿ ಫೋನ್ ಕೆಳಗಿಟ್ಟಿರ ಬೇಕು ಅವರು, ಇವರು ಸೋತ ಮುಖ ಮಾಡಿಕೊಂಡು, ಅಂಚೆ ಕಛೇರಿಯ ಸಿಬ್ಬಂದಿಗೆ ಮುಖವನ್ನೂ ತೋರಿಸದೆ ಹೊರಟು ಹೋದರು. ಬೇಗ ಕೆಲಸ ಮುಗಿಸಿ ಬಿಡುವೆ ಎಂದುಕೊಂಡು ಬಂದವರ ಒಂದೂವರೆ ಗಂಟೆ ಸಮಯ ನಿಷ್ಪ್ರಯೋಜಕವಾಗಿ ಕಳೆದು ಹೋಗಿತ್ತು. ಇವರ ಉದ್ವೇಗ ವಿವೇಕವನ್ನು ದೂರ ಕ್ಕೋಡಿಸಿತ್ತು. ಸಮಯಕ್ಕೆ ಸರಿಯಾಗಿ ಕೆಲಸ ಮಾಡದೆ, ಕೆಲಸವನ್ನು ಮುಂದೂಡುತ್ತಾ, ಅಂತಿಮ ಕ್ಷಣಗಳಲ್ಲಿ ಅನಿವಾರ್ಯ ಪರಿಸ್ಥಿತಿ ನಿರ್ಮಿಸಿಕೊಂಡು, ಅಚಾತುರ್ಯ ತೋರುವುದು ಇದಕ್ಕೆಲ್ಲ ಕಾರಣ. ಒಮ್ಮೆ ಆದ ತಪ್ಪನ್ನು ತಿದ್ದಿಕೊಳ್ಳದೆ, ಅದೇ ತನ್ನ ವೈಶಿಷ್ಟ್ಯ ಎಂದು ಹೇಳಿಕೊಳ್ಳುತ್ತಾ, ಆ ಅವ್ಯ ವಸ್ಥೆಯ ಅಭ್ಯಾಸವನ್ನೇ ಬಲಪಡಿಸಿಕೊಳ್ಳುತ್ತಾ ಹೋಗುವುದು ವಿಷಾದನೀಯ. ಗೊಂದಲ, ಅನ್ಯಮನಸ್ಕ ಯೋಚನೆಗಳನ್ನು ವಿವೇಚನೆಯಿಂದ ದೂರಗೊಳಿಸಿ, ಸಕಾಲದಲ್ಲಿ ವ್ಯವಸ್ಥಿತವಾಗಿ ಕಾರ್ಯೋನ್ಮುಖರಾಗಿ, ಒಂದು ಸಮಯದಲ್ಲಿ ಒಂದೇ ಕೆಲಸದ ಕಡೆಗೆ ಗಮನ ವಿಟ್ಟು, ಕಾರ್ಯಕ್ಕೆ ಬೇಕಾಗುವ ಅವಧಿ ಎಷ್ಟೆಂದು ಗಮನಿಸಿ, ವಾಸ್ತವಿಕತೆಗೆ ಪ್ರಾಶಸ್ತ್ಯ ನೀಡಿ ಕಾರ್ಯತತ್ಪರರಾದರೆ, ಅವಸರದಿಂದ ಆಗುವ ಅನಾಹುತಗಳನ್ನು ತಪ್ಪಿಸಬಹುದು.

• ಮಾಯಾ ಬಾಲಚಂದ್ರ

ಜಂಕ್‌ಫುಡ್ ತಿನ್ನಬೇಕೆನ್ನುವ ಕ್ರೇಜ್ ಮಕ್ಕಳಲ್ಲಿ ಕಾಯಿಲೆಗದು ರಹದಾರಿ

• ಮಲ್ಲಪ್ಪ. ಸಿ. ಖೊದ್ನಾಪೂರ

ವೈವಿಧ್ಯತೆಯಲ್ಲಿ ಏಕತೆ, ಬಹುಸಂಸ್ಕೃತಿ ಹಾಗೂ ವಿಶಿಷ್ಟ ಬಗೆಯ ಆಹಾರ ಪದ್ಧತಿ ಹೊಂದಿದ ರಾಷ್ಟ್ರ ನಮ್ಮದೆಂಬುದು ನಿಜಕ್ಕೂ ಹೆಮ್ಮೆ. ನಮ್ಮ ಪೂರ್ವಜರು ದೈಹಿಕ ಸದೃಢತೆಗಾಗಿ ಹಾಲು, ಹಣ್ಣು, ಮೊಟ್ಟೆ, ದ್ವಿದಳ ಧಾನ್ಯಗಳು ಮತ್ತು ಸಮತೋಲಿತ ಸಸ್ಯ ಆಹಾರವನ್ನು ಸೇವಿಸುವುದರ ಮೂಲಕ ದೇಹಕ್ಕೆ ಅಗತ್ಯವಿರುವ ಎಲ್ಲಾ ವಿಧದ ಪೋಷಕಾಂಶಗಳನ್ನು ಪಡೆಯುತ್ತಿದ್ದರು. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ, ಆಧುನಿಕತೆಯತ್ತ ಮಾರು ಹೋಗುತ್ತಿರುವ ನಮ್ಮ ಇಂದಿನ ಮಕ್ಕಳು ಮತ್ತು ಯುವ ಜನಾಂಗವು ಬರ್ಗರ್, ಫಿಜ್ಜಾ, ಪಾನಿಪುರಿ, ಸ್ಯಾಂಡ್‌ವಿಚ್, ಪಾಸ್ತಾ ಮುಂತಾದ ಸಿದ್ಧ ಆಹಾರಗಳನ್ನು (ಜಂಕ್ ಫುಡ್) ಸೇವಿಸುತ್ತಾ ಅಮೂಲ್ಯ ಆರೋಗ್ಯ ಸಂಪತ್ತನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಕಛೇರಿಗೆ ಹೋಗುವ ಗಡಿಬಿಡಿಯಲ್ಲಿ ಅಮ್ಮಂದಿರು ಸ್ವತಃ ಮಕ್ಕಳ ಟಿಫಿನ್ ಬಾಕ್ಸ್‌ಗೆ ಜಂಕ್ ಫುಡ್ ಪ್ಯಾಕೆಟ್‌ಗಳನ್ನು ತುರುಕುತ್ತಿರುವುದೂ ನಗರಗಳಲ್ಲಿ ಕಂಡುಬರುತ್ತಿರುವ ಸಾಮಾನ್ಯ ದೃಶ್ಯ.

ಯಾವುದೇ ಪೋಷಕಾಂಶ ಇಲ್ಲದ ಹಾಗೂ ಯಾವಾಗಲೋ ತಯಾರಿಸಿದ ಸಿದ್ಧ ಆಹಾರ ಪದಾರ್ಥವನ್ನು ಸೇವಿಸಿ ಮಕ್ಕಳು ಬೊಜ್ಜುವೀರರಾದರೆ ದೇಶದಲ್ಲಿ ಆರೋಗ್ಯವಂತರ ಪ್ರಮಾಣವೂ ಇಳಿಮುಖವಾಗುವುದೂ ಕೂಡ ಸಹಜ. ಇತ್ತೀಚೆಗಿನ ಸಮೀಕ್ಷೆಗಳ ಪ್ರಕಾರ, ನಮ್ಮ ದೇಶದ ಮಕ್ಕಳಲ್ಲೂ ಬೊಜ್ಜು ಸೇರಿದಂತೆ ಇತರ ರೋಗಗಳ ಪ್ರಮಾಣವು ಅತ್ಯಧಿಕವಾಗಿ ಹೆಚ್ಚುತ್ತಿರುವುದು ಕಂಡುಬಂದಿದೆ. ಗುಜರಾತ್ ರಾಜ್ಯವು ಈ ಪೈಕಿ ಮೊದಲ ಸ್ಥಾನದಲ್ಲಿದ್ದರೆ, ಕೇರಳ ಎರಡನೇಯ ಸ್ಥಾನದಲ್ಲಿದೆ, ನಮ್ಮ ಕರ್ನಾಟಕ ರಾಜ್ಯವು 4ನೇ ಸ್ಥಾನದಲ್ಲಿದೆ. ಈ ಗಂಭೀರ ಅಪಾಯವನ್ನರಿತ ಕೇರಳ ರಾಜ್ಯ ಸರಕಾರವು ಜಂಕ್ ಫುಡ್‌ಗಳ ಮೇಲೆ ಹೆಚ್ಚುವರಿಯಾಗಿ ಶೇ 14.5%ರಷ್ಟು ತೆರಿಗೆ ಭಾರ ವಿಧಿಸುವ ಮೂಲಕ ಜಂಕ್ ಫುಡ್ ತಿನ್ನುವುದರಿಂದ ಜನರನ್ನು ತಡೆಯುವ ಪ್ರಯತ್ನ ಮಾಡುವ ಆರೋಗ್ಯ ಸುಧಾರಣಾ ಕ್ರಮಕ್ಕೆ ಮುಂದಾಗಿರುವುದು ಸ್ವಾಗತಾರ್ಹ.

ಬೆಳೆಯುವ ವಯಸ್ಸಿನಲ್ಲಿಯೇ ಮಕ್ಕಳು ಆಧುನಿಕತೆಯ ಹೆಸರಿನಲ್ಲಿ ಪಾಶ್ಚಾತ್ಯರಂತೆ ಜಂಕ್ ಫುಡ್‌ನ ಜೀವನಶೈಲಿಯನ್ನು ಅನುಸರಿಸುತ್ತಿರುವುದರಿಂದ ಸಾಮಾನ್ಯವಾಗಿ ಮಕ್ಕಳಲ್ಲಿ ಹೃದ್ರೋಗ, ಕ್ಯಾನ್ಸರ್, ಹೈ-ಬಿ.ಪಿ, ಡಯಾಬಿಟಿಸ್, ಅಪೆಂಡಿಕ್ಸ್, ಖಿನ್ನತೆ, ನಿರುತ್ಸಾಹ, ಮುಂತಾದ ರೋಗಗಳು ಬರುವ ಸಾಧ್ಯತೆ ಹೆಚ್ಚಿದೆ. ವಿಶ್ವ ಆರೋಗ್ಯ ಸಂಸ್ಥೆಯ ನಿಯಮವೊಂದರ ಪ್ರಕಾರ, ಮಕ್ಕಳಾಗಲೀ, ದೊಡ್ಡವರಾಗಲೀ ದಿನನಿತ್ಯ ಸೇವಿಸುವ ಆಹಾರದ ಶಕ್ತಿಯ ಪ್ರಮಾಣದಲ್ಲಿ ಶೇ.10ಕ್ಕಿಂತ ಹೆಚ್ಚು ಸಕ್ಕರೆ ಸೇವನೆ ಇರಬಾರದು ಎಂಬುದಾಗಿದೆ.

ಸಕ್ಕರೆ, ಕೊಬ್ಬು ಮತ್ತು ಉಪ್ಪಿನಾಂಶ ಹೇರಳವಾಗಿರುವ ಜಂಕ್ ಫುಡ್ ತೊರೆದು, ನಮ್ಮ ಜೀವನಶೈಲಿಗೆ ಅಗತ್ಯವಿರುವ ಹಣ್ಣು-ಹಂಪಲು, ಹಾಲು, ತರಕಾರಿ ಹಾಗೂ ಅತ್ಯಧಿಕ ಪ್ರಮಾಣದಲ್ಲಿ ಪೋಷಕಾಂಶಗಳನ್ನು ನೀಡುವ ದ್ವಿದಳ ಧಾನ್ಯದಿಂದ ತಯಾರಿಸಿದ ಆಹಾರವನ್ನು ಸೇವಿಸಬೇಕು ಮೂಲಕ ಮೂಲ ಆಹಾರ ಪದ್ಧತಿಯ(ಜವಾರಿ) ಪುನಃ ಪ್ರಾರಂಭವಾದರೆ ಅದೊಂದು ಜಾಗೃತಿ ಎನಿಸಿಬಹುದು, ಆಗ ಮಾತ್ರ ನಮ್ಮ ದೇಶದ ಇಂದಿನ ಮಕ್ಕಳು ನಾಳಿನ ಜವಾಬ್ದಾರಿಯುತ ನಾಗರಿಕರಾಗಿ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸದೃಢತೆ ಕಾಪಾಡಲು ಸಾಧ್ಯ.

ಒಳಿತನ್ನು ಅರಸಿ...

ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು
ಗುರುತಿಸೊಳಿತಿರುವುದನು ಕೇಡುಗಳ ನಡುವೆ
ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು
ಹರುಷಕದೆ ದಾರಿಯೆಲೊ-ಮಂಕುತಿಮ್ಮ

ನಮಗೆ ಬಾರದಿರುವುದೆಂದು ತಿಳಿದಿದ್ದರೂ, ಅದು ಬರಲಿಲ್ಲವೆಂದು ದುಃಖ ಅಥವಾ ನೋವು ಪಡುವುದಕ್ಕಿಂತ ನಮಲ್ಲಿರುವುದನ್ನೇ, ನಮಗೆ ದೊರಕಿರುವುದನ್ನು ಮರೆಯದಿರಿ ಸಮಯ ಎಂಬ ವಿಧಿಯು ನಿನಗೆ ಕೇಡುಗಳನ್ನು ಒದಗಿಸಿ ನಿನಗೆ ನೋವು ಕೊಡುವಾಗ ಅದರಲ್ಲುಂಟಾಗುವಂತಹ ಒಳಿತನ್ನು ಅರಸುತ್ತಿರು. ಬಾರದಿರುವುದನ್ನು ಬರಲಿಲ್ಲ ಎಂದು ಊಳಿಡದೆ, ದುಃಖಿಸದೆ ಇರುವ ಭಾಗ್ಯವನ್ನು ನೆನೆಯುತ್ತಾ ಜೀವನ ಮಾಡುವುದು ನಿನ್ನ ಹರುಷಕ್ಕೆ ದಾರಿಯಾಗುತ್ತದೆ.

ಮನುಷ್ಯನ ಮನಸ್ಸೇ ಅದೊಂದು ಆಸೆಗಳ ಕಣಜ. ಒಂದಾದರೆ ಇನ್ನೊಂದು, ಇನ್ನೊಂದಾದರೆ ಮತ್ತೊಂದು, ಮತ್ತೊಂದಾದರೆ ಬೇರೊಂದು ಎನ್ನುವ ಆಸೆಗಳು ನಮ್ಮ ಮನಸ್ಸಿನದ್ದಾಗಿದೆ. ಈ ಆಸೆಗಳು ತುಂಬಿದ ಜೀವನದಲ್ಲಿ ಆಸೆಗೆ ಆಸೆಗಳೇ ಏಣಿಯಾಗುತ್ತವೆ. ಆಸೆಗಳನ್ನು ಪೂರ್ಣಗೊಳಿಸುವ ಭರದಲ್ಲಿ ಅವಕಾಶ ಒದಗಿದಲ್ಲಿ ಆತ ನಭಕ್ಕೇ ಸೌಧ ಕಟ್ಟುವವನಾಗಿರುತ್ತಾನೆ, ನಭದ ತಾರೆಗಳನ್ನೇ ಕೀಳುವಂತವನಾಗಿರುತ್ತಾನೆ. ಆದರೆ ಅದೇ ಆಸೆಗಳು ಫಲಿಸದೇ ಹೋದಲ್ಲಿ ಆತನ ಮನಸ್ಸು ಚೋಟ್ಟಾಗಿ ಹೋಗಿ, ಆತ ದುಃಖ ಪಡುವಂತವನಾಗುತ್ತಾನೆ. ಈ ಆಸೆಗಳ ಪೂರೈಕೆಯಲ್ಲಿ ವಿಫಲನಾಗಿ ದುಃಖಿತನಾಗುವುದಕ್ಕಿಂತ ಇರುವುದರಲ್ಲೇ ಖುಷಿ ಪಡುವುದು ಮೇಲಲ್ಲವೇ? ಯಾವುದೋ ಒಂದು ಆಸೆ/ದುರಾಸೆಯಿಂದ ನಮಗೆ ದಕ್ಕುವುದಿಲ್ಲ ಎಂಬ ಅರಿವು ನಮಗಿದ್ದರೂ ಅದನ್ನು ಪಡೆಯಲೇಬೇಕೆಂಬ ಹಠಕ್ಕೆ ಬಿದ್ದು ಅದನ್ನು ಪಡೆಯಲು ವಿಫಲವಾಗಿ ಮಾನಸಿಕ ಕ್ಲೇಷಕ್ಕೆ ಒಳಗಾಗಿ ನೋವು ಪಡುವುದಕ್ಕಿಂತ ಆ ಭಗವಂತ ನನ್ನ ಪಾಲಿಗೆ ಕೊಟ್ಟಿರುವುದನ್ನು, ನನಗೆ ದೊರಕಿರುವುದನ್ನು ನಾವು ಮರೆಯಲೂಬಾರದು. ಇರುವುದರಲ್ಲಿಯೇ ತೃಪ್ತನಾಗುವ ಮನಸ್ಸನ್ನು ಹೊಂದಿರಬೇಕು. ಈ ವ್ಯವಸ್ಥೆ ಅಥವಾ ಈ ಸಮಯ ಎಂಬುದು ನಮಗೆ ಕೇಡುಗಳನ್ನೇ ನೀಡುತ್ತಿರುವಾಗ ಆ ಕೇಡುಗಳ ನಡುವೆ ನಮಗೆ ಯಾವುದು ಒಳಿತಾಗುತ್ತದೋ ಅದನ್ನು ಅರಸುತ್ತಿರು. ಕೇಡುಗಳಾದರೂ ಅವುಗಳು ನಮ್ಮ ಮನಸ್ಸನ್ನು ಗಟ್ಟಿಗೊಳಿಸಲೆಂದೇ ಜರಗಿವೆ ಎಂಬ ಭಾವವನ್ನು ಮನದಲ್ಲಿಟ್ಟು ಕೊಂಡು ಆ ಕೇಡುಗಳಿಂದ ಜೀವನಾನುಭವವನ್ನು ಪಡೆಯುವಂತರಾಗಬೇಕು. ಜೀವನದ ಅನುಭವಗಳು ನಮ್ಮನ್ನು ಗಟ್ಟಿಗೊಳಿಸುತ್ತವೆ. ಕಷ್ಟಗಳು, ಕೇಡುಗಳು ಎಂದಿಗೂ ನಮ್ಮನ್ನು ಸದೃಢರನ್ನಾಗಿಸುತ್ತವೆ ಎಂಬ ಸತ್ಯ ನಮಗೆ ತಿಳಿದರೆ ಒದಗಿರುವ ಕೇಡುಗಳೂ ಸಹ ನಮಗೆ ಒಳ್ಳೆಯದೇ ಅಲ್ಲವೇ? ಹಾಗಾಗಿ ಈ ಜೀವನ ಎಂಬ ಯಾತ್ರೆಯಲ್ಲಿ ಕಷ್ಟಗಳ ನಡುವೆ ನಗುವನ್ನು ಅರಸುವುದೂ ಒಂದು ಕಲೆಯಾದರೆ ಜೀವನವೂ ಖುಷಿಯಾಗಿರುತ್ತದೆ. ನಮಗೆ ಇರುವ ಭಾಗ್ಯವನ್ನು ನೆನೆಯುತ್ತಾ ಬಾರದೆಂಬುದನ್ನು ತೊರೆದರೆ ಅದೇ ನಮ್ಮ ಜೀವನದಲ್ಲಿ ಹರುಷಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದು ಈ ಕಗ್ಗದ ಹೂರಣವಾಗಿದೆ.

ಕವಿ ಗೋಪಾಲಕೃಷ್ಣ ಅಡಿಗರು 'ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿದೋಣಿ' ಎನ್ನುವಂತೆ, ಈ ಜೀವನವೇ ಆಸೆಗಳ ಬೆನ್ನಟ್ಟಿದ ಅಳುವ ಕಡಲಿದ್ದಂತೆ, ಅದರಲ್ಲಿ ನಗು ಎಂಬ ಹಾಯಿದೋಣಿ ಬರುತ್ತಿದ್ದರೆ ಅದು ಚೆನ್ನ ಎಂದು ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದುದೆಂದರೆ ಸಕಲ ಜೀವರಾಶಿಗಳು ಹಸಿವು, ಬೆದರಿಕೆ, ಬೆದೆಗೆ (ಕಾಮಕ್ಕೆ) ಬದುಕಿದರೆ ಈ ಮನುಷ್ಯನೆಂಬ ಜೀವಿಯು ಹಸಿವು, ಬೆದರಿಕೆ, ಬೆದೆಯೊಂದಿಗೆ ಅಧಿಕಾರ, ಹೆಣ್ಣು, ಹೊನ್ನು, ಮಣ್ಣಿನ ಹಿಂದೆ ಹೋಗುತ್ತಾ ಈ ಆಸೆಗಳನ್ನು ನೇವರಿಸಿಕೊಳ್ಳಲು ಹಗಲಿರುಳು ಕಷ್ಟಪಡುತ್ತಾ, ಅವುಗಳನ್ನು ಪಡೆಯುವ ಸಾಧನೆ ಮಾಡುತ್ತಲೇ ಇರುವವನಾಗಿರುತ್ತಾನೆ, ಅವುಗಳು ಫಲಿಸಿದರೂ ಸುಮ್ಮನಾಗುವ ಲಕ್ಷಣ ಅವನಲ್ಲಿರುವುದಿಲ್ಲ. ಅವುಗಳನ್ನು ಪಡೆಯಲು ಬೆನ್ನತ್ತಿ ಹೋಗುತ್ತಲೇ ಇದ್ದು , ಅವುಗಳು ದೊರಕದೆ ಇದ್ದಾಗ ಅತೀವ ನೋವು ಪಡೆಯುತ್ತಾನೆ. ಕೆಲವೊಮ್ಮೆ ಆಗದಿರುವ ಕೆಲಸಗಳಿಗೆ ಕೈ ಹಾಕಿ ಹಿಂಸೆಗೊಳಗಾಗುತ್ತಾನೆ, ಆಗದಿರುವ ಕೆಲಸಗಳಿಗೆ ಕೈ ಹಾಕಿ ನೋವು ಪಡೆಯುವುದಕ್ಕಿಂತ ಇರುವುದನ್ನೇ ಖುಷಿಯಿಂದ ಅನುಭವಿಸುವುದು ಸೂಕ್ತವಲ್ಲವೇ? ಹಾಗೆಂದು ನರನ ಪ್ರಯತ್ನ ವಿಫಲವೆಂದು ಹೇಳುವುದಿಲ್ಲ. ಪ್ರತಿಯೊಂದು ಕಾರ್ಯಸಾಧನೆಯೂ ಸತತ ಪ್ರಯತ್ನದಿಂದಲೇ ಕೈಗೂಡುವುದು ಎಂಬುದೂ ಸತ್ಯವೇ ಹೌದು. ಆದರೆ ನಮಗೆ, ನಮ್ಮ ಮನಸ್ಸಿಗೆ ಇದು ಸಾಧ್ಯ, ಇದು ಅಸಾಧ್ಯ ಎಂಬ ಅರಿವು ಇದ್ದು ಸಾಧ್ಯವಾಗುವುದನ್ನು ಕಾರ್ಯಗತಗೊಳಿಸುತ್ತಾ, ಅಸಾಧ್ಯವಾದುದರ ಬಗ್ಗೆ ಚಿಂತೆ ಮಾಡದೆ ನಮ್ಮ ಪಾಲಿಗೆ ಬಂದಿದ್ದನ್ನು ಪಂಚಾಮೃತ ಎಂದು ಸ್ವೀಕರಿಸಿ, ಖುಷಿಯಿಂದ, ತೃಪ್ತಿಯಿಂದ ಆ ಭಗವಂತನು ಈ ವ್ಯವಸ್ಥೆಯು ನನಗೆ ಇಷ್ಟನ್ನಾದರೂ ನೀಡಿದನಲ್ಲಾ ಎಂಬ ಧನ್ಯತಾ ಮನೋಭಾವದಿಂದ ಜೀವನವನ್ನು ಖುಷಿಯಿಂದ ಅನುಭವಿಸುವುದು ಒಂದು ಕಲೆಯೇ ಆಗಿದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಐಟಿ ಕೆಲಸದ ಹೆಬ್ಬಯಕೆಯೇ? ಹಾಗಿದ್ದರೆ ನಿಮಗಿಲ್ಲೊಂದಿಷ್ಟು ಟಿಪ್ಸ್

• ಸುಪ್ರೀತಾ ವೆಂಕಟ್

ಆರ್ಟಿಫಿಷಿಯಲ್ ಇಂಟಲ್ಲಿಜೆನ್ಸ್ (ಎಐ)-ಇದೀಗ ಎಲ್ಲೆಡೆ ಕೇಳಿಬರುತ್ತಿರುವ ಪದ. ಐಟಿ ಕ್ಷೇತ್ರದಲ್ಲೂ ಇದರ ಪ್ರಭಾವ ಹೆಚ್ಚಾಗಲಿದೆ ಎನ್ನುವ ಮಾತೂ ಹೆಚ್ಚಿದೆ. ಅದೆಷ್ಟೋ ಜನರ ಕೆಲಸ ಹೋಗಬಹುದು, ಬಹಳಷ್ಟು ಮಂದಿ ಮಾಡುವ ಕೆಲಸವನ್ನು ಎಐ ಫಟಾಫಟ್ ಎಂದು ಮಾಡಿ, ಸಮಯ ಹಾಗೂ ವೆಚ್ಚವನ್ನು ಕಡಿಮೆ ಮಾಡಬಹುದೆನ್ನುವ ಮಾತುಗಳೂ ಈಗ ಸಾರ್ವತ್ರಿಕ. ಇದು ನಿಜವಾದರೆ ಒಂದು ದಿನ ಎಲ್ಲರೂ ಎಐ ಬಗ್ಗೆಯೇ ಕಲಿಯೋ ತರಹ ಆಗಬಹುದೇನೋ?

ಅದೇನೇ ಇರಲಿ, ಐಟಿ ಕ್ಷೇತ್ರದಲ್ಲಿ ಕೆಲಸ ಹುಡುಕಿ, ಒಂದು ಕಂಪನಿ ಸೇರಬೇಕೆಂದರೆ ಇಂಟರ್ವ್ಯೂ ಹಂತದಲ್ಲೂ ದಿನಕ್ಕೊಂದು ಟ್ರೆಂಡ್ ಚಾಲ್ತಿಯಲ್ಲಿದೆ ಎಂಬುದು ವಾಸ್ತವ. ಇವತ್ತಿರುವ ರೂಢಿ ನಾಳೆ ಇರಲ್ಲ, ಒಂದು ಕಂಪನಿಯ ರಿಕ್ರೂಟ್‌ಮೆಂಟ್ ಪ್ರೊಸೆಸ್ ಒಂದು ತರಹವಾದರೆ, ಮತ್ತೊಂದು ಕಂಪೆನಿದು ಇನ್ನೊಂದು ವಿಧ. ಹಾಗಾಗಿ ಹೊಸ ಐಟಿ ಕಂಪೆನಿಗಳಲ್ಲಿ ಕೆಲಸಕ್ಕೆ ಸೇರ ಬಯಸುವವರು ಕೆಲವೊಂದು ಸಲಹೆಗಳನ್ನು ಪಾಲಿಸಿದರೆ ಅದು ಅವರ ವೃತ್ತಿಜೀವನಕ್ಕೆ ರಹದಾರಿ. ಹಾಗಾಗಿ ಪ್ರಮುಖವಾದವುಗಳನ್ನು ಇಲ್ಲಿ ಗಮನಿಸೋಣ:

ರೆಸ್ಯೂಮೆ: ಬೇರೆ ಕೆಲಸ ಹುಡುಕುವ ಮೊದಲ ಹಂತವಾಗಿ ರೆಸ್ಯೂಮೆಯ ಪಾತ್ರ ಬಹಳಷ್ಟು ಮಹತ್ವ. ಮೊದಲೆಲ್ಲಾ ಒಬ್ಬರು ಉಪಯೋಗಿಸಿದ ಟೆಂಪ್ಲೇಟ್ ಬಳಸಿ, ಅದರಲ್ಲಿ ನಮ್ಮ ನಮ್ಮ ವೃತ್ತಿ ಕೌಶಲ್ಯಗಳನ್ನು ಹಾಕಿ ಶೇರ್ ಮಾಡಿದರೆ ನಡೀತಿತ್ತು, ಕೆಲಸ ಸಿಗೋದು ಕಷ್ಟವೇನಿರಲಿಲ್ಲ. ಕಂಪೆನಿಗಳು ರೆಸ್ಯೂಮೆಗೆ ಅಷ್ಟೊಂದು ಒತ್ತು ಕೊಡುತ್ತಿರಲಿಲ್ಲ, ಆದರೆ ಈಗಿನ ಚಿತ್ರಣವೇ ಬದಲಾಗಿದೆ. ಎಪ್ಲಿಕೆಂಟ್ ಟ್ರ್ಯಾಕಿಂಗ್ ಸಿಸ್ಟಮ್ (ಎಟಿಎಸ್) ಫ್ರೆಂಡ್ಲಿ ರೆಸ್ಯೂಮೆ ಬೇಕೇ ಬೇಕು. ಒಂದು ಹುದ್ದೆಗೆ ಸಾವಿರಾರು ಅಪ್ಲಿಕೇಶನ್ಸ್ ಬರುತ್ತವೆ. ಅವನ್ನೆಲ್ಲಾ ಕಂಪೆನಿಯವರಿಗೆ ಪರಿಶೀಲಿಸಲು ಸಾಧ್ಯವಿಲ್ಲ. ಅದಕ್ಕೆಂದೇ ಸಾಫ್ಟ್‌ವೇರ್ ತಯಾರಿಸಿ, ಆ ಸಾಫ್ಟ್‌ವೇರ್ ಎಲ್ಲಾ ರೆಸ್ಯೂಮೆಗಳನ್ನು ಸ್ಕ್ಯಾನ್ ಮಾಡಿ, ಯಾವುದೆಲ್ಲ ಎಟಿಎಸ್ ಅಂಕ ದಾಟುತ್ತೋ, ಅವುಗಳನ್ನ ಮಾತ್ರ ಆಯ್ಕೆ ಮಾಡುತ್ತದೆ. ಹೀಗಾಗಿ ಎಟಿಎಸ್ ಪಾಸ್ ಆಗುವ ರೆಸ್ಯೂಮೆ ತಯಾರಿಸಲೇಬೇಕು. ಇದಕ್ಕೆಂದೇ ಆನ್‌ಲೈನ್‌ನಲ್ಲಿ ಎಷ್ಟೋ ವೆಬ್‌ಸೈಟ್‌ಗಳಿವೆ ಅಥವಾ ಹಲವು ಸರ್ವಿಸಸ್ ಹಲವು ಆ್ಯಪ್‌ಗಳು ನೀಡುತ್ತವೆ. ಇವುಗಳ ಉತ್ತಮ ಬಳಕೆ ಮಾಡಿಕೊಂಡರೆ, ಅತ್ಯುತ್ತಮವಾದ ರೆಸ್ಯೂಮೆ ನಿಮ್ಮದಾಗುತ್ತದೆ.

ಟೆಕ್ನಿಕಲ್ ಸ್ಕಿಲ್ಸ್: ಡಿಗ್ರಿ ಮುಗಿಸಿ ಮೊದಲ ಬಾರಿಗೆ ಕೆಲಸಕ್ಕೆ ಸೇರಿದಾಗ ಸಿಗುವ ಜೂನಿಯರ್ ಹುದ್ದೆಯಿಂದ, ವರ್ಷಗಳು ಉರುಳಿದಂತೆ ಉನ್ನತ ಹುದ್ದೆಗೇರುತ್ತಾ ಹೋಗುವುದು ಸಾಮಾನ್ಯ. ಉನ್ನತ ಹುದ್ದೆಗೇರಿದ ನಂತರ ಸಾಮಾನ್ಯವಾಗಿ ಒಂದು ತಂಡವನ್ನು ನಿಭಾಯಿಸುವ ಜವಾಬ್ದಾರಿ ಸಿಗುತ್ತದೆ. ಡೆವಲಪರ್ ಅಥವಾ ಟೆಸ್ಟರ್ ಆಗಿ ಕೆರಿಯರ್ ಪ್ರಾರಂಭಿಸುವವರು ಮುಂದೊಂದು ದಿನ ಮ್ಯಾನೇಜರ್ ಹುದ್ದೆಗೇರುತ್ತಾರೆ. ಮ್ಯಾನೇಜರ್ ಹುದ್ದೆಗೇರಿದ ಮೇಲೆ ಸಾಮಾನ್ಯವಾಗಿ ಮುಂಚೆಯೆಲ್ಲಾ ಟೆಕ್ನಿಕಲ್ ಕೆಲಸ ಕಡಿಮೆ ಇರುತಿತ್ತು, ಆದರೆ ಈಗ ಹಾಗಿಲ್ಲ, ಎಲ್ಲಾ ಉದ್ಯೋಗಿಗಳಿಂದಲೂ ಸಂಸ್ಥೆಯು ಟೆಕ್ನಿಕಲ್ ಕೆಲಸವನ್ನು ಅಪೇಕ್ಷಿಸುತ್ತದೆ, ಹೀಗಾಗಿ ಅದೇನೇ ಸವಾಲುಗಳು ಎದುರಾಗಲಿ, ಎಲ್ಲದಕ್ಕೂ ಸಿದ್ಧರಾಗಿರಬೇಕು. ಐಟಿನಲ್ಲಿ ಮುಂದುವರಿಯಬೇಕೆಂದರೆ. ಟೆಕ್ನಿಕಲ್ ಸ್ಕಿಲ್ ಅಭಿವೃದ್ಧಿಗಾಗಿ ಆನ್‌ಲೈನ್‌ನಲ್ಲಿ ಬಹಳಷ್ಟು ಕಲಿಕಾ ವೆಬ್‌ಸೈಟ್‌ಗಳಿವೆ, ಅವುಗಳನ್ನು ಸದುಪಯೋಗಗೊಳಿಸಿಕೊಳ್ಳಬಹುದು.

ತಾಳ್ಮೆ ಮತ್ತು ಅದೃಷ್ಟ: ಹೊಸ ಕೆಲಸ ಸಿಗುವುದು ಅಂದುಕೊಂಡಷ್ಟು ಸುಲಭವೇನಲ್ಲ. ನಾವಂದುಕೊಂಡ ರೀತಿ ಆಗದೇ ಇರಬಹುದು. ರೆಸ್ಯೂಮೆ ಚೆನ್ನಾಗಿದೆ, ಟೆಕ್ನಿಕಲ್ ಸ್ಕಿಲ್ ಕೂಡ ಚೆನ್ನಾಗಿದೆ ಆದರೂ ಕೆಲಸ ಸಿಗುತ್ತಿಲ್ಲ, ಯಾಕೆ ? ಎಂಬ ಪ್ರಶ್ನೆ ಬಹಳಷ್ಟು ಮಂದಿಯನ್ನು ಕಾಡುವುದು ಸಹಜ. ಇಂತಹ ಸಮಯದಲ್ಲಿ ತಾಳ್ಮೆ ಕಳೆದುಕೊಳ್ಳದೆ, ಬಂದಂತಹ ಸವಾಲುಗಳನ್ನು ಧೈರ್ಯದಿಂದಲೇ ಎದುರಿಸಬೇಕು. ಕೆಲಸ ಸಿಗುವುದೂ ಒಂದು ರೀತಿಯ ಅದೃಷ್ಟವೇ. ತಾಳ್ಮೆ ಕಳೆದುಕೊಂಡ ತಕ್ಷಣ ಪ್ರಸ್ತುತ ಸ್ಥಿತಿ ಬದಲಾಗದು. ಅದರ ಬದಲಾಗಿ, ಇನ್ಯಾವ ತರಹ ನಮ್ಮನ್ನು ನಾವೇ ಅಪ್‌ಸ್ಕಿಲ್ ಮಾಡಿಕೊಳ್ಳಬಹುದು ಎಂದು ಯೋಚಿಸಬೇಕು. ನಮ್ಮ ಅದೃಷ್ಟ, ತಾಳ್ಮೆಯ ಮೇಲೆ ನಂಬಿಕೆಯಿಟ್ಟು ಪ್ರಯತ್ನ ಮುಂದುವರಿಯಬೇಕು. ಮೇಲಿನ ಸಲಹೆಗಳೆಲ್ಲವೂ ಎಲ್ಲರಿಗೂ ಅನ್ವಯವಾಗಬೇಕೆಂದೇನಿಲ್ಲ. ಪ್ರತಿಯೊಬ್ಬರ ಸ್ಥಿತಿಯೂ ವಿಭಿನ್ನ. ತನ್ನತನದ ಮೇಲೆ ಸಂಪೂರ್ಣ ನಂಬಿಕೆಯಿಟ್ಟು, ಅದೇನು ಸೂಕ್ತ ಎನಿಸುವುದೋ, ಅದನ್ನೇ ಪಾಲಿಸಿ ಹೆಜ್ಜೆಯಿಟ್ಟರೆ ಉತ್ತಮ..!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಹೋಲಿಕೆ ಇಲ್ಲದ ಎಂದರ್ಥ (4)
3. ಸಂದೇಶವನ್ನು ಒಯ್ಯುವವನು (2)
7. ಒಡೆಯ ಅಥವಾ ಯಜಮಾನ (3)
9. ಸೊಳ್ಳೆಪರದೆಗೆ ಮತ್ತೊಂದು ಹೆಸರು (5)
10. ಮೂರಕ್ಷರದ ಸೊಕ್ಕು (3)
12. ವಿನೋದವನ್ನು ಹೀಗೆಯೂ ಹೇಳಬಹುದು (3)
13. ಎಲ್ಲರಿಗೂ ಅಗತ್ಯವಾಗಿ ಬೇಕಾದ ಬಿಡುವು (3)
16. ಗೌತಮ ಬುದ್ಧನು ತನ್ನ ಬಾಲ್ಯವನ್ನು ಕಳೆದ ಸ್ಥಳ (5)
17. ಮೂರು ತಾಸಿನ ಅವಧಿ ಕೊನೆಗೆ ಅನುಸ್ವರದೊಂದಿಗೆ ಬಂದಿದೆ (3)
19. ಒಂದು ಬಗೆಯ ಚರ್ಮರೋಗವಿದು (4)

ಮೇಲಿಂದ ಕೆಳಕ್ಕೆ

2. ಇಷ್ಟವಾಗುವ ಸುಗಂಧ (4)
4. ಎಂದೂ ಅಕ್ಷಯವಾಗದ ಸಂಪತ್ತು (4)
5. ಆಕಾಶವು ಎರಡೇ ಅಕ್ಷರದಲ್ಲಿ ಬಂದಿದೆ (2)
6. ತುಂಬಾ ಸುಲಭವಾಗಿ ಸಾಧ್ಯವಾಗುವಂತದ್ದು (7)
8. ಎಳೆಯ ಸೂರ್ಯ (4)
11. ಒಳ್ಳೆಯ ಕುಲದಲ್ಲಿ ಹುಟ್ಟಿದವಳು (4)
14. ದುಂಬಿಯು ಹೂವಿನಿಂದ ಹೀರುವ ರಸ (4)
15. ಮೋಸಹೋಗುವುದನ್ನು ಧ್ವನಿಸುವ ನುಡಿಗಟ್ಟು (4)
17. ನಕಲು ಎನ್ನುವ ಮತ್ತೊಂದು ಪದ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಅನುಪಮ 3. ದೂತ
7. ವಲ್ಲಭ 9. ಮಚ್ಚರದಾನಿ
10. ಧಿಮಾಕು 12. ವಿಲಾಸ
13. ವಿರಾಮ 16. ಕಪಿಲವಸ್ತು
17. ಪ್ರಹರಂ 19. ಹುಳುಕಡಿ

ಮೇಲಿಂದ ಕೆಳಕ್ಕೆ
2. ಪರಿಮಳ 4. ತವನಿಧಿ
5. ನಭ 6. ಕರತಲಾಮಲಕ
8. ಬಾಲರವಿ 11. ಕುಲನಾರಿ
14. ಮಕರಂದ 15. ಬೇಸ್ತುಬೀಳು
17. ಪ್ರತಿ

ಹುಟ್ಟಾ ಅಣ್ಣ-ತಮ್ಮಂದಿರು, ಬೆಳೀತಾ ದಾಯದಿಗಳು

ಗಂಡ-ಹೆಂಡತಿ ಸುಖದಿಂದ ಜೀವನ ನಡೆಸುತ್ತಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳು. ಇದ್ದ ಸ್ವಲ್ಪ ಹೊಲದಲ್ಲಿ ಕಷ್ಟಪಟ್ಟು ಕೆಲಸ ಮಾಡಿ, ನೆಮ್ಮದಿಯಿಂದ ಜೀವನ ನಡೆಸುತ್ತಿದ್ದರು. ಮಕ್ಕಳು ಬೆಳೆದು ದೊಡ್ಡವರಾದ ನಂತರ, ತಂದೆ ಅದನ್ನು ಇಬ್ಬರು ಮಕ್ಕಳಿಗೂ ಸಮಪಾಲು ಮಾಡಿ ಕೊಟ್ಟ. ಸ್ವಲ್ಪ ಸಮಯದಲ್ಲೇ ತಂದೆ ಸಾವನ್ನಪ್ಪಿದ, ಸ್ವಲ್ಪ ದಿನಗಳಲ್ಲೇ ತಾಯಿಯೂ ತೀರಿಕೊಂಡಳು. ನಂತರ ಮಕ್ಕಳಿಬ್ಬರೂ ಬೇರೆ ಬೇರೆಯಾದರು.

ಹೊಲದ ಒಂದು ಬದಿಯಲ್ಲಿ ಒಂದು ಮಾವಿನ ಗಿಡ ಇತ್ತು. ಅದು ದೊಡ್ಡದಾಗಿ ಬೆಳೆದು ಮರವಾಗಿ ಹಣ್ಣುಗಳನ್ನು ಬಿಡ ತೊಡಗಿತು. ಮರದ ಬೇರು, ಕಾಂಡ ಅಣ್ಣನ ಪಾಲಿನ ಹೊಲದಲ್ಲಿ ಇತ್ತು. ಅದರ ರಂಬೆ-ಕೊಂಬೆಗಳು ಬಾಗಿ, ಹಣ್ಣು-ಕಾಯಿಗಳು ತಮ್ಮನ ಪಾಲಿನ ಹೊಲದತ್ತ ಬೀಳುತ್ತಿದ್ದವು. ಹಣ್ಣು ಬೀಳತೊಡಗಿದಾಗ ಇಬ್ಬರ ನಡುವೆಯೂ ಅದಕ್ಕಾಗಿ ವಾದ-ವಿವಾದ ಶುರುವಾಯಿತು. ಮರದ ಬೇರು ನನ್ನ ಹೊಲದಲ್ಲಿ ಇರುವುದರಿಂದ ಅದು ನನ್ನದೇ ಮರ, ಆ ಹಣ್ಣು-ಕಾಯಿಗಳೆಲ್ಲ ನನಗೆ ಸೇರಿದ್ದು ಎಂದು ಅಣ್ಣ ಹೇಳಿದರೆ, ಅದರ ರಂಬೆ-ಕೊಂಬೆ, ನನ್ನ ಪಾಲಿನ ಹೊಲದಲ್ಲಿ ಇರುವುದರಿಂದ ಹಣ್ಣು-ಕಾಯಿಗಳೆಲ್ಲಾ ನನ್ನವೇ ಎಂಬುದು ತಮ್ಮನ ವಾದ. ಇಬ್ಬರೂ ಜಗಳವಾಡಿ ಪ್ರಕರಣ ಕೋರ್ಟ್, ಕಚೇರಿ ತನಕ ಹೋಯಿತು.

ಕೋರ್ಟ್ ತಮ್ಮನ ಪರ ತೀರ್ಪು ನೀಡಿತು. ತಾನು ಕೋರ್ಟಿನಲ್ಲಿ ಗೆದ್ದೆ ಎಂಬ ಸಂತೋಷದಿಂದ ತಮ್ಮ, ಊರಿಗೆಲ್ಲಾ ಊಟ ಹಾಕಿಸಿದ. ಮಾರನೇ ದಿನ ಬೆಳಗ್ಗೆ ಬಂದು ನೋಡಿದರೆ, ಮಾವಿನ ಮರದ ಬುಡವನ್ನೇ ಯಾರೊ ಕಡಿದು ಹಾಕಿದ್ದರು. ಕೋರ್ಟಿನಲ್ಲಿ ಕೇಸು ತಮ್ಮನ ಪರವೇನೋ ಆಗಿತ್ತು. ಆದರೆ ಮಾವಿನ ಮರವೇ ಮುರಿದು ಬಿದ್ದಿತ್ತು.

ಒಟ್ಟಿಗೆ ಹುಟ್ಟಿ ಬೆಳೆದ ಅಣ್ಣ-ತಮ್ಮಂದಿರ, ಸಂಬಂಧವು ಒಂದು ಮಾವಿನ ಮರದ ಆಸೆಗಾಗಿ ಕಳಚಿಕೊಂಡಿತು, ಜೊತೆಗೆ ಒಳ್ಳೆಯ ಹಣ್ಣು ಬಿಡುತ್ತಿದ್ದ ಮಾವಿನ ಮರವೂ ಉರುಳಿತು. ಅದಕ್ಕೇ ಗಾದೆ ಇರುವುದು, 'ಹುಟ್ಟುತ್ತ ಅಣ್ಣ-ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು' ಎಂಬುದು.

ತಂದೆ-ತಾಯಿ ಇರುವ ತನಕ ಚೆನ್ನಾಗಿದ್ದ ಸಂಬಂಧ ಅವರ ನಂತರ, ಚೂರು ಆಸ್ತಿಗಾಗಿ ಹೀಗೆ ಒಡೆದು ಹೋಗುತ್ತದೆ. ಆಸ್ತಿಗಿಂತ ಸಂಬಂಧ ಮುಖ್ಯ ಎಂಬ ಅರಿವು ಇಬ್ಬರಲ್ಲಿ ಒಬ್ಬರಿಗಾದರೂ ಇದ್ದಿದ್ದರೆ, ಈ ರೀತಿ ಸಂಬಂಧ ಮುರಿದು ಬೀಳುತ್ತಿರಲಿಲ್ಲ. ಎಷ್ಟೊ ಸಂಬಂಧಗಳಲ್ಲಿ ಈಗ ಆಗುತ್ತಿರುವುದು ಹೀಗೆಯೇ.

ತಂದೆ-ತಾಯಿ ನಮಗೆ ವಿದ್ಯೆ ಕೊಟ್ಟಿರುತ್ತಾರೆ, ಬುದ್ಧಿ ಕಲಿಸಿರುತ್ತಾರೆ, ಬದುಕುವ ದಾರಿಯನ್ನೂ ಹೇಳಿ ಕೊಟ್ಟಿರುತ್ತಾರೆ, ಇದೆಲ್ಲದರಿಂದ ನಾವು ಪರಿಶ್ರಮಪಟ್ಟು ನಮ್ಮ ಜೀವನವನ್ನು ಚಂದವಾಗಿಸಿಕೊಳ್ಳಬಹುದು. ಯಾರ ಸಹಾನುಭೂತಿ, ಸಹಾಯದ ಅಗತ್ಯವೂ ನಮಗಿರುವುದಿಲ್ಲ. ಆದರೆ ಮತ್ತಷ್ಟು ಹಣ, ಒಂದಿಷ್ಟು ಆಸ್ತಿ ಸುಲಭವಾಗಿ ಕಷ್ಟವಿಲ್ಲದೆ ಸಿಗುತ್ತದೆ ಎಂದರೆ ತಕ್ಷಣ ಧರ್ಮ-ಕರ್ಮ ಎಲ್ಲ ಮರೆತು ಅದನ್ನು ಹೇಗೆ ಪಡೆದುಕೊಳ್ಳುವುದು ಎಂದು ಲೆಕ್ಕಾಚಾರ ಹಾಕಲು ಪ್ರಾರಂಭಿಸಿ ಬಿಡುತ್ತೇವೆ. ಕೆಲವೊಮ್ಮೆ ವಾಮಮಾರ್ಗದಿಂದ ಆದರೂ ಸರಿ, ಮುಂದೆ ನಮ್ಮ ಮಕ್ಕಳು ಸುಖವಾಗಿರಬಹುದು ಎನ್ನುವ ದುರಾಸೆ. ಮತ್ತೊಬ್ಬರಿಗೆ ಸೇರಿದ್ದನ್ನು ನಾವು ಅನ್ಯಾಯವಾಗಿ ಪಡೆದುಕೊಂಡಾಗ ಆ ಅನ್ಯಾಯದ ಗಳಿಕೆಯಿಂದ ನಮ್ಮ ಮಕ್ಕಳು ಹೇಗೆ ಸುಖವಾಗಿರಲು ಸಾಧ್ಯ? ಆ ಕರ್ಮ ಅವರನ್ನು ಕಾಡದೆ ಬಿಡುವುದೇ? ಇಂದಿಗೆ ಎಲ್ಲಾ ಚೆನ್ನಾಗಿ ಇರಬಹುದು, ಭವಿಷ್ಯವನ್ನು ಕಂಡವರಾರು? ಹಣ, ಅಂತಸ್ತು, ಆಸ್ತಿ ಎಲ್ಲವನ್ನು ದಕ್ಕಿಸಿಕೊಂಡು ಅದರ ಪ್ರತಿಫಲವಾಗಿ, ದೇವರು ಆರೋಗ್ಯವನ್ನೇ ಕಿತ್ತುಕೊಂಡುಬಿಟ್ಟರೆ ಅನುಭವಿಸುವವರು ಯಾರು? ಆಗ ಇರುವ ಹಣ, ಆಸ್ತಿಯನ್ನೆಲ್ಲ ಮಾರಿ ಆಸ್ಪತ್ರೆಯಲ್ಲಿ ಆರೋಗ್ಯಕ್ಕಾಗಿ ಮೊರೆ ಇಡುತ್ತೇವೆ. ಅದರ ಬದಲು, ಮತ್ತೊಬ್ಬರ ಆಸ್ತಿಗೆ ಆಸೆ ಪಡದೆ ಇರುವಷ್ಟರಲ್ಲೇ ಸಂತೃಪ್ತಿಯಿಂದ ನೆಮ್ಮದಿಯಿಂದ ಬದುಕಿದಾಗ ಬದುಕು ವರವಾಗಿರುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನಿಗ್ರಹದ ಕಲೆ

ನಮ್ಮ ಮೆದುಳು ಹಲವು ರೀತಿಯಲ್ಲಿ ಒಂದು ಅದ್ಭುತ ಅವಯವವಾಗಿದೆ. ಇದರ ಗುಣಲಕ್ಷಣಗಳಲ್ಲಿ ಒಂದೆಂದರೆ ಜೀವ ಕೋಶಗಳು ನೋವಿನ ಸಂವೇದನಾ ಗ್ರಾಹಕ ಗಳನ್ನು ಹೊಂದಿಲ್ಲ. ನರಶಸ್ತ್ರ ಚಿಕಿತ್ಸಾ ತಜ್ಞರು ಈ ಗುಣವನ್ನು ಉಪಯೋಗಿಸಿ ರೋಗಿಯು ಎಚ್ಚರವಿರುವಾಗಲೇ ಶಸ್ತ್ರಚಿಕಿತ್ಸೆ ಮಾಡುತ್ತಾರೆ.

ಮೆದುಳಿನ ತಟಸ್ಥ ಸ್ಥಿತಿಯೊಂದಿಗೆ ಹೋಲಿಕೆ ಮಾಡುವುದರಿಂದ ನೋವು-ನಲಿವು ಉಂಟಾಗುತ್ತವೆ. ಈ ಹೋಲಿಕೆಯು ಮನಸ್ಸಿನ ನೋವು ಹಾಗೂ ಸಂತೋಷದ ಭಾವನೆಗಳಿಗೆ ಅನ್ವಯಿಸುತ್ತದೆ. ನಮ್ಮೆಲ್ಲರಲ್ಲಿಯೂ ಒಂದು ತಟಸ್ಥ ಅಂಶವಿರುತ್ತದೆ ಈ ಹೋಲಿಕೆಯು ನೋವು-ನಲಿವುಗಳ ದ್ವಂದ್ವವನ್ನು ಉಂಟು ಮಾಡುತ್ತದೆ. ಈ ಹಿನ್ನೆಲೆಯು ಕೃಷ್ಣ ಹೇಳುವ ಈ ಮಾತನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಯೋಗಭ್ಯಾಸದಿಂದ ಮನಸ್ಸು ನಿಗ್ರಹಿತವಾದಾಗ ವಿಶ್ರಾಂತಿ ಪಡೆಯುತ್ತದೆ, ಆಗ ಅದು ಆತ್ಮನಿಂದ ಆತ್ಮವನ್ನು ನೋಡುತ್ತದೆ ಮತ್ತು ಈ ರೀತಿ ಅದು ಆತ್ಮತೃಪ್ತಿ ಹೊಂದುತ್ತದೆ. (6.20)

ಹೀಗೆ ವಿಶ್ರಾಂತಿ ಹೊಂದುವುದು ಕೀಲಿಕೈಯಾಗಿದೆ. ಇದು ಸದಾ ಹೊಯ್ದಾಡುವ ಮನಸ್ಸು ನಿಶ್ಚಲ ಸ್ಥಿತಿಗೆ ಬರುವುದಾಗಿದೆ. ಇದನ್ನು ಸಾಧಿಸಲು ನಿಯಂತ್ರಣ ಮಾಡಬೇಕೆಂದು ಕೃಷ್ಣ ಹೇಳುತ್ತಾನೆ. ನಿಯಂತ್ರಣ ಮಾಡುವುದೆಂದರೆ ಭಾವನೆಗಳನ್ನು ಅಥವಾ ಅವುಗಳ ಅಭಿವ್ಯಕ್ತಿ ಯನ್ನು ಹತ್ತಿಕ್ಕುವುದಲ್ಲ, ಅವುಗಳನ್ನು ಎಚ್ಚರ ದಿಂದ ಗಮನಿಸುವುದಾಗಿದೆ. ನಾವು ಹಿಂದೆ ಅನುಭವಿಸಿದ ಸಂದರ್ಭಗಳನ್ನು ವಿಶ್ಲೇಷಿಸುವುದರಿಂದ ಇದು ಸುಲಭ ಸಾಧ್ಯವಾಗುತ್ತದೆ. ಅಂತಿಮವಾಗಿ ಇದು ಆತ್ಮವನ್ನು ಎಲ್ಲೆಡೆ ಆತ್ಮ ವನ್ನಾಗಿ ನೋಡುವುದಾಗಿದೆ.

ಒಮ್ಮೆ ಈ ನಿಗ್ರಹ ಕಲೆಯಲ್ಲಿ ನಾವು ಪರಿಣಿತಿ ಹೊಂದಿದರೆ ನೋವು-ನಲಿವುಗಳ ದ್ವಂದ್ವವನ್ನು ಮೀರಿ ತಟಸ್ಥ ಸ್ಥಿತಿ ಅಥವಾ ಪರಮಾನಂದವನ್ನು ಪಡೆಯುತ್ತೇವೆ. ಈ ಸಂದರ್ಭದಲ್ಲಿ ಕೃಷ್ಣ ಹೇಳುತ್ತಾನೆ -ಇಂದ್ರಿಯಗಳ ಗ್ರಹಿಕೆಗೆ ಮೀರಿದ ಮತ್ತು ಬುದ್ಧಿಯಿಂದ ಮಾತ್ರ ಗ್ರಹಿಸಲ್ಪಟ್ಟ ಪರಮಾನಂದವನ್ನು ಹೊಂದಿ ಸ್ಥಿರವಾಗಿ ಅವನು ಸತ್ಯದಿಂದ ಎಂದೂ ಹೊಯ್ದಾಡುವುದಿಲ್ಲ (6.21)

ಈ ಪರಮಾನಂದವು ಇಂದ್ರಿಯಗಳಿಗೆ ಮೀರಿದ್ದಾಗಿರುತ್ತದೆ. ಈ ಸ್ಥಿತಿಯಲ್ಲಿ ಅವನು ಜನರ ಹೊಗಳಿಕೆಯನ್ನಾಗಲಿ, ಸ್ವಾದಿಷ್ಟ ಭೋಜನವನ್ನಾಗಲಿ ಬಯಸುವುದಿಲ್ಲ. ಪ್ರಾಸಂಗಿಕವಾಗಿ ನಾವೆಲ್ಲರೂ ಅಪ್ರೇರೇಪಿತ ಕಾರ್ಯ ಮಾಡುವ ಕ್ಷಣದಲ್ಲಿ ಅಥವಾ ಧ್ಯಾನದ ಸಮಯದಲ್ಲಿ ಈ ಆನಂದವನ್ನು ಅನುಭವಿಸುತ್ತೇವೆ, ಅವುಗಳನ್ನು ಗುರುತಿಸಿ ಅವನ್ನು ಮನನ ಮಾಡುವ ಕೆಲಸವೇ ಇದಾಗಿದೆ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು
ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಡೆಲ್ಲಿ	06	05	01	10
ಗುಜರಾತ್	06	04	02	08
ಬೆಂಗಳೂರು	06	04	02	08
ಪಂಜಾಬ್	06	04	02	08
ಲಖನೌ	07	04	03	08
ಕೋಲ್ಕತ್ತಾ	07	03	04	06
ಮುಂಬೈ	07	03	04	06
ರಾಜಸ್ಥಾನ್	07	02	05	04
ಹೈದರಾಬಾದ್	07	02	05	04
ಚೆನ್ನೈ	07	02	05	04

ಇಂದಿನ ಪಂದ್ಯ

7.30 PM

ರಾಯಲ್ ಚಾಲೆಂಜರ್ಸ್ ಬೆಂಗಳೂರು
VS
ಪಂಜಾಬ್ ಕಿಂಗ್ಸ್

ಚಿನ್ನಸ್ವಾಮಿ ಸ್ಟೇಡಿಯಂ ಬೆಂಗಳೂರು



'ಪಂಜಾಬ್ ವಿರುದ್ಧದ ಪಂದ್ಯಕ್ಕೆ ನಮ್ಮ ಕಡೆಯಿಂದ ಎಂದಿನಂತೆ ತಯಾರಿ ನಡೆದಿದೆ. ಚಿನ್ನಸ್ವಾಮಿ ಕ್ರೀಡಾಂಗಣ ಬ್ಯಾಟಿಂಗ್ ಪಿಚ್‌ಗೆ ಹೆಸರುವಾಸಿ ಎಂಬುದು ಗೊತ್ತಿದೆ, ಆದರೆ ಈಗ ನೋಡಿದರೆ ಅದು ಹಿಂದಿನಂತೆ ಇಲ್ಲ ಅನಿಸುತ್ತದೆ, ಅದರ ಕಾರಣ ನನಗೆ ಗೊತ್ತಿಲ್ಲ. ನಾವು ಮೊದಲು ಬ್ಯಾಟಿಂಗ್ ಅಥವಾ ಬೌಲಿಂಗ್ ಮಾಡಿದರೆ ಮೊದಲಿನ ಕೆಲವು ಓವರ್‌ಗಳನ್ನು ನೋಡಬೇಕಾಗುತ್ತದೆ, ನಂತರ ವಿಕೆಟ್ ಹೇಗೆ ಬೀಳಿಸಬಹುದು ಅಥವಾ ಕಾಪಾಡಿಕೊಳ್ಳಬಹುದು ಎಂದು ತಿಳಿದು ಹೇಗೆ ಆಡಬೇಕು ಎಂಬುದನ್ನು ನಿರ್ಧರಿಸುತ್ತೇವೆ. ಹೇಝಲ್‌ವುಡ್ ಮತ್ತು ನಾನು ಇಬ್ಬರೂ ಹೊಸ ಚೆಂಡಿನಲ್ಲಿ ಬೌಲ್ ಮಾಡಿದ್ದೇವೆ, ಹಾಗಾಗಿ ಸಾಕಷ್ಟು ನಮಗೆ ತಿಳಿದಿದೆ. ಆದರೆ ಇದು ಪಂದ್ಯದಿಂದ ಪಂದ್ಯಕ್ಕೆ ಬದಲಾಗುತ್ತಲೇ ಇರುತ್ತದೆ. ಮೊದಲ ಓವರ್‌ಗಳಲ್ಲಿ ನಾವು ಹೇಗೆ ಬೌಲ್ ಮಾಡುತ್ತೇವೆ , ತಂಡ ಹೇಗೆ ಬ್ಯಾಟಿಂಗ್ ಮಾಡುತ್ತಿದೆ ಎಂಬುದನ್ನು ಪಲಿತಾಂಶ ಅವಲಂಬಿಸಿರುತ್ತದೆ..'

ಭುವನೇಶ್ವರ್ ಕುಮಾರ್ ಆರ್‌ಸಿಬಿ ಬೌಲರ್

ಸ್ಕೋರ್ ಬೋರ್ಡ್

162/5 (20 ಓವರ್)

ಸನ್‌ರೈಸರ್ಸ್ ಹೈದರಾಬಾದ್			
ಅಭಿಷೇಕ್	ಬೌಲರ್ ▸▸ ಪಾಂಡ್ಯ, ಕ್ಯಾಚ್ ▸▸ ಸಬ್.ಫೀಲ್ಡರ್ ಸಿ (ಸಬ್)	40	28
ಹೆಡ್	ಬೌಲರ್ ▸▸ ಜ್ಯಾಕ್ಸ್, ಕ್ಯಾಚ್ ▸▸ ಸ್ಯಾಂಟ್ನರ್	28	29
ಇಶಾನ್	ಬೌಲರ್ ▸▸ ಜ್ಯಾಕ್ಸ್, ಕ್ಯಾಚ್ ▸▸ ರಿಕೆಲ್ಟನ್	2	3
ನಿತೀಶ್	ಬೌಲ್ಡ್ ▸▸ ಬೌಲ್ಟ್, ಕ್ಯಾಚ್ ▸▸ ತಿಲಕ್	19	21
ಕ್ಲಾಸೆನ್	ಬೌಲ್ಡ್-ಬೌಲರ್ ▸▸ ಬುಮ್ರಾ	37	28
ಅನಿಕೇತ್	ನಾರ್ಟಟ್	18	8
ಕಮ್ಮಿನ್ಸ್	ನಾಟೌಟ್	8	4

ರಾಜಸ್ಥಾನ ರಾಯಲ್ಸ್	ಓವರ್	ರನ್	ವಿಕೆಟ್
ಚಾಹರ್	4	47	0
ಬೌಲ್ಟ್	4	29	1
ಬುಮ್ರಾ	4	21	1
ಜ್ಯಾಕ್ಸ್	3	14	2
ಪಾಂಡ್ಯ	4	42	1
ಸ್ಯಾಂಟ್ನರ್	1	8	0

ಸನ್‌ರೈಸರ್ಸ್ ಹೈದರಾಬಾದ್	ಓವರ್	ರನ್	ವಿಕೆಟ್
ಶಮಿ	3	28	0
ಮಾಲಿಂಗ	4	36	2
ಅನ್ಸಾರಿ 3.1	35	0	
ಹರ್ಷಲ್	3	31	1
ಕಮ್ಮಿನ್ಸ್	4	26	3
ಚಹಾರ್	1	9	0

166/6 (18.1 ಓವರ್)

ಮುಂಬೈ ಇಂಡಿಯನ್ಸ್			
ರಿಕಲ್ಟನ್	ಬೌಲರ್ ▸▸ ಹರ್ಷಲ್, ಕ್ಯಾಚ್ ▸▸ ಹೆಡ್	31	23
ರೋಹಿತ್	ಬೌಲರ್ ▸▸ ಕಮ್ಮಿನ್ಸ್, ಕ್ಯಾಚ್ ▸▸ ಹೆಡ್	26	16
ವಿಲ್‌ಜಾಕ್ಸ್	ಬೌಲರ್ ▸▸ ಕಮ್ಮಿನ್ಸ್, ಕ್ಯಾಚ್ ▸▸ ಅನ್ಸಾರಿ	36	26
ಸೂರ್ಯಕುಮಾರ್	ಬಿ ▸▸ ಕಮ್ಮಿನ್ಸ್, ಕ್ಯಾಚ್ ▸▸ ಅನ್ಸಾರಿ	26	15
ತಿಲಕ್	ನಾಟೌಟ್	21	17
ಪಾಂಡ್ಯ	ಬೌಲ್ಡ್ ▸▸ ಮಾಲಿಂಗ, ಕ್ಯಾಚ್ ▸▸ ಕಿಶನ್	21	9
ನಮನ್	ಎಲ್‌ಬಿಡಬ್ಲ್ಯು-ಬೌಲರ್ ಮಾಲಿಂಗ	0	3
ಸ್ಯಾಂಟ್ನರ್	ನಾಟೌಟ್	0	1

ವಾಂಖೆಡೆಯಲ್ಲಿ ಸೋಲುಂಡ ಹೈದರಾಬಾದ್ | ಪಾಂಡ್ಯ ಪಡೆಗೆ 2ನೇ ಜಯ

ಮುಂಬೈಗೆ ಗೆಲುವು

ಮುಂಬೈ: ಐಪಿಎಲ್ ಟೂರ್ನಿಯ ಗುರುವಾರದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ತವರಿನ ಲಾಭ ಪಡೆದು ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಜಯ ಸಾಧಿಸಿದೆ. ಕಳೆದ ಪಂದ್ಯದಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ಮಾಡಿ 246 ರನ್‌ಗಳ ಗುರಿಯನ್ನ ಬೆನ್ನಟ್ಟಿ ಗೆದ್ದಿದ್ದ ಸನ್‌ರೈಸರ್ಸ್ ಹೈದರಾಬಾದ್ ಗುರುವಾರ ಮುಂಬೈ ಬೌಲಿಂಗ್ ದಾಳಿಗೆ ತತ್ತರಿಸಿತು. ಆರಂಭದಿಂದ ಅಂತ್ಯದವರೆಗೂ ರನ್ ಗಳಿಸಲು ಪರದಾಡಿದ್ದ ಹೈದರಾಬಾದ್ ತಂಡ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 162 ರನ್ ಗಳಿಸಿತ್ತು. 163ರನ್‌ಗಳ ಸಾಧಾರಣ ಗುರಿಯನ್ನು ಬೆನ್ನಟ್ಟಿ ಮುಂಬೈ ಇಂಡಿಯನ್ಸ್ 18.1 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

ರೋಹಿತ್ ವೈಫಲ್ಯ: 16 ಎಸೆತಗಳಲ್ಲಿ 3 ಸಿಕ್ಸರ್‌ಗಳ ಸಹಿತ 26 ರನ್ ಗಳಿಸಿದ್ದ ರೋಹಿತ್ ಶರ್ಮಾ 4ನೇ ಓವರ್‌ನಲ್ಲೆ ವಿಕೆಟ್ ಕಳೆದುಕೊಂಡರು. ಇದು ಅವರ ಸತತ 6ನೇ ವೈಫಲ್ಯವಾಗಿದೆ. 6 ಪಂದ್ಯಗಳಲ್ಲಿ ಮುಂಬೈ ಇಂಡಿಯನ್ಸ್ ಒಂದು ಪಂದ್ಯದಲ್ಲೂ ಕೂಡ ಆರಂಭದ ವಿಕೆಟ್‌ಗೆ 50ರ ಜತೆಯಾಟ ಇದುವರೆಗೂ ಸಿಕ್ಕಿಲ್ಲ.

2ನೇ ವಿಕೆಟ್‌ಗೆ ಒಂದಾದ ರಯಾನ್ ರಿಕಲ್ಟನ್ ಹಾಗೂ ವಿಲ್ ಜಾಕ್ಸ್ 37 ರನ್ ಸೇರಿಸಿದರು. ರಿಕಲ್ಟನ್ 23 ಎಸೆತಗಳಲ್ಲಿ 5 ಬೌಂಡರಿ ಸಹಿತ 31 ರನ್ ಗಳಿಸಿ ಹರ್ಷಲ್ ಪಟೇಲ್‌ಗೆ ವಿಕೆಟ್ ಒಪ್ಪಿಸಿದರು. ಅನ್ಸಾರಿ ಓವರ್‌ನಲ್ಲಿ ಔಟ್ ಆಗಿದ್ದ ಅವರು, ಕ್ಲಾಸೆನ್ ಸ್ಟಂಪ್ ಮುಂದೆ ಕೈಹಾಕಿದ್ದರಿಂದ ನೋಬಾಲ್ ಆಗಿ ಜೀವದಾನ ಪಡೆದಿದ್ದರು. ಆದರೆ ಆ ಜೀವದಾನವನ್ನ ದೊಡ್ಡದಾಗಿ ಬಳಸಿಕೊಳ್ಳುವಲ್ಲಿ ವಿಫಲರಾದರು.

ಬೌಲಿಂಗ್‌ನಲ್ಲಿ 2 ವಿಕೆಟ್ ಪಡೆದು ಮಿಂಚಿದ್ದ ವಿಲ್ ಜಾಕ್ಸ್ ಬ್ಯಾಟಿಂಗ್‌ನಲ್ಲೂ ಮಿಂಚಿದರು. 26 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್‌ಗಳ ಸಹಿತ 36 ರನ್ ಗಳಿಸಿದರು. ಔಟ್ ಆಗುವ ಮುನ್ನ ಜಾಕ್ಸ್-ಸೂರ್ಯಕುಮಾರ್ ಯಾದವ್ 29 ಎಸೆತಗಳಲ್ಲಿ 52 ರನ್ ಜತೆಯಾಟ ಕಲೆಯಾಕಿದ್ದರು. ಸೂರ್ಯಕುಮಾರ್ ಯಾದವ್ 15 ಎಸೆತಗಳಲ್ಲಿ ತಲಾ 2 ಬೌಂಡರಿ, 2 ಸಿಕ್ಸರ್‌ಗಳ ಸಹಿತ 26 ರನ್ ಗಳಿಸಿದರು. ನಾಯಕ ಹಾರ್ದಿಕ್ ಪಾಂಡ್ಯ 9 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸೇರಿ 21 ರನ್ ಗಳಿಸಿ ಗೆಲುವಿಗೆ 1ರನ್ ಬೇಕಿದ್ದಾಗ ಔಟ್ ಆದರು. ತಿಲಕ್ ವರ್ಮಾ 17 ಎಸೆತಗಳಲ್ಲಿ ಅಜೇಯ 21 ರನ್ ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ಹೈದರಾಬಾದ್ ಪರ ನಾಯಕ ಪ್ಯಾಟ್ ಕಮಿನ್ಸ್ 26 ರನ್ ನೀಡಿ 3 ವಿಕೆಟ್, ಇಶಾನ್ ಮಾಲಿಂಗ 36 ರನ್ ನೀಡಿ 2, ಹರ್ಷಲ್ ಪಟೇಲ್ 31 ರನ್ ಕೊಟ್ಟು 1 ವಿಕೆಟ್ ಪಡೆದರು.

ಪರದಾಡಿದ ಹೈದರಾಬಾದ್: ಟಾಸ್ ಸೋತು ಬ್ಯಾಟಿಂಗ್ ಮಾಡಿದ ಹೈದರಾಬಾದ್ ತಂಡ ಪವರ್ ಪ್ಲೇನಲ್ಲಿ ವಿಕೆಟ್ ಕಳೆದುಕೊಳ್ಳಲಿಲ್ಲವಾದರೂ, ಕೇವಲ 46 ರನ್ ಗಳಿಸಿತು. ಅಭಿಷೇಕ್ ಶರ್ಮಾ 28 ಎಸೆತಗಳಲ್ಲಿ 7 ಬೌಂಡರಿಗಳ ಸಹಿತ 40 ರನ್ ಗಳಿಸಿದರು. ಇದೇ ಇಡೀ ಇನ್ನಿಂಗ್ಸ್‌ನಲ್ಲಿ ಗರಿಷ್ಠ ಸ್ಕೋರ್ ಆಯಿತು. ಟ್ರಾವಿಸ್ ಹೆಡ್ 29 ಎಸೆತಗಳಲ್ಲಿ ಕೇವಲ 28, ನಿತೀಶ್ ಕುಮಾರ್ ರೆಡ್ಡಿ 21 ಎಸೆತಗಳಲ್ಲಿ 19 ರನ್ ಗಳಿಸಿ ದಯನೀಯ ವೈಫಲ್ಯ ಅನುಭವಿಸಿದರು.

ಹೆನ್ರಿಚ್ ಕ್ಲಾಸೆನ್ 28 ಎಸೆತಗಳನ್ನ ಎದುರಿಸಿ 3 ಬೌಂಡರಿ, 2 ಸಿಕ್ಸರ್‌ಗಳ ಸಹಿತ 37 ರನ್ ಸಿಡಿಸಿ 19ನೇ ಓವರ್‌ನಲ್ಲಿ ಬುಮ್ರಾ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಆದರೆ ಹಾರ್ದಿಕ್ ಪಾಂಡ್ಯ ಎಸೆದ ಕೊನೆಯ ಓವರ್‌ನಲ್ಲಿ ಅನಿಕೇತ್ ವರ್ಮಾ ಹಾಗೂ ಪ್ಯಾಟ್ ಕಮಿನ್ಸ್ 22 ರನ್ ಸೂರೆಗೈದು ತಂಡದ ಮೊತ್ತವನ್ನು 162ಕ್ಕೆ ಕೊಂಡೊಯ್ದರು. ಅನಿಕೇತ್ 8 ಎಸೆತಗಳಲ್ಲಿ ಅಜೇಯ 18 ರನ್ ಗಳಿಸಿದರೆ, ಪ್ಯಾಟ್ ಕಮಿನ್ಸ್ ಅಜೇಯ 8 ರನ್ ಗಳಿಸಿದರು.

ಮುಂಬೈ ಬೌಲರ್‌ಗಳ ಪೈಕಿ ವಿಲ್ ಜಾಕ್ಸ್ 14 ರನ್‌ಗೆ 2 ವಿಕೆಟ್, ಹಾರ್ದಿಕ್ ಪಾಂಡ್ಯ 42 ರನ್‌ಗೆ 1 ವಿಕೆಟ್, ಜಸ್ಪ್ರೀತ್ ಬುಮ್ರಾ 21 ರನ್‌ಗೆ 1, ಟ್ರೆಂಟ್ ಬೌಲ್ಟ್ 29 ರನ್‌ಗೆ 1 ವಿಕೆಟ್ ಪಡೆದು ಮಿಂಚಿದರು.

ಬೆಂಗಳೂರಿನಲ್ಲಿ ಅತಿಥೇಯರಿಗೆ ಸೋಲಿನ ಪೊರೆ ಕಳಚುವ ತವಕ

ಆರ್‌ಸಿಬಿಗೆ ತವರಲ್ಲಿಂದು ಪಂಜಾಬ್ ಸವಾಲು

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶುಕ್ರವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ತಾನು ಆಡಿದ ಒಟ್ಟು 6 ಪಂದ್ಯಗಳ ಪೈಕಿ ಆರ್‌ಸಿಬಿ 2 ಪಂದ್ಯಗಳನ್ನು ತವರಿನಲ್ಲಿ ಆಡಿದ್ದು, ಆದರೆ ಆ ಎರಡೂ ಪಂದ್ಯಗಳಲ್ಲೂ ಬೆಂಗಳೂರು ತಂಡವು ಸೋತಿದ್ದು, ಪಂಜಾಬ್ ವಿರುದ್ಧ ನಡೆಯುತ್ತಿರುವ ಪಂದ್ಯದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹೇಗಾದರೂ ಗೆದ್ದು ತನ್ನ ಅಭಿಮಾನಿಗಳ ಮನಸ್ಸಿನಲ್ಲಿ ಸಂಭ್ರಮ ಮೂಡಿಸಬೇಕೆಂಬ ತವಕದಲ್ಲಿದೆ.

ಮಾರ್ಚ್-22ರಂದು ನಡೆದ ಈ ಆವೃತ್ತಿಯ ಆರಂಭಿಕ ಪಂದ್ಯದಲ್ಲಿ ಆರ್‌ಸಿಬಿ ಕೋಲ್ಕತ್ತಾ ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಅತಿಥೇಯ ಕೋಲ್ಕತ್ತಾವನ್ನು 7 ವಿಕೆಟ್‌ಗಳಿಂದ ಮಣಿಸಿ ಈ ಸಲದ ಐಪಿಎಲ್‌ನಲ್ಲಿ ಶುಭಾರಂಭ ಮಾಡಿತ್ತು. ಆ ಬಳಿಕ ಮಾರ್ಚ್-28ರಂದು ನಡೆದ ಪಂದ್ಯದಲ್ಲೂ ಚೆನ್ನೈಯಲ್ಲಿ ಸಿಎಸ್‌ಕೆ ತಂಡವನ್ನು 50 ರನ್‌ಗಳ ಭಾರೀ ಅಂತರದಲ್ಲಿ ಸೋಲಿಸಿ ಸಂಭ್ರಮಿಸಿತ್ತು.

ಆದರೆ ಏಪ್ರಿಲ್-2ರಂದು ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಆರ್‌ಸಿಬಿ ತನ್ನ ತವರಿನ ಪ್ರೇಕ್ಷಕರ ಎದುರು ಮುಗ್ಗರಿಸಿತು. ಏಪ್ರಿಲ್-7ರಂದು ನಡೆದ ಮುಂಬೈನಲ್ಲಿ ನಡೆದ ಪಂದ್ಯದಲ್ಲಿ ಅತಿಥೇಯರನ್ನು 12 ರನ್‌ಗಳಿಂದ ಸೋಲಿಸಿ ಕೇಕೆ ಹಾಕಿತು.

ಏಪ್ರಿಲ್-10ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ ಪಂದ್ಯದಲ್ಲಿ ಆರ್‌ಸಿಬಿ 163 ರನ್ ಗಳಿಸಿತ್ತು. ಆದರೆ ಡೆಲ್ಲಿ ತಂಡವು 4 ವಿಕೆಟ್‌ಗಳ ನಷ್ಟಕ್ಕೆ ಗುರಿ ತಲುಪಿ, 6 ವಿಕೆಟ್‌ಗಳಿಂದ ಪಂದ್ಯ ಗೆದ್ದಿತ್ತು. ಏಪ್ರಿಲ್-13ರಂದು ರಾಜಸ್ಥಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ರಾಜಸ್ಥಾನ ತಂಡವು 175 ರನ್ ಗಳಿಸಿತ್ತು. ಆರ್‌ಸಿಬಿ ಕೇವಲ 1 ವಿಕೆಟ್ ನಷ್ಟಕ್ಕೆ ಆ ಗುರಿ ತಲುಪಿ 9 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು.

ಈ ಐಪಿಎಲ್‌ನಲ್ಲಿ ಆರ್‌ಸಿಬಿಯಂತೆ 6 ಪಂದ್ಯಗಳನ್ನಾಡಿರುವ ಪಂಜಾಬ್ ಕೂಡಾ 4ರಲ್ಲಿ ಗೆದ್ದು 8 ಅಂಕಗಳನ್ನು ಸಂಪಾದಿಸಿದೆ. ಮಾರ್ಚ್-25ರಂದು ನಡೆದ ಪಂದ್ಯದಲ್ಲಿ ಅದು ಗುಜರಾತ್ ಟೈಟನ್ಸ್ ಅನ್ನು 11 ರನ್‌ಗಳಿಂದ ಪರಾಭವಗೊಳಿಸಿತ್ತು. ಏಪ್ರಿಲ್-1ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಪಂಜಾಬ್ ತಂಡವು ಲಖನೌ ತಂಡದ ವಿರುದ್ಧ 8 ವಿಕೆಟ್‌ಗಳ ಜಯ ದಾಖಲಿಸಿತ್ತು. ಆದರೆ ಏಪ್ರಿಲ್-5ರಂದು ನಡೆದ ಪಂದ್ಯದಲ್ಲಿ ರಾಜಸ್ಥಾನ ತಂಡವು ಪಂಜಾಬ್ ವಿರುದ್ಧ ಸೋತು ಮುಖಭಂಗ ಅನುಭವಿಸಿತು. ಏಪ್ರಿಲ್-8ರಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಪಂಜಾಬ್ 219 ರನ್ ಗಳಿಸಿತ್ತು, ಆ ಗುರಿಯನ್ನು ಬೆಂಬತ್ತಿದ ಚೆನ್ನೈ ತಂಡವು ಕೇವಲ 201 ರನ್‌ಗಳನ್ನು ಪಡೆದು ಪಂಜಾಬ್ ಎದುರು 18 ರನ್‌ಗಳಿಂದ ಸೋತಿತ್ತು.

ಏಪ್ರಿಲ್-12ರಂದು ಆಯೋಜಿಸಿದ್ದ ಪಂದ್ಯದಲ್ಲಿ ಪಂಜಾಬ್ ಮೊದಲು ಬ್ಯಾಟ್ ಮಾಡಿ, 245 ರನ್ ಗಳಿಸಿತು. ಆದರೆ ಹೈದರಾಬಾದ್ ತಂಡ 7 ವಿಕೆಟ್ ನಷ್ಟಕ್ಕೆ ಆ ಗುರಿ ತಲುಪಿ ಪಂದ್ಯವನ್ನು ಗೆದ್ದಿತ್ತು.

ಏಪ್ರಿಲ್-15ರಂದು ನಡೆದಿದ್ದ ರೋಚಕ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಪಂಜಾಬ್ 111 ರನ್‌ಗೆ ಆಲೌಟ್ ಆಗಿತ್ತು. ಆ ಬಳಿಕ ಬೌಲಿಂಗ್‌ಗೆ ಇಳಿದು ಕೋಲ್ಕತ್ತಾವನ್ನು 95 ರನ್‌ಗಳಿಗೆ ಆಲೌಟ್ ಮಾಡಿ 16 ರನ್‌ಗಳ ಗೆಲುವು ಪಡೆದಿತ್ತು.

ಆರ್‌ಸಿಬಿ ಮತ್ತು ಪಂಜಾಬ್ ತಂಡಗಳು ಈ ಸಲದ ಐಪಿಎಲ್ ಟೂರ್ನಿಯಲ್ಲಿ ಸಮಬಲರಂತೆ ಇದುವರೆಗೂ ಸಮಾನ ಯಶಸ್ಸನ್ನು ಕಂಡಿವೆ. ಆದರೆ ತವರಿನಲ್ಲಿ ತನ್ನ ಸೋಲಿನ ಪೊರೆ ಕಳಚಬೇಕೆಂಬ ಇರಾದೆಯಲ್ಲಿರುವ ಆರ್‌ಸಿಬಿ, ಪಂಜಾಬ್ ತಂಡವನ್ನು ಹೇಗೆ ಎದುರಿಸುತ್ತೆ ಎಂದು ಕಾದು ನೋಡಬೇಕು.

ಬೆಂಗಳೂರು ತಂಡ:
ರಜತ್ ಪಾಟೀದಾರ್ (ನಾಯಕ)
ವಿರಾಟ್ ಕೊಹ್ಲಿ
ಯಶ್ ದಯಾಳ್
ಜೋಶ್ ಹ್ಯಾಝಲ್‌ವುಡ್
ಫಿಲ್ ಸಾಲ್ಟ್
ಜಿತೇಶ್ ಶರ್ಮಾ
ಲಿವಿಂಗ್‌ಸ್ಟೋನ್
ಸುಯಶ್ ಶರ್ಮಾ
ಭುವನೇಶ್ವರ್ ಕುಮಾರ್
ಕೃನಾಲ್ ಪಾಂಡ್ಯ
ಜೇಕಬ್ ಬೆಥೆಲ್
ದೇವದತ್ ಪಡಿಕ್ಕಲ್
ನುವಾನ್ ತುಷಾರ
ಅಭಿನಂದನ್ ಸಿಂಗ್

ಪಂಜಾಬ್ ತಂಡ:
ಶ್ರೇಯಸ್ ಅಯ್ಯರ್ (ನಾಯಕ)
ಪ್ರಭ್‌ಸಿಮ್ರಾನ್ ಸಿಂಗ್
ಪ್ರಿಯಾಂಶ್ ಆರ್ಯ
ಶಶಾಂಕ್ ಸಿಂಗ್
ಮಾರ್ಕಸ್ ಸ್ಟೊಯಿನಿಸ್
ಸೂರ್ಯಾಂಶ್ ಶೆಡ್ಜ್
ಗ್ಲೆನ್ ಮ್ಯಾಕ್ಸ್‌ವೆಲ್
ಮಾರ್ಕೊ ಜಾನ್ಸೆನ್
ಯುಜುವೇಂದ್ರ ಚಹಾಲ್
ಲಾಕಿ ಫರ್ಗುಸನ್
ಅರ್ಷ್ದೀಪ್ ಸಿಂಗ್
ನೇಹಲ್ ವದೇರಾ
ಮುಶೀರ್ ಖಾನ್
ಕುಲ್‌ದೀಪ್ ಸೇನ್

ಆರ್‌ಸಿಬಿ-ಪಂಜಾಬ್ ಪಂದ್ಯಕ್ಕೆ ಮಳೆ ಭೀತಿ

ಬೆಂಗಳೂರು: ಬ್ಯಾಟಿಂಗ್‌ಸ್ನೇಹಿ ಚಿನ್ನಸ್ವಾಮಿ ಮೈದಾನ ಚಿಕ್ಕದಾಗಿರುವುದರಿಂದ ಭಾರೀ ಪ್ರಮಾಣದ ರನ್ ಹರಿದು ಬರುವುದು ಸಾಮಾನ್ಯ. ಮೊದಲು ಬ್ಯಾಟಿಂಗ್ ಮಾಡುವ ತಂಡಕ್ಕೆ ದೊಡ್ಡ ಮೊತ್ತ ಪೇರಿಸುವ ಸವಾಲು ಎದುರಾಗಲಿದೆ, ಜತೆಗೆ ಬೌಲರ್‌ಗಳಿಗೆ ನಿಜವಾದ ಸತ್ವಪರೀಕ್ಷೆ ಎದುರಾಗಲಿದೆ. ವೇಗಿಗಳಿಗಿಂತ ಸ್ಪಿನ್ನರ್‌ಗಳು ಕೊಂಚ ಹಿಡಿತ ಸಾಧಿಸಬಹುದು. ಈ ಆವೃತ್ತಿಯಲ್ಲಿ ನಡೆದ ಎರಡು ಪಂದ್ಯಗಳಲ್ಲಿಯೂ ಚೇಸಿಂಗ್ ನಡೆಸಿದ ತಂಡವೇ ಗೆದ್ದು ಬೀಗಿತ್ತು. ಹೀಗಾಗಿ ಟಾಸ್ ಕೂಡ ನಿರ್ಣಾಯಕ. ಮುಂದಿನ 5 ದಿನಗಳ ಕಾಲ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆಯನ್ನು ಭಾರತ ಹವಾಮಾನ ಇಲಾಖೆ ನೀಡಿದೆ, ಹೀಗಾಗಿ ಪಂದ್ಯಕ್ಕೆ ಮಳೆ ಭೀತಿ ತಪ್ಪಿದ್ದಲ್ಲ. ಆದರೆ ಪಂದ್ಯ ನಡೆಯುವ ಸಮಯದಲ್ಲಿ ಎಷ್ಟೇ ಜೋರಾಗಿ ಮಳೆ ಬಂದರೂ ಮಳೆ ನಿಂತ 15ರಿಂದ 20 ನಿಮಿಷದೊಳಗೆ ಮತ್ತೆ ಪಂದ್ಯ ಮುಂದುವರಿಯಲು ಅವಕಾಶ ಮಾಡಿಕೊಡುವ ಸಬ್ ಏರ್ ಸಿಸ್ಟಂ ತಂತ್ರಜ್ಞಾನ ಸೌಲಭ್ಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿದೆ.

ಸ್ಫೋಟಕ ಶತಕ: ಜೈನ್ ನಖ್ವಿ ದಾಖಲೆ

ಆ್ಯಮ್‌ಸ್ಟರ್‌ಡ್ಯಾಮ್: ಯುರೋಪಿಯನ್ ಟಿ20 ಲೀಗ್‌ನಲ್ಲಿ ಇಟಲಿಯ ಜೈನ್ ನಖ್ವಿ ಕೇವಲ 26 ಎಸೆತಗಳಲ್ಲಿ ಶತಕ ಗಳಿಸಿ, ಚುಟುಕು ಕ್ರಿಕೆಟ್‌ನ ಅತ್ಯಂತ ವೇಗದ ಶತಕದ ವಿಶ್ವ ದಾಖಲೆಯನ್ನು ಸೃಷ್ಟಿಸಿದ್ದಾರೆ. ಈ ಸಾಧನೆಯೊಂದಿಗೆ ಎಸ್ಟೋನಿಯಾದ ಸಾಹಿಲ್ ಚೌಹಾಣ್‌ನ 27 ಎಸೆತಗಳ ದಾಖಲೆಯನ್ನು (2024, ಸೈಪ್ರಸ್ ವಿರುದ್ಧ) ನಖ್ವಿ ಮುರಿದಿದ್ದಾರೆ.

23 ವರ್ಷದ ಜೈನ್ ನಖ್ವಿ, ಮಾರ್ಖೋರ್ ಮಿಲಾನೊ ತಂಡದ ಪರ ಆಡುತ್ತಾ, 37 ಎಸೆತಗಳಲ್ಲಿ 432.43ರ ಸ್ಟ್ರೈಕ್ ರೇಟ್‌ನೊಂದಿಗೆ 160 ರನ್ ಗಳಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 24 ಸಿಕ್ಸರ್‌ಗಳು ಮತ್ತು 2 ಬೌಂಡರಿಗಳಿದ್ದವು. ಒಂದೇ ಓವರ್‌ನಲ್ಲಿ 6 ಸಿಕ್ಸರ್‌ಗಳನ್ನು ಬಾರಿಸಿದ ನಖ್ವಿ, ಯುವರಾಜ್ ಸಿಂಗ್, ಕೀರನ್ ಪೊಲಾರ್ಡ್‌ರಂತಹ ದಿಗ್ಗಜರ ಸಾಲಿಗೆ ಸೇರಿದರು.

ಇದಲ್ಲದೆ ಚುಟುಕು ಕ್ರಿಕೆಟ್ ಇತಿಹಾಸದಲ್ಲಿ ಒಂದೇ ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ಸಿಡಿಸಿದ ಬ್ಯಾಟರ್ ಎನಿಸಿಕೊಂಡರು. ಇದಕ್ಕೂ ಮುನ್ನ ಸಾಹಿಲ್ ಚೌಹಾಣ್ 18 ಸಿಕ್ಸರ್ ಸಿಡಿಸಿದ್ದರು, ಇದೀಗ 24 ಸಿಕ್ಸರ್ ಸಿಡಿಸುವ ಮೂಲಕ ನಖ್ವಿ ವಿಶ್ವದಾಖಲೆ ಬರೆದಿದ್ದಾರೆ. ಯುರೋಪಿಯನ್ ಟಿ20 ಲೀಗ್‌ನ ಈ ಪಂದ್ಯದಲ್ಲಿ ಮಾರ್ಖೋರ್ ಮಿಲಾನೊ, ಸಿವಿಟಾವೆಚಿಯಾ ವಿರುದ್ಧ ಮೊದಲು ಬ್ಯಾಟಿಂಗ್ ಮಾಡಿ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 210 ರನ್ ಗಳಿಸಿತು. ಜೈನ್ ನಖ್ವಿಯ ಶತಕವೇ ತಂಡದ ಬೃಹತ್ ಸ್ಕೋರ್‌ಗೆ ಕಾರಣವಾಯಿತು. ಆದರೆ ಇತರ ಆಟಗಾರರು ಗಮನಾರ್ಹ ಕೊಡುಗೆ ನೀಡಲಿಲ್ಲ. ಆದರೆ 211 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಸಿವಿಟಾವೆಚಿಯಾ 9 ಓವರ್‌ಗಳಲ್ಲಿ 106 ರನ್‌ಗೆ ಆಲೌಟ್ ಆಗಿ 104 ರನ್‌ಗಳಿಂದ ಪಂದ್ಯದಲ್ಲಿ ಸೋತಿತು. ಶಹಬಾಜ್ ಮಸೂದ್ (34 ರನ್) ಸಿವಿಟಾವೆಚಿಯಾದ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಕೋಚ್ ಮುನಾಫ್ ಪಟೇಲ್‌ಗೆ ದಂಡ

ದೆಹಲಿ: ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದ ವೇಳೆ ಐಪಿಎಲ್ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬೌಲಿಂಗ್ ಕೋಚ್ ಮುನಾಫ್ ಪಟೇಲ್ ಅವರಿಗೆ ಪಂದ್ಯ ಶುಲ್ಕದ ಶೇಕಡಾ 25ರಷ್ಟು ದಂಡ ವಿಧಿಸಲಾಗಿದೆ. ಇದರೊಂದಿಗೆ ಅವರ ಖಾತೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರ್ಪಡೆಯಾಗಿದೆ. ಮುನಾಫ್ ಪಟೇಲ್ ಯಾವ ತಪ್ಪು ಮಾಡಿದ್ದಾರೆಂದು ಹೇಳಿಕೆಯಲ್ಲಿ ತಿಳಿದಿಲ್ಲ. ಆದರೆ ಪಂದ್ಯದ ವೇಳೆ ನಾಲ್ಕನೇ ಅಂಪೈರ್‌ನೊಂದಿಗೆ ವಾದ ಮಾಡುತ್ತಿರುವ ವಿಡಿಯೊ ಸೋಶಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿದೆ. ಈ ಕಾರಣದಿಂದಲೇ ಮುನಾಫ್ ಪಟೇಲ್‌ಗೆ ಈ ಶಿಕ್ಷೆ ವಿಧಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಸಚಿನ್ ರೋಲ್ ಮಾಡೆಲ್: ಕೇನ್ ವಿಲಿಯಮ್ಸ್

ದೆಹಲಿ: ನ್ಯೂಜಿಲೆಂಡ್ ತಂಡದ ಮಾಜಿ ನಾಯಕ ಕೇನ್ ವಿಲಿಯಮ್ಸನ್ ಅವರು ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಕಾಮೆಂಟರಿ ಮಾಡುತ್ತಿರುವ ವೇಳೆ ಹಲವು ಪ್ರಮುಖ ಅಂಶಗಳ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ತಮ್ಮ ಕ್ರಿಕೆಟ್‌ನ ಆರಾಧ್ಯ ದೈವ ಯಾರೆಂದು ಅವರು ಬಹಿರಂಗಪಡಿಸಿದ್ದಾರೆ. ಅಚ್ಚರಿ ಎಂಬಂತೆ ಅವರು ವಿರಾಟ್ ಕೊಹ್ಲಿ, ಎಂಎಸ್ ಧೋನಿ ಸೇರಿದಂತೆ ಘಟಾನುಘಟಿ ದಿಗ್ಗಜರನ್ನು ಕಡೆಗಣಿಸಿ ಭಾರತೀಯ ಕ್ರಿಕೆಟ್‌ನ ದಂತಕತೆ ಸಚಿನ್ ತೆಂಡೂಲ್ಕರ್ ಅವರನ್ನು ಆ ಸ್ಥಾನಕ್ಕಾಗಿ ಆರಿಸಿದ್ದಾರೆ. ಜಿಯೋ ಸಿನಿಮಾದ 'ಸ್ಟಾರ್ ನಹಿ ಫಾರ್' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೇನ್ ವಿಲಿಯಮ್ಸನ್, ಮಕ್ಕಳೊಂದಿಗೆ ಸಂಭಾಷಣೆಯನ್ನು ನಡೆಸಿದ್ದರು. ಈ ವೇಳೆ ಮಕ್ಕಳಿಗಾಗಿ ಪ್ರಶ್ನೋತ್ತರ ಅವಧಿಯನ್ನು ಏರ್ಪಡಿಸಲಾಗಿತ್ತು. ಈ ವೇಳೆ ಮಕ್ಕಳು ಕೇಳಿದ ಹಲವು ಪ್ರಶ್ನೆಗಳಿಗೆ ಕಿವೀಸ್ ಸ್ಟಾರ್ ಬ್ಯಾಟ್ಸ್‌ಮನ್ ಉತ್ತರ ನೀಡಿದ್ದಾರೆ. 'ನನ್ನ ಪಾಲಿಗೆ ಕ್ರಿಕೆಟ್ ಆರಾಧ್ಯ ದೈವ ಸಚಿನ್ ತೆಂಡೂಲ್ಕರ್ ನಿಜಕ್ಕೂ ದಂತಕತೆ. ಈಗಲೂ ಕೂಡ ಅವರು ಆಡುವುದನ್ನು ನಾನು ಕಾತುರದಿಂದ ಕಾಯುತ್ತಿದ್ದೇನೆ' ಎಂದು ಕೇನ್ ವಿಲಿಯಮ್ಸನ್ ತಿಳಿಸಿದ್ದಾರೆ.

ರೋಹಿತ್‌ಗೆ ವಿಶೇಷ ಸ್ಮರಣಿಕೆ

ಮುಂಬೈ: ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಸನ್‌ರೈಸರ್ಸ್ ಹಾಗೂ ಮುಂಬೈ ಇಂಡಿಯನ್ಸ್ ನಡುವಿನ ಪಂದ್ಯಕ್ಕೂ ಮುನ್ನ ಗುರುವಾರ, ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಮಾಜಿ ಮುಂಬೈ ನಾಯಕ ರೋಹಿತ್ ಶರ್ಮಾ ಅವರಿಗೆ ವಿಶೇಷ ಸ್ಮರಣಿಕೆ ನೀಡಿ ಗೌರವಿಸಿದರು. ಐಪಿಎಲ್‌ನಲ್ಲಿ 18 ವರ್ಷಗಳನ್ನ ಪೂರೈಸಿದ್ದಕ್ಕಾಗಿ ರೋಹಿತ್‌ಗೆ ಈ ಗೌರವ ಸಲ್ಲಿಸಲಾಯಿತು. ಐಪಿಎಲ್‌ನ ಮೊದಲ ಸೀಸನ್‌ನಿಂದ ರೋಹಿತ್ ಶರ್ಮಾ ಈ ಲೀಗ್‌ನ ಭಾಗವಾಗಿದ್ದಾರೆ. ಆದ್ದರಿಂದ ಲೀಗ್‌ನ 18 ವರ್ಷಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ರೋಹಿತ್ ಅವರನ್ನು ಗೌರವಿಸಲಾಯಿತು. ಈ ವರ್ಷ ಐಪಿಎಲ್‌ನ ಮೊದಲ ಸೀಸನ್‌ನಿಂದ ನಿರಂತರವಾಗಿ ಆಡುತ್ತಿರುವ ಆಟಗಾರರನ್ನು ಬಿಸಿಸಿಐ ಗೌರವಿಸುತ್ತಿದೆ. ಅದರಂತೆ ರೋಹಿತ್‌ಗೂ ಮೊದಲು ವಿರಾಟ್ ಕೊಹ್ಲಿ ಮತ್ತು ಎಂಎಸ್ ಧೋನಿ ಕೂಡ ಈ ಗೌರವಕ್ಕೆ ಪಾತ್ರರಾಗಿದ್ದರು.

ರಾಹುಲ್ ವಿರುದ್ಧ ಪೂಜಾರ ಟೀಕೆ

ದೆಹಲಿ: ರಾಜಸ್ಥಾನ್ ರಾಯಲ್ಸ್ ವಿರುದ್ಧ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ನಿಧಾನಗತಿಯ ಬ್ಯಾಟಿಂಗ್ ಪ್ರದರ್ಶನ ತೋರಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿಕೆಟ್ ಕೀಪರ್ ಕೆಎಲ್ ರಾಹುಲ್ ಅವರನ್ನು ಭಾರತದ ಹಿರಿಯ ಬ್ಯಾಟ್ಸ್‌ಮನ್ ಚೇತೇಶ್ವರ್ ಪೂಜಾರ ಟೀಕಿಸಿದ್ದಾರೆ.

'ಕೆಎಲ್ ರಾಹುಲ್ ಹಿರಿಯ ಆಟಗಾರ. ಬಹುಶಃ ಅವರು 15-20 ಎಸೆತಗಳ ಬಳಿಕ ವೇಗವಾಗಿ ಬ್ಯಾಟ್ ಮಾಡಬೇಕೆಂದು ಬಯಸಿದ್ದರು. ಆದರೆ ಇದೇ ಸಮಯದಲ್ಲಿ ಅವರು ಇನ್ನಷ್ಟು ಆಕ್ರಮಣಕಾರಿಯಾಗಿ ಬ್ಯಾಟ್ ಬೀಸಬೇಕಾಗಿತ್ತು, ಏಕೆಂದರೆ ಅವರು ಸೆಟ್ ಆಗಿದ್ದರು. ಪಿಚ್ ಅನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಸಿಕ್ಕ ಸಮಯ ಸಾಕಾಗಿತ್ತು' ಎಂದು ಚೇತೇಶ್ವರ್ ಪೂಜಾರ ತಿಳಿಸಿದ್ದಾರೆ. 'ಅವರ ಬ್ಯಾಟಿಂಗ್ ಕ್ರಮಾಂಕ ಕೂಡ ಸ್ವಲ್ಪ ಬದಲಾಗಿದೆ, ಹಾಗಾಗಿ ಅವರು ಅದನ್ನು ಲೆಕ್ಕಾಚಾರ ಹಾಕಲು ಪ್ರಯತ್ನಿಸುತ್ತಿದ್ದಾರೆಂಬುದು ನನ್ನ ಅರ್ಥ. ಅವರು ಸಾಮಾನ್ಯವಾಗಿ ಪವರ್‌ಪ್ಲೇನಲ್ಲಿ ಸ್ಫೋಟಕ ಬ್ಯಾಟ್ ಮಾಡುತ್ತಾರೆ, ಆದರೆ ಇದಾದ ಬಳಿಕ ಅವರು ಇನ್ನಷ್ಟು ಆಕ್ರಮಣಕಾರಿಯಾಗಿ ಬ್ಯಾಟ್ ಮಾಡಬೇಕಾಗುತ್ತದೆ. ಅವರ ಆಟವನ್ನು ನೋಡುತ್ತಿದ್ದಾಗ, ಅವರು ತಮ್ಮ ವಿಕೆಟ್ ಅನ್ನು ಉಳಿಸಿಕೊಳ್ಳಲು ಆಡುತ್ತಿದ್ದಾರೆಂದು ಅನಿಸುತ್ತಿತ್ತು' ಎಂದು ಚೇತೇಶ್ವರ ಪೂಜಾರ ಹೇಳಿದ್ದಾರೆ.

ಪ್ಲೇಆಫ್: ಡೆಲ್ಲಿಗಿನ್ನು ಮೂರು ಹೆಜ್ಜೆ ದೂರ

ದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡಿದ 6 ಪಂದ್ಯಗಳಲ್ಲಿ ಡೆಲ್ಲಿ ಕ್ಯಾಪಿಟಲ್ಸ್ (ಡಿ.ಸಿ) ತಂಡವು 5 ಜಯ ಸಾಧಿಸಿದೆ. ಈ ಐದು ಗೆಲುವುಗಳೊಂದಿಗೆ ಒಟ್ಟು 10 ಅಂಕಗಳನ್ನು ಕಲೆಹಾಕಿರುವ ಡೆಲ್ಲಿ ಕ್ಯಾಪಿಟಲ್ಸ್ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ, ಅಂದರೆ ಐಪಿಎಲ್‌ನ ಮೊದಲಾರ್ಧಲ್ಲೇ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಡೆಲ್ಲಿ ಪಡೆ ಪ್ಲೇಆಫ್‌ನತ್ತ ಹೆಜ್ಜೆಯನ್ನಿಟ್ಟಿದೆ.

ಐಪಿಎಲ್‌ನ ಪ್ಲೇಆಫ್ ಕಟ್ ಆಫ್ ಪಾಯಿಂಟ್ 16, ಅಂದರೆ 16 ಅಂಕಗಳನ್ನು ಪಡೆಯುವ ತಂಡವು ಪ್ಲೇಆಫ್‌ಗೇರುವುದು ಬಹುತೇಕ ಖಚಿತ. ಇದೀಗ 6 ಪಂದ್ಯಗಳಲ್ಲಿ 10 ಅಂಕಗಳನ್ನು ಪಡೆದಿರುವ ಡೆಲ್ಲಿ ಕ್ಯಾಪಿಟಲ್ಸ್ ಮುಂದಿನ 8 ಪಂದ್ಯಗಳಲ್ಲಿ ಮೂರು ಪಂದ್ಯಗಳಲ್ಲಿ ಜಯ ಸಾಧಿಸಿದರೆ ಸಾಕು, ಆ ಮೂಲಕ ಒಟ್ಟು 16 ಅಂಕಗಳನ್ನು ಪಡೆದು ಪ್ಲೇಆಫ್‌ನಲ್ಲಿ ತನ್ನ ಸ್ಥಾನವನ್ನು ಖಚಿತಪಡಿಸಿಕೊಳ್ಳಬಹುದು. ಸದ್ಯದ ಅಂಕಪಟ್ಟಿಯಂತೆ ಪ್ಲೇಆಫ್‌ನಲ್ಲಿ ಸ್ಥಾನ ಸುಲಭವಾಗಿ ಸ್ಥಾನಗಿಟ್ಟಿಬಹುದಾದ ಕೆಲವು ಪ್ರಮುಖ ತಂಡಗಳು ಹೀಗಿವೆ:

ಗುಜರಾತ್ ಟೈಟಾನ್ಸ್: ಶುಭ್‌ಮನ್ ಗಿಲ್ ಮುಂದಾಳತ್ವದ ಗುಜರಾತ್ ಟೈಟಾನ್ಸ್ ತಂಡವು 6 ಪಂದ್ಯಗಳ ಪೈಕಿ 4ರಲ್ಲಿ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಗಿಲ್ ಪಡೆಗೆ ಇನ್ನುಳಿದಿರುವುದು ಕೇವಲ 8 ಮ್ಯಾಚ್‌ಗಳು ಮಾತ್ರ. ಆ 8 ಪಂದ್ಯಗಳಲ್ಲಿ 4ರಲ್ಲಿ ಜಯ ಸಾಧಿಸಿದರೆ 16 ಅಂಕಗಳನ್ನು ಪಡೆದು ಗಿಲ್ ಪಡೆ ಮುಂದಿನ ಹಂತಕ್ಕೇರಬಹುದು.

ರಾಯಲ್ ಚಾಲೆಂಜರ್ಸ್ ಬೆಂಗಳೂರು: ರಜತ್ ಪಾಟಿದಾರ್ ಸಾರಥ್ಯದಲ್ಲಿ ಕಣಕ್ಕಿಳಿಯುತ್ತಿರುವ ಆರ್‌ಸಿಬಿ ತಂಡವು 6 ಪಂದ್ಯಗಳ ಪೈಕಿ 4ರಲ್ಲಿ ಗೆಲುವು ದಾಖಲಿಸಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಇನ್ನೂ 8 ಪಂದ್ಯಗಳಿದ್ದು, ಅವುಗಳ ಪೈಕಿ 4 ಜಯ ಸಾಧಿಸಿದರೆ ಪ್ಲೇಆಫ್ ಹಂತಕ್ಕೇರಲಿದೆ.

ಪಂಜಾಬ್ ಕಿಂಗ್ಸ್: ಶ್ರೇಯಸ್ ಅಯ್ಯರ್ ಮುಂದಾಳತ್ವದಲ್ಲಿ ಕಣಕ್ಕಿಳಿಯುತ್ತಿರುವ ಪಂಜಾಬ್ ಕಿಂಗ್ಸ್ 6 ಪಂದ್ಯಗಳಲ್ಲಿ 4ರಲ್ಲಿ ಜಯ ಸಾಧಿಸಿದೆ. ಇನ್ನುಳಿದಿರುವ 8 ಮ್ಯಾಚ್‌ಗಳಲ್ಲಿ 4 ಗೆಲುವು ದಾಖಲಿಸಿದರೆ, 16 ಅಂಕಗಳೊಂದಿಗೆ ಪ್ಲೇಆಫ್‌ಗೆ ಪ್ರವೇಶಿಸಲಿದೆ

ಲಕ್ನೋ ಸೂಪರ್ ಜೈಂಟ್ಸ್: ರಿಷಭ್ ಪಂತ್ ನೇತೃತ್ವದಲ್ಲಿ ಕಣಕ್ಕಿಳಿಯುತ್ತಿರುವ ಲಕ್ನೋ ಸೂಪರ್ ಜೈಂಟ್ಸ್ ತಂಡವು ಆಡಿದ 7 ಪಂದ್ಯಗಳಲ್ಲಿ 4 ರಲ್ಲಿ ಗೆಲುವು ಸಾಧಿಸಿದೆ. ಇನ್ನುಳಿದ 7 ಪಂದ್ಯಗಳಲ್ಲಿ 4 ರಲ್ಲಿ ಗೆಲುವು ಸಾಧಿಸಿದರೆ, 16 ಅಂಕಗಳೊಂದಿಗೆ ಪ್ಲೇಆಫ್ ಗೇರಲಿದೆ.

ಕೊಲ್ಕತ್ತಾ ನೈಟ್ ರೈಡರ್ಸ್: ಅಂಜಿಕ್ಯ ರಹಾನೆ ನಾಯಕತ್ವದಲ್ಲಿ ಕಣಕ್ಕಿಳಿಯುತ್ತಿರುವ ಕೆಕೆಆರ್ ತಂಡವು ಈವರೆಗೆ ಆಡಿದ 7 ಪಂದ್ಯಗಳಲ್ಲಿ 3ರಲ್ಲಿ ಜಯ ಸಾಧಿಸಿದೆ. ಇನ್ನುಳಿದ 7 ಪಂದ್ಯಗಳಲ್ಲಿ 5 ರಲ್ಲಿ ಜಯ ಸಾಧಿಸಿದರೆ 16 ಅಂಕಗಳನ್ನು ಪಡೆದು, ಅಂಕಪಟ್ಟಿಯಲ್ಲಿ ಟಾಪ್-4ರಲ್ಲಿ ಕಾಣಿಸಿಕೊಳ್ಳಬಹುದು.

ಕ್ರಿಕೆಟ್‌ನಲ್ಲಿ ಯಾವುದೂ ಅಸಾಧ್ಯ ಎಂಬುವುದಿಲ್ಲ. ಹಾಗಾಗಿ ಮುಂದೆ ಉಳಿದಿರುವ ಪಂದ್ಯಗಳಲ್ಲಿ ನಿರಂತರವಾಗಿ ಗೆಲುವನ್ನು ದಾಖಲಿಸಿತ್ತಾ ಹೋದರೆ ಮುಂಬೈ ಇಂಡಿಯನ್ಸ್, ರಾಜಸ್ಥಾನ ರಾಯಲ್ಸ್ ಮತ್ತು ಚೆನ್ನೈ ತಂಡಕ್ಕೂ ಪ್ಲೇಆಫ್ ನಲ್ಲಿ ಸೆಣಸಾಡಲು ಅವಕಾಶ ಸಿಕ್ಕಿದರೂ ಸಿಗಬಹುದು.

ದಿಗ್ವೇಶ್ ರಾಥಿ ಬಡತನದ ಹಿನ್ನೆಲೆ: ಸೋದರನಿಂದ ವಿಷಯ ಬಹಿರಂಗ

ದೆಹಲಿ: ಐಪಿಎಲ್ ಟೂರ್ನಿಯಲ್ಲಿ ತಮ್ಮ ವಿಶಿಷ್ಠ ಬೌಲಿಂಗ್ ಮೂಲಕ ಲಖನೌ ಸೂಪರ್ ಕಿಂಗ್ ತಂಡದ ಪರ ಮಿಂಚುತ್ತಿರುವ ದಿಗ್ವೇಶ್ ರಾಥಿಯ ಕ್ರಿಕೆಟ್ ಪಯಣ ನಿಜಕ್ಕೂ ದೃಢನಿಶ್ಚಯದ ಗುರಿಯಾಗಿತ್ತು ಎಂದು ಅವರ ಸಹೋದರ ಹೇಳಿಕೊಂಡಿದ್ದಾರೆ. ದಿಗ್ವೇಶ್ ರಾಥಿಯ ಕ್ರಿಕೆಟ್ ಪಯಣಕ್ಕೆ ಸಂಬಂಧಿಸಿದಂತೆ ಕೆಲವೊಂದು ಆಸಕ್ತಿದಾಯಕ ಸಂಗತಿಗಳನ್ನು ಅವರು ಬಹಿರಂಗಪಡಿಸಿದ್ದು, ಗಾಡ್ ಫಾದರ್ ಇಲ್ಲದೆ ಹಾಗೂ ಹಣಬಲವಿಲ್ಲದೆ ದಿಗ್ವೇಶ್ ಕ್ರಿಕೆಟ್‌ನಲ್ಲಿ ಬೆಳೆದಿದ್ದಾರೆಂದು ಹೇಳಿಕೊಂಡಿದ್ದಾರೆ.

'ದಿಗ್ವೇಶ್‌ಗೆ ಗಾಡ್‌ಫಾದರ್ ಇರಲಿಲ್ಲ, ನಮಗೆ ಹಣ ಅಥವಾ ಯಾವುದೇ ಪ್ರಭಾವ ಇರಲಿಲ್ಲ. ಹಣಕಾಸಿನ ಸಮಸ್ಯೆಯಿಂದ ಬದುಕು ಸಾಗಿಸಲು ಸಾಧ್ಯವಾಗದೆ ಇದ್ದಾಗ ದೆಹಲಿಯಿಂದ ನಿರ್ಗಮಿಸುವುದು ಉತ್ತಮ ಎಂಬ ಸಲಹೆಯೂ ಬಂದಿತ್ತು. ಆದರೆ ನಾವು ಏಕೆ ಓಡಿ ಹೋಗಬೇಕು ಎಂದು ಯೋಚಿಸಿ ಅಲ್ಲೇ ನೆಲೆನಿಂತೆವು' ಎಂದು ಮಂಡೋಲಿ ಜೈಲು ಸಂಕೀರ್ಣದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿರುವ ದಿಗ್ವೇಶ್ ರಾಥಿ ಸಹೋದರ ಸನ್ನಿ ಬಹಿರಂಗಪಡಿಸಿದ್ದಾರೆ.

'ದಿಗ್ವೇಶ್ ರಾಥಿ ಬ್ಯಾಟ್ಸ್‌ಮನ್ ಆಗಿ ಅಭ್ಯಾಸ ನಿರತರಾಗಿದ್ದಾಗ ಅವರಿಗೆ ಬೌಲ್ ಮಾಡಲು ಯಾವುದೇ ಬೌಲರ್ ಆಸಕ್ತಿ ತೋರಿರಲಿಲ್ಲ, ದಿಗ್ವೇಶ್ ಹೆಸರು ಯಾರಿಗೂ ಗೊತ್ತಿರಲಿಲ್ಲ. ಬಾಲ್ ಮಾಡಿದ ಬೌಲರ್‌ಗಳಿಗೆ ಒಳ್ಳೆಯ ಶಾಟ್ ಆಡಿದಾಗ, ಅವರ ಗರ್ವಭಂಗವಾಗುತ್ತಿತ್ತು. ಬೌಲರ್‌ಗಳು ಸ್ವಂತ ಬಾಲ್‌ಗಳನ್ನು ತರುತ್ತಿದ್ದರು. ಹಾಗಾಗಿ ದಿಗ್ವೇಶ್‌ಗೆ ಬೌಲ್ ಮಾಡಿ ಚೆಂಡನ್ನು ಹಾಳು ಮಾಡಿಕೊಳ್ಳಲು ಅವರಿಗೆ ಇಷ್ಟವಿರಲಿಲ್ಲ' ಎಂದು ಸನ್ನಿ ಹೇಳಿಕೊಂಡಿದ್ದಾರೆ.ದಿಗ್ವೇಶ್ ರಾಥಿ ಅವರನ್ನು ಲಖನೌ ಸೂಪರ್ ಜಯಂಟ್ಸ್ ತಂಡ 30 ಲಕ್ಷ ರೂ. ಗಳಿಗೆ ಮೆಗಾ ಹರಾಜಿನಲ್ಲಿ ಖರೀದಿಸಿತ್ತು.

ಆಸ್ಟ್ರೇಲಿಯಾ ಪ್ರವಾಸದ ವೇಳೆ ಹಿನ್ನಡೆ | ಟೀಂ ಇಂಡಿಯಾ ಕೋಚಿಂಗ್ ಸಿಬ್ಬಂದಿ ವಿರುದ್ಧ ಕ್ರಮ

ನಾಯರ್ ಸೇರಿದಂತೆ ಮೂವರ ವಜಾ

ದೆಹಲಿ: ಆಸ್ಟ್ರೇಲಿಯಾ ಪ್ರವಾಸದ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತ ತಂಡ ವೈಫಲ್ಯ ಅನುಭವಿಸಿದ್ದ ಹಿನ್ನೆಲೆಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ), ಟೀಮ್ ಇಂಡಿಯಾದ ತರಬೇತಿ ಸಿಬ್ಬಂದಿಯ ವಿರುದ್ಧ ಕಠಿಣ ಕ್ರಮ ಕೈಗೊಂಡಿದೆ. ಸಹಾಯಕ ಕೋಚ್ ಅಭಿಷೇಕ್ ನಾಯರ್, ಫೀಲ್ಡಿಂಗ್ ಕೋಚ್ ಟಿ.ದಿಲೀಪ್ ಮತ್ತು ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಕೋಚ್ ಸೋಹಮ್ ದೇಸಾಯಿ ಅವರನ್ನು ವಜಾಗೊಳಿಸಲು ಬಿಸಿಸಿಐ ನಿರ್ಧರಿಸಿದೆ. ಅಭಿಷೇಕ್ ನಾಯರ್ ಅವರನ್ನು ಕೇವಲ 8 ತಿಂಗಳ ಹಿಂದೆಯಷ್ಟೇ ಗೌತಮ್ ಗಂಭೀರ್ ಜೊತೆಗೆ ಟೀಮ್ ಇಂಡಿಯಾದ ಸಹಾಯಕ ಕೋಚ್ ಆಗಿ ನೇಮಿಸಲಾಗಿತ್ತು.



ಕಳೆದ ವರ್ಷ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆದ ನಂತರ ರಾಹುಲ್ ದ್ರಾವಿಡ್ ಅವರ ಹೆಡ್ ಕೋಚ್ ಅವಧಿ ಅಂತ್ಯವಾಗಿತ್ತು. ಈ ವೇಳೆ ಗೌತಮ್ ಗಂಭೀರ್ ಅವರನ್ನು ಮುಖ್ಯ ಕೋಚ್ ಆಗಿ ನೇಮಿಸಲಾಗಿತ್ತು. ನಂತರ ಗಂಭೀರ್ ತಮ್ಮ ಆಯ್ಕೆಯ ಕೋಚಿಂಗ್ ಸಿಬ್ಬಂದಿಯನ್ನು ಆಯ್ಕೆ ಮಾಡಿದ್ದರು. ಇದರಲ್ಲಿ ಸಹಾಯಕ ಕೋಚ್ ಆಗಿ ಅಭಿಷೇಕ್ ನಾಯರ್ ಮತ್ತು ಬೌಲಿಂಗ್ ಕೋಚ್ ಆಗಿ ಮಾರ್ನೆ ಮಾರ್ಕೆಲ್ ನೇಮಕಗೊಂಡಿದ್ದರು. ಅಭಿಷೇಕ್ ನಾಯರ್ ಟೀಮ್ ಇಂಡಿಯಾದ ಕೋಚಿಂಗ್ ಸಿಬ್ಬಂದಿಗೆ ಸೇರುವ ಮುನ್ನ ಕೋಲ್ಕತ್ತಾ ನೈಟ್ ರೈಡರ್ಸ್‌ನಲ್ಲಿ ಗಂಭೀರ್ ಅವರೊಂದಿಗೆ ಕಾರ್ಯ ನಿರ್ವಹಿಸಿದ್ದರು.

ಅಭಿಷೇಕ್ ನಾಯರ್ ಟೀಮ್ ಇಂಡಿಯಾದ ಕೋಚಿಂಗ್ ತಂಡದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದರು. ನ್ಯೂಜಿಲೆಂಡ್ ವಿರುದ್ಧದ ತವರು ಟೆಸ್ಟ್ ಸರಣಿಯನ್ನು 0-3 ಅಂತರದಲ್ಲಿ ಕ್ಲೀನ್‌ಸ್ವೀಪ್ ಆಘಾತ ಅನುಭವಿಸಿದ್ದ ಟೀಮ್ ಇಂಡಿಯಾ ನಂತರ, ಆಸ್ಟ್ರೇಲಿಯಾ ಪ್ರವಾಸದ ಟೆಸ್ಟ್ ಸರಣಿಯಲ್ಲಿ ಹೀನಾಯವಾಗಿ ಸೋಲು ಅನುಭವಿಸಿತು

ಅಭಿಷೇಕ್ ನಾಯರ್ ಮತ್ತು ಟಿ ದಿಲೀಪ್ ಅವರಿಗೆ ಪರ್ಯಾಯವಾಗಿ ಬಿಸಿಸಿಐ ಇನ್ನೂ ಯಾವುದೇ ಹೆಸರನ್ನು ಘೋಷಿಸಿಲ್ಲ. ಇದಲ್ಲದೆ, ರಯಾನ್ ಟೆನ್ ದುಶಾತ್ ಅವರನ್ನು ತಾತ್ಕಾಲಿಕವಾಗಿ ಟಿ ದಿಲೀಪ್ ಅವರ ಸ್ಥಾನದಲ್ಲಿ ಫೀಲ್ಡಿಂಗ್ ಕೋಚ್ ಆಗಿ ನೇಮಿಸಲಾಗಿದೆ. ಇದಲ್ಲದೆ, ಪ್ರಸ್ತುತ ಪಂಜಾಬ್ ಕಿಂಗ್ಸ್ ಜೊತೆಗಿರುವ ದಕ್ಷಿಣ ಆಫ್ರಿಕಾದ ತರಬೇತುದಾರ ಆಡ್ರಿಯನ್ ಲೆ ರೌಕ್ಸ್, ಸೋಹಮ್ ದೇಸಾಯಿ ಅವರ ಸ್ಥಾನದಲ್ಲಿ ಕಂಡೀಷನಿಂಗ್ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ.